ಡಾ. ಶ್ರೀನಿವಾಸ ಹಾವನೂರ




ಸಮಗ್ರ ಹರಿದಾಸ ವಾಙ್ಮಯ ಕೋಶ






PRAGATI GRAPHICS



PRAGATI GRAPHICS




PRAGATI GRAPHICS



PRAGATI GRAPH




PRAGATI GRAPHICS




PRAGATI GRAPHICS



PRAGATI GRAPHICS




PRAGATI GRAPH




PRAGATI GRAPHICS




PRAGATI GRAPHICS



PRAGATI GRAPHICS



PRAGATI GRAPH



PRAGATI GRAPHICS




PRAGATI GRAPHICS




PRAGATI GRAPHICS



PRAGATI GRAPH



PRAGATI GRAPHICS




PRAGATI GRAPHICS




PRAGATI GRAPHICS




PRAGATI GRAPH



PRAGATI GRAPHICS




PRAGATI GRAPHICS




PRAGATI GRAPHICS




PRAGATI GRAPH



PRAGATI GRAPHICS




PRAGATI GRAPHICS




PRAGATI GRAPHICS




PRAGATI GRAPH



PRAGATI GRAPHICS







PRAGATI GRAPHICS



PRAGATI GRAPHICS




PRAGATI GRAPH


ಗ್ರಾಫಿಕ್ಸ್
ಬೆಂಗಳೂರು
RAGATI GRAPHICS

ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಬೆಂಗಳೂರು
PRAGATI GRAPHICS

ಬೆಂಗಳೂರು
PRAGATI GRAPHICS

PR

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
RAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PR

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
RAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PR

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
RAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PR

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
RAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PR

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
RAGATI GRAPHICS



ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS


ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS



ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PR

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
RAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PR

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
RAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PR


ಪ್ರಗತಿ

ಪ್ರಗತಿ







PRAGATI GRAPHICS

PRAGATI GRAPHICS

PRAGATI GRAPHICS


PRAGATI GRAPH

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PRAGATI GRAPH


ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS


PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PRAGATI GRAPH

PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

ಬೆಂಗಳೂರು
PRAGATI GRAPHICS

PRAGATI GRAPH

ಪ್ರಗತಿ
ಬೆಂಗಳೂರು
PRAGATI GRAPHICS

ಗ್ರಾಫಿಕ್ಸ್
PRAGATI GRAPHICS

ಬೆಂಗಳೂರು
PRAGATI GRAPHICS

PRAGATI GRAPH

ಪ್ರಗತಿ
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
PRAGATI GRAPHICS

PRAGATI GRAPH

ಬೆಂಗಳೂರು
PRAGATI GRAPHICS

ಬೆಂಗಳೂರು
PRAGATI GRAPHICS

ಪ್ರಗತಿ
ಬೆಂಗಳೂರು
PRAGATI GRAPHICS

PRAGATI GRAPH

ಪ್ರಗತಿ
ಬೆಂಗಳೂರು
PRAGATI GRAPHICS

ಪ್ರಗತಿ
ಬೆಂಗಳೂರು
PRAGATI GRAPHICS

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು
PRAGATI GRAPHICS

PRAGATI GRAPH





ಪ್ರಗತಿ ಪುಸ್ತಕ ಮಾಲೆ–140


ಸಮಗ್ರ ಹರಿದಾಸ ವಾಙ್ಮಯ ಕೋಶ

A CYCLOPAEDIA OF HARIDASA LITERATURE

* ೧೫೫೦೦ ಕೀರ್ತನೆಗಳ ಸೂಚಿ
* ೮೩೬ ನಿರ್ದಿಷ್ಟ ವಿಷಯಗಳು
* ೧೪೬ ಹರಿದಾಸರ ಕಿರುಪರಿಚಯ
* ಹರಿದಾಸ ಸಾಹಿತ್ಯದ ಸಾರಸಮೀಕ್ಷೆ
* ಸಂಗೀತಕ್ಕೆ ಅಳವಡಿಸಿದ ೫೦೦ ಕೀರ್ತನೆಗಳು
* ಹರಿದಾಸ ಸಾಹಿತ್ಯದ ಮೇಲಿನ ವಿಮರ್ಶನ ಗ್ರಂಥಸೂಚಿ

ಸಂಪಾದಕ

ಡಾ. ಶ್ರೀನಿವಾಸ ಹಾವನೂರ



ಪ್ರಗತಿ ಗ್ರಾಫಿಕ್ಸ್–ಬೆಂಗಳೂರು

SAMAGRA HARIDASA VANGMAYA KOSHA: A CYCLOPAEDIA OF HARIDASA LITERATURE EDITED BY DR. SHRINIVAS HAVANUR, Flat # S-1 II Floor, Aashraya Apartments, # 63, S Kariyappa Road, Basavanagudi, Bangalore-4, email: nivhonnatti@gmal.com Ph: 98452-39361.

Publisher: **DR. M. BYREGOWDA** for PRAGATI GRAPHICS, # 119, 3rd Cross, 8th Main Road, Hampinagara, Bangalore-560 104, Ph: 080-23409512, email-byregowda.m1@gmail.com

ISBN: 978-93-81441-52-7

First Impression : 2014

Paper: NS Maplitho, 70 GSM

Price : 600

Pages: VII + 726

Size : 1/4 Demy

Copies: 1000

Cover Page Design : **Ajit Coundinya**, Shidlagatta

ಮೊದಲ ಆವೃತ್ತಿ: 2014

ಕಾಗದ: ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ

ಬೆಲೆ: ರೂ 600/-

ಪುಟಗಳು: VII + 726

ಸೈಜ್: **1/4 ಡೆಮಿ**

ಪ್ರತಿಗಳು: **1000**

ಕಂಪ್ಯೂಟರ್ ನಿರ್ವಹಣೆ: ನಿರ್ಮಲಾ ಎಸ್.ವೈ.

ರಕ್ಷಾಪುಟ ವಿನ್ಯಾಸ: ಅಜಿತ್ ಕೌಂಡಿನ್ಯ, ಶಿಡ್ಲಘಟ್ಟ

ಪ್ರಕಾಶಕರು

ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್ - ಬೆಂಗಳೂರು

ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ


ಬೆಂಗಳೂರು-104. ದೂರವಾಣಿ: 080-23409512

ಮುದ್ರಣ

ಪೂರ್ಣಿಮಾ ಪ್ರಿಂಟರ್ಸ್

ವಿಜಯನಗರ, ಬೆಂಗಳೂರು

ಪ್ರಕಾಶಕರು



ಪ್ರಗತಿ ಗ್ರಾಫಿಕ್ಸ್-ಬೆಂಗಳೂರು

ಪ್ರಕಾಶಕರ ಮಾತು

ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ ಬೆಳೆದು ಉಳಿದಿರುವುದು ನಮ್ಮವರ ಸದಾಶಯ ಮತ್ತು ಕಕ್ಕುಲತೆಗಳಿಂದ. ಈ ನಾಡಿಗೊಂದು ಹೆಮ್ಮೆಯ ಇತಿಹಾಸವಿದೆ. ಪುರಾಣದ ಪ್ರಭಾವವಿದೆ. ಪ್ರಾಂಜಲ ಮನಸ್ಸಿನ ಸಾಧಕರಿದ್ದಾರೆ. ನೋವಿಗೆ ಸ್ಪಂದಿಸುವ ಹೃದಯವಂತರಿದ್ದಾರೆ. ಇಲ್ಲಿನ ವಿಪುಲ ಸಂಪತ್ತನ್ನು ಉಳಿಸಲು ಕಂಕಣಬದ್ಧರಾದ ತ್ಯಾಗಜೀವಿಗಳಿದ್ದಾರೆ. ಅವರೆಲ್ಲ ಮುಂದಿನ ತಲೆಮಾರಿನ ಪಥದರ್ಶಕರೆಂದರೆ ಅತಿಶಯೋಕ್ತಿಯಾಗಲಾರದು. ಇವರೆಲ್ಲರು ಕಾಪಿಟ್ಟ ಈ ಸಂಸ್ಕೃತಿ, ಕಲೆ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ ಗುರುತರ ಹೊಣೆಗಾರಿಕೆ ನಮ್ಮ ಮೇಲಿದೆ.

ಇಂಥ ಉದಾತ್ತ ವಿಚಾರಗಳ ಹಿನ್ನೆಲೆಯಲ್ಲಿ ಇಡೀ ಜೀವಮಾನವನ್ನೇ ಕನ್ನಡ ಸಾಹಿತ್ಯದ ಅಧ್ಯಯನ ಅಧ್ಯಾಪನಗಳಿಗೆ ಮೀಸಲಿಟ್ಟ ಡಾ. ಶ್ರೀನಿವಾಸ ಹಾವನೂರರು ಭೌತಿಕವಾಗಿ ನಮ್ಮೊಡನಿಲ್ಲದಿದ್ದರೂ ತಮ್ಮ ಜೀವಿತಾವಧಿಯ ನಿರಂತರ ದುಡಿಮೆ, ಆದರ್ಶಗಳ ಮೂಲಕ ಚಿರಂಜೀವಿಯಾಗಿದ್ದಾರೆ. ಇಡೀ ಮಾನವ ಕುಲ ಮೆಚ್ಚಿಕೊಳ್ಳುವ, ಕನ್ನಡಿಗರು ಎದೆ ತಟ್ಟಿಕೊಳ್ಳುವಂತಹ ಕೆಲಸ ಮಾಡಿದ್ದಾರೆ. ಅವರ ಇಪ್ಪತ್ತು ವರ್ಷಗಳ ತಪದ ಫಲವನ್ನು "ಸಮಗ್ರ ಹರಿದಾಸ ವಾಙ್ಮಯ ಕೋಶ" ಎಂಬ ಹೆಸರಿನ ಈ ಗ್ರಂಥರೂಪದಲ್ಲಿ ಸಾಂದ್ರೀಕರಿಸಿ ಕೊಟ್ಟಿದ್ದಾರೆ. ಇಂತಹ ಅನರ್ಘ್ಯ ಕೃತಿ ಕುಸುಮವನ್ನು ಪ್ರಕಟಿಸುವ ಸುಯೋಗ ಪ್ರಗತಿ ಗ್ರಾಫಿಕ್ಸ್‌ಗೆ ದೊರೆತ ಹಿನ್ನೆಲೆಯಲ್ಲಿ ಎರಡು ಮಾತುಗಳನ್ನು ಬರೆಯುವೆ. ಕೃತಿಯ ಪ್ರಾಮುಖ್ಯತೆ, ಅನನ್ಯತೆ, ಮತ್ತು ಮೌಲಿಕತೆಗಳ ಬಗ್ಗೆ ಹಾವನೂರರು ವಿವರವಾಗಿ ಬರೆದಿದ್ದಾರೆ. ಈ ಬೃಹತ್‌ಗ್ರಂಥದ ಪ್ರಕಟಣೆಯ ಹೊಣೆ ನಮಗೆ ಬಂದ ಬಗ್ಗೆ ಒಂದೆರಡು ವಿಚಾರಗಳನ್ನು ತಿಳಿಸಲಿಚ್ಛಿಸುವೆ.

ಮೇ 18, 2014ರಂದು ಬೆಳಗ್ಗೆ 11 ಗಂಟೆ ಹೊತ್ತಿಗೆ ದೂರವಾಣಿ ಕರೆಯೊಂದು ಬಂತು. ನಾನು ನಿವೇದಿತಾ ಎಂದು ಡಾ. ಶ್ರೀನಿವಾಸ ಹಾವನೂರರ ಮಗಳು, ಡಾ. ಜ್ಯೋತ್ಸ್ನಾ ಕೃಷ್ಣಾನಂದ ಕಾಮತರು ನಿಮ್ಮ ದೂರವಾಣಿ ಸಂಖ್ಯೆ ಕೊಟ್ಟರು. ನಿಮಗೆ ಸಮಯವಿದ್ದರೆ ಒಂದೈದು ನಿಮಿಷ ಮಾತನಾಡಬಹುದೆ ಎಂದರು. ದಯವಿಟ್ಟು ಮಾತನಾಡಿ ಎಂದೆ. ಸುಮಾರು ಹದಿನೈದು ವರ್ಷಗಳ ಕಾಲ ಕೆಲಸ ಮಾಡಿ ಕರ್ನಾಟಕ ಸರ್ಕಾರದ ಬೃಹತ್ ಯೋಜನೆ ಸಮಗ್ರ ದಾಸ ಸಂಪುಟಗಳ ಸಂಪಾದನಾಕಾರ್ಯದಲ್ಲಿ ತೊಡಗಿದ ನನ್ನ ತಂದೆ ಆ ಯೋಜನೆಯ ಎಲ್ಲ ಕೆಲಸಗಳನ್ನು ಮುಗಿಸಿ ಐವತ್ತು ಸಂಪುಟಗಳು ಪ್ರಕಟವಾಗುವಲ್ಲಿ ಸಫಲರಾದರು. ಆದರೆ ಅದರಲ್ಲಿನ ವಿವರಗಳ ಹುಡುಕಾಟಕ್ಕೆ ಅನುಕೂಲವಾಗುವ ಹಾಗೆ "ಸಮಗ್ರ ಹರಿದಾಸ ವಾಙ್ಮಯ ಕೋಶ"ವನ್ನು ಸಿದ್ಧಪಡಿಸಿ ಇನ್ನೇನು ಪ್ರಕಟ ಆಗಬೇಕು ಎನ್ನುವಷ್ಟರಲ್ಲಿ ಕಾಲನ ಕರೆಗೆ ಓಗೊಟ್ಟು ಮರಳಿಬಾರದ ಗೂಡಿಗೆ ಹೊರಟು ಹೋದರು. ಕರ್ನಾಟಕದ ರಾಜ್ಯದ ಮಾನ್ಯ ರಾಜ್ಯಪಾಲರನ್ನು ಭೇಟಿಯಾಗಿ ಈ ವಿಚಾರ ತಿಳಿಸಿದಾಗ ರಾಜಭವನದಲ್ಲೇ ಬಿಡುಗಡೆ ಮಾಡೋಣವೆಂದು ಜೂನ್ 6, 2014ಕ್ಕೆ ನಿಗದಿಗೊಳಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ನೀವು ಈ ಗ್ರಂಥವನ್ನು ಪ್ರಕಟಿಸಬಹುದೇ ಎಂದರು. ಒಂದು ಕ್ಷಣ ನಾನು ಗಾಬರಿಯಾದದ್ದು ನಿಜ. ಆದರೆ ಪೂರ್ಣಿಮಾ ಪ್ರಿಂಟರ್ಸ್ ಮಧುಕರಶೆಟ್ಟಿ ಅವರಿದ್ದಾರೆ ಎಂಬ ಧೈರ್ಯದಿಂದ ಈ ಬೃಹತ್ ಗ್ರಂಥದ ಮುದ್ರಣದ ಕೆಲಸಗಳನ್ನು ಒಪ್ಪಿಕೊಂಡೆ.

ಡಾ. ಶ್ರೀನಿವಾಸ ಹಾವನೂರರನ್ನು ಹತ್ತಿರದಿಂದ ಬಲ್ಲ ನಾನು ಅವರ ಮೇಲಿನ ಗೌರವ ಮತ್ತು ಕನ್ನಡಪರವಾದ ಅವರ ಅಚಲನಿಷ್ಠೆ ನನ್ನನ್ನು ಪ್ರೇರೇಪಿಸಿ ಈ ಗ್ರಂಥ ಪ್ರಕಟಣೆಗೂ ಒಪ್ಪಿಕೊಂಡೆ. ಈ ಕೃತಿ ಹೊರಬರುವಲ್ಲಿ ಸಂಪೂರ್ಣ ಸಹಕಾರ ನೀಡಿದ ಹಾವನೂರರ ಧರ್ಮಪತ್ನಿ ಭಾರತಿಬಾಯಿ, ಮಕ್ಕಳಾದ ನಾಗೇಶ, ಸಂಜಯ ಮತ್ತು ನಿವೇದಿತಾ ಅವರುಗಳನ್ನು ಗೌರವದಿಂದ ನೆನೆಯುವೆ. ಇದೀಗ ಕೃತಿ ನಿಮ್ಮ ಕೈಲಿದೆ. ಎಲ್ಲ ಅಧ್ಯಯನಾಂಗಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ, ಗ್ರಂಥ ಭಂಡಾರಗಳಲ್ಲಿ ಈ ಕೃತಿ ಲಭ್ಯವಾಗಿ ಅಧ್ಯಯನಕಾರರಿಗೆ ಆಕರವಾಗಬೇಕೆಂಬ ಹಾವನೂರರ ಕನಸನ್ನು ಸಹೃದಯರು ಸಾಕಾರಗೊಳಿಸುವರೆಂಬ ನಂಬುಗೆಯಿಂದ ಈ ಗ್ರಂಥವನ್ನು ಪ್ರಗತಿ ಗ್ರಾಫಿಕ್ಸ್ ಅರ್ಪಿಸುತ್ತಿದೆ.

ಡಾ. ಎಂ. ಬೈರೇಗೌಡ
ಪ್ರಕಾಶಕ

ದಾಸವಾಙ್ಮಯ ಕೋಶದಲ್ಲಿ ಏನೇನಿದೆ?

ಮೊದಲಲ್ಲಿ ತಿಳಿಯಬೇಕಾದ ಮಾತೆಂದರೆ ಇಲ್ಲಿರುವ ಪ್ರತಿಯೊಂದು ಮಾಹಿತಿಯು, ಸರಕಾರವು ಪ್ರಕಟಿಸಿದ ೫೦ ಸಂಪುಟಗಳಿಂದ ಆಯ್ದುಕೊಂಡದ್ದಿದೆ. ಅದುವೆ ಮೂಲ ಆಕರ. ಅವುಗಳಲ್ಲಿ ತಪ್ಪುಗಳಿವೆ. ಆದರೆ ೧೪೬ ಜನ ಹರಿದಾಸರ ಹದಿನೈದೂವರೆ ಸಾವಿರ ಕೀರ್ತನೆಗಳು ಒಂದೇ ಕಡೆಗೆ ಸಿಗುತ್ತವೆ, ಎಂಬುದೇ ಅದರ ವಿಶೇಷತೆ*

೧. ಹರಿದಾಸರ ಪರಿಚಯ:

ಕೋಶದ ಮೊದಲಿಗೆ ಅಲ್ಲಿಯ ೧೪೬ ಜನ ಹರಿದಾಸರ ಕಿರುಪರಿಚಯ ಇದೆ. ಕೃತಿರಚನೆ ಮಾಡಿದ ಹರಿದಾಸರ ಕಿಂಚಿತ್ತಾದರೂ ಪರಿಚಯ ಇರಲೆಂದು ಸಂಕ್ಷಿಪ್ತವಾಗಿ ಕೊಟ್ಟಿದೆ. ವಿಶೇಷವೆಂದರೆ ಅದೆಷ್ಟೋ ಜನ ಹರಿದಾಸರು ಮೊದಲ ಬಾರಿಗೆ ಬೆಳಕಿಗೆ ಬರುತ್ತಿದ್ದು, ಅನೇಕರಿಗೆ ಅವರ ಬಗ್ಗೆ ಏನೂ ಗೊತ್ತಿರದ ಸ್ಥಿತಿಯೂ ಇದೆ.

ಈ ಕೀರ್ತನ ರಚಯಿತರನ್ನು

(ಅ) ಯತಿವರ್ಯರು (ಇವರೆಲ್ಲ ಮಾಧ್ವರು)

(ಆ) ಹರಿದಾಸ ಮಹಿಳೆಯರು

(ಇ) ಮಾಧ್ವ ಸಂಪ್ರದಾಯದವರು (ಇವರ ಸಂಖ್ಯೆಯೇ ಬಹು ದೊಡ್ಡದು–೮೩%)

(ಈ) ಶ್ರೀವೈಷ್ಣವ ಸಂಪ್ರದಾಯದವರು

(ಉ) ಅದ್ವೈತ ಪಂಥದವರು

(ಊ) ದಕ್ಷಿಣ ಕನ್ನಡ ಪರಿಸರದಲ್ಲಿ ಶೈವ, ವೈಷ್ಣವ ಎರಡೂ ಮಾರ್ಗಗಳನ್ನು ಸಮಾನವಾಗಿ ಕಾಣುವ ಕೆಲ ಹರಿದಾಸರಿದ್ದು, ಅವರನ್ನು ಪ್ರತ್ಯೇಕವಾಗಿ ಕಾಣಿಸಿದೆ.

೨. ನಿರ್ದಿಷ್ಟ ವಿಷಯಗಳು

ಸಮಗ್ರ ಕೀರ್ತನೆಗಳಲ್ಲಿ ಪ್ರತಿಯೊಂದನ್ನು ಪರಿಶೀಲಿಸಿ, ಅದರ ನಿರ್ದಿಷ್ಟ ವಿಷಯಗಳೇನೆಂಬುದನ್ನು ಗುರುತಿಸಲಾಗಿದೆ. ಒಟ್ಟಿಗೆ ಸು. ೮೪೦ ವಿಷಯಗಳನ್ನು ಗಣಕಯಂತ್ರಕ್ಕೆ ಪೂರೈಸಲಾಗಿದೆ. ಮತ್ತು ಆ ಆ ವಿಷಯದ ಕೆಳಗೆ ಬರುವ ಎಲ್ಲಾ ಹಾಡುಗಳನ್ನು ಕೊಡಲಾಗಿದೆ. ಈ ರೀತಿಯಾಗಿ –

---

* ಆ ಬೃಹತ್ ಸಂಪುಟ ಸಮೂಹವನ್ನು ಸಿ.ಡಿ.ಯಲ್ಲಿಯೂ ಹಾಕಿದ್ದಾಗಿದೆ. ಬೇಕಿದ್ದರೆ ಅವನ್ನು ಕೊಳ್ಳಬಹುದು (ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ಲಭ್ಯ.) ಒಂದೇ ವೇಳೆ ಅದಿಲ್ಲದಿದ್ದರೆ, ನಿಮ್ಮ ನಿಮ್ಮ ಮನೆಯಲ್ಲಿ ಯಾವುದೊಂದು ಸಂಗ್ರಹವನ್ನು ನೋಡಿ, ಇಲ್ಲಿಯ ಪ್ರತಿಯೊಂದರಲ್ಲಿ ಕೊಟ್ಟ ಪಲ್ಲವಿಯ ಮೂಲಕ ಇಡೀ ಕೀರ್ತನೆಯನ್ನೂ ಕಂಡುಕೊಳ್ಳಬಹುದು.

ನಿರ್ದಿಷ್ಟ ವಿಷಯ		
ದಾಸರ ಹೆಸರು (ಅಕಾರಾದಿ)	ಆರಂಭದ ಸಾಲು	ಸಂಪುಟ ಸಂಖ್ಯೆ

– ಒಂದು ಮಾದರಿ –

ದಶಾವತಾರ		
ಇಂದಿರೇಶ	ಪಾಹಿಮಾಮರೇಂದ್ರ ವಂದಿತ	೨೧-೨

(ದಶಾವತಾರದ ಮೇಲೆ ರಚಿಸಲಾದ ಒಟ್ಟು ಹಾಡುಗಳು – ೪೦೦ರಷ್ಟು ಇದ್ದು, ಈ ಕ್ರಮದಲ್ಲಿ ಅವೆಲ್ಲ ಒಂದೇ ಕಡೆಗೆ ದೊರೆಯಬಲ್ಲವು.)

ಈ ನಿರ್ದಿಷ್ಟ ವಿಷಯಗಳು ಇಡೀ ಗ್ರಂಥದ ಮುಕ್ಕಾಲು ಭಾಗವನ್ನು ಆಕ್ರಮಿಸಿವೆ. ಹೀಗೆ ಈ ಕೋಶಗ್ರಂಥದಲ್ಲಿ ಇದುವೆ ಪ್ರಾಮುಖ್ಯವೆನಿಸಿದೆ ಮತ್ತು ಕಂಪ್ಯೂಟರ್ ಅನ್ವಯದಿಂದಾಗಿ ನಮಗೆ ಬೇಕೆನಿಸಿದ ವಿಷಯದ ಪೂರ್ಣ ಮಾಹಿತಿ ಥಟ್ಟನೆ ದೊರೆಯುತ್ತದೆ.

ದಾಸರು ಬಹ್ವಂಶವಾಗಿ ಮೆಚ್ಚಿದ ವಿಷಯಗಳೆಂದರೆ,

೧. ಶ್ರೀಹರಿಯ ಸ್ತುತಿ; ಅವನ ನಾಮಾಂತರಗಳು

೨. ಶ್ರೀಕೃಷ್ಣ/ಬಾಲಕೃಷ್ಣ

೩. ದೇವತೆಗಳು, ದೇವಿಯರು (ವಿಶೇಷತಃ ವಾಯುದೇವರು, ಮಹಾಲಕ್ಷ್ಮಿ, ದುರ್ಗಾ, ಗಣೇಶ, ರುದ್ರದೇವರು)

೪. ಪೌರಾಣಿಕ ವ್ಯಕ್ತಿಗಳು; ಅವರ ಕಥಾನಕಗಳು

೫. ತೀರ್ಥಕ್ಷೇತ್ರಗಳು

೬. ಯತಿವೃಂದ; ಇತರ ಗುರುಗಳ ನಮನ

೭. ಹಿರಿಯ ಹರಿದಾಸರ ಸ್ತುತಿ

೮. ಸಂಪ್ರದಾಯದ ಹಾಡುಗಳು

೯. ತಾತ್ವಿಕ ವಿಚಾರಗಳು

೧೦. ಆತ್ಮನಿವೇದನೆ; ಸರ್ವಸಮರ್ಪಣ ಭಾವ

೧೧. ಸಾಹಿತ್ಯಕ ಅಂಶಗಳು (ನಿಂದಾಸ್ತುತಿ ಇ.)

೧೨. ಸಮಕಾಲೀನ ವಿಷಯಗಳು (ಲೌಕಿಕ)

ಬೃಹತ್ ಪ್ರಮಾಣದ ಈ ವಿಷಯಗಳನ್ನು ಗಮನಿಸಿದರೆ, ಪಾರಮಾರ್ಥಿಕ ಜ್ಞಾನಭಂಡಾರವೇ ಇಲ್ಲಿ ತೆರೆದಂತಾಗಿದೆ ಮತ್ತು ಭಕ್ತಿಭಾವವು ತಾನೇ ತಾನಾಗಿ ಮೆರೆಯುತ್ತದೆ.

೩. ದಾಸಸಾಹಿತ್ಯದ ಸಾರಸಮೀಕ್ಷೆ

ಈ ವಿಷಯಗಳನ್ನು ಆಧರಿಸಿ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳನ್ನು ಪ್ರಬಂಧರೂಪವಾಗಿ ಇಲ್ಲಿ ಕೊಡಲಾಗಿದೆ. ಇದರಿಂದ ದಾಸಸಾಹಿತ್ಯದ ಸ್ವರೂಪವನ್ನು ಸಮಷ್ಟಿಯಾಗಿ ಅರಿತುಕೊಳ್ಳಬಹುದು.

೪. ವಿಮರ್ಶನ ಗ್ರಂಥಗಳು

ವಿಷಯದ ದೃಷ್ಟಿಯಿಂದ ದಾಸಸಾಹಿತ್ಯದ ಅಧ್ಯಯನವು ಕಳೆದ ೧೩೫ ವರ್ಷಗಳಿಂದ ನಡೆದುಕೊಂಡು ಬಂದಿದೆ. ವಿವಿಧ ವಿಷಯಗಳನ್ನು ಎತ್ತಿಕೊಂಡು ಸಹಸ್ರಾರು ಲೇಖನಗಳು ಪ್ರಕಟವಾಗಿವೆ. ಆಳವಾದ ಅಭ್ಯಾಸವನ್ನೊಳಗೊಂಡ ಐತಿಹಾಸಿಕ ಕೃತಿಗಳು, ವಿಮರ್ಶನದ (ಪಿಎಚ್.ಡಿ. ಮಟ್ಟದ) ಗ್ರಂಥಗಳು ಕಾಲಕಾಲಕ್ಕೆ ಹೊರಬರುತ್ತಲಿವೆ; ಕಾಲಾನುಕ್ರಮದಲ್ಲಿ ಅವನ್ನು ಪರಿಶೀಲಿಸಿದರೆ ದಾಸಸಾಹಿತ್ಯದ ವಿಶ್ಲೇಷಣೆಯು ಯಾವ ರೀತಿಯಲ್ಲಿ ಮುಂದುವರಿದಿದೆ ಎಂದು ತಿಳಿದುಬರುತ್ತದೆ ಹಾಗೂ ಇನ್ನಾವ ಹೊಸ ವಿಷಯವನ್ನು ತಾವು ಎತ್ತಿಕೊಳ್ಳಬಹುದೆಂಬುದಾಗಿ ವಿಮರ್ಶಕರು ಯೋಚಿಸಲು ಸಾಧ್ಯವಾಗುವುದು. ಇಲ್ಲಿ ಆ ಬಗೆಯ ಆಯ್ದ ವಿಮರ್ಶನ ಗ್ರಂಥಗಳನ್ನು ಕೊಟ್ಟಿದೆ (೨೦೦೮ರ ತನಕವೂ). ಹೀಗೆ ಇದು ಹರಿದಾಸ ಸಾಹಿತ್ಯದ ಹೆಚ್ಚಿನ ಅಧ್ಯಯನಕ್ಕೆ ಪುಟಕೊಟ್ಟಂತಾಗುವುದು. ಇಲ್ಲಿ ವಿವಿಧ ಕೀರ್ತನೆಗಳ ಸಂಗ್ರಹಗಳಾಗಲೀ ಹರಿದಾಸರ ಜೀವನ ಚರಿತೆಯ ಗ್ರಂಥಗಳಾಗಲೀ ಸೇರಿಲ್ಲ ಎಂಬುದನ್ನು ಗಮನಿಸುವುದು.

೫. ಸಂಗೀತದ ಸಿ.ಡಿ.ಗಳು

ಹರಿದಾಸ ಸಾಹಿತ್ಯಕ್ಕೆ ಎರಡು ಕಣ್ಣುಗಳು, ಒಂದು, ಸಾಹಿತ್ಯ; ಇನ್ನೊಂದು ಸಂಗೀತ. ಸರಕಾರದವರು ಮೇಲೆ ಹೇಳಿದ ೫೦ ಸಂಪುಟಗಳಿಂದ ೫೦೦ ಹಾಡುಗಳನ್ನು ಶಾಸ್ತ್ರ ಶುದ್ಧ ರೀತಿಯಲ್ಲಿ ಪ್ರಸಿದ್ಧ ಕಲಾವಿದರಿಂದ ಹಾಡಿಸಿದ್ದಾರೆ, ಅವುಗಳ ಸಿ.ಡಿ.ಯೂ ಅವರಲ್ಲಿ ಮಾರಾಟಕ್ಕೆ ಸಿದ್ಧವಿದೆ. ಆ ಹಾಡುಗಳ ಪಟ್ಟಿಯನ್ನು ಈ ಕೋಶದಲ್ಲಿ ಕೊಟ್ಟಿದೆ.

೬. ಸಮಗ್ರ ಕೀರ್ತನ ಪಲ್ಲವಿಗಳ ಅಕಾರಾದಿ ಸೂಚಿ

ಸಮಗ್ರ ಕೀರ್ತನೆಗಳ ಪಲ್ಲವಿಗಳ ಅಕಾರಾದಿ ಸೂಚಿ ಇದೆ (ಅನುಬಂಧ ೧). ಎಷ್ಟೋ ಬಾರಿ ನಮಗೆ ಹಾಡಿನ ಬರಿಯ ಪಲ್ಲವಿ ಅಷ್ಟೇ ಗೊತ್ತಿರುತ್ತದೆ. ಅದರಲ್ಲಿ ಆಸ್ಥೆ ಇರುತ್ತದೆ. ಅಂಥ ಸಂದರ್ಭದಲ್ಲಿ ಹೆಚ್ಚಿನ ಮಾಹಿತಿ ಪಡೆಯಲೆಂದು, ಆ ಹಾಡು ಬಂದಿರುವ ಸಂಪುಟ ಸಂಖ್ಯೆಯನ್ನು ಕೊಟ್ಟಿದೆ. ಅದರ ಮೂಲಕ ಆ ಕೀರ್ತನೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ಆ ಆ ಸಂಪುಟಗಳ ಕೊನೆಯಲ್ಲಿರುವ ಅಕಾರಾದಿ ಪಟ್ಟಿಯಿಂದ ಇಡಿಯ ಹಾಡನ್ನೇ ನೋಡಬಹುದು. ಒಟ್ಟಿನಲ್ಲಿ ಇದೊಂದು ದಾಸಸಾಹಿತ್ಯದ ಮಿನಿ ವಿಶ್ವಕೋಶವಾಗುವಂತ ಸಾಮಗ್ರಿಯನ್ನು ಅಡಕ ಮಾಡಲಾಗಿದೆ.

ಬೃಹತ್ತಾದ ಇಂಥದೊಂದು ಕೆಲಸ ಮಾಡುವಾಗ ಸಹಕರಿಸಿದ ಕೆಲವರನ್ನು ಸ್ಮರಿಸಿಕೊಳ್ಳಬೇಕಾದ್ದು ನನ್ನ ಕರ್ತವ್ಯವೆಂದು ತಿಳಿದಿರುವೆ. ಕಂಪ್ಯೂಟರ್ ಸಹಾಯಕರಾಗಿ ನಿರ್ಮಲಾ ಎಸ್.ವೈ., ಡಿ.ಎಚ್. ಕೃಷ್ಣಮೂರ್ತಿ ಕೆಲಸ ನಿರ್ವಹಿಸಿದ್ದಾರೆ. ಕೀರ್ತನೆಗಳ ವಿಷಯಾನ್ವೇಷಣೆಯಲ್ಲಿ ಡಾ. ಶ್ಯಾಮಲ ಸಿ.ಆರ್., ಬಿ. ರಮಾನಾಥ ಹಾಗೂ ರಾಮಕೃಷ್ಣ ಅವರುಗಳು ಸಹಾಯ ಮಾಡಿದ್ದಾರೆ. ಕರ್ನಾಟಕ ಸರ್ಕಾರದ ಸಮಗ್ರ ದಾಸಸಾಹಿತ್ಯ ೫೦ ಸಂಪುಟಗಳನ್ನು ಸಂಪಾದಿಸುವ ಕಾಲದಿಂದಲೂ ಈ ಗ್ರಂಥ ಹೊರಬರುವವರೆಗೆ ವಿಶೇಷವಾಗಿ ಸನ್ನೊಡನಿರುವ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಈ ಎಲ್ಲ ಮಹನೀಯರಿಗೆ ಕೃತಜ್ಞತೆಗಳು. ಎಲೆಮರೆಯ ಕಾಯಿಯಂತೆ ಅನೇಕರು ಈ ಕೈಂಕರ್ಯದಲ್ಲಿ ನೆರವಾಗಿದ್ದಾರೆ. ಆ ಎಲ್ಲ ಅಜ್ಞಾತ ಮನಸ್ಸುಗಳನ್ನು ಗೌರವದಿಂದ ನೆನೆಯುವೆ. ನನ್ನ ಪರಿಶ್ರಮಕ್ಕೆ ಹೆಗಲೆಣೆಯಾಗಿ ನಿಂತ ನನ್ನ ಧರ್ಮಪತ್ನಿ ಭಾರತಿಬಾಯಿ, ಮಕ್ಕಳಾದ ನಾಗೇಶ, ಸಂಜಯ ಹಾಗೂ ನಿವೇದಿತಾ ಅವರುಗಳನ್ನು ಪ್ರೀತಿಯಿಂದ ನೆನೆಯುವೆ.

ಅಂದವಾದ ರಕ್ಷಾಪುಟ ವಿನ್ಯಾಸ ಮಾಡಿದ ಶಿಡ್ಲಘಟ್ಟದ ಅಜಿತ್ ಕೌಂಡಿನ್ಯ, ಪ್ರಕಟಿಸಿದ ಪ್ರಗತಿ ಗ್ರಾಫಿಕ್ಸ್ ಮಾಲೀಕರಾದ ಡಾ. ಎಂ. ಬೈರೇಗೌಡ ಹಾಗೂ ಪೂರ್ಣಿಮಾ ಪ್ರಿಂಟರ್ಸ್‌ನ ಮಾಲೀಕರು ಮತ್ತು ಸಿಬ್ಬಂದಿವರ್ಗದವರಿಗೆ ಆಭಾರಿಯಾಗಿದ್ದೇನೆ.

ಡಾ। ಶ್ರೀನಿವಾಸ ಹಾವನೂರ

ಪ್ಲಾಟ್ ನಂ.ಎಸ್–೧, ೨ನೇ ಮಹಡಿ,
ಆಶ್ರಯ ಅಪಾರ್ಟ್‌ಮೆಂಟ್, ಎಸ್.ಕರಿಯಪ್ಪ ರಸ್ತೆ,
ಬಸವನಗುಡಿ, ಬೆಂಗಳೂರು ೫೬೦ ೦೦೪

೨೦೧೦
ಬೆಂಗಳೂರು

ಸಮಗ್ರ ಹರಿದಾಸ ವಾಙ್ಮಯ ಕೋಶ

ಪ ರಿ ವಿ ಡಿ

ಅನುಬಂಧಗಳು

ಪ್ರಕರಣ ೧

ಕೀರ್ತನ ರಚಯಿತರು

(ಅ) ಯತಿವರ್ಯರು

	ಅಂಕಿತ	ಹೆಸರು	ಸಂಪುಟ
೧.	ರಂಗವಿಠಲ	ಶ್ರೀ ಶ್ರೀಪಾದರಾಜರು	೧
೨.	ಸಿರಿಕೃಷ್ಣ	ಶ್ರೀ ವ್ಯಾಸರಾಯರು	೧
೩.	ಹಯವದನ	ಶ್ರೀ ವಾದಿರಾಜರು	೨
೪.	ವಿಜಯರಾಮ	ಶ್ರೀ ವಿಜಯೀಂದ್ರರು	೨೮
೫.	ಧೀರವೇಣುಗೋಪಾಲ	ಶ್ರೀ ರಾಘವೇಂದ್ರರು	೨೮
೬.	ವಾಸುದೇವವಿಠ್ಠಲ	ಶ್ರೀ ವ್ಯಾಸತತ್ತ್ವಜ್ಞರು	೨೮
೭.	ರಘುತಿಲಕ	ಶ್ರೀ ರಘುವರ್ಯರು	೨೪
೮.	ನಾಮಗಿರೀಶ	ಶ್ರೀ ವಿದ್ಯಾರತ್ನಾಕರತೀರ್ಥರು	೨೮
೯.	ರಾಜೇಶಹಯಾಸ್ಯ	ಶ್ರೀ ವಿಶ್ವೇಂದ್ರತೀರ್ಥರು	೨೪
೧೦.	ಶ್ರೀನರಹರಿ	ಶ್ರೀ ಪ್ರದ್ಯುಮ್ನತೀರ್ಥರು	೨೮
೧೧.	ಪ್ರಸನ್ನ	ಶ್ರೀ ವಿದ್ಯಾಪ್ರಸನ್ನತೀರ್ಥರು	೨೮

(ಆ) ಹರಿದಾಸ ಮಹಿಳೆಯರು

	ಅಂಕಿತ	ಹೆಸರು	ಸಂಪುಟ
೧೨.	ರಮೆಯರಸ	ಗಲಗಲಿ ಅವ್ವನವರು	೭
೧೩.	ಹೆಳವನಕಟ್ಟೆರಂಗ	ಹೆಳವನಕಟ್ಟೆ ಗಿರಿಯಮ್ಮ	೧೮–೧
೧೪.	ಮುದ್ದುವೆಂಕಟ / ವೆಂಕಟಕೃಷ್ಣ	ಯದುಗಿರಿಯಮ್ಮ	೧೮–೨
೧೫.	ರುಕ್ಮಿಣೀಶವಿಠಲ	ಗುಂಡಮ್ಮ (ಚಿತ್ರದುರ್ಗ)	೧೮–೪
೧೬.	ರಮಾವಲ್ಲಭವಿಠಲ	ಸರಸಾಬಾಯಿ (ಚಿತ್ರದುರ್ಗ)	೧೮–೪
೧೭.	ವೆಂಕಟವಿಠಲ	ರಾಧಾಬಾಯಿ (ಬಳ್ಳಾರಿ)	೧೮–೪
೧೮.	ನರಸಿಂಹವಿಠಲ	ಓರಬಾಯಿ ಲಕ್ಷ್ಮೀದೇವಮ್ಮ (ಗುತ್ತಿ)	೧೮–೯
೧೯.	ಕಾಳಿಮರ್ದನಕೃಷ್ಣ	ಕಳಸದ ಸುಂದರಮ್ಮ	೧೮–೪
೨೦.	ಗೋಪಾಲಕೃಷ್ಣವಿಠಲ	ಅಂಬಾಬಾಯಿ (ಚಿತ್ರದುರ್ಗ)	೧೮–೩
೨೧.	ಭೀಮೇಶಕೃಷ್ಣ	ಹರಪನಹಳ್ಳಿ ಭೀಮವ್ವ	೧೯
೨೨.	ಶೇಷಗಿರೀಶ	ತಿರುಮಲಾಂಬಾ (ನಂಜನಗೂಡು)	೧೮–೪
೨೩.	ಶ್ರೀ–ಶ್ರೀನಿವಾಸ	ಸರಸ್ವತಿಬಾಯಿ (ನೆಲಮಂಗಲ)	೧೮–೪

೨೪.	ಶಾಂತಿಪಾಲಿಪಗುರು	ನಾಡಘರ ಶಾಂತಿಬಾಯಿ (ಭಟ್ಕಳ)	೧೮-೪
೨೫.	ಕಮಲನಾಭವಿಠಲ	ನಿಡಗುರಕಿ ಜೀವೂಬಾಯಿ	೧೮-೩

(ಇ) ಮಾಧ್ವ ಸಂಪ್ರದಾಯದ ಹರಿದಾಸರು

(ಮುದ್ರಿಕೆಯ ಅಕಾರಾದಿ ಕ್ರಮದಲ್ಲಿ)

	ಅಂಕಿತ	ಹೆಸರು	ಸಂಪುಟ
೨೬.	ಅಚಲಾನಂದವಿಠಲ	ಅಚಲಾನಂದದಾಸರು	೧೬
೨೭.	ಅನಂತಾದ್ರೀಶ	ಗೋಕಾವಿ ಅನಂತಾಚಾರ್ಯ	೨೯-೧
೨೮.	ಇಂದಿರೇಶ	ಪಾಂಡುರಂಗಿ ಹುಚ್ಚಾಚಾರ್ಯ	೨೧-೨
೨೯.	ಉರಗಾದ್ರಿವಾಸವಿಠಲ	ಮಳವಳ್ಳಿ ಶ್ರೀನಿವಾಸರಾವ	೧೬
೩೦.	ಐಹೊಳೆ ವೆಂಕಟೇಶ	ಭೀಮರಾವ ಕುಲಕರ್ಣಿ	೨೧-೨
೩೧.	ಕದರುಂಡಲಗಿ ಹನುಮಯ್ಯ	ಕದರಮಂಡಲಗಿ ಭೀಮಾಚಾರ್ಯ (ಹಿರೇ ಆಚಾರ್ಯ)	೨೧-೧
೩೨.	ಕದರುಂಡಲಗೀಶ	ಕಿನ್ನಾಳದ ಶ್ರೀನಿವಾಸದಾಸರು	೨೧-೧
೩೩.	ಕಮಲಾಪತಿವಿಠಲ	ಸಂತೇಬೆನ್ನೂರು ರಾಮಾಚಾರ್ಯ	೧೩
೩೪.	ಕರಿಗಿರೀಶ	ವರವಣಿ ರಾಮರಾವ	೨೭
೩೫.	ಕಾಗಿನೆಲೆಯಾದಿಕೇಶವ *	ಕನಕದಾಸರು	೫
೩೬.	ಕಾರ್ಪರನರಹರಿ	ಕೊಪ್ಪರ ಗಿರಿಯಾಚಾರ್ಯ	೨೯-೨
೩೭.	ಕೃಷ್ಣವಿಠಲ	ಭೀಮರಾವ್, ಎಚ್	೧೫
೩೮.	ಕೇಶವವಿಠಲ	ಗವ್ವಾಲ ಸುಬ್ಬಣ್ಣದಾಸರು	೧೩
೩೯.	ಗದುಗಿನ ವೀರನಾರಾಯಣ	ಹುಯಿಲಗೋಳ ನಾರಾಯಣರಾಯರು	೨೧-೨
೪೦.	ಗುರು ಇಂದಿರೇಶ	ಹರಪನಹಳ್ಳಿ ರಾಮಾಚಾರ್ಯ	೨೧-೨
೪೧.	ಗುರುಗೋವಿಂದವಿಠಲ	ಗೋವಿಂದರಾವ ಎಂ. (ಮೈಸೂರು)	೩೧-೨
೪೨.	ಗುರುಜಗನ್ನಾಥವಿಠಲ	ಕೋಸಗಿ ಸ್ವಾಮಿರಾಯಾಚಾರ್ಯ	೨೬
೪೩.	ಗುರುತಂದೆವರದಗೋಪಾಲವಿಠಲ	ಕಳಸದ ಶ್ರೀನಿವಾಸರು	೨೧-೨
೪೪.	ಗುರುಪ್ರಾಣೇಶವಿಠಲ	ಲಿಂಗಸುಗೂರು ವೆಂಕಟರಾವ್	೧೭
೪೫.	ಗುರುರಾಮವಿಠಲ	ಬಾಗೇಪಲ್ಲಿ ಸುಬ್ರಹ್ಮಣ್ಯದಾಸರು	೩೪
೪೬.	ಗುರುವಿಜಯವಿಠಲ	ಮೊದಲಕಲ್ಲು ಶೇಷದಾಸರು	೧೩
೪೭.	ಗೋಪತಿವಿಠಲ	ಸುರಪುರದ ಸುಬ್ಬಣ್ಣಾಚಾರ್ಯ	೨೧-೨
೪೮.	ಗೋಪಾಲವಿಠಲ	ಗೋಪಾಲದಾಸರು (ಭಾಗಣ್ಣ)	೧೨
೪೯.	ಜಗನ್ನಾಥವಿಠಲ	ಜಗನ್ನಾಥದಾಸರು	೧೪
೫೦.	ಜಯೇಶವಿಠಲ	ಕಟ್ಟೆಮನೆ ವೆಂಕಟರಾವ	೨೭
೫೧.	ತಂದೆಮುದ್ದುಮೋಹನವಿಠಲ	ಪರಮಪ್ರಿಯ ಸುಬ್ಬರಾಯದಾಸರು	೧೫
೫೨.	ತಂದೆವರದಗೋಪಾಲವಿಠಲ	ಕಳಸದ ಪ್ರಹ್ಲಾದಗೌಡರು	೨೧-೨
೫೩.	ತಂದೆವರದವಿಠಲ	ಕಳಸ ಶ್ರೀನಿವಾಸರಾವ	೨೧-೨
೫೪.	ತುಪಾಕಿ ವೆಂಕಟರಮಣ	ತುಪಾಕಿ ವೆಂಕಟರಮಣಾಚಾರ್ಯ	೨೩
೫೫.	ನರಸಿಂಹವಿಠಲ II	ಕುಂಚೂರು ಹನುಮಂತಾಚಾರ್ಯ	೨೧-೨
೫೬.	ನಿಡಂಬೂರು ರಾಮದಾಸ	ನಿಡಂಬೂರು ರಾಮದಾಸರಾವ	೧೭

೫೭.	ಪುರಂದರ[illegible]	[illegible]	[illegible]
೫೮.	ಪ್ರಸನ್ನವೆಂಕಟ	ಪ್ರಸನ್ನವೆಂಕಟದಾಸರು	[illegible]
೫೯.	ಪ್ರಸನ್ನಶ್ರೀನಿವಾಸ	ಪ್ರಸನ್ನಶ್ರೀನಿವಾಸದಾಸರು	[illegible]
೬೦.	ಪ್ರಾಣನಾಥವಿಠಲ	ಬಾಗೇಪಲ್ಲಿ ಶೇಷದಾಸರು	[illegible]
೬೧.	ಪ್ರಾಣೇಶವಿಠಲ	ಪ್ರಾಣೇಶದಾಸರು (ಲಿಂಗಸುಗೂರು)	[illegible]
೬೨.	ಭಾಗ್ಯನಿಧಿವಿಠಲ	[illegible]	೨೧–೨
೬೩.	ಭೂಪತಿವಿಠಲ	ಕಾಖಂಡಕಿ ರಾಮಾಚಾರ್ಯ	೨೧–೧
೬೪.	ಮಹಿಪತಿ	ಕಾಖಂಡಕಿ ಮಹಿಪತಿರಾಯರು	೬
೬೫.	ಮಹಿಪತಿಸುತ	ಕಾಖಂಡಕಿ ಕೃಷ್ಣದಾಸರು	೧೧
೬೬.	ಮಾನಿಧಿವಿಠಲ	ಮೈಸೂರು ವೆಂಕಟರಮಣದಾಸರು	೨೧–೧
೬೭.	ಮುದ್ದುಮೋಹನವಿಠಲ	ದೊಡ್ಡಬಳ್ಳಾಪುರದ ರಾಘವೇಂದ್ರರು	೧೫
೬೮.	ಮೋಹನವಿಠಲ	ಮೋಹನದಾಸರು	೧೩
೬೯.	ರಂಗೇಶವಿಠಲ	ಆರಕೆರೆ ಸಂಜೀವರಾವ್	೨೭
೭೦.	ರಘುರಾಮವಿಠಲ	ಸುಬೋಧ ರಾಮರಾಯರು	೧೬
೭೧.	ರಮಾಪತಿವಿಠಲ	ನರೇಗಲ್ಲ ರಾಮಣ್ಣ	೨೧–೨
೭೨.	ರಾಜಗೋಪಾಲ	ಕಡಕೋಳ ರಾಜಗೋಪಾಲದಾಸರು	೨೧–೨
೭೩.	ಲಕ್ಷ್ಮೀನಾರಾಯಣ	ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ	೨೩
೭೪.	ವರದೇಶವಿಠಲ	ಲಿಂಗಸೂಗೂರು ಸ್ವಾಮಿರಾವ	೨೬
೭೫.	ವರಾಹತಿಮ್ಮಪ್ಪ	ನೆಕ್ಕಾರು ಕೃಷ್ಣದಾಸರು	೨೪
೭೬.	ವಿಜಯರಾಮಚಂದ್ರವಿಠಲ	ರಾಮಚಂದ್ರರಾವ (ಮೈಸೂರು)	೨೭
೭೭.	ವಿಜಯವಿಠಲ	ವಿಜಯದಾಸರು	೯, ೧೦
೭೮.	ವೆಂಕಟವಿಠಲ I	ವೆಂಕಟವಿಠಲದಾಸರು	೧೩
೭೯.	ವೇಣುಗೋಪಾಲವಿಠಲ	ವಂಗಸಾಮ ತಿಮ್ಮಣ್ಣ (ಗದ್ವಾಲ)	೧೩
೮೦.	ವ್ಯಾಸವಿಠಲ	ಕಲ್ಲೂರ ಸುಬ್ಬಣ್ಣಾಚಾರ್ಯ	೧೩
೮೧.	ಶಾಮಸುಂದರವಿಠಲ	ಕುರಡಿ ಗುಂಡಾಚಾರ್ಯ (ಬಲ್ಲಟಗಿ)	೩೦
೮೨.	ಶ್ರೀಕಾಂತ/ಲಕ್ಷ್ಮೀಕಾಂತ	ದಾಸರ ಲಕ್ಷ್ಮೀನಾರಾಯಣರಾಯರು	೨೬
೮೩.	ಶ್ರೀಗುರು ಇಂದಿರೇಶ	ವೆಂಕಟೇಶಾಚಾರ್ಯ	೨೧–೨
೮೪.	ಶ್ರೀದವಿಠಲ	ಕರ್ಜಗಿ ದಾಸಪ್ಪನವರು	೨೧–೧
೮೫.	ಶ್ರೀನಿಧಿವಿಠಲ	ದೀಪದ ಅಣ್ಣಯ್ಯಾಚಾರ್	೨೧–೧
೮೬.	ಶ್ರೀರಾಮ *	ಬಡೇಸಾಬ ರಾಮದಾಸರು	೩೨
೮೭.	ಶ್ರೀವರವಿಠಲ	ಸವದಿ ರಾಮಚಂದ್ರಪ್ಪ	೨೧–೧
೮೮.	ಶ್ರೀಶಕೇಶವ	ಚಿಟ್ಟೂರು ಶ್ರೀನಿವಾಸರಾವ್	೧೬
೮೯.	ಶ್ರೀಶಪ್ರಾಣೇಶವಿಠಲ	ಲಿಂಗಸುಗೂರು ರಾಮರಾವ್	೧೭
೯೦.	ಸಿರಿಗುರುತಂದೆವರದಗೋಪಾಲವಿಠಲ	– –	೨೧–೨
೯೧.	ಸಿರಿಗೋವಿಂದವಿಠಲ	ಅಗ್ಗಿಹಾಳ ಗೋವಿಂದದಾಸರು	೨೯–೨
೯೨.	ಸಿರಿವತ್ಸಾಂಕಿತ	ಚಿಕ್ಕೋಡಿ [illegible]ಚಾರ್ಯ	೨೧–೧
೯೩.	ಸಿರಿವಿಠಲ	ಕಲಮದಾನಿ [illegible]ರಾಯರು	೨೧–೨
೯೪.	ಸುಂದರವಿಠಲ	ಗೋರಾಬಾಳ ಹನುಮಂತರಾಯ	೨೩
೯೫.	[illegible]	[illegible]	[illegible]

೯೬.	ಹನುಮೇಶವಿಠಲ	ಬುರ್ಲಿ ಹನುಮಂತಾಚಾರ್ಯ	೨೧-೧
೯೭.	ಹಸನ್ಮುಖವಿಠಲ	ಕದರಮಂಡಲಗಿಯವರು	೨೧-೧
೯೮.	ಹೆನ್ನೆರಂಗವಿಠಲ	ಹೆನ್ನೆರಂಗದಾಸರು	೨೯-೧

(ಈ) ಶ್ರೀವೈಷ್ಣವ ಹರಿದಾಸರು

	ಹೆಸರು	ಅಂಕಿತ	ಸಂಪುಟ ಸಂಖ್ಯೆ
೯೯.	ಬೇಲೂರ ವೈಕುಂಠದಾಸರು	ಬೇಲಾಪುರಿಯ ವೈಕುಂಠ	೩೫-೧
೧೦೦.	ಕವಿ ಲಕ್ಷ್ಮೀಶ	ಲಕ್ಷ್ಮೀಪತಿ	೩೫-೧
೧೦೧.	ರಂಗದಾಸರು	ಮಹದೇವಪುರದ ಶ್ರೀರಂಗ	೩೫-೧
೧೦೨.	ಸರಗೂರು ವೆಂಕಟವರದಾರ್ಯರು	ವರದವಿಠಲ	೧೫
೧೦೩.	ತುಳಸಿರಾಮದಾಸ	– –	೩೫-೧
೧೦೪.	ಅಹೋಬಲದಾಸರು (ಚೆನ್ನಪಟ್ಟಣ)	ಗುರುತುಲಸೀರಾಮ	೩೫-೧
೧೦೫.	ಶಾಮಶರ್ಮರು	ಜಾಜೀಶ	೩೫-೧
೧೦೬.	ಸಂಪತ್ತಯ್ಯಂಗಾರರು	ಶೆಲ್ವರಾಯ	೩೫-೧
೧೦೭.	ನಾರಾಯಣಶರ್ಮರು	ಜಾಜಿಪುರೀಶ	೩೫-೨
೧೦೮.	ಆಸೂರಿ ರಾಮಸ್ವಾಮಿ ಅಯ್ಯಂಗಾರ್	ಮಾಂಗಿರಿರಂಗ	೩೫-೨
೧೦೯.	ಕೋಸಲಪುರೀಶ	ಕೋಸಲಪುರೀಶ	೩೫-೨
೧೧೦.	ಬಡಣ್ಣಾಯ್ಯಾಚಾರ್ಯ	ವಿಠಲವ್ಯಾಸ	೩೫-೨
೧೧೧.	ಮಳಗಿ ರಂಗಸ್ವಾಮಿದಾಸರು	ರಂಗಸ್ವಾಮಿದಾಸ/ತುಲಸಿರಾಮ	೩೫-೧
೧೧೨.	ಅಚ್ಯುತದಾಸರು	ಅಚ್ಯುತವಿಠಲ	೩೫-೧
೧೧೩.	ವೆಂಕಟದಾಸರು	ಚಿಕನಾಗಪುರವಾಸ	೨೦

(ಉ) ಅದ್ವೈತ ಹರಿದಾಸರು

	ಹೆಸರು (ಅಂಕಿತ)	ಸಂಪುಟ
೧೧೪.	ಗೋಪಾಲಾರ್ಯರು	೨೦
೧೧೫.	ಭೀಮಾಶಂಕರರು	೨೦
೧೧೬.	ಜಕ್ಕಪ್ಪಯ್ಯನವರು (ಶಂಕರ)	೨೦
೧೧೭.	ತಿಮ್ಮಪ್ಪದಾಸರು (ಚಿಕ್ಕನಾಗಪುರವಾಸ)	೩೦
೧೧೮.	ನಾರಾಯಣದಾಸರು	೨೦
೧೧೯.	ಶಿವರಾಮ	೨೦
೧೨೦.	ಗುರುರಾಮಲಿಂಗ	೨೦
೧೨೧.	ಶ್ರೀಪತಿ	೩೦
೧೨೨.	ನರಸಿಂಹ	೨೦
೧೨೩.	ಲಕ್ಷ್ಮೀಪತಿ	೨೦

೧೨೪.	ಸಿದ್ಧಗುರು ತ್ರಿಪುರಾಂತಕ	೩೨
೧೨೫.	ಜ್ಞಾನಬೋಧ	೩೭
೧೨೬.	ಭವತಾರಕ	೩೦
೧೨೭.	ಚಿದಾನಂದಾವಧೂತರು (ಚಿದಾನಂದ)	೨೫
೧೨೮.	ಬಿ. ವೆಂಕಟರಾವ್ (ವೆಂಕಟರಾವ)	೧೬
೧೨೯.	ಕವಿಪರಮದೇವ (ಕೋಣೆ ಲಕ್ಷ್ಮೀರಮಣ)	೩೩
೧೩೦.	ಕರ್ಕಿ ಕೇಶವದಾಸ (ದೂರ್ವಾಪುರೀಶ / ಚೆನ್ನಕೇಶವ)	೩೩
೧೩೧.	ಕೆಳದಿ ವೆಂಕಣ್ಣ (ಕೆಳದಿ ರಾಮೇಶ)	೨೫
೧೩೨.	ಬೇಟೆರಾಯ ದೀಕ್ಷಿತ (ಧೇನುಪುರೀಶ)	೩೩
೧೩೩.	ಭಟಕಳ ಅಪ್ಪಯ್ಯ (ಗುರುವಿಮಲಾನಂದ)	೩೩
೧೩೪.	ರುಕ್ಮಾಂಗದ ಪಂಡಿತ (ರುಕ್ಮ)	೨೦
೧೩೫.	ಶಂಕರಭಟ್ಟ ಅಗ್ನಿಹೋತ್ರಿ (ಶಂಕರಗುರು)	೩೩
೧೩೬.	ಹೊಸಕೆರೆ ಚಿದಂಬರಯ್ಯ (ಚಿನ್ಮಯ)	೩೦

(ಊ) ದಕ್ಷಿಣ ಕನ್ನಡದ ಇತರ ಹರಿದಾಸರು

(ಶಿವ ಬ್ರಾಹ್ಮಣರು)

	ಹೆಸರು	ಅಂಕಿತ	ಸಂಪುಟ
೧೩೭.	ಪಣಂಬೂರು ಸದಾನಂದ	(ಸದಾನಂದ)	೨೪
೧೩೮.	ಬೆಳ್ಳೆ ದಾಸಪ್ಪಯ್ಯ	(ಪಾವಂಜೇಶ)	೨೪
೧೩೯.	ಗೋಳಿ ಗೋವಿಂದ	(ಗೋವಿಂದ)	೨೪
೧೪೦.	ಕವಿ ರಾಮಕೃಷ್ಣ	(ಒಳಲಂಕೆಯಧಿಪ)	೨೪
೧೪೧.	ವೆಂಕಣ್ಣಕವಿ	(ಗುರುವೆಂಕಟ)	೨೪

(ಗೌಡಸಾರಸ್ವತರು)

	ಹೆಸರು	ಅಂಕಿತ	ಸಂಪುಟ
೧೪೨.	ಮಟ್ಟಿ ವಾಸುದೇವ ಪ್ರಭು	– –	೨೪
೧೪೩.	ಬಂಗ್ಲೆ ನಾರಾಯಣ ಕಾಮತ	– –	೨೪
೧೪೪.	ಶೇಷ ಪ್ರಭು	(ಮಂಗಲಾಂಗ)	೨೪
೧೪೫.	ಬೋಳಾರ ವಾಸುದೇವಯ್ಯ	(ದಾಮೋದರ ವಿಠಲ)	೨೪
೧೪೬.	ವಾಸುದೇವ ಶಾನಭಾಗ	(ವಾಸುದೇವರಮೇಶ)	೨೪

– – –

ಪ್ರಕರಣ ೨

ಹರಿದಾಸರ ಕಿರುಪರಿಚಯ

(ಅ) ಯತಿವರ್ಯರು

೧. ರಂಗವಿಠಲ (ಶ್ರೀ ಶ್ರೀಪಾದರಾಜರು)

ಹರಿದಾಸ ಸಾಹಿತ್ಯದ ಪ್ರಥಮ ಪ್ರವರ್ತಕರು. ಹುಟ್ಟಿದ್ದು ಅಬ್ಬೂರಿನಲ್ಲಿ, ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ ಹಾಗೂ ಆಶ್ರಮನಾಮ ಶ್ರೀ ಲಕ್ಷ್ಮೀನಾರಾಯಣತೀರ್ಥ. ಬಾಲಕನಿದ್ದಾಗ ಅವನ ಮುಖದ ತೇಜಸ್ಸು ಹಾಗೂ ವಾಕ್ಚಾತುರ್ಯವನ್ನು ಕಂಡು ಸ್ವರ್ಣವರ್ಣತೀರ್ಥರೆಂಬ ಯತಿಗಳು ತಮ್ಮ ಶ್ರೀರಂಗಮ್‌ನ ಆಶ್ರಮಕ್ಕೆ ಕರೆದೊಯ್ದರು. ಮುಂದೆ ಶ್ರೀಪಾದರಾಜರೆಂಬ ಹೆಸರು ಪ್ರಾಪ್ತವಾದದು ಉತ್ತರಾದಿಮಠದ ಶ್ರೀಗಳಾದ ರಘುನಾಥತೀರ್ಥರಿಂದ.

ಮುಳಬಾಗಿಲಿನಲ್ಲಿ ನೆಲೆನಿಂತು ಶ್ರೀಪಾದರಾಜರು ಪೀಠಸ್ಥರಾದರು. ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡಿದರು. ಅವರಲ್ಲಿ ಶ್ರೀ ವ್ಯಾಸರಾಯರು ಮುಖ್ಯರು. ಗುರುಗಳನ್ನು ಕುರಿತು ಇವರು ತಮ್ಮ ಒಂದು ಕೀರ್ತನೆಯಲ್ಲಿ ಅವರು ಪವಾಡಸದೃಶರೆಂದು ಹೇಳಿದ್ದಾರೆ. ಚಂದ್ರಗಿರಿಯ ಸಾಳುವ ನರಸಿಂಹನು ತನ್ನ ಸಿಂಹಾಸನದ ಮೇಲೆ ಕುಳ್ಳಿರಿಸಿ ಸನ್ಮಾನಿಸಿದ್ದನು. ರಂಗವಿಠಲ ಮುದ್ರಿಕೆಯಲ್ಲಿ ಶ್ರೀಪಾದರಾಜರ ೯೯ ಕೀರ್ತನೆಗಳು ದೊರೆತಿದ್ದು, ಅವುಗಳಲ್ಲಿ ದೀರ್ಘವಾದ ಲಕ್ಷ್ಮೀನರಸಿಂಹ ಪ್ರಾದುರ್ಭಾವ, ಮಧ್ವನಾಮ ಹಾಗೂ ಭ್ರಮರಗೀತೆಗಳು ಹೆಚ್ಚು ಪ್ರಸಿದ್ಧಿ ಪಡೆದಿವೆ. ಉಗಾಭೋಗ, ಸುಳಾದಿ, ದಂಡಕ ಮುಂತಾದ ವಿವಿಧ ಪ್ರಕಾರಗಳನ್ನು ಬಳಸಿ ಅದರಲ್ಲಿಯೂ ಮೊದಲಿಗರೆನಿಸಿದ್ದಾರೆ.

೯೮ ವರ್ಷಗಳ ತುಂಬು ಜೀವನವನ್ನು ಮುಳಬಾಗಿಲಿನಲ್ಲಿ ಪರಿಸಮಾಪ್ತಗೊಳಿಸಿದರು (೧೫೦೪).

(ಸಂಪುಟ ೧)

೨. ಸಿರಿಕೃಷ್ಣ (ಶ್ರೀ ವ್ಯಾಸತೀರ್ಥರು):–

ಶ್ರೀ ಬ್ರಹ್ಮಣ್ಯತೀರ್ಥರ ಕೃಪಾಶೀರ್ವಾದದಿಂದ ಜನಿಸಿದ ಬನ್ನೂರಿನ ಈ ಮಗುವಿಗೆ ಯತಿರಾಜ ಎಂದು ಹೆಸರು. ಗುರುಗಳೇ ಅವನನ್ನು ಮಠದಲ್ಲಿ ನಿಲ್ಲಿಸಿಕೊಂಡು ಪ್ರಾಚ್ಯ ವಿದ್ಯಾಭ್ಯಾಸ ಮಾಡಿಸಿದರು. ಅವನ ಪ್ರಖರ ಬುದ್ಧಿಶಕ್ತಿ, ವಾಕ್ಚಟುತ್ವ ಸವಿನಯ ಗಾಂಭೀರ್ಯ ಮತ್ತು ಭಗವದ್ಭಕ್ತಿ – ಈ ಗುಣಗಳನ್ನು ಗಮನಿಸಿ ಹದಿ ವಯಸ್ಸಿನಲ್ಲಿಯೇ ಸನ್ಯಾಸಾಶ್ರಮವನ್ನಿತ್ತು ವ್ಯಾಸತೀರ್ಥರೆಂದು ನಾಮಕರಣ ಮಾಡಿದರು.

ಶ್ರೀ ವ್ಯಾಸತೀರ್ಥರು ಆ ತರುಣ ವಯಸ್ಸಿನಲ್ಲಿಯೇ ಕಂಚಿಗೆ ಹೋಗಿ ಅಲ್ಲಿಯ ಹಲವು ವಿದ್ವಾಂಸರನ್ನು ವಾದದಲ್ಲಿ ಗದ್ದರು. 'ಶ್ರೀಮನ್ಮಧ್ವಮತೇ.....' ಎಂದು ಮಧ್ವಮತ ಲಕ್ಷಣವನ್ನು ಹೇಳುವ ಸುಪ್ರಸಿದ್ಧ ಶ್ಲೋಕವನ್ನು ರಚಿಸಿದ್ದು ಇಲ್ಲಿಯೇ.

ತಿರುಪತಿಯ ದೇವಸ್ಥಾನದ ಆಡಳಿತ ಕುಸಿದಾಗ ಅಲ್ಲಿಯ ದೊರೆ ಸಾಳುವ ನರಸಿಂಹನು ಇವರನ್ನೇ ತಿಮ್ಮಪ್ಪನ ಪೂಜೆಗಾಗಿ ಗೊತ್ತುಪಡಿಸಿದನು. ಮುಂದೆ ಅವರು ಹಂಪಿಗೆ ಬಂದು ವಿಜಯನಗರ ಸಾಮ್ರಾಜ್ಯದ ಧೀಮಂತ ದೊರೆ ಕೃಷ್ಣದೇವರಾಯನ ರಾಜಗುರುಗಳಾಗಿ ಅವನನ್ನು ಹಲವಾರು ರೀತಿಯಿಂದ ಮೇಲೆತ್ತಿದ್ದರು. ಅವನ ಕುಹಯೋಗ ದೋಷವನ್ನು ಪರಿಹರಿಸಿದರು. ಆ ದೋಷ ಪರಿಹಾರ ಆಗುವವರೆಗೆ, ರಾಜನು ಅವರನ್ನೇ ಸಿಂಹಾಸನದ ಮೇಲೆ ಕುಳ್ಳಿರಿಸಿದ್ದನು.

ಹಂಪಿಯಲ್ಲಿ ಶ್ರೀ ವ್ಯಾಸರಾಯರು ಮಾಡಿದ ಇನ್ನೊಂದು ಮಹತ್ವದ ಕೆಲಸವೆಂದರೆ 'ವಿಶ್ವಪಾವನ' ಎಂಬ ಹೆಸರಿನ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ದೂರದೂರದ ಪ್ರದೇಶಗಳಿಂದ ಜನ ಉಚ್ಚಮಟ್ಟದ ವಿದ್ಯಾರ್ಜನೆಗಾಗಿ

ಅಲ್ಲಿಗೆ ಬರುತ್ತಿದ್ದರು. ನ್ಯೂನಿಜ್ ಎಂಬ ಪೋರ್ತುಗೀಜ ಪ್ರವಾಸಿಯು, ಈ ವಿಶ್ವವಿದ್ಯಾಲಯದ ಘಟಿಕೋತ್ಸವದ ಮೆರವಣಿಗೆಯು ಮೈಲುದ್ದದವರೆಗೆ ಇತ್ತೆಂದು ವರ್ಣಿಸಿದ್ದಾನೆ.

ಅವರ ಇನ್ನೊಂದು ಮಹತ್ಕಾರ್ಯವೆಂದರೆ ಅನೇಕ ಸ್ಥಳಗಳಲ್ಲಿ ಪ್ರಾಣದೇವರ ವಿಗ್ರಹಗಳನ್ನು ಸ್ಥಾಪಿಸಿದ್ದಾರೆ (ಸು. ೭೩೨!) ಅವುಗಳಲ್ಲಿ ಹೆಚ್ಚು ಪ್ರಸಿದ್ಧವಾದದ್ದು ಹಂಪಿಯ ಚಕ್ರತೀರ್ಥದ ಬಳಿ ಇರುವ ಯಂತ್ರೋದ್ಧಾರಕ ಪ್ರಾಣದೇವರು.

ಇಷ್ಟೆಲ್ಲ ಲೌಕಿಕ-ಧಾರ್ಮಿಕ ಕಾರ್ಯಗಳಲ್ಲಿ ತೊಡಗಿದ್ದರೂ ತಮ್ಮ ಗುರುಗಳಾದ ಶ್ರೀಪಾದರಾಜರಂತೆ ವಿವಿಧ ಪ್ರಕಾರದ ಕೀರ್ತನೆಗಳನ್ನು ರಚಿಸಿದ್ದಾರೆ. ವಿಷಯದ ಆಯ್ಕೆಯಲ್ಲಿಯೂ ವೈವಿಧ್ಯವಿದೆ. ಅವುಗಳ ಬಂಧವು ಬಿಗಿಕಟ್ಟಿನದಾದರೂ, ಸುಲಭಗ್ರಾಹ್ಯವಾಗಿವೆ. ಇದಕ್ಕೆ ಉದಾಹರಣೆಯಾಗಿ 'ಅಂತರಂಗದಲ್ಲಿ ಹರಿಯ ಕಾಣದವ ಹುಟ್ಟು ಕುರುಡನು....' ಎಂಬ ಜನಪ್ರಿಯ ಹಾಡನ್ನು ಕಾಣಿಸಬಹುದು.

ಅವರ ಶಿಷ್ಯವರ್ಗದಲ್ಲಿ ಶ್ರೀ ವಿಜಯೀಂದ್ರತೀರ್ಥರು, ಪುರಂದರದಾಸರು ಹಾಗೂ ಕನಕದಾಸರನ್ನು ಹೆಸರಿಸಬೇಕು (ಸೋದೆ ಶ್ರೀ ವಾದಿರಾಜರು ಗೌರವ ಶಿಷ್ಯರು). ನಾಲ್ವರೂ ದಾಸ ಸಾಹಿತ್ಯವನ್ನು ಬಹುವಾಗಿ ಮುನ್ನಡೆಸಿದವರು.

ಅವರ ಹೊರಗಿನ ಕಾರ್ಯವೆಂದರೆ ಬಂಗಾಲದ ಚೈತನ್ಯ ಪಂಥಕ್ಕೆ ಚಾಲನೆಯನ್ನು ಕೊಟ್ಟಿದ್ದು. ಸೋಮನಾಥನೆಂಬ ಅದ್ವೈತ ಕವಿ ಸಂಸ್ಕೃತದಲ್ಲಿ 'ವ್ಯಾಸಯೋಗಿ ಚರಿತೆ' ಎಂಬುದನ್ನು ರಚಿಸಿದ್ದುದು ಅವರ ಮಹಾನ್ ಸಾಧನೆಗೆ ಕನ್ನಡಿಯಂತಿದೆ.

ಅತ್ಯಂತ ವೈಭವದಿಂದ ಧರ್ಮಸಾಮ್ರಾಜ್ಯವನ್ನು ಆಳಿ ಶ್ರೀ ವ್ಯಾಸರಾಯರು ಕ್ರಿ.ಶ.೧೫೩೯ರಲ್ಲಿ ವೃಂದಾವನಸ್ಥರಾದರು. (ಸಂ. ೧)

೩. ಹಯವದನ (ಶ್ರೀ ವಾದಿರಾಜರು)

ಶ್ರೀ ಮಧ್ವಾಚಾರ್ಯರ ನಂತರ ಒಂದು ಸಂಸ್ಥೆಯೋಪಾದಿಯಲ್ಲಿ ಮಾಧ್ವ ಸಮುದಾಯದ ಸಾಮಾಜಿಕ, ಧಾರ್ಮಿಕ ಏಳಿಗೆಗಾಗಿ ಶ್ರಮಿಸಿದವರು ಶ್ರೀ ವಾದಿರಾಜರು. ಇವರ ಪೂರ್ವಾಶ್ರಮದ ಹೆಸರು ವರಾಹನೆಂದು. ತಂದೆ ರಾಮಾಚಾರ್ಯರು; ತಾಯಿ ಸರಸ್ವತಿದೇವಿ. ಕುಂದಾಪುರ ತಾಲ್ಲೂಕಿನ ಕುಂಭಾಸಿಯ ಬಳಿ ಹೂವಿನಕೆರೆ ಇವರ ಜನ್ಮಸ್ಥಳ. ಕ್ರಿ.ಶ.೧೪೮೦ರಲ್ಲಿ ಜನನ. ತುಳು ಬ್ರಾಹ್ಮಣ ಮನೆತನಕ್ಕೆ ಸೇರಿದ ಸಾಮವೇದಿಗಳು. ಶ್ರೀ ವಾಗೀಶತೀರ್ಥರ ಅನುಗ್ರಹದಿಂದ ಹುಟ್ಟಿದವರು. ಎಂಟನೇ ವಯಸ್ಸಿನಲ್ಲಿಯೇ ಸಂನ್ಯಾಸ ಸ್ವೀಕರಿಸಿ, ಅಸಾಧಾರಣ ಪ್ರತಿಭೆ, ವಾಕ್ಚಟುತ್ವ ಹೊಂದಿದ್ದ ಬಾಲಯತಿಗೆ ಶ್ರೀವಿದ್ಯಾನಿಧಿತೀರ್ಥರಿಂದ ವಿದ್ಯಾಭ್ಯಾಸವಾಯಿತು. ವಿದ್ಯಾರ್ಜನೆಯ ನಂತರ ಅಷ್ಟಮಠಗಳಲ್ಲಿ ಒಂದಾದ ಸೋದೆಯ ಮಠದ ಇಪ್ಪತ್ತನೆಯ ಪೀಠಾಧಿಪತಿಗಳಾದರು.

ಯತಿಗಳಾಗಿ ಸುಮಾರು ೩೦ ವಿದ್ವತ್‌ಪೂರ್ಣ ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ತೀರ್ಥಯಾತ್ರೆ, ಮಾಡುತ್ತ ಹೆಚ್ಚಿನ ಮತಪ್ರಚಾರಕ್ಕೆ ತಮ್ಮ ಜೀವನದ ವರ್ಷಗಳನ್ನು ಮೀಸಲಾಗಿಟ್ಟರು. ತಿರುಪತಿಯನ್ನು ಪಾದ ಸ್ಪರ್ಶಿಸದೇ ಮಂಡಿಯೂರಿಕೊಂಡೇ ಹತ್ತಿದ್ದರಂತೆ. ಅಲ್ಲಿನ ಪ್ರತಿಯೊಂದು ಕಲ್ಲಿನಲ್ಲಿಯೂ ಭಗವಂತನ ಅಸ್ತಿತ್ವವಿದೆ ಎನ್ನುವಷ್ಟು ಅವರದು ಭಕ್ತಿಭಾವ. 'ತೀರ್ಥಪ್ರಬಂಧ'ವೆಂಬ ಪ್ರಥಮ ಪ್ರವಾಸ ಗ್ರಂಥವನ್ನೂ 'ರುಕ್ಮಿಣೀಶವಿಜಯ'ವೆಂಬ ನವರಸಭರಿತ ಸುಂದರ ಕಾವ್ಯವನ್ನೂ ರಚಿಸಿದ್ದಾರೆ. 'ಯುಕ್ತಿಮಲ್ಲಿಕಾ' ಇವರ ಸಂಸ್ಕೃತ ಗ್ರಂಥಗಳಲ್ಲೆಲ್ಲಾ ಅತ್ಯುತ್ತಮ ಕೃತಿಯೆಂದು ಹೆಸರಾಗಿದೆ. 'ಸರಸಭಾರತೀ ವಿಲಾಸ' 'ಲಕ್ಷಾಲಂಕಾರ' 'ತಾತ್ಪರ್ಯ ನಿರ್ಣಯ ಟೀಕಾ' ಇವರ ಇತರ ಪ್ರಮುಖ ಸಂಸ್ಕೃತ ಗ್ರಂಥಗಳು.

ಸಂಸ್ಕೃತದಂತೆಯೇ ಕನ್ನಡ ಮತ್ತು ಮಾತೃಭಾಷೆ ತುಳುವಿನಲ್ಲಿಯೂ ಅವರಿಗೆ ಅಭಿಮಾನವಿತ್ತು. 'ಹಯವದನ' ಎಂಬ ಅಂಕಿತದಿಂದ ನೂರಾರು ಬಿಡಿ ಕೀರ್ತನೆಗಳನ್ನು ರಚಿಸಿ ಪೂಜಾ ಸಮಯದಲ್ಲಿ ಅವುಗಳನ್ನು ಹಾಡುತ್ತಾ ಪ್ರಚುರಗೊಳಿಸಿದರು. ಕೀರ್ತನೆ, ಉಗಾಭೋಗ, ಸುಳಾದಿ ಹೀಗೆ ಎಲ್ಲ ಪ್ರಕಾರಗಳಲ್ಲೂ ೨೨೦ಕ್ಕೂ ಹೆಚ್ಚು ಕೃತಿಗಳನ್ನು ಮತ್ತು ೬ ದೀರ್ಘಕೃತಿಗಳನ್ನೂ ರಚಿಸಿದ್ದಾರೆ. ಹರಿಭಕ್ತಿ, ಮಾಧ್ವ ತತ್ತ್ವಪ್ರಚಾರ, ಸಾಮಾಜಿಕ ಕಳಕಳಿ, ಕಲ್ಪಕತೆ ಹಾಗೂ ನಿಂದಾಸ್ತುತಿ ಇವು ಅವುಗಳಲ್ಲಿ ಎದ್ದು ಕಾಣುವ ಅಂಶ.

ಸೋದೆಯ ಮಾಂಡಲಿಕ ಅರಸಪ್ಪನಾಯಕನಿಂದ ಸ್ಥಳವನ್ನು ಪಡೆದು ಅಲ್ಲಿ ಮಠವನ್ನು ಸ್ಥಾಪಿಸಿ ತ್ರಿವಿಕ್ರಮ, ವೇಣುಗೋಪಾಲ, ಮಹಾಲಕ್ಷ್ಮಿ, ಭೂತರಾಜರನ್ನು ಪ್ರತಿಷ್ಠಾಪಿಸಿ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಉಡುಪಿಯಲ್ಲಿ

ಪ್ರತ್ಯೇಕವಾಗಿ ಅಷ್ಟಮಠಗಳನ್ನು ಕಟ್ಟಿಸಿ ಶ್ರೀಕೃಷ್ಣನ ಎರಡು ವರ್ಷಗಳ ಪರ್ಯಾಯ ವ್ಯವಸ್ಥೆಯನ್ನು ಚಾಲನೆಯಲ್ಲಿ ತಂದವರು ವಾದಿರಾಜರು. ಪ್ರತಿ ರಾತ್ರಿ ಪೂಜೆಯ ನಂತರ ಸಾಮಾನ್ಯ ಭಕ್ತಾದಿಗಳೊಡನೆ ಯತಿಗಳು ಕಲೆತು ಭಜನ ಕೀರ್ತನೆಗಳನ್ನು ಹಾಡುವ ಪದ್ಧತಿ ಪ್ರಾರಂಭವಾದುದು ವಾದಿರಾಜರಿಂದಲೇ. ಶ್ರೀ ವಾದಿರಾಜ ಯತಿಗಳಿಂದ ನೂರಾರು ಪವಾಡಗಳು ನಡೆದ ಬಗ್ಗೆ ಐತಿಹ್ಯಗಳಿವೆ. ಹಯಗ್ರೀವದೇವರು ನಿತ್ಯವೂ ಅವರಿಂದ ಪ್ರಸಾದ ಸ್ವೀಕರಿಸುತ್ತಿದ್ದರೆಂಬ ನಂಬಿಕೆಯಿದೆ.

ಸಮಾಜದ ಬೇರೆ ವರ್ಗದ ಜನಸಮುದಾಯಕ್ಕೆ ಕೂಡ ಮಾಧ್ವದೀಕ್ಷೆಯನ್ನಿತ್ತು ಅವರನ್ನು ಉದ್ಧರಿಸಿದ ಸಮಾಜ ಸುಧಾರಕರಿವರು. ಜೈನ ಹೆಗ್ಗಡೆಯವರ ಆಶಯದಂತೆ ಧರ್ಮಸ್ಥಳದಲ್ಲಿ ಮಂಜುನಾಥನನ್ನು ಸ್ಥಾಪಿಸಿದರು. ಅನೇಕ ಸಾರಸ್ವತರನ್ನು, ಸ್ವರ್ಣಕಾರರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು.

ಅವರ ಕೀರ್ತನೆಗಳಲ್ಲಿ ವಿಶೇಷವಾಗಿ ತ್ರಿವಿಕ್ರಮನ ವರ್ಣನೆ, ಉಡುಪಿಯ ಕೃಷ್ಣನ ಪರ್ಯಾಯೋತ್ಸವ, ದಶಾವತಾರದ ಹಾಡುಗಳು, ಏಕಾದಶಿ, ಚಾತುರ್ಮಾಸದ ಮಹಿಮೆ ಮುಂತಾದವು ವಿಷಯ ದೃಷ್ಟಿಯಿಂದ ವಿಶೇಷವಾಗಿವೆ, ದೀರ್ಘಕೃತಿಗಳಲ್ಲಿ ಲಕ್ಷ್ಮೀಶೋಭಾನೆ ಅತ್ಯಂತ ಜನಪ್ರಿಯ ಕೃತಿ. 'ವೈಕುಂಠ ವರ್ಣನೆ', 'ಸ್ವಪ್ನಪದ', 'ಭ್ರಮರಗೀತೆ', 'ತತ್ತ್ವಸುವ್ವಾಲಿ' ಇವರ ಇತರ ಕೃತಿಗಳು.

೧೨೦ ವರ್ಷಗಳ ತುಂಬು ಬಾಳಿನ ನಂತರ ಸಶರೀರವಾಗಿಯೇ ಶ್ರೀ ವಾದಿರಾಜರು ಸೋದೆಯಲ್ಲಿ ಕ್ರಿ.ಶ.೧೬೦೦ರಲ್ಲಿ ವೃಂದಾವನಸ್ಥರಾದರು. ಇಂದಿಗೂ ಸೋದೆ ಕ್ಷೇತ್ರ ವಾದಿರಾಜರ ಅತ್ಯಂತ ಜಾಗೃತಕ್ಷೇತ್ರವೆಂದು ಹೆಸರಾಗಿದೆ.

(ಸಂ. ೨)

೪. ವಿಜಯರಾಮ (ಶ್ರೀ ವಿಜಯೀಂದ್ರತೀರ್ಥರು)

ಮಂತ್ರಾಲಯದ ಶ್ರೀ ರಾಘವೇಂದ್ರಯತಿಗಳ ಪರಮ ಗುರುಗಳಾದ ವಿಜಯೀಂದ್ರತೀರ್ಥರು ವ್ಯಾಸರಾಯರ ಶಿಷ್ಯರು. ಇವರ ಪೂರ್ವಾಶ್ರಮದ ಹೆಸರು ವಿಠಲಾಚಾರ್ಯ. ಇವರ ತಂದೆ ಶ್ರೀ ವ್ಯಾಸರಾಯರ ಅಣ್ಣಂದಿರಾಗಿದ್ದ ಮಧ್ವಪತಿ. ಜನನ ಕ್ರಿ.ಶ.೧೫೧೪ರಲ್ಲಿ. ೧೫೨೬ರಲ್ಲಿ ಸನ್ಯಾಸದೀಕ್ಷೆ ಶ್ರೀ ವ್ಯಾಸರಾಯರಿಂದ. ೧೫೩೦ರಲ್ಲಿ ಸುರೇಂದ್ರತೀರ್ಥ ಯತಿಗಳ ಪ್ರೇರಣೆಯಿಂದ ಕುಂಭಕೋಣದಲ್ಲಿ ನೆಲಸಿ ಪೀಠಾಧಿಪತಿಗಳಾದರು (೧೫೩೫). ೬೪ ಕಲೆಗಳಲ್ಲಿ ಪರಿಣತರಾಗಿದ್ದ ವಿಜಯೀಂದ್ರರು 'ಅಜಯ್ಯ ವಿಜಯೀಂದ್ರ'ರೆಂದು ಖ್ಯಾತರಾಗಿದ್ದರು. ಸಂಸ್ಕೃತದಲ್ಲಿ ನೂರಕ್ಕೂ ಮೇಲ್ಪಟ್ಟು ಶಾಸ್ತ್ರೀಯ ಗ್ರಂಥಗಳನ್ನು ರಚಿಸಿದ್ದಾರೆ. ಪುರಂದರದಾಸರ ಸಮಕಾಲೀನರು. ವಿಜಯರಾಮ ಎಂಬ ಅಂಕಿತದಲ್ಲಿ ಕನ್ನಡ ಕೀರ್ತನೆಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಬೆಳೆಸಿದರು. ನಾಲ್ಕು ಕೀರ್ತನೆಗಳು ಮಾತ್ರ ಲಭ್ಯವಿದೆ. ಒಂದು ಉಗಾಭೋಗ, ಒಂದು ಸುಳಾದಿಯಲ್ಲದೆ ವ್ಯಾಸರಾಜರನ್ನು ಸ್ತುತಿಸುವ ಕೀರ್ತನೆ ಸುಂದರವಾಗಿದೆ.

(ಸಂ. ೨೮)

೫. ಧೀರವೇಣುಗೋಪಾಲ (ಶ್ರೀ ರಾಘವೇಂದ್ರತೀರ್ಥರು):-

ಮಂತ್ರಾಲಯದ ಗುರುಸಾರ್ವಭೌಮರೆಂದು, ಮಹಿಮಾಪುರುಷರೆಂದು ಇಂದಿಗೂ ಖ್ಯಾತರಾದವರು, ಶ್ರೀ ರಾಘವೇಂದ್ರಯತಿಗಳು. ಇವರ ಪೂರ್ವಾಶ್ರಮದ ಹೆಸರು ವೆಂಕಣ್ಣ. ಜನ್ಮಸ್ಥಳ ಕುಂಭಕೋಣಂ ಬಳಿಯ ಭುವನಗಿರಿ. ಇವರ ತಂದೆ ತಿಮ್ಮಣ್ಣಭಟ್ಟ, ತಾಯಿ ಗೋಪಮ್ಮ. ಜನನ ಕ್ರಿ.ಶ.೧೫೯೬ರಲ್ಲಿ. ಗೌತಮ ಗೋತ್ರದ ಅರವತ್ತೊಕ್ಕಲು ಮಾಧ್ವ ಬ್ರಾಹ್ಮಣರು. ಬಾಲ್ಯದಲ್ಲಿಯೇ ಶಾಸ್ತ್ರ, ಸಂಗೀತ, ವೀಣೆಗಳಲ್ಲಿ ವಿದ್ವತ್ತನ್ನು ಸಂಪಾದಿಸಿ ಮುಂದೆ ಪರಿಮಳವೆಂಬ ಗ್ರಂಥ ರಚಿಸಿ 'ಪರಿಮಳಾಚಾರ್ಯ'ರೆನ್ನಿಸಿಕೊಂಡಿದ್ದರು. ೧೬೩೩ರಲ್ಲಿ ಶ್ರೀ ಸುಧೀಂದ್ರತೀರ್ಥರಿಂದ ಸನ್ಯಾಸ ಸ್ವೀಕರಿಸಿ ಶ್ರೀ ರಾಘವೇಂದ್ರತೀರ್ಥರಾದರು. ಇವರ ಪೂರ್ವಾಶ್ರಮದ ಪತ್ನಿ ಸರಸ್ವತಿ. ಮುಂದೆ ಆದವಾನಿಯ ದಿವಾನರಿಂದ ಮಂತ್ರಾಲಯ ಪ್ರದೇಶವನ್ನು ಬಳುವಳಿಯಾಗಿ ಪಡೆದು ತಮ್ಮ ಕಾರ್ಯಕ್ಷೇತ್ರವನ್ನು ಅಲ್ಲಿಗೆ ಸ್ಥಳಾಂತರಿಸಿದರು. ಸಂಸ್ಕೃತದಲ್ಲಿ ಹಲವಾರು ಗ್ರಂಥಗಳನ್ನು, ಟೀಕೆಗಳನ್ನು ರಚಿಸಿದ್ದಾರೆ. ೧೬೭೧ರಲ್ಲಿ ಮಂತ್ರಾಲಯದಲ್ಲಿ ಸಶರೀರ ವೃಂದಾವನಸ್ಥರಾದರು. ಇವರ ಹೆಸರಿನಲ್ಲಿ 'ಇಂದು ಎನಗೆ ಗೋವಿಂದ' ಎಂಬ ಏಕೈಕ, ಜನಪ್ರಿಯ ಕೀರ್ತನೆ ಪ್ರಚಾರದಲ್ಲಿದೆ.

(ಸಂ. ೨೮)

೬. ವಾಸುದೇವವಿಠ್ಠಲ (ಶ್ರೀ ವ್ಯಾಸತತ್ತ್ವಜ್ಞರು)

ವಾಸುದೇವವಿಠಲರೆಂಬ ಅಂಕಿತದಿಂದ ಕೃತಿರಚನೆ ಮಾಡಿರುವ ಶ್ರೀ ವ್ಯಾಸತತ್ತ್ವಜ್ಞರು ಜನಿಸಿದ್ದು ೧೭೦೪ರಲ್ಲಿ. ಪೂರ್ವಾಶ್ರಮದ ಹೆಸರು ವೆಂಕಟರಾಮಾಚಾರ್ಯ. ಜನ್ಮಸ್ಥಳ ಗದ್ವಾಲದ ಬಳಿ ಐಜಿ ಎಂಬ ಗ್ರಾಮ. ತಂದೆ ವೆಂಕಟನರಸಿಂಹಾಚಾರ್ಯರು. ಬಾಲ್ಯದಲ್ಲಿ ಜಡಪ್ರವೃತ್ತಿಯವರಾಗಿ, ಮುಗ್ಧರಾಗಿದ್ದ ಬಾಲಕ ಕ್ರಮೇಣ ಘನತೆವೆತ್ತ ವಿದ್ವಾಂಸರಾಗಿ ಐಜಿಯಿಂದ ಬೀಚಂಪಲ್ಲಿ ಎಂಬಲ್ಲಿ ನೆಲಸಿ ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡತೊಡಗಿದರು. ಅಲ್ಲಿಂದ ತುಂಗಭದ್ರಾ ತೀರದಲ್ಲಿದ್ದ ವೇಣಿಸೋಮಪುರಕ್ಕೆ ಬಂದು ನೆಲಸಿ 'ಮಂದನಂದಿನಿ' ಎಂಬ ಟೀಕೆಯನ್ನು ಬರೆದು ತಮ್ಮ ಗುರುಗಳಾದ ಶ್ರೀ ಭುವನೇಂದ್ರತೀರ್ಥರಿಗೆ ಸಮರ್ಪಿಸಿ, ಅವರಿಂದಲೇ ತಮ್ಮ ಎಪ್ಪತ್ತಾರನೆಯ ವಯಸ್ಸಿನಲ್ಲಿ ಸನ್ಯಾಸಾಶ್ರಮ ಸ್ವೀಕರಿಸಿ ವೈರಾಗ್ಯದ ಬದುಕು ನಡೆಸಿದರು. ಅವರನ್ನು ಪವಾಡಪುರುಷರೆಂದು ಜನ ನಂಬಿದ್ದರು. ಸನ್ಯಾಸಾಶ್ರಮದ ನಂತರವೂ 'ವಾಸುದೇವವಿಠಲ' ಅಂಕಿತದಲ್ಲಿಯೇ ಕನ್ನಡ ಕೃತಿರಚನೆ ಮಾಡಿದ್ದಾರೆ. ಒಟ್ಟು ೯೦ ಹಾಡುಗಳು ದೊರೆತಿವೆ. ಆತ್ಮನಿವೇದನೆ, ಆತ್ಮವಿಮರ್ಶೆ ಇವರ ಕೃತಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಗೋಪಿಕಾ ಸ್ತ್ರೀಯರ ವಿರಹವನ್ನು ವರ್ಣಿಸುವ ಮೂಲಕ ಆತ್ಮ-ಪರಮಾತ್ಮರ ಸಂಬಂಧಗಳ ಕುರಿತ ವಿಮರ್ಶೆ ಇದೆ. ಸಾಧನೆಯಿಂದ ಮನುಷ್ಯ ಭಗವಂತನಿಗೆ ಸಮೀಪವಾಗಬಹುದು ಎನ್ನುತ್ತಾರೆ. ಕ್ರಿ.ಶ.೧೮೦೦ರಲ್ಲಿ ತಮ್ಮ ೯೬ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

(ಸಂ. ೨೮)

೭. ರಘುತಿಲಕ (ಶ್ರೀ ರಘುವರ್ಯತೀರ್ಥರು)

ಇವರು ಪಲಿಮಾರು ಮಠದ ೨೦ನೆಯ ಪೀಠಸ್ಥರು. ಕಾಲ ಸು. ೧೬೯೩-೧೭೧೪. ಘನ ವಿದ್ವಾಂಸರು. ರಘುನಾಥವಿಜಯ ಕಾವ್ಯ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಅಣುಮಧ್ವ ವಿಜಯಕ್ಕೆ ವ್ಯಾಖ್ಯಾನ ಬರೆದಿದ್ದಾರೆ.

ಹಲವಾರು ಕೀರ್ತನೆಗಳನ್ನು ರಚಿಸಿರುವರಾದರೂ ದೊರೆತದ್ದು ಒಂದೇ. ಅದೂ ಐತಿಹಾಸಿಕ ಮಹತ್ವದ್ದು. ಶ್ರೀಮನ್ಮಧ್ವಾಚಾರ್ಯರಿಗೆ ಸಮುದ್ರದಲ್ಲಿ ಶ್ರೀಕೃಷ್ಣನ ವಿಗ್ರಹ ದೊರೆತದ್ದರ ನೈಜ ಘಟನೆಯುಳ್ಳದ್ದು.

(ಸಂ. ೨೪)

೮. ನಾಮಗಿರೀಶ (ವಿದ್ಯಾರತ್ನಾಕರತೀರ್ಥರು)

ಶ್ರೀ ವ್ಯಾಸರಾಯ ಮಠದ ಯತಿಪರಂಪರೆಯಲ್ಲಿ ಬಂದ ಈ ಯತಿವರ್ಯರ ನಿಜನಾಮ ತೆಕ್ಕಲೂರು ಅಹೋಬಲ ಆಚಾರ್ಯರೆಂದು. ಕ್ರಿ.ಶ.೧೮೩೩ರಲ್ಲಿ ಸೋಸಲೆಯಲ್ಲಿ ಜನನ. ತಂದೆ ಲಕ್ಷ್ಮೀನರಸಿಂಹಾಚಾರ್ಯರು. ಬಾಲ್ಯದಿಂದಲೇ ಶ್ರೀ ವಿದ್ಯಾಕಾಂತತೀರ್ಥರ ಅನುಗ್ರಹ. ಗರಳಪುರಿ ಶಾಸ್ತ್ರಿಗಳಿಂದ ಶಾಸ್ತ್ರ, ಸಾಹಿತ್ಯ, ವ್ಯಾಕರಣಗಳ ಅಧ್ಯಯನ. ನಾಮಕ್ಕಲ್ ನಾಮಗಿರಿಯಮ್ಮ ದೇವತೆಯ ಸೇವೆಯಿಂದ ಪುತ್ರ ಭಾಗ್ಯ ಒದಗಿತು. ಮುಂದೆ ಆಧ್ಯಾತ್ಮ, ವೈರಾಗ್ಯ ಅವರ ಬದುಕಿನ ಭಾಗವಾಗಿ ೧೯೦೬ರಲ್ಲಿ ವ್ಯಾಸರಾಜ ಮಠದ ಪೀಠಾಧಿಕಾರಿಗಳಾಗಿ ಶ್ರೀ 'ವಿದ್ಯಾರತ್ನಾಕರತೀರ್ಥ'ರೆಂದು ಪ್ರಸಿದ್ಧರಾದರು. ನಾಮಗಿರಿಯಮ್ಮನ ನೆನಪಿಗಾಗಿ ನಾಮಗಿರೀಶ ಎಂಬ ಅಂಕಿತದಲ್ಲಿ ಕನ್ನಡ ಕೀರ್ತನೆಗಳನ್ನು ರಚಿಸಿದ್ದಾರೆ. ಸುಮಾರು ೨೫ ಕೀರ್ತನೆಗಳು ಲಭ್ಯವಿವೆ. ಭಗವನ್ನಾಮ ಸಂಕೀರ್ತನೆ, ಗುರುಸ್ತುತಿ, ತತ್ತ್ವಚಿಂತನೆ ಇವರ ಕೃತಿಗಳ ವಿಶೇಷ. 'ದಶಾವತಾರ, ಬಾಲಗೋಪಾಲನ ವರ್ಣನೆ ಇವುಗಳನ್ನು ಭಾವನಾತ್ಮಕವಾಗಿ ಚಿತ್ರಿಸಿದ್ದಾರೆ. ಒಂಬತ್ತು ವರ್ಷಗಳ ಕಾಲ ಪೀಠಾಧಿಪತಿಗಳಾಗಿದ್ದು ೧೯೧೫ರಲ್ಲಿ ವಿಧಿವಶರಾದರು.

(ಸಂ. ೨೮)

೯. ರಾಜೇಶಹಯಾಸ್ಯ (ಶ್ರೀ ವಿಶ್ವೇಂದ್ರತೀರ್ಥರು)

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೆಯ ಮಠಾಧೀಶರಾಗಿದ್ದ ಶ್ರೀ ವಿಶ್ವೇಂದ್ರತೀರ್ಥರ ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣನೆಂದು. ತಂದೆ ವೆಂಕಟರಮಣಾಚಾರ್ಯರು. ೧೮೯೨ರಲ್ಲಿ ಸನ್ಯಾಸದೀಕ್ಷೆ ಸ್ವೀಕರಿಸಿ ಸೋದೆ ಮಠಾಧೀಶರಾದರು. ಶ್ರೀ ವಾದಿರಾಜ ಯತಿಗಳ ಪ್ರಭಾವದಿಂದ ಕನ್ನಡ ಮತ್ತು ತುಳುವಿನಲ್ಲಿ ಕೃತಿರಚನೆ ಮಾಡಿದ್ದಾರೆ. ೪೫ ಕನ್ನಡ ಕೃತಿಗಳು ಲಭ್ಯವಿವೆ. ಮೂರು ಬಾರಿ ಪರ್ಯಾಯ ಪೀಠಸ್ಥರಾಗಿದ್ದರು. ಉಡುಪಿಯ ಶ್ರೀಕೃಷ್ಣನ ಪೂಜೆ, ಆ ವೈಭವ, ಸೋದೆಯ ಪರಂಪರೆ, ವಾದಿರಾಜ ಯತಿಗಳ ಮಹಿಮಾವಿಚಾರ, ಹಯವದನ ಸ್ತುತಿಗಳು ವಿಶೇಷವಾಗಿ ಅವರ ಕೀರ್ತನ ಕೊಡುಗೆಗಳಾಗಿವೆ. ವೈದ್ಯ ವಿದ್ಯೆಯನ್ನು ಬಲ್ಲವರಾಗಿದ್ದರು. ಮೈಸೂರು ಅರಸರಿಂದ ಮತ್ತು ಕೇರಳದ

ರಾಮವರ್ಮ ಅರಸರಿಂದ ಸನ್ಮಾನಿತರಾಗಿದ್ದರು. ನಂಜನಗೂಡಿನಲ್ಲಿ 'ಶ್ರೀಕೃಷ್ಣ ಮಾಧ್ವಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಪಂಡಿತರಿಗೂ, ವಿದ್ವಾಂಸರಿಗೂ ಆಶ್ರಯದಾತರಾಗಿದ್ದರು.

(ಸಂ. ೨೮)

೧೦. ನರಹರಿ (ಶ್ರೀ ಪ್ರದ್ಯುಮ್ನತೀರ್ಥರು)

ಪ್ರದ್ಯುಮ್ನತೀರ್ಥರ ಪೂರ್ವಾಶ್ರಮದ ಹೆಸರು ವ್ಯಾಸರಾಯಾಚಾರ್ಯರೆಂದು. ಧಾರವಾಡ ಜಿಲ್ಲೆಯ ಬಂಕಾಪುರ ಇವರ ಜನ್ಮಸ್ಥಳ. ಕ್ರಿ.ಶ.೧೮೯೦ರಲ್ಲಿ ಜನನ. ತಂದೆ ವೆಂಕಟರಮಣಾಚಾರ್ಯರು. ಅವರು ಕೂಡ ಕೊನೆಗೆ ಸಂನ್ಯಾಸ ಆಶ್ರಮವನ್ನು ತೆಗೆದುಕೊಂಡಿದ್ದರು. ವ್ಯಾಸರಾಯಾಚಾರ್ಯರು ಮೊದಲಿನಿಂದಲೂ ವಿರಾಗಿಗಳಾಗಿ ಕುಂದಾಪುರ ವ್ಯಾಸರಾಜ ಮಠಾಧೀಶರಾದ ಶ್ರೀ ಲಕ್ಷ್ಮೀಪ್ರಿಯತೀರ್ಥರಿಂದ ಸನ್ಯಾಸ ಸ್ವೀಕರಿಸಿ, ಮೈಸೂರಿನ ಬಳಿ ಸಾಗರಕಟ್ಟೆಯಲ್ಲಿ ನೆಲಸಿ ಮಠ ಸ್ಥಾಪಿಸಿದರು. ಇವರ ಒಟ್ಟು ೪೪ ಕೀರ್ತನೆಗಳು ಲಭ್ಯವಿವೆ. ಬಹುಪಾಲು ಗುರುಸ್ತುತಿ ಪದ್ಯಗಳಿವೆ. ದಾಸ್ಯಭಕ್ತಿ, ಶರಣಾಗತಿಗಳ ಮೂಲಕ ಹರಿಸೇವೆಯಲ್ಲಿ ಜೀವನದ ಸಾರ್ಥಕತೆಯನ್ನು ಕಾಣಬೇಕೆಂಬುದು ಇವರ ಕೀರ್ತನೆಗಳ ಸಾರ. ಮಂತ್ರಾಲಯದ ಗುರುರಾಜರನ್ನು ವಿಶೇಷವಾಗಿ ಸ್ಮರಿಸಿದ್ದಾರೆ. ಸನ್ಯಾಸಾಶ್ರಮಕ್ಕೆ ಮೊದಲು ಮಂತ್ರಾಲಯದಲ್ಲಿ ಕೆಲ ಕಾಲ ನೆಲಸಿ ರಾಯರಿಗೆ ಸೇವೆ ಸಲ್ಲಿಸಿದ್ದರಂತೆ. ೧೯೭೫ರಲ್ಲಿ ದೈವಾಧೀನರಾದರು.

(ಸಂ. ೨೮)

೧೧. ಪ್ರಸನ್ನ (ಶ್ರೀ ವಿದ್ಯಾಪ್ರಸನ್ನತೀರ್ಥರು)

ಹರಿದಾಸ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಯತಿವರೇಣ್ಯರಲ್ಲಿ ಒಬ್ಬರು. ಶ್ರೀ ವಾದಿರಾಜರ ನಂತರ ಅತ್ಯಂತ ಹೆಚ್ಚಿನ ಸಂಖ್ಯೆಯ ಕೀರ್ತನೆಗಳನ್ನು ರಚಿಸಿದವರು ವಿದ್ಯಾಪ್ರಸನ್ನತೀರ್ಥರು. ಇವರ ಪೂರ್ವಾಶ್ರಮದ ಹೆಸರು ತೆಕ್ಕಲೂರು ವೆಂಕಟನರಸಿಂಹಾಚಾರ್ಯರೆಂದು. ಜನ್ಮಸ್ಥಳ ಸೋಸಲೆ. ವ್ಯಾಸರಾಯಮಠದ ಪೀಠಾಧಿಪತಿಗಳಾಗಿದ್ದ ಶ್ರೀ ವಿದ್ಯಾರತ್ನಾಕರತೀರ್ಥರು ಇವರ ತಂದೆ. ತಾಯಿ ಸತ್ಯಭಾಮಮ್ಮ. ತಾಯಿ ಅವರ ಸಂಸ್ಕೃತ ಅಧ್ಯಯನದ ಜೊತೆಗೆ ಲೌಕಿಕ ವಿದ್ಯಾಭ್ಯಾಸಕ್ಕೂ ಒತ್ತುಕೊಟ್ಟು ವಕೀಲನನ್ನಾಗಿ ಮಾಡಿದರು. ಪ್ರಖ್ಯಾತ ವಕೀಲರಾಗಿ, ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುತ್ತಿರುವಾಗಲೇ ತಮ್ಮ ೩೬ನೇ ವಯಸ್ಸಿನಲ್ಲಿ ಅನಿರೀಕ್ಷಿತವಾಗಿ ಸನ್ಯಾಸ ಸ್ವೀಕರಿಸಿ ಪೀಠಾಧಿಪತಿಗಳಾಗುವ ಯೋಗ ಬದಗಿತು. ವ್ಯಾಸರಾಯಮಠದ ಪೀಠಾಧಿಪತಿಗಳಾದರು. ಅವರೇ ಹೇಳುವ ಹಾಗೆ ಹೊಸ ಚೈತನ್ಯ ವಿಕಸಿತವಾಗಿ ಭಗವನ್ನಾಮ ಸ್ಮರಣೆ, ಕೀರ್ತನೆಗಳೇ ಜೀವನವಾಯಿತು. ಶ್ರೀ ವಿದ್ಯಾಪ್ರಸನ್ನತೀರ್ಥರು ಸುಮಾರು ೩೦೦ ಹಾಡುಗಳನ್ನು ರಚಿಸಿದ್ದಾರೆ. ಅವರು ಬರೆದ ಅನೇಕ ಕೀರ್ತನೆಗಳು ಅವರ ಕಾಲದಲ್ಲಿಯೇ ಜನಪ್ರಿಯವಾಗಿ ಹಾಡಲ್ಪಡುತ್ತಿದ್ದವು. ಭಾಗವತ, ಪುರಾಣಗಳಲ್ಲಿ ಬರುವ ಕೃಷ್ಣನ ಕತೆಗಳನ್ನು ತುಂಬಾ ಕಡೆ ನಿರೂಪಿಸಿದ್ದಾರೆ. ವಾತ್ಸಲ್ಯ, ಮಧುರಭಾವ ಇವರ ಹಾಡುಗಳ ವಿಶೇಷತೆ. ಭಕ್ತಿಭಾವವು ಸಂಸಾರವಿಮುಖವಾಗಬೇಕಿಲ್ಲ ಎಂದಿದ್ದಾರೆ. ಸಮಕಾಲೀನ ಸಮಸ್ಯೆಗಳನ್ನು, ಸಾಮಾಜಿಕ ಸ್ಥಿತ್ಯಂತರಗಳನ್ನು ತಮ್ಮ ಹಾಡುಗಳಲ್ಲಿ ಅಲ್ಲಲ್ಲಿ ಕಾಣಿಸಿದ್ದಾರೆ. ಎರಡು ನಾಟಕಗಳನ್ನು ಸಹ ರಚಿಸಿದ್ದಾರೆ. ೧೯೬೯ರಲ್ಲಿ ದೈವಾಧೀನರಾದರು.

(ಸಂ. ೨೮)

(ಆ) ಹರಿದಾಸ ಮಹಿಳೆಯರು

೧೨. ರಮೆಯರಸ (ಗಲಗಲಿ ಅವ್ವನವರು)

ಇವರ ನಿಜ ನಾಮ ರಮಾಬಾಯಿ. ಗಲಗಲಿ ಅವ್ವನವರೆಂದೇ ಖ್ಯಾತರಾಗಿರುವರು. ದಾಸಸಾಹಿತ್ಯದಲ್ಲಿ ಉಪಲಬ್ಧವಾಗಿರುವ ಮಹಿಳಾ ಕೀರ್ತನಕಾರರಲ್ಲಿ ಗಲಗಲಿ ಅವ್ವನವರೇ ಮೊದಲಿಗರು. ಇವರು ಮುದ್ಗಲಾಚಾರ್ಯರ ಧರ್ಮಪತ್ನಿ. ಇವರ ಕಾಲ ಸುಮಾರು ಕ್ರಿ.ಶ.೧೬೭೦–೧೭೬೦. ಗಲಗಲಿ ಮನೆತನವು ಶೌರ್ಯ, ಪಾಂಡಿತ್ಯ ಎರಡಕ್ಕೂ ಹೆಸರುವಾಸಿ. ಆದಿಲಶಾಹಿ, ನಿಜಾಮರು, ಪೇಶ್ವೆ, ಬ್ರಿಟಿಷ್ ಸರಕಾರ, ಮೈಸೂರು ಅರಸರು ಹಾಗೂ ಈಗ ಭಾರತ ಸರ್ಕಾರದಿಂದಲೂ ಸಮ್ಮಾನವನ್ನು ಪಡೆದಿದೆ. ಭೋಗಾಪುರದ ಶ್ಯಾನುಭೋಗರ ಮಗಳು ರಮಾಬಾಯಿ. ವೃದ್ಧ ಮುದ್ಗಲಾಚಾರ್ಯರನ್ನು ಧಾರ್ಮಿಕ ವಿಧಿಯೊಂದರ ಪೂರ್ತತೆಗಾಗಿ ಮದುವೆಯಾದ ೧೨ನೇ ವಯಸ್ಸಿನ ಬಾಲೆ ಈ ಧವಾ. ಎಂಟನೇ ದಿನವೇ ವಿಧವೆಯಾದರು. ಮುದ್ಗಲಾಯನರು ಸಾಯುವ ಮುನ್ನ, ಶಾಸ್ತ್ರಸಂಪನ್ನ ವಿದ್ವಾಂಸರಾಗಿದ್ದ

ತಮ್ಮ ಐವರು ಪುತ್ರರಿಗೆ, ತಮ್ಮ ಪತ್ನಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳಿದ್ದರಿಂದ, ಮಕ್ಕಳೇ ಅವ್ವನಿಗೆ ವಿದ್ಯಾಭ್ಯಾಸ ಮಾಡಿಸಿದರು. ಅಡಿಗೆ ಮಾಡುತ್ತಲೇ ಆಲಿಸುತ್ತ, ಕೇವಲ ಶ್ರವಣದಿಂದಲೇ ಶಾಸ್ತ್ರಾಭ್ಯಾಸ ಮಾಡಿದರು, ಅವ್ವನವರು.

ಅವ್ವನವರು ನ್ಯಾಯಶಾಸ್ತ್ರದಲ್ಲಿ ಪರಿಣತರಾದರು. ಒಮ್ಮೆ ತಮ್ಮ ಮಲಮಕ್ಕಳು ಪೇಶ್ವೆ ದರಬಾರಿನಲ್ಲಿ ಉತ್ತರ ದೇಶದ ವಿದ್ವಾಂಸರಿಂದ ಸೋಲುವ ಪರಿಸ್ಥಿತಿ ಬಂದಾಗ ಅವ್ವನವರ ಸಹಾಯದಿಂದ ವಾದ ಮಾಡಿ ಗೆದ್ದರಂತೆ. ಆಗ ಅವ್ವನವರಿಗೆ ಪೇಶ್ವೆಯು ಬಾಗಲಕೋಟೆ ಜಿಲ್ಲೆಯ ಬೀಳಗಿಯನ್ನು ವರ್ಷಾಶನ ಹಾಕಿ ಕೊಟ್ಟನು.

ಅವ್ವನವರ ೨೬ಳ ಕೀರ್ತನೆಗಳು ದೊರಕಿವೆ. ರಾಮೇಶ, ರಮೆಯರಸು ಎಂಬ ಅಂಕಿತದಲ್ಲಿ ಕೃತಿಗಳು ರಚನೆಯಾಗಿವೆ. ಆದರೆ ಅಂಕಿತಪ್ರದಾನ ಯಾರಿಂದ ಆಯಿತೆಂಬುದು ತಿಳಿದಿಲ್ಲ. ಭಕ್ತಿಪ್ರದ, ಮುಯ್ಯದ ಹಾಡುಗಳು, ಬೀಗರ ಹಾಡುಗಳು, ಕೋಲು ಹಾಡುಗಳು, ಶೃಂಗಾರ ತಾರತಮ್ಯ, ಮೋರೆಗೆ ನೀರು ತಂದ ಹಾಡುಗಳು ಮೊದಲಾದ ಕೃತಿಗಳು ಅವರಿಂದ ರಚಿತವಾಗಿವೆಯೆಂದು ತಿಳಿದರೂ, ಈಗ ದೊರಕಿರುವುದು ಮುಯ್ಯದ ಹಾಡುಗಳು ಮಾತ್ರ.

ಮುಯ್ಯದ ಹಾಡುಗಳು ಅವ್ವನವರ ವಿಶೇಷ ರಚನೆಗಳು. ಇವುಗಳನ್ನು 'ಮುಯ್ಯ ಕೊಟ್ಟ ಹಾಡು', ಮತ್ತು 'ಮುಯ್ಯ ಹಿಂದಿರುಗಿಸಿದ ಹಾಡು' ಎಂದು ವಿಭಾಗಿಸಬಹುದು. ಈ ಹಾಡುಗಳಲ್ಲಿ ರಾಮಾಯಣ, ಭಾಗವತ, ಭಾರತ, ಪುರಾಣ ಪ್ರಸಂಗಗಳ ಬಳಕೆಯಾಗಿದೆ. ಬಗೆಬಗೆಯ ವರ್ಣನೆಗಳಿಂದ ಕೂಡಿರುವ ಈ ಕೀರ್ತನೆಗಳಲ್ಲಿ ದ್ರೌಪದಿ, ಸುಭದ್ರೆ, ಸತ್ಯಭಾಮೆ, ಗೌರಿ ಕೃಷ್ಣ, ವಿಷ್ಣು, ಶಿವ ಇತ್ಯಾದಿ ಪಾತ್ರಗಳ ಸಡಗರ-ಸಂಭ್ರಮಗಳ ವರ್ಣನೆಯಿದೆ. ಚಕಮಕಿ, ಹಾಸ್ಯ ವಿಡಂಬನೆಗಳಿಂದ ಕೂಡಿದೆ. ಅವ್ವನವರ ಭಾಷೆ ಉಪಮಾ-ರೂಪಕವೇ ಮೊದಲಾದ ಅಲಂಕಾರಗಳು, ನಾಣ್ನುಡಿ, ನುಡಿಕಟ್ಟುಗಳಿಂದಾಗಿ ಅವರ ಪಾಂಡಿತ್ಯ ಮಾತ್ರವಲ್ಲದೆ ಜೀವನಾನುಭವಗಳು ಉದ್ದಕ್ಕೂ ಕಾಣಬರುತ್ತದೆ.

೫೨ ನುಡಿಗಳಿಂದ ಕೂಡಿದ ಜೋಗುಳದ ಹಾಡೊಂದಿದೆ - ಬಾಲ ಕೃಷ್ಣನನ್ನು ತೊಟ್ಟಿಲಲ್ಲಿ ಮಲಗಿಸಿ ಹಾಡಿದ ಹಾಡು; ಸರಳ, ಸುಲಭ ಧಾಟಿಯಲ್ಲಿದೆ. ಮತ್ತೊಂದು ಸೇತುಬಂಧದ ಹಾಡು. ಅದರಲ್ಲಿ ರಾಮಭಕ್ತ ಆಂಜನೇಯನು ಕೃಷ್ಣಭಕ್ತ ಪಾರ್ಥನ ನಡುವೆ ರಾಮ ಕೃಷ್ಣರಲ್ಲಿ ಯಾರು ಹೆಚ್ಚು ಎಂಬ ಕಾಲ್ಪನಿಕ ವಾಗ್ವಾದವಿದೆ. ಅವರಿಬ್ಬರ ಮಹಿಮೆಗಳು ಪ್ರಸ್ತಾಪವಾಗುತ್ತಾ ಹೋಗುವ ತಂತ್ರ ಮೆಚ್ಚುವಂತಿದೆ.

ಒಟ್ಟಿನಲ್ಲಿ ಸಂಸ್ಕೃತ ವಿದ್ವಾಂಸರ, ವೇದ ಪಾರಂಗತರ ಮನೆತನದ ಹೆಣ್ಣುಮಗಳು ಕನ್ನಡದಲ್ಲಿ ಕೃತಿರಚನೆ ಮಾಡಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೆರೆದದ್ದು ಹೆಗ್ಗಳಿಕೆಯೇ ಸರಿ.

ಅವ್ವನವರು ತಮ್ಮ ಹಿರಿಯರು ಬಾಳಿದ ಶೂರ್ಪಾಲಿ ಗ್ರಾಮದಲ್ಲಿ ನಿಧನರಾದರು.

(ಸಂ. ೭)

೧೩. ಹೆಳವನಕಟ್ಟೆರಂಗ (ಹೆಳವನಕಟ್ಟೆ ಗಿರಿಯಮ್ಮ)

ಮಹಿಳಾದಾಸರ ಪಟ್ಟಿಯಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಹೆಸರು ಪ್ರಸಿದ್ಧವಾದುದು. ಈಕೆಯ ಜನ್ಮಸ್ಥಳ ಧಾರವಾಡ ಜಿಲ್ಲೆಯ ರಾಣಿಬೆನ್ನೂರು. ತಂದೆ ಭಿಷ್ಟಪ್ಪ ಜೋಯಿಸರು. ೧೮ನೇ ಶತಮಾನದ ಪೂರ್ವಾರ್ಧದಲ್ಲಿ ಬದುಕಿ ಬಾಳಿದವಳು. ಬಾಲ್ಯದಲ್ಲಿಯೇ ತಬ್ಬಲಿಯಾದ ಗಿರಿಯಮ್ಮ ೧೦-೧೨ನೇ ವಯಸ್ಸಿನಲ್ಲಿ ಮಲೆಬೆನ್ನೂರಿನ ಶಾನುಭೋಗ ಕೃಷ್ಣಪ್ಪನವರ ಮಗ ತಿಪ್ಪರಸನನ್ನು ವಿವಾಹವಾದಳು. ಆದರೆ ಸಾಂಸಾರಿಕ ವಿಷಯಗಳಲ್ಲಿ ಆಸಕ್ತಿ ಇಲ್ಲದೇ ತನ್ನ ಪತಿಯ ಅಪ್ಪಣೆ ಪಡೆದೇ ಆಧ್ಯಾತ್ಮದತ್ತ ಮನಸ್ಸಿಟ್ಟು, ಭಗವಂತನ ಆರಾಧನೆಯಲ್ಲಿ ತೊಡಗಿದಳು. ತಾನು ರಚಿಸಿದ ಹಾಡುಗಳನ್ನು ಹೇಳುತ್ತ ರಂಗವಲ್ಲಿಯಲ್ಲಿ ವಿವಿಧ ದೇವತಾ ಪ್ರಸಂಗಗಳನ್ನು ಬಿಡಿಸುತ್ತಿದ್ದಳು. ಶ್ರೀ ಸುಮತೀಂದ್ರ ಯತಿಗಳು, ಗೋಪಾಲದಾಸರು ಇವರ ಮಹಿಮೆಯನ್ನರಿತು ಸನ್ಮಾನಿಸಿದ್ದಾರೆ. ಹೆಳವನಕಟ್ಟೆಯು ಮಲೆಬೆನ್ನೂರಿನ ಹತ್ತಿರದ ರಂಗನಾಥ ಕ್ಷೇತ್ರ, ಈತನೇ ಗಿರಿಯಮ್ಮನ ಆರಾಧ್ಯ ದೈವ. ಹೀಗಾಗಿ 'ಹೆಳವನಕಟ್ಟೆ ರಂಗ' ಎಂಬುದು ಅವಳು ಸ್ವೀಕರಿಸಿದ ಅಂಕಿತ. ಗಿರಿಯಮ್ಮನ ಬಗೆಗೆ ಅನೇಕ ಪವಾಡದ ಕತೆಗಳು ಪ್ರಚಲಿತವಾಗಿವೆ. ಆಕೆಯನ್ನು ಸಾಕ್ಷಾತ್ ದೇವಿಯೆಂದು ಪೂಜಿಸುತ್ತಿದ್ದ ಜನರು ರಂಗನಾಥ ಸ್ವಾಮಿಯ ಸನ್ನಿಧಿಯಲ್ಲಿಯೇ ಗಿರಿಯಮ್ಮನ ಒಂದು ಗುಡಿಯನ್ನು ಕಟ್ಟಿ ಪೂಜಿಸತೊಡಗಿದವರೆಂದರೆ ಆಕೆ ಏರಿದ ಎತ್ತರ, ಪ್ರಭಾವಗಳನ್ನು ನಾವು ಕಾಣಬಹುದು. ಒಟ್ಟು ೫೩ ಹಾಡುಗಳು ೬ ದೀರ್ಘಕೃತಿಗಳು ಲಭ್ಯವಿವೆ. ಭಗವಂತನ ಸಂಕೀರ್ತನೆಯಲ್ಲಿ ಮಧುರಭಾವ, ವಾತ್ಸಲ್ಯಭಾವದ ವರ್ಣನೆಗೆ ಹೆಚ್ಚು ಒತ್ತು ಇದೆ ಕೃಷ್ಣನ ಬಾಲಲೀಲೆಯ

ವರ್ಣನೆ, ದಶಾವತಾರದ ವರ್ಣನೆ, ಪುರಾಣ ಪ್ರಸಂಗಗಳ ಬಳಕೆ ವಿಶೇಷವಾಗಿ ಬಂದಿದೆ. ಗಿರಿಯಮ್ಮನ ತವರೂರಿನ ಮನೆದೈವ ಮೈಲಾರಲಿಂಗ. ಹಾಗಾಗಿ ಗಿರಿಯಮ್ಮ ಹರಿ-ಹರರನ್ನು ಸಮಭಾವದಿಂದ ಸ್ತುತಿಸಿದ್ದಾಳೆ. ದೀರ್ಘ ಕೃತಿಗಳಲ್ಲಿ ಉದ್ದಾಲಕನ ಕತೆ, ಚಂದ್ರಹಾಸನ ಕತೆ ಮನಸೆಳೆಯುವಂತಿವೆ. ಭಕ್ತಿ ಗಿರಿಯಮ್ಮನ ಎಲ್ಲ ಕೃತಿಗಳ ಸ್ಥಾಯಿಭಾವ. ಆಕೆಯ ಅಂತಿಮ ದಿನಗಳ ಬಗ್ಗೆ ಸಹ ನಿಖರವಾದ ಮಾಹಿತಿ ಇಲ್ಲ. ತುಂಗಭದ್ರೆಯ ಪೂರ್ಣ ಪ್ರವಾಹದಲ್ಲಿ ಅದೃಶ್ಯಳಾದಳೆಂದು ಹೇಳುತ್ತಾರೆ.

(ಸಂ. ೧೮-೧)

೧೪. ಮುದ್ದುವೆಂಕಟ, ವೆಂಕಟಕೃಷ್ಣ (ಯದುಗಿರಿಯಮ್ಮನವರು)

ಶ್ರೀವೈಷ್ಣವ ಸಂಪ್ರದಾಯದ ಈ ಹರಿದಾಸ ಮಹಿಳೆ ಕ್ರಿ.ಶ.೧೮೭೮ರಿಂದ ೧೯೦೮ರವರೆಗೆ ಜೀವಿಸಿದ್ದರು. ಬೆಂಗಳೂರಿನ ಸುತ್ತಮುತ್ತ ಇವರ ಕಾರ್ಯಕ್ಷೇತ್ರ, ಬಡತನ ಜೀವನದ ಕಷ್ಟಗಳಿಂದ ಬೆಂದ ಹೃದಯ ದೇವರಲ್ಲಿ ಹಾಡುತ್ತಾ ನೆಮ್ಮದಿ ಕಾಣತೊಡಗಿದ್ದರಲ್ಲಿ ಆಶ್ಚರ್ಯವಿಲ್ಲ. 'ಮುದ್ದುವೆಂಕಟ' ಹಾಗೂ 'ವೆಂಕಟಕೃಷ್ಣ' ಇವರ ಅಂಕಿತ. ಶ್ರೀವೈಷ್ಣವ ಸಂಪ್ರದಾಯದ ತತ್ತ್ವಸಂದೇಶಗಳನ್ನು ಸಾರುವ ೫೭ ಕೀರ್ತನೆಗಳು ೪ ದೀರ್ಘಕೃತಿಗಳು ಲಭ್ಯವಿವೆ. ಕ್ಷೇತ್ರದರ್ಶನ, ಆತ್ಮನಿವೇದನೆಯ ಹಾಡುಗಳಲ್ಲದೇ ಶ್ರೀವೈಷ್ಣವ ಸಂಪ್ರದಾಯವನ್ನು ವಿಶೇಷವಾಗಿ ವರ್ಣಿಸುವ ಊಂಜಿಲ್ ಸೇವೆ, ಕೃತ್ತಿಕೋತ್ಸವ, ಪಾರ್ವಟೆ ಉತ್ಸವ ಇತ್ಯಾದಿಗಳು ಗಮನಾರ್ಹವಾಗಿವೆ.

(ಸಂ. ೧೮-೪)

೧೫. ರುಕ್ಮಿಣೀಶವಿಠಲ (ಗುಂಡಮ್ಮನವರು):-

'ರುಕ್ಮಿಣೀಶವಿಠಲ' ಎಂಬ ಅಂಕಿತದೊಂದಿಗೆ ಹಾಡುಗಳನ್ನು ರಚಿಸಿದ ಗುಂಡಮ್ಮನವರ ವಾಸಸ್ಥಳ ಚಿತ್ರದುರ್ಗ. ಪೆನಗೊಂಡೆ ಪುಟ್ಟಾಚಾರ್ಯರೆಂಬ ಜಮೀನ್ದಾರರ ಧರ್ಮಪತ್ನಿ. ದೇವರಾಯದುರ್ಗದ ತಂದೆಮುದ್ದುಮೋಹನ ವಿಠಲರಿಂದ ಅಂಕಿತಪ್ರದಾನ. ಉರಗಾದ್ರಿವಾಸ ವಿಠಲದಾಸ ದಂಪತಿಗಳ ಸಂಪರ್ಕಕ್ಕೆ ಬಂದು ಹಾಡುಗಳನ್ನು ರಚಿಸತೊಡಗಿದರು. ಲಭ್ಯವಾಗಿರುವ ಹಾಡುಗಳು ಏಳು ಮಾತ್ರ, ಕೃಷ್ಣ, ಮಹಾಲಕ್ಷ್ಮಿ, ಪಾರ್ವತಿ, ಮುಖ್ಯಪ್ರಾಣ, ಮಧ್ವಾಚಾರ್ಯರನ್ನು ಕುರಿತು ಹಾಡು ರಚಿಸಿದ್ದಾರೆ.

(ಸಂ. ೧೮-೪)

೧೬. ರಮಾವಲ್ಲಭವಿಠಲ (ಸರಸಾಬಾಯಿಯವರು)

ಗೌಡಗೆರೆ ತಾಲೂಕಿನ ಬಾಪು ಹನುಮಂತರಾಯರು ಮತ್ತು ಕಾವೇರಿಬಾಯಿಯವರು ತಂದೆ ತಾಯಿಗಳು. ೧೮೮೭ರಲ್ಲಿ ಜನನ. ಚಿತ್ರದುರ್ಗದ ವಕೀಲರಾಗಿದ್ದ ಎಂ.ಬಿ. ಕೃಷ್ಣರಾಯರೊಂದಿಗೆ ವಿವಾಹ. ಪತಿ ವಿಯೋಗದ ನಂತರ ಆಧ್ಯಾತ್ಮದೆಡೆಗೆ ಮನಸ್ಸು ನೆಟ್ಟು ತಂದೆಮುದ್ದುಮೋಹನದಾಸರಿಂದ ಅಂಕಿತ ಪಡೆದು ಕೃತಿರಚನೆಗೆ ತೊಡಗಿದರು. 'ರಮಾವಲ್ಲಭವಿಠಲ' ಅಂಕಿತ. ಒಟ್ಟು ೧೩ ಕೃತಿಗಳು ಲಭ್ಯವಿವೆ. ಇನ್ನೂ ಅನೇಕ ಕೃತಿಗಳಿರಬಹುದೆಂಬ ಊಹೆ ಇದೆ. ಭಕ್ತಿಗೆ ಹೆಚ್ಚಿನ ಪ್ರಾಧಾನ್ಯ ಇದೆ. ಉರಗಾದ್ರಿವಾಸವಿಠಲ ಮುಂತಾದ ಅನೇಕ ದಾಸವರೇಣ್ಯರ ಸಂಪರ್ಕವಿತ್ತು. ಶತಾಯುಷಿಯಾಗಿ ೧೯೮೮ರಲ್ಲಿ ನಿಧನರಾದರು. ೪೦ ಬಾರಿ ಭಾಗವತ ಪಠಣ ಮಾಡಿದ್ದರಂತೆ.

(ಸಂ. ೧೮-೪)

೧೭. ವೆಂಕಟವಿಠಲ (ಬಳ್ಳಾರಿ ರಾಧಾಬಾಯಿಯವರು)

ರಾಧಾಬಾಯಿಯವರು ಕ್ರಿ.ಶ.೧೮೮೯ರಲ್ಲಿ ಮದನಪಲ್ಲಿಯಲ್ಲಿ ಜನಿಸಿದರು. ತಂದೆ ಅನಂತರಾಯರು. ತಾಯಿ ಇಂದಿರಾಬಾಯಿ. ಪತಿ ಶ್ರೀನಿವಾಸರಾಯರು. ಸುಸಂಸ್ಕೃತ ವಾತಾವರಣದಲ್ಲಿ ಬೆಳೆದರು. ಸಂಗೀತ-ಸಾಹಿತ್ಯಗಳ ಅಭಿರುಚಿ ಇತ್ತು. ತಮ್ಮ ಎಂಬತ್ತನೇ ವಯಸ್ಸಿನಲ್ಲಿ ಕನಸಿನಲ್ಲಿ ಪ್ರೇರಣೆಯಾಗಿ ದೇವರನಾಮಗಳನ್ನು ರಚಿಸಲು ಪ್ರಾರಂಭಿಸಿದರು. ಮೂವತ್ತೈದು ಹಾಡುಗಳು ಲಭ್ಯವಾಗಿವೆ. ಹೆಚ್ಚಿನ ಹಾಡುಗಳು ಶ್ರೀ ರಾಘವೇಂದ್ರ ಸ್ವಾಮಿಗಳ ಮೇಲಿವೆ. ಅನೇಕ ಹಾಡುಗಳಿಗೆ 'ಶ್ರೀ ರಾಘವೇಂದ್ರ' ಎಂಬ ಅಂಕಿತವಿದ್ದರೆ ಉಳಿದ ದೇವಾನುದೇವತೆಗಳನ್ನು ಕುರಿತ ಹಾಡುಗಳಿಗೆ 'ವೆಂಕಟವಿಠಲ' ಎಂಬ ಅಂಕಿತವಿದೆ. ಸಾತ್ವಿಕ ಭಕ್ತಿ, ಸರಳಭಾಷೆ, ಸಂಸ್ಕಾರವಂತ ಮನಸ್ಸಿನ ಶುದ್ಧ ಭಾವಲಹರಿ ಇವರ ಹಾಡುಗಳ ವೈಶಿಷ್ಟ್ಯ.

(ಸಂ. ೧೮-೪)

೧೮. ನರಸಿಂಹವಿಠಲ (ಓರಬಾಯಿ ಲಕ್ಷ್ಮೀದೇವಮ್ಮ)

ಸೊಂಡೂರಿನ ದಿವಾನರಾಗಿದ್ದ ಲಕ್ಷ್ಮಣರಾಯರ ಮತ್ತು ಗೋದಾವರಿಬಾಯಿಯವರ ಪುತ್ರಿಯಾಗಿ ಕ್ರಿ.ಶ.೧೮೯೫ರಲ್ಲಿ ಜನನ. ಮಧ್ವರಾಯರೊಂದಿಗೆ ವಿವಾಹ. ಏಕಮಾತ್ರ ಪುತ್ರನ ನಿಧನ. ಗುತ್ತಿಯಲ್ಲಿ ನೆಲಸಿದ್ದರಿಂದ ಗುತ್ತೆವ್ವನೆಂದು ಖ್ಯಾತರಾದರು. ಅನುಭಾವಿ ಕವಯಿತ್ರಿಯಾಗಿ ೨೦ ಬಿಡಿ ಕೀರ್ತನೆಗಳನ್ನೂ ೧೧ ದೀರ್ಘ ಕಥನ ಕಾವ್ಯಗಳನ್ನೂ ಬರೆದಿದ್ದಾರೆ. ತಮ್ಮ ಪ್ರಯತ್ನ, ಸಾಧನೆಗಳಿಂದ ಲಕ್ಷ್ಮೀನರಸಿಂಹ ದೇವಸ್ಥಾನವನ್ನು ಬಳ್ಳಾರಿಯಲ್ಲಿ ಪ್ರತಿಷ್ಠಾಪಿಸಿದರು. ಇವರ ಕೀರ್ತನೆಗಳ ಮೇಲೆ ತೆಲುಗಿನ ಪ್ರಭಾವವಿದೆ. ವ್ರತ ಕಥೆಗಳನ್ನು ಹೇಳುವ ಹಾಡುಗಳನ್ನು ವಿಶೇಷವಾಗಿ ರಚಿಸಿದ್ದಾರೆ. ನೇರ ನಿರೂಪಣೆ, ಸುಲಭ ಗ್ರಾಹ್ಯವಾದ ಭಾಷೆ ಇವರ ವಿಶೇಷ. ಮಂತ್ರಾಲಯದ ರಾಘವೇಂದ್ರಸ್ವಾಮಿಗಳು, ಉತ್ತರಾದಿಮಠದ ಸತ್ಯಧ್ಯಾನತೀರ್ಥರನ್ನು ವಿಶೇಷವಾಗಿ ಆರಾಧಿಸುತ್ತಿದ್ದರು. 'ನರಸಿಂಹವಿಠಲ' ಇವರ ಅಂಕಿತ. ೧೯೫೦ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು.

(ಸಂ. ೧೮-೪)

೧೯. ಕಾಳಿಮರ್ದನಕೃಷ್ಣ (ಕಳಸದ ಸುಂದರಮ್ಮ)

ಮೂಲತಃ ಕಳಸದಲ್ಲಿದ್ದ (ಧಾರವಾಡ ಜಿಲ್ಲೆ) ಹರಿದಾಸ ಮನೆತನದವರು. ನರಸಿಂಹಗೌಡರ ಮಗಳು. ಹೆಸರು ಸುಂದರಮ್ಮ. ಸೋದರಮಾವನಾದ ವಾಯಿ ಕೃಷ್ಣಾಚಾರ್ಯರನ್ನು ಮದುವೆಯಾಗಿ ಮೈಸೂರಿನಲ್ಲಿ ನೆಲೆಸಿದಳು. ಅಲ್ಲಿಗೆ ಬಂದಿದ್ದ ಪುತ್ತಿಗೆ ಮಠದ ಆಗಿನ ಶ್ರೀಗಳಿಂದ 'ಕಾಳಿಮರ್ದನಕೃಷ್ಣ' ಎಂಬ ಅಂಕಿತವನ್ನು ಪಡೆದು, ಕೀರ್ತನೆಗಳನ್ನು ರಚಿಸತೊಡಗಿದರು. ೩೫ ಹಾಡುಗಳು ಲಭ್ಯವಾಗಿವೆ. ಉಡುಪಿಯ ಅಷ್ಟಮಠದ ಯತಿಗಳನ್ನು ಕುರಿತ ಒಂದು ಅಪರೂಪದ ಹಾಡಿದೆ. ಕೃಷ್ಣನ ಬಾಲಲೀಲೆಯನ್ನು ವರ್ಣಿಸುವ ಹಾಡುಗಳು ಸುಂದರವಾಗಿವೆ. ಮುದ್ರೆಗಳನ್ನು ಧರಿಸುವ ಬಗ್ಗೆ ವಿಶೇಷವಾಗಿ ಎರಡು ಹಾಡುಗಳಿವೆ. ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡರು.

(ಸಂ. ೧೮-೪)

೨೦. ಗೋಪಾಲಕೃಷ್ಣ ವಿಠಲ (ಅಂಬಾಬಾಯಿಯವರು)

ಅಂಬಾಬಾಯಿಯವರ ಜನ್ಮಸ್ಥಳ ಚಿತ್ರದುರ್ಗ. ೧೯೦೨ರಲ್ಲಿ ಜನನ. ತಂದೆ ಭೀಮಸೇನರಾಯರು. ತಾಯಿ ಭಾರತೀಬಾಯಿ. ೧೧ನೇ ವಯಸ್ಸಿನಲ್ಲಿ ಗೋಪಾಲಪುರದ ಹನುಮಂತಾಚಾರ್ಯರೊಂದಿಗೆ ಬಾಲ್ಯವಿವಾಹವಾಯಿತಾದರೂ ಮರುವರ್ಷವೇ ವೈಧವ್ಯ ಪ್ರಾಪ್ತವಾಯಿತು. ಮುಂದೆ ಹದಿನಾರು ವರ್ಷ ತಮ್ಮ ತಂಗಿಯರ ಸಾಂಸಾರಿಕ ಜೀವನದಲ್ಲಿ ಸಹಾಯ ಮಾಡುತ್ತಾ ಧಾರ್ಮಿಕ ಜೀವನ ನಡೆಸಿ ತಂದೆಮುದ್ದುಮೋಹನವಿಠಲದಾಸರಿಂದ ೧೯೩೧ರಲ್ಲಿ ತಮ್ಮ ೨೯ನೇ ವಯಸ್ಸಿನಲ್ಲಿ ಅಂಕಿತ ಪಡೆದು ದಾಸದೀಕ್ಷೆ ಸ್ವೀಕರಿಸಿದರು. ಕಾವಿ ಧರಿಸಿ, ಗೆಜ್ಜೆಕಟ್ಟಿ, ಗೋಪಾಳಬುಟ್ಟಿ ಹಿಡಿದು, ತಂಬೂರಿ ಮಿಡಿಯುತ್ತಾ ನಿಜವಾದ ಅರ್ಥದಲ್ಲಿ ದಾಸರಾಗಿ ಸಂಚಾರ ಕೈಗೊಳ್ಳುತ್ತಾ ಮುಂದಿನ ೧೦-೧೨ ವರ್ಷಗಳನ್ನು ಭಗವನ್ನಾಮ ಸ್ಮರಣೆಗೆ ಮೀಸಲಾಗಿ ಇಟ್ಟರು. ಇವರ ಮನೆಯ ಅನೇಕ ಸದಸ್ಯರು ಸಹ ದಾಸದೀಕ್ಷೆ ಪಡೆದಿದ್ದರು. ಸುಪ್ರಸಿದ್ಧ ಹರಿದಾಸರಾದ ರಮಾಕಾಂತವಿಠಲರು ಇವರ ತಮ್ಮ. ತಮ್ಮ ವೈಯಕ್ತಿಕ ಬದುಕಿನಲ್ಲಿ ಕಳೆದುಕೊಂಡ ಸುಖ ಸಂತೋಷಗಳನ್ನು ಪಾರಮಾರ್ಥಿಕ ಸಾಧನೆಯಿಂದ ತುಂಬಿಕೊಳ್ಳಲು ಪ್ರಯತ್ನಿಸಿದರು. ಯಾತ್ರಾಸ್ಥಳಗಳನ್ನು ಸಂದರ್ಶಿಸುತ್ತಾ ಗೋಪಾಳ ವೃತ್ತಿಯಿಂದ ಜೀವನ ನಡೆಸುತ್ತಾ ನೂರಾರು ಹಾಡುಗಳನ್ನು, ದೀರ್ಘಕೃತಿಗಳನ್ನು ರಚಿಸಿದ್ದಾರೆ. ಒಟ್ಟು ಸುಮಾರು ೩೦೦ ಕೀರ್ತನೆಗಳು, ೧೭ ದೀರ್ಘಕೃತಿಗಳು ದೊರೆತಿವೆ. ಶ್ರೀಹರಿಯ ಸ್ತುತಿಪದ್ಯಗಳಲ್ಲದೇ ಕೃಷ್ಣನ ಬಾಲಲೀಲೆ, ಶ್ರೀನಿವಾಸ ವೈಭವ ವಿವಿಧ ಕ್ಷೇತ್ರಗಳ ದೇವರುಗಳ ಸ್ತುತಿ ಪದ್ಯಗಳು ವಿಶೇಷವಾಗಿವೆ. ತಮ್ಮ ಗುರುಗಳಾದ ತಂದೆಮುದ್ದುಮೋಹನವಿಠಲರನ್ನು ಕುರಿತ ಸುಮಾರು ೫೦ ಹಾಡುಗಳಿವೆ. ತಂದೆಮುದ್ದುಮೋಹನವಿಠಲರು ಅಂಕಿತವಿತ್ತ ದಾಸರ ಹೆಸರುಗಳನ್ನು ಹೇಳುವ ಹರಿಸ್ತುತಿ ರೂಪದ ಕೃತಿ ಮಹತ್ವಪೂರ್ಣವಾದದ್ದು. ತಿರುಪತಿ, ಉಡುಪಿ, ಕರಿಗಿರಿ, ಪಂಡರಾಪುರ, ಮಂತ್ರಾಲಯ, ಹಂಪೆ, ನಂಜನಗೂಡು, ಸಾಗರಕಟ್ಟೆ ಹೀಗೆ ಅವರು ಒಮ್ಮೆ ಯಾತ್ರೆಯಲ್ಲಿದ್ದಾಗಲೇ ತಮ್ಮ ೪೨ನೇ ವಯಸ್ಸಿನಲ್ಲಿ ವಿಧಿವಶರಾದರು.

(ಸಂ. ೧೮-೩)

೨೧. ಭೀಮೇಶಕೃಷ್ಣ (ಹರಪನಹಳ್ಳಿ ಭೀಮವ್ವನವರು)

ಹರಿದಾಸ ಮಹಿಳೆಯರಲ್ಲಿ ಅತ್ಯಂತ ಜನಪ್ರಿಯರಾದವರು ಹರಪನಹಳ್ಳಿ ಭೀಮವ್ವ. ಕ್ರಿ.ಶ.೧೮೨೩ರಲ್ಲಿ ಜನನ. ರಘುನಾಥಾಚಾರ್ಯ ಮತ್ತು ರಾಘಮ್ಮ ತಂದೆ ತಾಯಿಗಳು. ಹುಟ್ಟಿದ ಸ್ಥಳ ನಾರಾಯಣದೇವರಕೆರೆ. ಎಂಬ ಹಳ್ಳಿ. ಮುನಿಯಪ್ಪ ಎಂಬವರನ್ನು ವಿವಾಹವಾದ ನಂತರ ಹರಪನಹಳ್ಳಿಯಲ್ಲಿ ನೆಲಸಿದರು. ಬಾಲ್ಯದಿಂದಲೇ ಭಗವದ್ಭಕ್ತಿ, ಕಲೆ

ಸಂಕೀರ್ತನೆಗಳ ಕಡೆಗೆ ಒಲವು. 'ಭೀಮೇಶಕೃಷ್ಣ' ಎಂಬ ಸ್ವಪ್ನಾಂಕಿತವನ್ನು ತಮ್ಮ ೩೫ನೇ ವರ್ಷದಿಂದಾಚೆಗೆ ಪಡೆದು ಹಾಡುಗಳನ್ನು ಬರೆಯಲಾರಂಭಿಸಿದರು. ಒಟ್ಟು ೧೪೩ ಕೀರ್ತನೆಗಳೂ ೬ ಕಥನ ಕೀರ್ತನೆಗಳೂ ದೊರೆತಿವೆ. ವ್ರತಕಥೆಗಳನ್ನು ಕುರಿತ ಇವರ ಹಾಡುಗಳು ಮಹಿಳಾಪ್ರಪಂಚದಲ್ಲಿ ಇಂದಿಗೂ ತುಂಬಾ ಜನಪ್ರಿಯವಾಗಿವೆ. ಹರಿಸಂಕೀರ್ತನೆ, ಆತ್ಮನಿವೇದನೆಯಂತಹ ಸಾಂಪ್ರದಾಯಿಕ ಹಾಡುಗಳಲ್ಲದೆ ರಾಮಾಯಣ, ಮಹಾಭಾರತ, ಪುರಾಣ ಪ್ರಸಂಗಗಳನ್ನು ಕಥಾರೂಪದಲ್ಲಿ ಹಲವಾರು ನುಡಿಗಳಲ್ಲಿ ಹೇಳುವ ಕೀರ್ತನೆಗಳು ಇವರ ವೈಶಿಷ್ಟ್ಯ. ಕಥೆಗಳನ್ನು ಸಂವಾದ ರೂಪದಲ್ಲಿ ಹೇಳುವುದು, ವಿವಿಧ ರಾಶಿಗಳ ವರ್ಣನೆ ಇರುವ ಕೀರ್ತನೆ, ಒಗಟಿನ ರೂಪದ ಹಾಡುಗಳು ಹೀಗೆ ಓದುಗರನ್ನು ಸುಲಭವಾಗಿ ಆಕರ್ಷಿಸಿ ಹಿಡಿದಿಡುವ ತಂತ್ರಗಾರಿಕೆ ಇವರ ಶೈಲಿಯಲ್ಲಿದೆ. ದೇವರ ನಾಮ, ಸುಳಾದಿ, ಉಗಾಭೋಗ ಮೂರು ಪ್ರಕಾರಗಳಲ್ಲೂ ಕೀರ್ತನೆಗಳನ್ನು ರಚಿಸಿದ್ದಾರೆ. ೧೯೦೩ರಲ್ಲಿ ದೈವಾಧೀನರಾದರು.

(ಸಂ. ೧೯)

೨೨. ಶೇಷಗಿರೀಶ (ನಂಜನಗೂಡು ತಿರುಮಲಾಂಬಾ)

ತಂದೆ ವೆಂಕಟಕೃಷ್ಣ ಅಯ್ಯಂಗಾರ್. ತಾಯಿ ಅಲಮೇಲಮ್ಮನವರು. ಸ್ಥಳ ನಂಜನಗೂಡು. ಕ್ರಿ.ಶ.೧೮೮೭ರಲ್ಲಿ ಜನನ. ಶ್ರೀವೈಷ್ಣವ ಸಂಪ್ರದಾಯದವರು. 'ಭಕ್ತಿಗೀತಾವಳಿ' ಮತ್ತು 'ಭದ್ರ ಗೀತಾವಳಿ' ಎಂಬ ಹೆಸರಿನಲ್ಲಿ ಒಟ್ಟು ೧೯ ಕೀರ್ತನೆಗಳ ಮಾಲಿಕೆಯನ್ನು ರಚಿಸಿದ್ದಾರೆ. ಇದಲ್ಲದೇ ಕನ್ನಡ ಲೇಖಕಿಯಾಗಿ, ಪತ್ರಕರ್ತೆಯಾಗಿ, ಸಮಾಜಸೇವಕಿಯಾಗಿ 'ಈ ಶತಮಾನದ ಪ್ರಥಮ ಕನ್ನಡ ಲೇಖಕಿ' ಎನಿಸಿಕೊಂಡಿದ್ದಾರೆ. ಬಾಲ್ಯದಲ್ಲಿಯೇ ಪತಿ ವಿಯೋಗ. ತಂದೆಯ ಉತ್ತೇಜನದಿಂದ ಸಾಹಿತ್ಯದೆಡೆಗೆ ಮನಸ್ಸು ತಿರುಗಿತು. ಅವರು ರಚಿಸಿದ ಭಗವಂತನ ಸ್ತುತಿ ಪದ್ಯಗಳಲ್ಲಿ ವಿಶೇಷವಾಗಿ ನಿಂದಾಸ್ತುತಿಗಳು ಮನಸೆಳೆಯುತ್ತವೆ. ಶೇಷಗಿರೀಶ, ಶೇಷಾಚಲವಾಸ, ಶೇಷಾಚಲನಿಲಯ ಮುಂತಾಗಿ ಅಂಕಿತವನ್ನು ಬಳಸಿದ್ದಾರೆ. ಭದ್ರಗೀತಾವಳಿ ವಿಶೇಷವಾಗಿ ಮದುವೆಯ ಉರುಟಣೆಯ ಹಾಡಿನ ರೂಪದಲ್ಲಿದೆ. ಗಾಂಧೀಜಿ ಪ್ರಣೀತ ಸ್ವಾತಂತ್ರ್ಯದ ಹೋರಾಟದ ಜೊತೆಗೆ ಕನ್ನಡ ಮಾತೆಯನ್ನು ಕುರಿತು ಕೀರ್ತನೆ ರಚಿಸಿ, ದಾಸ ಸಾಹಿತ್ಯದಲ್ಲಿ ಆಧುನಿಕ ಯುಗವನ್ನು ತಂದಿದ್ದಾರೆ. ೧೯೮೨ರಲ್ಲಿ ನಿಧನ.

(ಸಂ. ೧೮-೪)

೨೩. ಶ್ರೀ-ಶ್ರೀನಿವಾಸ (ಸರಸ್ವತಿಬಾಯಿಯವರು)

ಸುಮಾರು ೧೯೦೦ರ ಆಸುಪಾಸಿನಲ್ಲಿ ಜನನ. ಮೂಲನಾಮ ತುಳಸೀಬಾಯಿಯೆಂದು. 'ಶ್ರೀ-ಶ್ರೀನಿವಾಸ' ಇವರ ಅಂಕಿತ. ನೆಲಮಂಗಲದ ಸಂಪ್ರದಾಯಸ್ಥ ದಂಪತಿಗಳಾದ ವಾಸುದೇವಾಚಾರ್ಯ ಮತ್ತು ರುಕ್ಮಿಣಿಬಾಯಿ ತಂದೆ ತಾಯಿಗಳು. ಬಾಲ್ಯದಲ್ಲಿಯೇ ಸಂಸ್ಕೃತ-ಸಾಹಿತ್ಯಗಳ ಪರಿಚಯವಾಗಿತ್ತು. ತಮ್ಮ ೨೫ನೇ ವಯಸ್ಸಿನಲ್ಲಿ ಮಗುವನ್ನು ಕಳೆದುಕೊಂಡ ದುಃಖವು ಭಗವಂತನ ಮೇಲಿನ ಭಕ್ತಿಯಾಗಿ ಮಾರ್ಪಟ್ಟು, ಹಾಡುಗಳನ್ನು ರಚಿಸಲಾರಂಭಿಸಿದರು. ಸಾಗರಕಟ್ಟೆ ಸ್ವಾಮಿಗಳಾದ ಶ್ರೀ ಪ್ರದ್ಯುಮ್ನತೀರ್ಥರಿಂದ ಅಂಕಿತಪ್ರದಾನ. ಪ್ರಾರಂಭದಲ್ಲಿ ಅಂಕಿತವಿಲ್ಲದೆ ನೂರಾರು ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ೧೫೦ ಅಂಕಿತ ಸಹಿತವಾದ ಹಾಡುಗಳಲ್ಲದೆ ೫ ದೀರ್ಘಕೃತಿಗಳೂ, ಕೆಲವು ತೆಲುಗು ಮತ್ತು ಮರಾಠಿ ಕೃತಿಗಳನ್ನೂ ರಚಿಸಿದ್ದಾರೆ. ಭಗವಂತನನ್ನು ಕುರಿತ ಅನನ್ಯವಾದ ಭಕ್ತಿ, ಶರಣಾಗತ ಭಾವ ಇವರ ಕೃತಿಗಳ ಸ್ಥಾಯಿಭಾವ. ಅಲ್ಲಲ್ಲಿ ಲೌಕಿಕ ವಿಷಯಗಳನ್ನು ಉಪಮೆ ರೂಪಕಗಳನ್ನು ಭಾವಸಂವಹನಕ್ಕೆ ಅನುಕೂಲವಾಗಲು ಬಳಸಿದ್ದಾರೆ. ತಿರುಪತಿಯ ವೆಂಕಟೇಶ ಇವರ ಇಷ್ಟದೈವ. ೧೯೮೨ರಲ್ಲಿ ದೈವಾಧೀನರಾದರು.

(ಸಂ. ೧೮-೪)

೨೪. ಶಾಂತಿಪಾಲಿಪಗುರು (ನಾಡಘರ ಶಾಂತಾಬಾಯಿಯವರು)

ಇವರು ಶಿವಮೊಗ್ಗ ಜಿಲ್ಲೆಯ ಸಾಗರದ ಕೊಪ್ಪ ಗ್ರಾಮದವರು. ಕಾಲ ೧೮೬೦-೧೯೦೧. ತಂದೆ ವಕೀಲರಾದ ವೆಂಕಟೇಶಯ್ಯನವರು. ತಂದೆಯ ಪ್ರಭಾವದಿಂದ ಸಾಹಿತ್ಯ, ಸಂಗೀತದಲ್ಲಿ ಅಭಿರುಚಿ ಮೂಡಿತು. ಭಟ್ಕಳದ ನಾಡಘರ ಅಪ್ಪಯ್ಯ ಅವರೊಂದಿಗೆ ವಿವಾಹ. ಸಾಂಸಾರಿಕ ಕಷ್ಟ ಕೋಟಲೆಗಳಿಂದ ಭಗವಂತ ನಾಮಸ್ಮರಣೆಯ ಕಡೆಗೆ ಮನಸ್ಸು ಒಲಿಯಿತು. ವಿಠಲ ಮತ್ತು ದತ್ತಾತ್ರೇಯನ ಉಪಾಸಕರು. ದೊರೆತಿರುವ ಕೃತಿಗಳು ೨೭. ಮರಾಠಿ ಭಾಷೆಯಲ್ಲೂ ಬರೆದಿದ್ದಾರೆ. 'ಶಾಂತಿಪಾಲಿಪಗುರು' ಎನ್ನುವ ಅಂಕಿತವನ್ನು ಬಳಸಿದ್ದಾರೆ. ಭಗವದ್ಭಕ್ತಿ-ಆತ್ಮ ಸಮರ್ಪಣೆ ಇವರ ಕೃತಿಗಳ ಸ್ಥಾಯಿಭಾವ

(ಸಂ. ೧೮-೪)

೨೫. ಕಮಲನಾಭವಿಠಲ (ನಿಡಗುರಕಿ ಜೀವೂಬಾಯಿಯವರು)

ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ನಿಡಗುರಕಿ ಇವರ ಸ್ಥಳ. ಕ್ರಿ.ಶ.೧೮೯೭ರ ನವೆಂಬರ್ ೧೮ರಂದು ಜನನ. ಶಾನುಭೋಗರಾಗಿದ್ದ ದೇಶಮುಖಿ ರಾಮಚಂದ್ರರಾಯರು ಮತ್ತು ರಮಾಬಾಯಿ ಇವರ ತಂದೆ-ತಾಯಿಗಳು. ಮನೆಯಲ್ಲಿದ್ದು ಸಂಪ್ರದಾಯಸ್ಥ ವಾತಾವರಣ ಮತ್ತು ತಂದೆಯಿಂದ ಬಂದ ಸಂಗೀತಶಿಕ್ಷಣ - ಬಾಲ್ಯದಲ್ಲಿಯೇ ಜೀವೂಬಾಯಿಯವರಿಗೆ ಒದಗಿದ ವರ. ಹತ್ತನೇ ವಯಸ್ಸಿನಲ್ಲಿಯೇ ವಿವಾಹ ಮತ್ತು ಅಲ್ಪಕಾಲದಲ್ಲಿಯೇ ವೈಧವ್ಯ ಇವುಗಳಿಂದ ನೊಂದ ಜೀವ ನಿಧಾನವಾಗಿ ಆಧ್ಯಾತ್ಮದೆಡೆಗೆ ವಾಲಿತು. ದೇವರಾಯನದುರ್ಗದ ಶ್ರೀ ಉರಗಾದ್ರಿವಾಸವಿಠಲರ ದಯೆಯಿಂದ 'ಕಮಲನಾಭ ವಿಠಲ'ರೆಂಬ ಅಂಕಿತ ದೊರೆತು ಕೃತಿ ರಚನೆಗೆ ತೊಡಗಿದರು. ೧೭೦ ಕೀರ್ತನೆಗಳು, ೧೦ ದೀರ್ಘ ಕೃತಿಗಳು ಲಭ್ಯವಿವೆ. ತಾರತಮ್ಯಾನುಸಾರ ದೇವಾನುದೇವತೆಗಳನ್ನು ಕುರಿತ ಹಾಡುಗಳಲ್ಲದೇ, ದಶಾವತಾರ, ಕೃಷ್ಣನ ಬಾಲಲೀಲೆ, ನವವಿಧ ಭಕ್ತಿಭಾವ, ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ಪ್ರತಿ ಯುಗಾದಿಯಂದು ಆಯಾ ಸಂವತ್ಸರವನ್ನು ಉಲ್ಲೇಖಿಸಿ ಹಾಡುಗಳನ್ನು ರಚಿಸಿರುವುದು ಕಂಡುಬರುತ್ತದೆ. ನೀರಿನ ಮಹತ್ವವನ್ನು ಹೇಳುವ, ಹುಣಸೆಮರವನ್ನು ವರ್ಣಿಸುವ ಹಾಡುಗಳು ವಿಷಯ ಹೊಸತನದಿಂದ ಗಮನ ಸೆಳೆಯುತ್ತವೆ. ದೀರ್ಘಕೃತಿಗಳಲ್ಲಿ ಪುರಂದರದಾಸರ ಚರಿತ್ರೆ, ಗಾಲವ ಚರಿತ್ರೆ ಗಮನಾರ್ಹವಾಗಿವೆ. ಕೃತಿಗಳ ಕಡೆಯಲ್ಲಿ ಕೆಲವೊಮ್ಮೆ ಬರೆದ ವಿಶೇಷ ಸಂದರ್ಭ, ದಿನಾಂಕ ಮತ್ತು ನಿಡಗುರಕಿ ಜೀವೂಬಾಯಿ ಎಂದು ತಮ್ಮ ಹೆಸರನ್ನು ನಮೂದಿಸಿರುವುದು ವಿಶೇಷ. ೧೯೮೩ರಲ್ಲಿ ಇಹಲೋಕ ವ್ಯಾಪಾರವನ್ನು ಮುಗಿಸಿದರು.

(ಸಂ. ೧೮-೪)

(ಇ) ಮಾಧ್ವ ಸಂಪ್ರದಾಯದ ಹರಿದಾಸರು

(ಅಕಾರಾದಿಯಾಗಿ)

೨೬. ಅಚಲಾನಂದವಿಠಲ

ಇವರು ಮೈಸೂರು ಅರಸರಾದ ಮೊದಲನೆ ಕೃಷ್ಣರಾಜರಿಂದ ಪೋಷಿತರು. ಈ ಅಚಲಾನಂದದಾಸರು ಶ್ರೀಪಾದರಾಯರು, ಪುರಂದರದಾಸರು ಹಾಗೂ ವ್ಯಾಸರಾಯರನ್ನು ಸ್ತುತಿಸಿದ್ದಾರೆ. ಕಾಲ ಸುಮಾರು ೧೮ನೆಯ ಶತಕಾರಂಭ.

ಕೀರ್ತನೆಗಳು, ಸುಳಾದಿಗಳು ಹಾಗೂ ಉಗಾಭೋಗಗಳು ಎಲ್ಲ ಸೇರಿ ಒಟ್ಟು ೪೨ ಕೃತಿಗಳು ದೊರಕಿವೆ. ಸುಮಾರು ೩೪ ಉಗಾಭೋಗಗಳ ರಚನೆಯ ಸ್ವರೂಪ ವಚನಗಳನ್ನು ಹೋಲುತ್ತವೆ. ೧೭ ನುಡಿಗಳಿರುವ ನಾಲ್ಕು ಸಾಲುಗಳುಳ್ಳ ಒಂದು ಕೀರ್ತನೆಯಲ್ಲಿ ಲೋಕನೀತಿ ತತ್ವವನ್ನು ಸರಳವಾಗಿ ಹಾಗೂ ಪರಿಣಾಮಕಾರಿಯಾಗಿ ಹೇಳಿದ್ದಾರೆ.

(ಸಂ. ೧೬)

೨೭. ಅನಂತಾದ್ರೀಶ (ಗೋಕಾವಿ ಅನಂತಾಚಾರ್ಯರು)

ಅನಂತಾದ್ರೀಶರು ಕ್ರಿ.ಶ.೧೭೭೬ರಿಂದ ೧೮೪೦ರ ನಡುವೆ ಬದುಕಿದ್ದರೆಂದು ನಂಬಲಾಗಿದೆ. ಮಾದನೂರಿನ ಶ್ರೀ ವಿಷ್ಣುತೀರ್ಥರು ಇವರ ಗುರುಗಳು. ಸಂಗೀತ ಮತ್ತು ಜನಪದ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಇತ್ತು. ಅವರ ಕೃತಿಗಳಲ್ಲಿ ಅದರ ಪ್ರಭಾವವನ್ನು ಕಾಣಬಹುದು. ೭ ದೀರ್ಘ ಕಥನ ಕಾವ್ಯಗಳೂ, ೭ ಕೀರ್ತನೆಗಳೂ ಲಭ್ಯವಾಗಿವೆ. ಲಕ್ಷ್ಮೀಸ್ತುತಿ ಪದ್ಯ, ವೆಂಕಟೇಶ ಪಾರಿಜಾತ ತುಂಬಾ ಜನಪ್ರಿಯ ಕೃತಿಗಳು. ಶಿವಪಾರಿಜಾತ, ಧ್ರುವಚರಿತ್ರೆ, ಪ್ರಹ್ಲಾದಚರಿತ್ರೆ, ಶ್ರೀಕೃಷ್ಣಚರಿತ್ರೆ ಇವರ ಇತರ ಕೃತಿಗಳು. ದಾಸಸಾಹಿತ್ಯದಲ್ಲಿ ಜಾನಪದ 'ಪಾರಿಜಾತ' ಪ್ರಕಾರವನ್ನು ಬಳಕೆಗೆ ತಂದರಲ್ಲದೆ ಪಾರಿಜಾತವ ಆಟಗಳನ್ನು ಆಡಿಸುತ್ತಿದ್ದರು. ಮಂತ್ರಾಲಯದ ರಾಘವೇಂದ್ರ ಯತಿಗಳನ್ನು ಕುರಿತ ಸ್ತುತಿ ಪದ್ಯಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ. ಚಿತ್ರಕಲೆಯಲ್ಲಿ ಕೂಡ ಆಚಾರ್ಯರಿಗೆ ಪ್ರಾವೀಣ್ಯ ಇತ್ತು ಎಂಬುದಕ್ಕೆ ಪೂರಕವಾಗಿ ಇವರ ವಂಶಸ್ಥರಲ್ಲಿ ವೆಂಕಟೇಶ ಪಾರಿಜಾತವನ್ನು ಚಿತ್ರದಲ್ಲಿ ಬಿಡಿಸಿದ ಗ್ರಂಥವಿದೆ. ಇವರು ತಮ್ಮ ಜೀವಿತದ ಕೊನೆಯ ದಿನಗಳನ್ನು ಬೆಳಗಾವಿ ಜಿಲ್ಲೆಯ ಕಡಕೋಳವೆಂಬ ಗ್ರಾಮದಲ್ಲಿ ಕಳೆದರೆಂದು ತಿಳಿದು ಬರುತ್ತದೆ.

(ಸಂ. ೨೯-೧)

೨೮. ಇಂದಿರೇಶ (ಪಾಂಡುರಂಗಿ ಹುಚ್ಚಾಚಾರ್ಯರು)

ಇಂದಿರೇಶರ ಕಾಲ ೧೯ನೇ ಶತಮಾನ. ತಂದೆ ಶ್ರೀನಿವಾಸಾಚಾರ್ಯರು; ತಾಯಿ ರುಕ್ಮಿಣೀಬಾಯಿ. ಇವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದವರು. ಇವರ ಕೊನೆಯ ಮಗನೇ ಹುಚ್ಚಾಚಾರ್ಯರು. ಕಾರಣಾಂತರದಿಂದ ಇವರು ಶಿಕಾರಿಪುರವನ್ನು ಬಿಟ್ಟು ತಮ್ಮ ಆರಾಧ್ಯ ದೈವವಿರುವ ಕೊಲ್ಲಾಪುರಕ್ಕೆ ಬಂದರು. ಅಲ್ಲಿ ಅಂತಾಜಿಪಂತ ದಂಪತಿಗಳ ಆಶ್ರಯ ದೊರೆತು ಅವರ ಜೀವನ ಅರಳಿತು.

ಅವರಿಗೆ ಸ್ವಪ್ನದಲ್ಲಿ ನಾರದರಿಂದ 'ಇಂದಿರೇಶ' ಎಂಬ ಅಂಕಿತ ಪ್ರದಾನವಾಯಿತಂತೆ. ಇವರು ಅನೇಕ ಶಾಸ್ತ್ರ ಕೃತಿಗಳನ್ನು ರಚಿಸಿದ್ದಾರೆ. ಸಂಸ್ಕೃತದಲ್ಲಿ ಸರ್ವಮೂಲ ಗ್ರಂಥಗಳಿಗೆ ವಿಮರ್ಶೆ, ಸುಧಾ ಟಿಪ್ಪಣಿ, ಉಪಾಧಿ ಖಂಡನ ವ್ಯಾಖ್ಯಾನ, ತತ್ವನ್ಯಾಸ, ದ್ವಾದಶಸ್ತೋತ್ರ ವ್ಯಾಖ್ಯಾನ ಮುಂತಾದ್ದನ್ನು ರಚಿಸಿದ್ದಾರೆ. ಕನ್ನಡದಲ್ಲಿ ಲಕ್ಷ್ಮೀಲೀಲಾಮೃತ, ದಶಮಸ್ಕಂದ ಭಾಗವತ, ೫೭ ಶ್ಲೋಕಗಳನ್ನೊಳಗೊಂಡ ಸುಂದರಕಾಂಡ ಇವು ಪಂಡಿತರನ್ನೂ ಮೆಚ್ಚಿಸಿವೆ. ಅಲ್ಲದೆ ಕನ್ನಡದಲ್ಲಿ ರಚಿತವಾಗಿರುವ ಕೀರ್ತನೆಗಳು ವೈವಿಧ್ಯಮಯವಾಗಿದ್ದು, ಆಕರ್ಷಕವಾಗಿವೆ. ಭಕ್ತಿರಸಪೂರ್ಣವಾಗಿರುವ ಇವರ ಹಾಡುಗಳಲ್ಲಿ ಲಕ್ಷ್ಮಿಯನ್ನು ಕುರಿತಾದುವು ತುಂಬ ಇವೆ. ಅಲ್ಲದೆ ಬಾಲಕೃಷ್ಣನನ್ನು ಬಾಯ್ತುಂಬ ವರ್ಣಿಸುವ ಕೀರ್ತನೆಗಳೂ ಗಣನೀಯವಾಗಿವೆ. ಇದುವರೆಗೆ ದೊರೆತ ಇವರ ಕೀರ್ತನೆಗಳು ೧೮೦. ಹೀಗೆ ಇಂದಿರೇಶರು ಜ್ಞಾನ, ಭಕ್ತಿ, ವೈರಾಗ್ಯಗಳ ಸಾಕಾರಮೂರ್ತಿಯಾಗಿದ್ದು, ವೈದಿಕ ವಿದ್ವಾಂಸರಿದ್ದು, ಜೊತೆಗೇ ಪ್ರಾಸಾದಿಕ ವಾಣಿಯ ಹರಿದಾಸರೂ ಆಗಿದ್ದರು.

(ಸಂ. ೨೧-೨)

೨೯. ಉರಗಾದ್ರಿವಾಸವಿಠಲ (ಮಳವಳ್ಳಿ ಶ್ರೀನಿವಾಸರಾವ್)

ಸ್ವಾಮಿರಾಯರು ಇವರ ತಂದೆ. ತಾಯಿ ರಾಧಾಬಾಯಿಯವರು. ಕ್ರಿ.ಶ.೧೮೭೧ ಫೆಬ್ರವರಿ ೬ರಂದು ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರಿನಲ್ಲಿ ಜನಿಸಿದರು. ಕೂಳೂರು ಕಟ್ಟೆಯ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಅಲ್ಲಿ ಕೃಷ್ಣರಾಯರೆಂಬುವರ ಪರಿಚಯದಿಂದ ಮಾಧ್ವತತ್ವಗಳ ಬಗೆಗೆ ಹೆಚ್ಚಿನ ಆಸಕ್ತಿ ಮೂಡಿ, ಅಧ್ಯಯನ ಮಾಡಿದರು.

ಬಾಲ್ಯದಿಂದಲೂ ಕಾವ್ಯಾಭ್ಯಾಸ, ಗ್ರಂಥಾವಲೋಕನ ಇವರ ಹವ್ಯಾಸವೇ ಆಗಿತ್ತು. 'ಶಾಕುಂತಲ'ದ ಅನುವಾದ ಮತ್ತು ಇತರ ಎರಡು ನಾಟಕಗಳನ್ನು ಬರೆದರು. ಇವರ ೯೨ ಕೀರ್ತನೆಗಳು ಉಪಲಬ್ಧವಾಗಿವೆ. ಮೊದಲು 'ಶ್ರೀವೆಂಕಟೇಶ' ಎಂಬ ಅಂಕಿತದಲ್ಲಿ ಕೆಲವು ಕೀರ್ತನೆಗಳನ್ನು ರಚಿಸಿದರು. ಮುಂದೆ 'ಉರಗಾದ್ರಿವಾಸವಿಠಲ' ಎಂಬುದು ಸ್ವಪ್ನಾಂಕಿತವಾಗಿ ದೊರೆಯಿತು. ಶ್ರೀಹರಿ, ಲಕ್ಷ್ಮಿಯರನ್ನು ಕುರಿತ ಹಾಡುಗಳಲ್ಲಿಯ ವರ್ಣನೆಯು ಸುಂದರವಾಗಿದೆ. ಶ್ರೀವೆಂಕಟೇಶಕಲ್ಯಾಣ, ಹಾಗೂ ಶ್ರೀಹರಿಯ ವರ್ಣನೆ, ಭಾಗವತದ ಮಹಿಮೆಯನ್ನು ಬಣ್ಣಿಸುವ ಈ ದೀರ್ಘಕೃತಿಗಳು ಸರಳವಾಗಿದ್ದು ಆಕರ್ಷಕವಾಗಿವೆ.

ಉರಗಾದ್ರಿವಿಠಲದಾಸರು ಕಾವ್ಯರಚನೆಯ ಜೊತೆಗೆ ವೀಣೆ, ಪಿಟೀಲು, ತಬಲ, ಹಾರ್ಮೋನಿಯಂ ವಾದ್ಯಗಳನ್ನು ನುಡಿಸುತ್ತಿದ್ದರು. ಮತ್ತೊಂದು ವಿಶೇಷವೆಂದರೆ ಅವರ ಚಿತ್ರಕಲಾ ಪರಿಣತಿ. ದಶಾವತಾರ, ಕೇಶವಾದಿ ಚತುರ್ವಿಂಶತಿ ಭಗವದ್ರೂಪಗಳು, ವಿಶ್ವಾದಿ ಅಷ್ಟಮೂರ್ತಿಗಳು, ವಾಯುದೇವರ ಶರೀರಗತ ಭಗವದ್ರೂಪಗಳು ಇತ್ಯಾದಿ, ಚಿತ್ರರೂಪದಲ್ಲಿ ರಚಿಸಿದ್ದಾರೆ. ಇಷ್ಟಲ್ಲದೆ ಅವರು 'ಭಜನೆ ಶ್ರೀನಿವಾಸರಾಯ'ರೆಂದೇ ಹೆಸರಾಗಿದ್ದರು. ಇವರಿಗೆ ಅನೇಕ ಮಂದಿ ಶಿಷ್ಯರಿದ್ದು ೨೦೦ಕ್ಕೂ ಹೆಚ್ಚಿನ ಶಿಷ್ಯರಿಗೆ ಅಂಕಿತಪ್ರದಾನ ಮಾಡಿದ್ದಾರೆ.

ಉರಗಾದ್ರಿವಾಸವಿಠಲರು ೧೯೬೪ರಲ್ಲಿ ದೇಹತ್ಯಾಗ ಮಾಡಿದರು.

(ಸಂ. ೧೬)

೩೦. ಐಹೊಳೆ ವೆಂಕಟೇಶ (ಭೀಮರಾವ ಕುಲಕರ್ಣಿ)

ಈ ಹರಿದಾಸರು ಐಹೊಳೆಯ ಮುತಾಲಿಕ ದೇಸಾಯಿ ಎಂಬ ಮನೆತನದವರು. ಕಾಲ ಸುಮಾರು ೧೮೩೫–೧೯೧೫. ಕನ್ನಡ, ಸಂಸ್ಕೃತ ಪಂಡಿತರು. ಕೆಲವು ಕಾಲ ಹೈಸ್ಕೂಲ್ ಅಧ್ಯಾಪಕರಾಗಿ, ಮತ್ತಷ್ಟು ಕಾಲ ಫೌಜುದಾರರಾಗಿ ಮುಂದೆ ವೈರಾಗ್ಯ ತಾಳಿ ಹರಿದಾಸರೂ ಕೀರ್ತನಕಾರರೂ ಆಗಿ ಪ್ರಸಿದ್ಧರಾದವರು. ಇವರು ವಿರಾಟಪರ್ವ, ರಾಮಪಾರಿಜಾತ (ಬಾಲಕಾಂಡ), ರುಕ್ಮಾಂಗದ ನಾಟಕ, ನಳೋಪಾಖ್ಯಾನ, ಅಂಬರೀಷ ನಾಟಕ, ಕೃಷ್ಣಪಾರಿಜಾತ, ಮುಂತಾದ ಕಥನ

ಕಾವ್ಯವನ್ನೂ ಏಕಾದಶೀ ಮಹಾತ್ಮೆ, ರುಕ್ಮಿಣೀ ಸತ್ಯಭಾಮೆಯರ ಮುಯ್ಯದ ಹಾಡು, ಗೋಪನಾರಿಯರ ಕರುಣಾಲಾಪ ಎಂಬ ಕೃತಿಗಳನ್ನೂ ರಚಿಸಿದ್ದಾರೆ. ಕೆಲವೇ ಕೀರ್ತನೆಗಳು ಲಭ್ಯವಾಗಿವೆ.

(ಸಂ. ೨೧-೨)

೩೧. ಕದರುಂಡಲಗಿ ಹನುಮಯ್ಯ (ಕದರಮಂಡಲಗಿ ಭೀಮಾಚಾರ್ಯರು)

ಕದರಮಂಡಲಗಿಯ ಹನುಮೇಶನ ಭಕ್ತರು, ಈ ಭೀಮಾಚಾರ್ಯರು. ಇವರ ತಂದೆ ಹರಿಹರದ ದಾಸಾರ್ಯರು. ಇವರಿಗೆ ತಾಯಿ ಬಾಳವ್ವ, ಹೆಂಡತಿ ಶೇಷಮ್ಮ. ಕದರಮಂಡಲಗಿಯಲ್ಲೇ ಇದ್ದ ಅಡವಿ ರಾಮದಾಸರ ಶಿಷ್ಯರಾಗಿದ್ದರು. ಇವರಿಗೆ ಹಿರೇ ಆಚಾರ್ಯ ಎಂಬ ಹೆಸರೂ ಇತ್ತು. ಕಾಲ ಸು. ೧೭೬೦–೧೮೪೫. ಇವರ ೧೧ ಹಾಡುಗಳು ಮಾತ್ರ ದೊರೆತಿವೆ.

ಸಮೀಪದಲ್ಲಿಯೇ ಇದ್ದ ಸವಣೂರಿನ ಶ್ರೀ ಸತ್ಯಬೋಧ ಸ್ವಾಮಿಗಳಿಗೆ ಇವರ ಮೇಲೆ ವಿಶೇಷ ಪ್ರೀತ್ಯಾದರ ಇದ್ದಿತು. ಇವರ ಜೀವನದಲ್ಲಿ ಅಲೌಕಿಕ ಘಟನೆಗಳೂ ನಡೆದಿವೆ.

(ಸಂ. ೨೧-೧)

೩೨. ಕದರುಂಡಲಗೀಶ (ಕಿನ್ನಾಳದ ಶ್ರೀನಿವಾಸದಾಸರು)

ಶ್ರೀನಿವಾಸದಾಸರು ಕಿನ್ನಾಳದವರಾಗಿದ್ದು ಅಲ್ಲಿ ಗೊಂಬೆಯಾಟ ಆಡಿಸುತ್ತಿದ್ದರು. ಒಮ್ಮೆ ಕದರಮಂಡಲಗಿಗೆ ಬಂದು, ಅಲ್ಲೇ ನೆಲೆಸಿದರು. ಇವರ ಕಾಲ ಸು. ೧೮೪೨–೧೮೬೩. 'ಕದರುಂಡಲಗೀಶ' ಎಂಬ ಮುದ್ರಿಕೆಯಿರುವ ೫ ಹಾಡುಗಳು ಮಾತ್ರ ಲಭ್ಯವಾಗಿವೆ.

(ಸಂ. ೨೧-೧)

೩೩. ಕಮಲಾಪತಿವಿಠಲ (ಸಂತೇಬೆನ್ನೂರ ರಾಮಾಚಾರ್ಯರು)

ಸಂತೆಬೆನ್ನೂರು ರಾಮಾಚಾರ್ಯರು ೧೯ನೆಯ ಶತಕದ ಪೂರ್ವಾರ್ಧದಲ್ಲಿ ಜೀವಿಸಿದ್ದರೆಂದು ತಿಳಿದು ಬರುತ್ತದೆ. ತಿರುಮಕೂಡ್ಲು ನರಸೀಪುರದಲ್ಲಿ ವಾಸವಾಗಿದ್ದರು. ಉಡುಪಿಯ ಕೃಷ್ಣಾಪುರ ಮಠದ ಶ್ರೀಗಳಿಂದ ವಿದ್ಯಾಭ್ಯಾಸ ಪಡೆದು ವ್ಯಾಸಕೂಟ–ದಾಸಕೂಟ ಎರಡರಲ್ಲಿಯೂ ಪಂಡಿತರಾಗಿದ್ದರು. ಜಗನ್ನಾಥದಾಸರ ಹರಿಕಥಾಮೃತಸಾರಕ್ಕೆ 'ಭಾವದರ್ಪಣ'ವೆಂಬ ಸುಂದರವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ನಾಲ್ಕು ಕೀರ್ತನೆಗಳು ಮಾತ್ರ ಲಭ್ಯವಿವೆ. 'ಗುರುಕಮಲಾಪತಿವಿಠಲ', 'ರಮಾಪತಿವಿಠಲ', 'ಮಾಧವವಿಠಲ', 'ಇಭವರದವಿಠಲ', ಶ್ರೀರಮಣವಿಠಲ', 'ಶ್ರೀಕರವಿಠಲ' ಮುಂತಾದವರು ಇವರ ಶಿಷ್ಯರು.

(ಸಂ. ೧೩)

೩೪. ಕರಿಗಿರೀಶ (ವರವಣಿ ರಾಮರಾಯರು)

ವರವಣಿ ರಾಮರಾಯರು ಕೋಲಾರ ಜಿಲ್ಲೆಯ ವರವಣಿ ಗ್ರಾಮದವರು. ಜನನ ಕ್ರಿ.ಶ.೧೮೯೯ರಲ್ಲಿ. ನರಸಿಂಹ ಮೂರ್ತಿ ಮತ್ತು ಲಕ್ಷ್ಮಮ್ಮ ಇವರ ತಂದೆ–ತಾಯಿಗಳು. ಇವರ ತಂದೆ ಸಹ ಹರಿದಾಸ ದೀಕ್ಷೆಯನ್ನು ಪಡೆದಿದ್ದರು. ದಾಸ ಪರಂಪರೆಯ ಹಿನ್ನೆಲೆಯಿಂದ ಬಂದವರಾದುದರಿಂದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅಮಲ್ದಾರರಾಗಿದ್ದರೂ 'ಹರಿದಾಸ ಸೇವಾಸಮಿತಿ' ಎಂಬ ಸಂಸ್ಥೆಯನ್ನು ಕಟ್ಟಿ ದಾಸಸಾಹಿತ್ಯ ಸೇವೆಯಲ್ಲಿ ನಿರತರಾದರು. ಹಸ್ತಪ್ರತಿಸಂಗ್ರಹ, ಪ್ರಕಾಶನಗಳಲ್ಲಿ ತೊಡಗಿ ಚಾಮರಾಜಪೇಟೆಯ 'ಮಾಧ್ವ ಮಹಾಮಂಡಲ'ವನ್ನು ಸ್ಥಾಪಿಸಿದರು. ಸ್ನೇಹಿತರೂ, ಗುರುಗಳೂ ಆಗಿದ್ದ ದಾಸರ ಲಕ್ಷ್ಮೀನಾರಾಯಣರಾಯರಿಂದ 'ಕರಿಗಿರೀಶ' ಎಂಬ ಅಂಕಿತವನ್ನು ಪಡೆದು ಕೃತಿ ರಚನೆಗೆ ತೊಡಗಿದರು. ಒಟ್ಟು ೧೧೦ ಕೀರ್ತನೆಗಳು ದೊರೆತಿವೆ. ರಾಮಾಯಣದ ಕಥಾಪ್ರಸಂಗಗಳನ್ನು ಆಧರಿಸಿದ ಹಾಡುಗಳನ್ನು ಹೆಚ್ಚಾಗಿ ಬರೆದಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರಿಗೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಭಾಷಣಗಳನ್ನು ಸಿದ್ಧಪಡಿಸಿಕೊಡುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರಂತೆ. ೧೯೩೪ರಲ್ಲಿ ಹರಿಪಾದವನ್ನು ಸೇರಿದರು.

(ಸಂ. ೨೭)

೩೫. ಕಾಗಿನೆಲೆಯಾದಿಕೇಶವ (ಕನಕದಾಸರು)

ದಾಸಸಾಹಿತ್ಯ ಪ್ರಪಂಚದಲ್ಲಿ ಪ್ರಾತಃಸ್ಮರಣೀಯರು. ಪುರಂದರದಾಸರ ಸಮಕಾಲೀನರಾಗಿ ವ್ಯಾಸರಾಯರ ಶಿಷ್ಯರಾಗಿ ಕನಕದಾಸರು ಸಾಮಾಜಿಕ ನ್ಯಾಯ, ಆತ್ಮೋನ್ನತಿಯ ಮಾರ್ಗಗಳನ್ನು ಏಕಕಾಲದಲ್ಲಿ ಸಾಧಿಸುವುದು ಸಾಧ್ಯವೆಂದು ಪ್ರಪಂಚಕ್ಕೆ ಸಾರಿದವರು. ಸಮಾಜದ ಕೆಳಗಿನ ಸ್ತರದಿಂದ ಬಂದವರಾದರೂ ತಮ್ಮ ಸಾಧನೆಯ ಮೂಲಕ ಆತ್ಮೋನ್ನತಿಯ ದಾರಿಯನ್ನು ಕಂಡುಕೊಂಡು ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದವರು.

ಕನಕದಾಸರ ಜನನ ಕಾಲವನ್ನು ಸುಮಾರು ೧೪೯೫ ಎಂದು ಊಹಿಸುತ್ತಾರೆ. ಬಾಡ ಗ್ರಾಮದ ಬಂಕಾಪುರದ ಬೀರಪ್ಪ ಬಚ್ಚಮ್ಮ ತಂದೆ ತಾಯಿಗಳು. ಬೇಡ ಜನಾಂಗಕ್ಕೆ ಸೇರಿದವರಾದರೂ ಕುರುಬ ವರ್ಗದವರೆಂದು ಪ್ರಚಾರವಿದೆ. ತಿರುಪತಿಯ ತಿಮ್ಮಪ್ಪನ ವರಪ್ರಸಾದದಿಂದ ಹುಟ್ಟಿದ ಮಗನಾದ್ದರಿಂದ ತಿಮ್ಮಪ್ಪನೆಂದೂ, ಸಿಕ್ಕಿದ್ದ ನಿಧಿಯನ್ನು ಹಂಚಿದ್ದರಿಂದ ಕನಕನಾಯಕನೆಂದು ಹೆಸರಾಯಿತಂತೆ. ಬಾಲ್ಯದಲ್ಲಿಯೇ ತರ್ಕ, ವ್ಯಾಕರಣ, ಮೀಮಾಂಸೆಗಳನ್ನು ಬಂಕಾಪುರದ ಶ್ರೀನಿವಾಸಾಚಾರ್ಯರಿಂದ ಕಲಿತರಾದರೂ, ಕೃಷ್ಣದೇವರಾಯನ ಕಾಲದಲ್ಲಿ ಕಾಗಿನೆಲೆ ಪ್ರಾಂತ್ಯಕ್ಕೆ ದಂಡನಾಯಕರಾಗಿ ನೇಮಕವಾಗಿ ಪ್ರಸಿದ್ಧರಾದರು. ಶಿಗ್ಗಾವಿಯ ಕನ್ಯೆಯನ್ನು ವಿವಾಹವಾಗಿದ್ದರು. ಕೃಷ್ಣದೇವರಾಯನ ಅನಂತರ ಅಚ್ಯುತರಾಯನ ಕಾಲದಲ್ಲಿ ವಿನಾಕಾರಣ ಆರೋಪಕ್ಕೆ ಒಳಗಾಗಿ ದಂಡನಾಯಕ ಪದವಿಯನ್ನು ಕಳೆದುಕೊಂಡು, ಆಧ್ಯಾತ್ಮದೆಡೆಗೆ ತಿರುಗಿದರು. ಶ್ರೀ ವ್ಯಾಸರಾಯರ, ವಾದಿರಾಜರ ಸಂಪರ್ಕಕ್ಕೆ ಬಂದು ಆತ್ಮೋನ್ನತಿಯ ದಾರಿಯಲ್ಲಿ ನಡೆದರು. ತಮ್ಮ ಇಷ್ಟದೈವ ಕಾಗಿನೆಲೆಯ ಆದಿಕೇಶವನನ್ನು ಕುರಿತು ಕೃತಿರಚನೆ ಮಾಡುತ್ತಾ ತೀರ್ಥಯಾತ್ರೆಗೆ, ಸಂತಯೋಗಿಗಳ ಸಂಗಕ್ಕೆ ಮನಸ್ಸುಗೊಟ್ಟರು. ತಮ್ಮ ಜಾತಿಯ ಕಾರಣದಿಂದ ಕರ್ಮಠ ಬ್ರಾಹ್ಮಣರ ಮಧ್ಯೆ ಅಪಮಾನ, ಅವಹೇಳನಗಳನ್ನು ಸಹಿಸಬೇಕಾಯಿತಾದರೂ ವ್ಯಾಸರಾಯರ ಹಾಗೂ ವಾದಿರಾಜರ, ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಉತ್ತರ ಭಾರತವನ್ನು ಕೂಡ ಸಂದರ್ಶಿಸಿ ರಾಜಸ್ಥಾನದ ರಾಣಾಪ್ರತಾಪ ಸಿಂಗನ ವಿಶ್ವಾಸವನ್ನು, ಆದರ ಗೌರವಗಳನ್ನು ಗಳಿಸಿದ್ದರು.

ಕರ್ನಾಟಕ ಸಂಗೀತಕ್ಕೆ ಪುರಂದರದಾಸರಂತೆಯೇ ಕನಕದಾಸರು ಅಪೂರ್ವವಾದ ಕೊಡುಗೆ ನೀಡಿದ್ದಾರೆ. ಮುಂಡಿಗೆ ಎಂಬ ಪ್ರಕಾರವನ್ನು ವಿಶೇಷವಾಗಿ ಕನಕದಾಸರೇ ಹೆಚ್ಚಾಗಿ ಪ್ರಚುರಪಡಿಸಿದರು ಎಂದು ಹೇಳಲಾಗುತ್ತದೆ. ಅವರ ಕೀರ್ತನೆಗಳಲ್ಲಿ ಆಧ್ಯಾತ್ಮದೊಂದಿಗೆ ಸಾಮಾಜಿಕ ಚಿಂತನೆ ಬೆರೆತು ಬಂದಿದೆ. ಜಾತಿಮತಗಳ ಕಟ್ಟುಪಾಡುಗಳನ್ನು ತೀವ್ರವಾಗಿ ಖಂಡಿಸಿದವರು ಅವರು. ಪ್ರಗತಿಗಾಮಿ ಧೋರಣೆ, ಸಮಬಾಳಿನ ಸಂದೇಶ, ಡಾಂಭಿಕತನದ ತೀವ್ರವಾದ ಖಂಡನೆ ಅವರ ಕೃತಿಗಳ ಮುಖ್ಯ ಅಂಶ. ಜನಸಾಮಾನ್ಯರ ಭಾಷೆಯಲ್ಲಿ, ಅವರ ನಿತ್ಯಜೀವನದ ಅನುಭವಗಳೊಂದಿಗೆ ಬೆರೆತು ಕೃತಿರಚನೆ ಮಾಡಿದವರು ಕನಕದಾಸರು. "ಕುಲ ಕುಲ-ಎನ್ನುತಿಹುದು ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ". "ಹೊಲೆಯ ಹೊರಗಿಹನೆ ಊರೊಳಗಿಲ್ಲವೆ" ಎಂದು ಸಮಾಜವನ್ನು ಎಂಟೆದೆಯಿಂದ ಪ್ರಶ್ನಿಸುವ ನೈತಿಕ ಸ್ಥೈರ್ಯ, ಆತ್ಮಸಾಕ್ಷಿ, ಸಾಮಾಜಿಕ ಕಳಕಳಿ ಕನಕದಾಸರಿಗಿತ್ತು. ಆದುದರಿಂದಲೇ ಅವರು ಕೇವಲ ಒಬ್ಬ ಹರಿದಾಸರಾಗಿ ಮಾತ್ರವಲ್ಲ ಒಬ್ಬ ಸಮಾಜ ಸುಧಾರಕರಾಗಿ ಪ್ರಾತಃಸ್ಮರಣೀಯರಾಗಿದ್ದಾರೆ.

ಕೀರ್ತನೆಗಳಲ್ಲದೇ ಕನಕದಾಸರು ರಚಿಸಿದ ಬೇರೆ ಕೃತಿಗಳು ಲಭ್ಯವಿವೆ. 'ಹರಿಭಕ್ತಿಸಾರ' ಆಧ್ಯಾತ್ಮ ಸಾಧನೆಯ ಕೃತಿ. ನಳಚರಿತ್ರೆ ಒಂದು ಸುಂದರ ಕಥಾನಕ. ನೃಸಿಂಹಸ್ತವನವು ಸ್ತೋತ್ರರೂಪಿ ಕೃತಿ, 'ಮೋಹನತರಂಗಿಣಿ' ಒಂದು ಸುಂದರ ಮಹಾಕಾವ್ಯ. ರಾಮಧಾನ್ಯಚರಿತ್ರೆಯು, ಅವರ ಸುಂದರವಾದ ಕಾಲ್ಪನಿಕ ಕೃತಿ. ಸುಳಾದಿ, ಉಗಾಭೋಗ, ಕೀರ್ತನೆ, ಮುಂಡಿಗೆ ಹೀಗೆ ಎಲ್ಲ ಪ್ರಕಾರಗಳಲ್ಲಿ ಕೃತಿ ರಚನೆಯನ್ನು ವಿಪುಲವಾಗಿ ಮಾಡಿದ್ದಾರೆ. (ಕನಕದಾಸರ ಎಲ್ಲ ಕೀರ್ತನೆಗಳ ಶಬ್ದವೊಂದೊಂದನ್ನು ಎತ್ತಿಕೊಂಡು ಅವು ಯಾವ ಸಾಲುಗಳಲ್ಲಿ ಪ್ರಯೋಗವಾಗಿವೆ ಎಂಬುದರ ಶಬ್ದ-ಪ್ರಯೋಗಗಳ ಅಕಾರಾದಿ ಕೋಶವನ್ನು ಈಚೆಗೆ ಶ್ರೀ ಹಾವನೂರರು ಮತ್ತು ಕೃಷ್ಣ ಅವರು ರಚಿಸಿ ಪ್ರಕಟಿಸಿದ್ದಾರೆ. ದಾಸ ಓವರ ಅಭ್ಯಾಸಕ್ಕೆ ಸಹಾಯಕ.)

ಕನಕದಾಸರು ೯೮ ವರ್ಷಗಳ ಕಾಲ ಬದುಕಿದ್ದರು ಎಂಬ ಐತಿಹ್ಯವಿದೆ. ಸುಮಾರು ಕ್ರಿ.ಶ.೧೫೯೩-೯೪ರಲ್ಲಿ ಅವರು ಇಹಲೋಕ ವ್ಯಾಪಾರವನ್ನು ಮುಗಿಸಿರಬಹುದು.

(ಸಂ. ೫)

೩೬. ಕಾರ್ಪರ ನರಹರಿ (ಕೊಪ್ಪರ ಗಿರಿಯಾಚಾರ್ಯರು)

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕೊಪ್ಪರವೆಂಬ ಗ್ರಾಮ ಪುರಾಣಪ್ರಸಿದ್ಧವಾದುದು. ಲಕ್ಷ್ಮೀನರಸಿಂಹನ ಸ್ಥಳ. ಇದು ಈ ದಾಸರ ಹುಟ್ಟೂರು. ಕ್ರಿ.ಶ.೧೮೯೬ರಲ್ಲಿ ಜನನ. ಲಕ್ಷ್ಮೀನರಸಿಂಹದೇವರ ಅರ್ಚಕ ಭೀಮಸೇನಾಚಾರ್ಯರು ಮತ್ತು ನರಸಮ್ಮ ದಂಪತಿಗಳ ಪುತ್ರರು. ಶ್ರೀ ಯಳಮೇಲ ವಿಠಲಾಚಾರ್ಯರು ಗುರುಗಳು. ಸುಭದ್ರಮ್ಮನವರು ಪತ್ನಿ. ಆರಾಧ್ಯದೈವವಾದ ಶ್ರೀ ನರಸಿಂಹನ ಹೆಸರಿನಲ್ಲಿ 'ಕಾರ್ಪರ ನರಹರಿ' ಎಂಬ ಅಂಕಿತ ಧರಿಸಿ ಕೃತಿರಚನೆಗೆ ತೊಡಗಿದರು. ಸುಮಾರು ೨೧೦ ಕೀರ್ತನೆಗಳು ದೊರೆತಿವೆ. ದೇವಾನುದೇವತೆಗಳ ಸ್ತುತಿ ಪದ್ಯಗಳಲ್ಲದೇ ಯತಿವರೇಣ್ಯರನ್ನು ಮತ್ತು ದಾಸಶ್ರೇಷ್ಠರನ್ನು ಕುರಿತ ಸ್ತುತಿಪದ್ಯಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಸಂಪ್ರದಾಯದ ಹಾಡುಗಳು, ಲಾಲಿ ಪದಗಳು ಮಾತ್ರವಲ್ಲ, ಜಾನಪದ ಸಾಹಿತ್ಯದ ಪ್ರಭಾವದಿಂದ ಬಯಲಾಟ ಕೃತಿಗಳನ್ನೂ ರಚಿಸುತ್ತಿದ್ದರಂತೆ. ಅನೇಕ ಶಿಷ್ಯರಿಗೆ ಅಂಕಿತವನ್ನಿತ್ತು ದಾಸಪರಂಪರೆಯನ್ನು ಬೆಳೆಸಿದರು. ಸರ್ವಶ್ರೀ ರಂಗನಾಥದಾಸರು, ವೆಂಕಟೇಶದಾಸರು, ಲಕುಮೀಶದಾಸರು ಇವರ ಶಿಷ್ಯರು. ೧೯೭೯ರಲ್ಲಿ ದೈವಾಧೀನರಾದರು.

(ಸಂ. ೨೯-೨)

೩೭. ಕೃಷ್ಣವಿಠಲ (ಎಚ್. ಭೀಮರಾವ್)

ಕೃಷ್ಣವಿಠಲಾಂಕಿತರ ಜನ್ಮಸ್ಥಳ ಹಾಸನ ಜಿಲ್ಲೆಯ ಹೊಳೆನರಸೀಪುರ. ವೃತ್ತಿಯಿಂದ ಖ್ಯಾತನಾಮರಾದ ವಕೀಲರಾಗಿದ್ದರೂ ಆಧ್ಯಾತ್ಮದತ್ತ ಮನಸ್ಸು ತಿರುಗಿ ಮಂತ್ರಾಲಯದಲ್ಲಿಯೂ, ಮಳಖೇಡದಲ್ಲಿಯೂ ಸ್ವಲ್ಪ ಕಾಲ ನೆಲಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾದರು. ಮುಂದೆ ಚಿತ್ರದುರ್ಗದ ಉರಗಾದ್ರಿವಾಸವಿಠಲರಿಂದ ಅಂಕಿತಪ್ರದಾನವಾಗಿ ಹರಿದಾಸದೀಕ್ಷೆ ಪಡೆದರು. 'ಶ್ರೀಹರಿ ಗುರುಸೇವಾ ಮಂಡಲಿ' ಎಂಬ ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿ ತನ್ಮೂಲಕ ದಾಸಧರ್ಮ ಪ್ರಸಾರಕ್ಕೆ ತೊಡಗಿದರು. ಇವರ ೧೧೯ ಕೀರ್ತನೆಗಳು ಲಭ್ಯವಿವೆ. ದೇವಾನುದೇವತೆಗಳಲ್ಲದೆ ಅನೇಕ ಯತಿವರ್ಯರನ್ನು ಕುರಿತ ಸ್ತುತಿಪದ್ಯಗಳು, ಜೊತೆಗೆ 'ಶ್ರೀನಿವಾಸಕಲ್ಯಾಣ' ಮತ್ತು 'ಗಜೇಂದ್ರಮೋಕ್ಷ'ವೆಂಬ ದೀರ್ಘ ಕೃತಿಗಳು ಸುಂದರವಾಗಿವೆ. ಇದಲ್ಲದೇ ಷಟ್ಪದಿಯ ರೂಪದಲ್ಲಿ 'ಶ್ರೀಕೃಷ್ಣಚರಿತಾಮೃತ'ವೆಂಬ ಕೃತಿಯನ್ನು ರಚಿಸಿದ್ದಾರಾದರೂ ಅದಿನ್ನೂ ಪ್ರಕಟವಾಗಿಲ್ಲ. ೧೯೬೩ರಲ್ಲಿ ಇವರು ಪರಮಾತ್ಮನ ಪದತಲವನ್ನು ಸೇರಿದರು.

(ಸಂ. ೧೫)

೩೮. ಕೇಶವವಿಠಲ (ಗದ್ವಾಲದ ಸುಬ್ಬಣ್ಣ)

ಇವರ ಜನನ ಕ್ರಿ.ಶ.೧೭೭೫ರಲ್ಲಿ. ಗೋಪಾಲದಾಸರ ಶಿಷ್ಯ ಪರಂಪರೆಗೆ ಸೇರಿದವರು. ಅಭಿನವಜನಾರ್ದನವಿಠಲರು ಇವರಿಗೆ ಅಂಕಿತವನ್ನಿತ್ತ ಗುರುಗಳು. ಇವರ ನಾಲ್ಕು ಹಾಡುಗಳು ಮಾತ್ರ ದೊರೆತಿವೆ. ಕಮಲೇಶವಿಠಲರು ಇವರ ಶಿಷ್ಯರು.

(ಸಂ. ೧೩)

೩೯. ಗದುಗಿನ ವೀರನಾರಾಯಣ (ಹುಯಿಲಗೋಳ ನಾರಾಯಣರಾಯರು)

'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎನ್ನುತ್ತಿದ್ದಂತೆ ಹುಯಿಲಗೋಳ ನಾರಾಯಣರಾಯರು ಎಂಬ ಹೆಸರು ಮಿಂಚಿನಂತೆ ಹೊಳೆಯುತ್ತದೆ. ನಾಡಭಕ್ತಿ ದೈವಭಕ್ತಿ ಎರಡೂ ಏಕೀಕರಣಗೊಂಡ ಕಾರ್ಯ ಅವರದು. ಅವರ ಹುಟ್ಟೂರು ಗದಗ. ಜನನ ಕ್ರಿ.ಶ.೧೮೭೪ರಲ್ಲಿ. ವಕೀಲ ವೃತ್ತಿಯವರಾಗಿ ಸದ್ದಿಲ್ಲದೆ ಕೀರ್ತನೆಗಳನ್ನೂ ರಚಿಸಿಕೊಂಡು ಬಂದವರು. ಕೀರ್ತನೆಗಳಲ್ಲಿ ಭಕ್ತಿಭಾವದ ಜೊತೆಗೆ ಭಾಷಾಶುದ್ಧತೆ ಒಡೆದು ತೋರುತ್ತದೆ. ಪ್ರಾಸಾದಿಕವೆನಿಸುವ ಕಲ್ಪಕತೆಯಲ್ಲಿ ಬಂಧುರವಾದ ಕೀರ್ತನೆಗಳನ್ನು ರಚಿಸಿದವರು. ಹಿರಿಯ ಸಾಹಿತಿ ಎಂದು ಹಲವಾರು ಪ್ರಶಸ್ತಿ ಸನ್ಮಾನಗಳನ್ನು ಪಡೆದವರು. ೮೬ ವರ್ಷಗಳ ತುಂಬು ಜೀವನ ಸಾಗಿಸಿ ೧೯೭೧ರಲ್ಲಿ ಅಸ್ತಂಗತರಾದರು. ೨೦ನೆಯ ಶತಮಾನದ ಸ್ಮರಣೀಯ ಹರಿದಾಸರು. ಇವರ ೮೫ ಹಾಡುಗಳು ಉಪಲಬ್ಧವಾಗಿದೆ.

(ಸಂ. ೨೧-೨)

೪೦. ಗುರು ಇಂದಿರೇಶ (ಹರಪನಹಳ್ಳಿ ಕೃಷ್ಣಾಚಾರ್ಯ)

ಹರಪನಹಳ್ಳಿಯ ರಾಮಾಚಾರ್ಯರ ಮಗ ಕೃಷ್ಣಾಚಾರ್ಯ. ಇವರು ತಂದೆಯಿಂದ ಉಪದೇಶ ಹೊಂದಿ 'ಗುರು ಇಂದಿರೇಶ' ಮುದ್ರಿಕೆಯಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಇವರ ಮೂರೇ ಹಾಡುಗಳು ದೊರಕಿವೆ. ಕಾಲ ಕ್ರಿ.ಶ.೧೮೩೨ರಿಂದ ೧೮೮೪.

(ಸಂ. ೨೧-೨)

೪೧. ಗುರುಗೋವಿಂದವಿಠಲ (ಎಂ. ಗೋವಿಂದರಾವ್)

ಗುರುಗೋವಿಂದವಿಠಲರು 'ಕೋಡುಬಳೆ' ಎಂಬ ಮನೆತನದವರು. ಜನನ ಕ್ರಿ.ಶ.೧೮೮೪ರಲ್ಲಿ. ತಂದೆ ರಘುನಾಥರಾಯರು. ತಾಯಿ ಲಕ್ಷ್ಮೀಬಾಯಿ. ಚಿಕ್ಕಮಗಳೂರಿನಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ಅನಾಥರಾದರು. ಬಡತನದ ನಡುವೆ ಪರರ ಆಶ್ರಯದಲ್ಲಿ ಬದುಕುತ್ತಾ ವಿದ್ಯಾಭ್ಯಾಸ ಪೂರೈಸಿ ಸಬ್‌ಓವರ್ಸಿಯರ್ ಆದರು. ತುಳಸಮ್ಮ ಇವರ ಪತ್ನಿ. ಕ್ರಮೇಣ ನಾಲ್ವರು ಮಕ್ಕಳಾದರು. ಮಂತ್ರಾಲಯದ ಗುರುವರ್ಯರಲ್ಲಿ ಅಪಾರ ಭಕ್ತಿಯನ್ನಿಟ್ಟು ಪತಿ-ಪತ್ನಿಯರು ಆಧ್ಯಾತ್ಮ ಚಿಂತನೆ, ಸನ್ನಡತೆಯ ಜೀವನವನ್ನು ರೂಢಿಸಿಕೊಂಡಿದ್ದರು. ೧೯೪೦ರಲ್ಲಿ ಪರಮಪ್ರಿಯಸುಬ್ಬರಾಯ ದಾಸರಿಂದ, ಅವರ ಶಿಷ್ಯ ಸಂಕುಲದಲ್ಲಿ ಕೊನೆಯವರಾಗಿ ಅಂಕಿತವನ್ನು ಪಡೆದರು. ಗುರುಗಳಿಂದ ತಾಳ, ತಂಬೂರಿಗಳನ್ನು ಸ್ವೀಕರಿಸಿ ತೀರ್ಥಕ್ಷೇತ್ರಗಳ ಯಾತ್ರೆ ಮಾಡುತ್ತಾ ಭಗವನ್ನಾಮ ಸಂಕೀರ್ತನೆಯಲ್ಲಿ ನಿರತರಾಗಿದ್ದರು. ಅನೇಕ ಬಾರಿ ತಿರುಪತಿಯ ಯಾತ್ರೆ ಮಾಡಿ ಗೋವಿಂದದಾಸರು ಮುಂದೆ ದಾಸಸಾಹಿತ್ಯದ ಪುನರುದ್ಧಾರ ಕಾರ್ಯವು ತಿರುಪತಿ ದೇವಸ್ಥಾನದಿಂದ ನಡೆಯಲು ಕಾರಣಕರ್ತರಾದರು. ತಾವು ಸಂದರ್ಶಿಸಿದ ಸ್ಥಳಗಳ ಬಗ್ಗೆ ಸ್ಥಳಪುರಾಣ ಅಲ್ಲದೆ ಸಣ್ಣ ಸಣ್ಣ ವಿವರಗಳನ್ನು ಕೂಡ ಪ್ರಕಟಿಸಿರುವುದು ಸ್ವಾರಸ್ಯಕರವಾಗಿದೆ. ಮೈಸೂರಿನ ಕೃಷ್ಣಮೂರ್ತಿಪುರದಲ್ಲಿನ ತಮ್ಮ ಮನೆಯನ್ನೇ ಮಂದಿರವನ್ನಾಗಿ ಪರಿವರ್ತಿಸಿ ಪಾಂಡುರಂಗವಿಠಲ, ಮುಖ್ಯಪ್ರಾಣ ದೇವರನ್ನು ಪ್ರತಿಷ್ಠಾಪಿಸಿದರು. 'ಗುರುಕೃಪಾ ಗ್ರಂಥಮಾಲೆ' ಎಂಬ ಹೆಸರಿನಲ್ಲಿ ಗ್ರಂಥಗಳನ್ನು ಪ್ರಕಟಿಸಿ ಹರಿದಾಸ ಸಾಹಿತ್ಯದ ಪ್ರಚಾರಕರಾದರು. ದಾಸವರೇಣ್ಯರ ಚರಿತೆಗಳನ್ನು ಬರೆದು ಮುದ್ರಿಸಿದರು. 'ಹರಿಭಕ್ತ ವಿಜಯಮಾಲೆ' ಎಂಬ ಹೆಸರಿನ ಸಂಪುಟಗಳಲ್ಲಿ ವಿವಿಧ ಕೃತಿಗಳು ಪ್ರಕಟಗೊಂಡಿವೆ.

ಇದಲ್ಲದೆ ಉಪನಿಷತ್ತುಗಳನ್ನು ಭಾಮಿನಿಷಟ್ಪದಿಯಲ್ಲಿ ರಚಿಸಿದ್ದಾರೆ. ಶ್ರೀ ವಾದಿರಾಜರ ಋಜುತ್ವ ಪ್ರಕಾಶಿಕಾ, ಸ್ವಪ್ನವೃಂದಾವನಾಖ್ಯಾನ, ವಿಷ್ಣುತೀರ್ಥರ 'ಷೋಡಶಚತುರ್ದಶಿ', ಸುಂದರಕಾಂಡ ರಾಮಾಯಣ, ಶ್ರೀಮನ್ಮಧ್ವ ಸಹಸ್ರನಾಮಾವಳಿ, ಸತ್ಸಂಪ್ರದಾಯ ಭಜನಾಪದ್ಧತಿ, ಇತ್ಯಾದಿ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅನೇಕರಿಗೆ ಹರಿದಾಸ ದೀಕ್ಷೆಯನ್ನಿತ್ತಿದಾರೆ. ಇವರ ಶಿಷ್ಯರಲ್ಲಿ ಪ್ರಮುಖರು ಮುದ್ದುವೆಂಕಟವಿಠಲ ಹಾಗೂ ಖಗವರಧ್ವಜದಾಸರು, ಉದಯಾದ್ರೀಶ ವಿಠಲದಾಸರು, ವೈಕುಂಠವಿಠಲದಾಸರು ಇತ್ಯಾದಿ. ಇವರ ಒಟ್ಟು ೩೩೩ ಕೀರ್ತನೆಗಳು ಲಭ್ಯವಿವೆ. ದೇವಾನು ದೇವತೆಗಳ ಸ್ತುತಿಪದ್ಯಗಳಲ್ಲದೇ, ಷಣ್ಮಹಿಷಿಯರು, ಹಾಗೂ ತಮ್ಮ ಮಾತಾಪಿತೃಗಳನ್ನು ಕುರಿತು ಸಹ ಕೀರ್ತನೆಗಳನ್ನು ರಚಿಸಿದ್ದಾರೆ. ವಿವಿಧ ನದಿಗಳು, ಅಲ್ಲದೆ ಗಜೇಂದ್ರಮೋಕ್ಷ, ಪರೀಕ್ಷಿದ್ರಾಜನ ಕತೆ, ಕುಚೇಲೋಪಾಖ್ಯಾನ, ಬಿಳಿಗಿರಿರಂಗನ ಮಹಾತ್ಮೆ, ವೆಂಕಟೇಶಕಲ್ಯಾಣ ಇತ್ಯಾದಿ ಹಲವು ದೀರ್ಘ ಕೃತಿಗಳನ್ನು ಸಹ ರಚಿಸಿದ್ದಾರೆ. ಪಂಚಕೋಶದ ವಿವರ, ಯಜ್ಞವನ್ನು ಮಾಡಬೇಕೆಂಬ ಕೃತಿ, ತಮ್ಮ ವಿಷಯದ ದೃಷ್ಟಿಯಿಂದ ಗಮನಾರ್ಹವಾಗಿವೆ. ತಾವು ಮಾಡಿದ ಯಾತ್ರೆಯ ವಿವರಗಳನ್ನು ಹೇಳುವ 'ತೀರ್ಥಕ್ಷೇತ್ರ ಮಾಲಾ', 'ನವತಿರುಪತಿ', 'ಆಳ್ವಾರುಗಳ ವಂದನೆ' ಇತ್ಯಾದಿ ಕೃತಿಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ೧೯೮೩ರಲ್ಲಿ ತಮ್ಮ ೮೯ನೇ ವಯಸ್ಸಿನಲ್ಲಿ (೧೯೮೩) ದಾಸರು ಇಹಲೋಕ ವ್ಯಾಪಾರವನ್ನು ಮುಗಿಸಿದರು.

(ಸಂ. ೩೧-೧)

೪೨. ಗುರು ಜಗನ್ನಾಥವಿಠಲ (ಕೋಸಗಿ ಸ್ವಾಮಿರಾಯಾಚಾರ್ಯರು)

ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಕೋಸಗಿ ಇವರ ಜನ್ಮಸ್ಥಳ. ವೆಂಕಟಗಿರಿಯಾಚಾರ್ಯ ಮತ್ತು ಸೀತಮ್ಮ ತಂದೆತಾಯಿಗಳು. ಕ್ರಿ.ಶ.೧೮೩೩ರಲ್ಲಿ ಜನನ. ಬಾಲ್ಯ-ಯೌವನಗಳಲ್ಲಿ ತುಂಟ, ವ್ಯಸನಿಯಾಗಿದ್ದವರು, ತಮ್ಮ ೨೫ನೇ ವಯಸ್ಸಿನಲ್ಲಿ ಒಮ್ಮೆಲೇ ಅಧ್ಯಾತ್ಮದತ್ತ ತಿರುಗಿ ಸಂಸ್ಕೃತ-ಸಾಹಿತ್ಯಗಳನ್ನು ಅಭ್ಯಸಿಸಿ ಶ್ರೀ ರಾಘವೇಂದ್ರಸ್ವಾಮಿಗಳನ್ನು ಆರಾಧಿಸತೊಡಗಿದರು. ಗುರುಗೋಪಾಲವಿಠಲರಿಂದ ಅಂಕಿತ ಪಡೆದು ೧೭೪ ಹಾಡುಗಳನ್ನೂ ೬ ದೀರ್ಘ ಕೃತಿಗಳನ್ನೂ ರಚಿಸಿದ್ದಾರೆ. ದಾಸದೀಕ್ಷೆ ಪಡೆಯುವುದಕ್ಕೆ ಮೊದಲು ಅನೇಕ ಸಂಸ್ಕೃತ ಕೃತಿಗಳನ್ನೂ ರಚಿಸಿದ್ದಾರೆ. ಶ್ರೀ ರಾಘವೇಂದ್ರ ಯತಿವರ್ಯರನ್ನು ಕುರಿತ ೬೭ ಹಾಡುಗಳಿವೆ. ದೇವಾನುದೇವತೆಗಳು, ಗುರು-ಹಿರಿಯರನ್ನು ಕುರಿತ ಕೃತಿಗಳೊಂದಿಗೆ ಮುಸ್ಲಿಂ ಸಂಪ್ರದಾಯದ ರೀತಿನೀತಿಗಳನ್ನು ವಿವರಿಸಿ ಪೀರನಾಗಬೇಕೆಂದು ಅಪೇಕ್ಷಿಸುವ ವಿಶೇಷವಾದ ಒಂದು ಹಾಡನ್ನು ಬರೆದು, ಧರ್ಮ ಯಾವುದಾದರೂ ಭಕ್ತಿ ಮುಖ್ಯ ಎಂದಿದ್ದಾರೆ. ಎಂಟು ಜನ ಶಿಷ್ಯರಿಗೆ ದಾಸದೀಕ್ಷೆಯನ್ನಿತ್ತರು. ೧೯೧೮ರಲ್ಲಿ ಇಹಲೋಕವನ್ನು ತ್ಯಜಿಸಿದರು.

(ಸಂ. ೨೬)

೪೩. ಗುರುತಂದೆವರದಗೋಪಾಲವಿಠಲ (ಕಳಸದ ಶ್ರೀನಿವಾಸರಾಯರು)

ಮೂಲತಃ ಕಳಸದ ದಾಸ ಪರಂಪರೆಯವರು. ಅವರ ಮಗ ಗೋಪಾಲರಾಯರು ಇನ್ನೂ ಕಳಸದ ಪಾಟೀಲರಾಗಿ ಇದ್ದಾರೆ. ಅವರಿಂದ ತಿಳಿದು ಬಂದ ಸಂಗತಿಯೆಂದರೆ, ಶ್ರೀನಿವಾಸರಾಯರು ಕಂಪನಿ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರು. ಶಾಸ್ತ್ರೀಯ ಸಂಗೀತಗಾರರೂ ಅಹುದು. ತಮ್ಮ ಕೀರ್ತನೆಗಳಲ್ಲಿ ಶ್ರೀ ವಾದಿರಾಜ ಗುರುಗಳನ್ನು ವಿಶೇಷವಾಗಿ ಸ್ತುತಿಸಿದ್ದಾರೆ.

(ಸಂ. ೨೧-೨)

೪೪. ಗುರುಪ್ರಾಣೇಶವಿಠಲ (ಲಿಂಗಸುಗೂರು ವೆಂಕಟರಾವ್):-

ಇವರು ಪ್ರಾಣೇಶದಾಸರ ಪುತ್ರರು. ಲಿಂಗಸೂಗೂರಿನವರು. ಪ್ರಾಣೇಶವಿಠಲರ ಕಾಲ ಕ್ರಿ.ಶ.೧೭೩೬-೧೮೨೨. ತಮ್ಮ ತಂದೆಯಿಂದಲೇ ಅಂಕಿತ ಪಡೆದು ದಾಸರಾದರು. ಜಗನ್ನಾಥದಾಸರನ್ನು ಗುರುಗಳೆಂದು ನಂಬಿ ೧೨ ವರ್ಷಗಳ ಕಾಲ ಅವರ ಸೇವೆ ಮಾಡಿದರು. ಜಗನ್ನಾಥದಾಸರು ಕೊಟ್ಟ ತಂಬೂರಿ ಈಗಲೂ ಇವರ ವಂಶಸ್ಥರ ಬಳಿ ಇದೆಯಂತೆ. ಇವರ ೧೮ ಹಾಡುಗಳು ಮಾತ್ರ ಲಭ್ಯವಿವೆ. ಪ್ರಾಣೇಶವಿಠಲರು ಬೇಡವೆಂದು ಅಪ್ಪಣೆ ಕೊಟ್ಟ ಕಾರಣದಿಂದ ಹೆಚ್ಚಾಗಿ ಕೃತಿರಚನೆ ಮಾಡಲಿಲ್ಲವಂತೆ. ದೇವಾನುದೇವತೆಗಳು, ರಾಘವೇಂದ್ರಯತಿಗಳು, ಪ್ರಾಣೇಶದಾಸರು ಇವರುಗಳ ಮೇಲೆ ವಿಶೇಷವಾದ ಕೃತಿಗಳನ್ನು ರಚಿಸಿದ್ದಾರೆ. ಇಚ್ಛಾಮರಣಿಗಳಾಗಿ ತಮ್ಮ ಮರಣದ ದಿನವನ್ನು ಮೊದಲೇ ತಿಳಿಸಿದ್ದರಂತೆ. (೧೮೬೦)

(ಸಂ. ೧೭)

೪೫. ಗುರುರಾಮವಿಠಲ (ಬಾಗೇಪಲ್ಲಿ ಸುಬ್ರಹ್ಮಣ್ಯದಾಸರು)

ಇವರ ತಂದೆಯವರು ಮಧ್ವರಾಯರು; ತಾಯಿಯವರು ನರಸಮ್ಮ. ಕೋಲಾರ ಜಿಲ್ಲೆಯ ಅರವತ್ತೊಕ್ಕಲು ಕುಲದವರು. ಅನಾಥರಾಗಿದ್ದ ಇವರಿಗೆ ಸೋದರಮಾವನಾದ ವೆಂಕಟರಾಯರೇ ಉಪನಯನ ಮಾಡಿದರು. ನಂತರ ಗುರುರಾಮವಿಠಲರು ದೇಶಸಂಚಾರ ಮಾಡುತ್ತಾ, ತಮ್ಮ ೨೫ನೇ ವಯಸ್ಸಿನಲ್ಲಿಯೇ ವಿಜಯರಾಮದಾಸರಿಂದ ದಾಸದೀಕ್ಷೆಯನ್ನು ತೆಗೆದುಕೊಂಡರು. 'ಗುರುರಾಮವಿಠಲ' ಎಂಬ ಅಂಕಿತವನ್ನು ಚಿತ್ರದುರ್ಗದ ಮಾಧವರಾಯರಿಂದ ಪಡೆದು ಹರಿದಾಸರಾದರು. ಇವರ ಕಾಲ ಸುಮಾರು ಕ್ರಿ.ಶ.೧೮೫೦-೧೯೧೫.

ಸುಬ್ರಹ್ಮಣ್ಯದಾಸರು ಕುರುಡರಾಗಿದ್ದರು. ಆದರೂ ಅವರಿಗೆ ಬಹುಭಾಷೆಗಳು ಬರುತ್ತಿತ್ತು. ಮಧ್ವಾಚಾರ್ಯರ ಕೃತಿಗಳು, ಹರಿದಾಸರ ಕೀರ್ತನೆಗಳು, ಭಾರತ, ಭಾಗವತ, ರಾಮಾಯಣ ಇವುಗಳನ್ನು ಕಂಠಪಾಠ ಮಾಡಿಕೊಂಡಿದ್ದರು.

ಆಶುಕವಿಗಳಾಗಿದ್ದ ಇವರು ಕೇಳಿದ ವಿಷಯಗಳ ಮೇಲೆಲ್ಲ ಪದ್ಯ ಬರೆಯುತ್ತಿದ್ದರು. ಮದುವೆ, ಮುಂಜಿ, ಉತ್ಸವ, ಜಾತ್ರೆ ಇವುಗಳನ್ನು ಕುರಿತು ಹಾಡು ಕಟ್ಟುತ್ತಿದ್ದರು. ಓದು ಬರಹ ಬಲ್ಲವರಿಂದ ಹೇಳಿ, ಅವನ್ನು ಬರೆಸುತ್ತಿದ್ದರು.

ಗುರುರಾಮವಿಠಲರ ಸುಮಾರು ೩೫೦ ಕೀರ್ತನೆಗಳು ಉಪಲಬ್ಧವಾಗಿವೆ. ಪಂಚಕಥಾ ಅವರ ಕೃತಿಗಳಲ್ಲಿ ಒಂದು. ಇದರಲ್ಲಿ ಪ್ರಹ್ಲಾದ ಚರಿತ್ರೆ, ಮಾಧವ ಚರಿತ್ರೆ, ಅನಸೂಯಾ ಚರಿತ್ರೆ, ದ್ಯೂತಪರ್ವ ಮತ್ತು ದೂರ್ವಾಸ ಚರಿತ್ರೆ ಈ ಐದು ಕಥೆಗಳನ್ನು ಕಥಾ ಕೀರ್ತನದ ರೀತಿಯಲ್ಲಿ ರಚಿಸಿದ್ದಾರೆ. ಈ ಕೃತಿಯಲ್ಲಿ ಶ್ಲೋಕಗಳು, ವಚನ, ಆರ್ಯೆ, ಸೀಸಪದ್ಯ ಇತ್ಯಾದಿ ವಿವಿಧ ಛಂದೋರೂಪಗಳನ್ನು ಬಳಸಿದ್ದಾರೆ. ಕೆಲವು ಕೀರ್ತನೆಗಳನ್ನು ಸಂಭಾಷಣಾ ರೂಪದಲ್ಲಿ ಅಳವಡಿಸಿದ್ದಾರೆ.

ಸೇತೂರಾಯನ ಕಥೆ, ತತ್ವಸಾರ ಅಲ್ಲದೆ ಮನ್ಮಥ ಚರಿತ್ರೆ, ಪುರಂಜನೋಪಾಖ್ಯಾನ ಲಾವಣಿ, ಅಧ್ಯಾತ್ಮ ರಾಮಾಯಣ, ಸಂಕ್ಷೇಪ ಭಾಗವತ, ಸಂಕ್ಷೇಪ ಭಾರತ, ಸಂಕ್ಷೇಪ ರಾಮಾಯಣ, ಭಾಗವತ ದಶಮ ಸ್ಕಂದದ ಕಥೆ, ವಿಷ್ಣುಶತಕ ಇವು ದೀರ್ಘಕೃತಿಗಳಾಗಿವೆ.

ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳ ನಡುವೆ ಯಾವುದೇ ಜಗಳ ನಡೆಯಬಾರದೆಂದು ಅವರ ಖಂಡಿತವಾದ ಅಭಿಪ್ರಾಯವಾಗಿತ್ತು. ಗುರುರಾಮವಿಠಲರು ಸಮಸ್ತ ಜನ ಸಮುದಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಲೋಕನೀತಿಯನ್ನು ನಿರೂಪಿಸಿರುವ ದಾಸವರೇಣ್ಯರು.

೪೬. ಗುರುವಿಜಯವಿಠಲ (ಮೊದಲಕಲ್ಲು ಶೇಷದಾಸರು)

ಕ್ರಿ.ಶ.೧೮೦೨ರಲ್ಲಿ ಜನನ. ಗದ್ವಾಲದ ಬಳಿ ದರೂರು ಎಂಬಲ್ಲಿ ಗ್ರಾಮದ ಕುಲಕರ್ಣಿಯಾಗಿ ವೃತ್ತಿನಿರತರಾಗಿದ್ದರು. ಒಮ್ಮೆ ಗದ್ವಾಲ ಸಂಸ್ಥಾನದ ಸೋಮಭೂಪಾಲನಿಂದ ಕಾರಣಾಂತರದಿಂದ ಅವಮಾನಿತರಾಗಿ ವೈರಾಗ್ಯದತ್ತ ಮನಸ್ಸು ತಿರುಗಿತು. ಲೌಕಿಕದಿಂದ ದೂರವಾಗಿ ವಿಜಯದಾಸರನ್ನೇ ಗುರುಗಳೆಂದು ಸ್ವೀಕರಿಸಿ 'ಶ್ರೀ ಗುರುವಿಜಯವಿಠಲ' ಎಂಬ ಸ್ವಪ್ನಾಂಕಿತವನ್ನು ಪಡೆದು ಕೃತಿರಚನೆಗೆ ತೊಡಗಿದರು. ತಮ್ಮ ಜನ್ಮಸ್ಥಳವಾದ ದರೂರಿನಲ್ಲಿ ಶ್ರೀಪಾರ್ಥಸಾರಥಿ ದೇವಸ್ಥಾನವನ್ನು ಕಟ್ಟಿಸಿದರು. ಒಟ್ಟು ೫೧ ಹಾಡುಗಳು ದೊರೆತಿವೆ. ತಮ್ಮ ಮಕ್ಕಳಾದ ಭೀಮದಾಸ ಮತ್ತು ಗೋವಿಂದದಾಸರಿಗೆ ಅಂಕಿತೋಪದೇಶವನ್ನು ಮಾಡಿದ್ದರು. ಸುಳಾದಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿದ್ದಾರೆ. ಶ್ರೀ ವಿಜಯದಾಸರ 'ಚಕ್ರಾಬ್ಜಮಂಡಲ'ಕ್ಕೆ ನಕ್ಷೆಯನ್ನು ರಚಿಸಿದ್ದಾರೆ. ಇವರ ಸುಳಾದಿಗಳು ಪ್ರಮೇಯ ಶಾಸ್ತ್ರಾರ್ಥಭರಿತವಾಗಿವೆ. ೧೮೮೫ರಲ್ಲಿ ದೈವಾಧೀನರಾದರು.

(ಸಂ. ೧೩)

೪೭. ಗೋಪತಿವಿಠಲ (ಸುರಪುರದ ಸುಬ್ಬಣ್ಣಾಚಾರ್ಯರು)

ಇವರ ನಿಜನಾಮ ಸುಬ್ಬಣ್ಣಾಚಾರ್ಯ ಎಂದು. ಮೂಲತಃ ಸುರಪುರದವರು. ೧೯ನೇ ಶತಮಾನದವರು. ತುಂಗಭದ್ರಾ ಕುಮುದ್ವತಿ ನದಿಗಳ ಸಂಗಮ ಸ್ಥಳದಲ್ಲಿದ್ದ ಹೊಳೆಆನವೇರಿ ಎಂಬಲ್ಲಿ ಇರುವ ಸಂಗಮೇಶ್ವರನ ಗುಡಿಯಲ್ಲಿ ತಪಸ್ಸಿಗೆ ನಿಂತರು. ನಂತರ ಮುದೇನೂರಿನಲ್ಲಿ ಪ್ರಾಣದೇವರ ಪ್ರತಿಷ್ಠಾಪನೆ ಮಾಡಿದರು. ಮುಂದೆ ಮುದೇನೂರು ಆಚಾರ್ಯರೆಂದೇ ಪ್ರಸಿದ್ಧರಾದರು. ಇವರ ಕೆಲವೇ ಹಾಡುಗಳು ದೊರೆತಿವೆ.

(ಸಂ. ೨೧-೨)

೪೮. ಗೋಪಾಲವಿಠಲ (ಭಾಗಣ್ಣ):-

ದ್ವಿತೀಯ ಘಟ್ಟದ ದಾಸರ ಪರಂಪರೆಯಲ್ಲಿ ಗೋಪಾಲದಾಸರು ಪ್ರಮುಖರು. ಇವರ ನಿಜನಾಮ ಭಾಗಣ್ಣ ಎಂದು. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಸರುಕಲ್ಲಿನಲ್ಲಿ ಕ್ರಿ.ಶ.೧೭೨೧ರಲ್ಲಿ ಜನ್ಮ. ತಂದೆ ಮುರಾರಿ; ತಾಯಿ ವೆಂಕಮ್ಮ. ಬಾಲ್ಯದಲ್ಲಿ ಬಡತನದ ನಡುವೆ ವಿದ್ಯಾಭ್ಯಾಸ, ಜ್ಯೋತಿಷ್ಯ ಇವುಗಳ ಅಧ್ಯಯನ ನಡೆದಿತ್ತು. ಇವರ ಪಾಂಡಿತ್ಯವನ್ನು ಮೆಚ್ಚಿ ಮುಂದೆ ಗದ್ವಾಲದ ರಾಜ ರಾಮಭೂಪಾಲ ಹಾಗೂ ಆದವಾನಿಯ ದಿವಾನ ತಿಮ್ಮಣ್ಣರಿಂದ ಕೃತಿರಚನೆಗೆ ಪ್ರೋತ್ಸಾಹ.

ವಿಜಯದಾಸರಿಂದ 'ಗೋಪಾಲವಿಠಲ' ಎಂಬ ಅಂಕಿತ ೧೭೪೬ರಲ್ಲಿ ದೊರೆತು ಕೀರ್ತನೆಗಳನ್ನು ರಚಿಸುತ್ತಾ ಪ್ರಖ್ಯಾತರಾದರು. ಗೋಪಾಲದಾಸರು ತಮ್ಮ ತಮ್ಮಂದಿರಾದ ದಾಸಪ್ಪ, ಸೀನಪ್ಪ ಹಾಗೂ ರಂಗಪ್ಪ ಇವರಿಗೆ ಅನುಕ್ರಮವಾಗಿ 'ಗುರುಗೋಪಾಲ', 'ವರದಗೋಪಾಲ', 'ತಂದೆಗೋಪಾಲ' ಎಂಬ ಅಂಕಿತಗಳನ್ನಿತ್ತರು. ಜಗನ್ನಾಥದಾಸರ ಪೂರ್ವಾಶ್ರಮದಲ್ಲಿ ಅವರಿಗೆ ಒದಗಿದ್ದ ಅನಾರೋಗ್ಯವನ್ನು ಗೋಪಾಲದಾಸರು ನಿವಾರಿಸಿದರೆಂದು ಪ್ರತೀತಿ ಇದೆ. ವ್ಯಾಸತತ್ತ್ವಜ್ಞರಿಗೆ 'ವಾಸುದೇವವಿಠಲ' ಎಂಬ ಅಂಕಿತವನ್ನಿತ್ತವರೂ ಗೋಪಾಲದಾಸರೇ. (ಇವರೇ ಮುಂದೆ ಐಜಿ ಸ್ವಾಮಿಗಳೆಂದು ಪ್ರಸಿದ್ಧರಾದರು).

ಗೋಪಾಲದಾಸರ ೧೮೩ ಕೀರ್ತನೆಗಳು ಉಪಲಬ್ಧವಾಗಿವೆ. ಅವುಗಳಲ್ಲಿ ಸುಳಾದಿಗಳು, ಉಗಾಭೋಗಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕೀರ್ತನೆಗಳಲ್ಲಿ ದಾಸರ ಅಂತರಂಗ ನಿವೇದನೆ, ಭಕ್ತಿಯ ರೀತಿ, ದಾಸ್ಯಭಾವನೆ ವ್ಯಕ್ತವಾಗುತ್ತದೆ. ವ್ಯಾಸರಾಯರು, ಪುರಂದರದಾಸರೇ ಮೊದಲಾದ ಹಿರಿಯರನ್ನು ಸ್ಮರಿಸುವಂತೆಯೇ ತಮ್ಮ ಶಿಷ್ಯರಾದ ವ್ಯಾಸತತ್ತ್ವಜ್ಞರನ್ನೂ ಗೌರವದಿಂದ ನೆನೆದಿದ್ದಾರೆ.

ಮಾಧ್ವಮತ ಸಿದ್ಧಾಂತವನ್ನು ತಮ್ಮ ಕೃತಿಗಳಲ್ಲಿ ವಿಶೇಷವಾಗಿ ಅಭಿವ್ಯಕ್ತಿಸಿದ್ದಾರೆ. ಗಹನವಾದ ವಿಚಾರಗಳನ್ನು ಸಹ ಸರಳವಾದ ರೂಪಕ, ಉಪಮೆಗಳ ಮೂಲಕ ಹೇಳಿದ್ದಾರೆ. ಗೋಪಾಲದಾಸರು ಕ್ರಿ.ಶ.೧೭೬೩ರಲ್ಲಿ ಉತ್ತನೂರಿನಲ್ಲಿ ದೇಹತ್ಯಾಗ ಮಾಡಿದರು.

(ಸಂ. ೧೨)

೪೯. ಜಗನ್ನಾಥವಿಠಲ (ಮಾನ್ವಿ ಶ್ರೀನಿವಾಸಾಚಾರ್ಯರು)

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬ್ಯಾಗವಟ್ಟಿ ಎಂಬ ಗ್ರಾಮದಲ್ಲಿದ್ದ ನರಸಿಂಹಾಚಾರ್ಯರು ಇವರ ತಂದೆ. ಲಕ್ಷ್ಮೀಬಾಯಿ ತಾಯಿಯವರು. ಕ್ರಿ.ಶ.೨೭-೭-೧೭೨೮ರಂದು ಇವರ ಜನನ. ಪ್ರತಿಭಾವಂತ ಬಾಲಕರಾಗಿದ್ದ ಶ್ರೀನಿವಾಸರು ಮಂತ್ರಾಲಯ ಮಠದ ಪೀಠಸ್ಥರಾಗಿದ್ದ ವರದೇಂದ್ರತೀರ್ಥರಲ್ಲಿ ವಿದ್ಯಾಭ್ಯಾಸ ಮಾಡಿದರು. ಆಗಲೇ ಸಂಸ್ಕೃತದಲ್ಲಿ 'ವರದೇಂದ್ರ ಪಂಚರತ್ನಮಾಲಿಕಾ' ಎಂದು ಐದು ಶ್ಲೋಕಗಳನ್ನು ಬರೆದು, ಅರ್ಪಿಸಿದರು. ಶಾಸ್ತ್ರಾರ್ಥಗಳು, ವೇದೋಪನಿಷತ್ತುಗಳು, ತರ್ಕ, ಮೀಮಾಂಸಾದಿ ಶಾಸ್ತ್ರಗಳಲ್ಲಿ ಪಂಡಿತರಾಗಿ, ಪ್ರತಿವಾದಿ ಭಯಂಕರರೆನಿಸಿ ಖ್ಯಾತರಾದರು.

ನಂತರ ಅವರು ಮಾನ್ವಿಯಲ್ಲಿ ನೆಲಸಿ ಶಿಷ್ಯವೃಂದಕ್ಕೆ ವಿದ್ಯಾದಾನ ಮಾಡುತ್ತಿದ್ದರು. ಒಮ್ಮೆ ವಿಜಯದಾಸರು ಅಲ್ಲಿಗೆ ಬಂದಾಗ, ಅವರ ಭೋಜನದ ಆಹ್ವಾನವನ್ನು ತಿರಸ್ಕರಿಸಿ, ಉದರ ವೇದನೆಗೊಳಗಾದರು. ಇದನ್ನು ಪರಿಹರಿಸಿಕೊಳ್ಳಲು ವಿಜಯದಾಸರಿಗೇ ಶರಣಾಗಬೇಕಾಯಿತು. ವಿಜಯದಾಸರ ಸಲಹೆಯಂತೆ ಆಚಾರ್ಯರು ಗೋಪಾಲದಾಸರನ್ನು ಭೇಟಿಯಾಗಲು ಉತ್ತನೂರಿಗೆ ಬಂದರು. ಗೋಪಾಲದಾಸರ ಅನುಗ್ರಹದಿಂದ ಉದರ ಶೂಲೆಯು ನಿವಾರಣೆಯಾಗಿ ಆಯುರ್ದಾನವನ್ನು ಪಡೆದರು. ಅವರ ಸಲಹೆಯಂತೆ ಪಂಢರಪುರಕ್ಕೆ ಹೋಗಿ, ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡುತ್ತಲೇ 'ಜಗನ್ನಾಥವಿಠಲ' ಎಂಬ ಅಂಕಿತವನ್ನು ಪಡೆದರಂತೆ. ಕ್ರಮೇಣ ಆಚಾರ್ಯರು ಜಗನ್ನಾಥದಾಸರೆಂದೇ ಪ್ರಸಿದ್ಧರಾದರು. ಇವರು ರಂಗೋಲಿಯನ್ನು ಬಿಡಿಸುವುದರಲ್ಲಿ ಅತಿ ನಿಪುಣರಾಗಿದ್ದು, ರಂಗೋಲಿದಾಸರು ಎಂದೂ, ರಂಗವೊಲಿದ ದಾಸರು ಎಂದೂ ಕರೆಯಿಸಿಕೊಂಡರು.

ಜಗನ್ನಾಥದಾಸರು 'ಹರಿಕಥಾಮೃತಸಾರ'ವೆಂಬ ಕಾವ್ಯವನ್ನೂ, ಕೀರ್ತನೆಗಳು, ಅನೇಕ ಸುಳಾದಿಗಳು ಹಾಗೂ ತತ್ತ್ವಸುವ್ವಾಲಿಗಳನ್ನೂ ರಚಿಸಿದ್ದಾರೆ. ಇವು ಸುಮಾರು ೨೧೨ರಷ್ಟಿವೆ. ಶ್ರೀ ಹರಿಕಥಾಮೃತಸಾರದಲ್ಲಿ ೯೮೮ ಷಟ್ಪದಿಗಳಿದ್ದು ೩೨ ಸಂಧಿಗಳಿವೆ. ದ್ವೈತ ಸಿದ್ಧಾಂತವನ್ನು ಲೌಕಿಕ ಪಾರಮಾರ್ಥಿಕ ದೃಷ್ಟಾಂತಗಳಿಂದ ಬಹು ಗಂಭೀರವಾಗಿಯೂ ರಸವತ್ತಾಗಿಯೂ ಇದರಲ್ಲಿ ನಿರೂಪಿಸಲಾಗಿದೆ. ಉನ್ನತ ಮಟ್ಟದ ಕನ್ನಡ ಕಾವ್ಯವೆಂದೂ ಹೆಸರು ಗಳಿಸಿದೆ.

ಜಗನ್ನಾಥದಾಸರ ಕೀರ್ತನೆಗಳು ಜನಪ್ರಿಯವಾಗಿವೆ. ಅಂತೆಯೇ ಕಾವ್ಯಶಕ್ತಿಯಲ್ಲಿಯೂ ಮೇಲ್ಮಟ್ಟದ್ದವಾಗಿವೆ. ತಿಳಿಗನ್ನಡದಲ್ಲಿ ರಚಿತವಾಗಿರುವಂತೆಯೇ ಸಂಸ್ಕೃತದ ಪ್ರಯೋಗವೂ ಮನೋಹರವಾಗಿದೆ. ತಮ್ಮ ತಂದೆಯವರಾದ ನರಸಿಂಹದಾಸರ ಮೇಲೆ ರಚಿತವಾಗಿರುವ ಕೀರ್ತನೆಯಲ್ಲಿ ಇವರ ವಂಶವಿವರವು ಬಂದಿದೆ. ಒಂದು ವಿಶೇಷವೆಂದರೆ ವೈಕುಂಠದ ಬಾಗಿಲನ್ನು ಕಾಯುವ ಜಯವಿಜಯರ ಮೇಲೂ ಕೀರ್ತನೆಯೊಂದು ರಚಿತವಾಗಿದ್ದು, ಇಂತಹ ರಚನೆ ಅಪರೂಪದವು.

ಜಗನ್ನಾಥದಾಸರು ವ್ಯಾಸತತ್ವಜ್ಞರು, ಪುರಂದರದಾಸರು, ವಿಜಯದಾಸರು, ಗೋಪಾಲದಾಸರು, ಅದರಂತೆ ರಾಘವೇಂದ್ರ ಸ್ವಾಮಿಗಳನ್ನು ಕುರಿತು ಭಕ್ತಿಪೂರ್ವಕವಾಗಿ ಸ್ತುತಿ ಮಾಡಿದ್ದಾರೆ. ಭಗವಂತನ ಅವತಾರಗಳು, ವಿವಿಧ ರೂಪಗಳ ವರ್ಣನೆಗಳಿಂದ ಕೂಡಿದ ಸ್ತೋತ್ರ ರೂಪದ ಕೀರ್ತನೆಗಳನ್ನು ರಚಿಸಿದ್ದಾರೆ. ತತ್ತ್ವಸುವ್ವಾಲಿಗಳು ಜಗನ್ನಾಥದಾಸರ ವೈಶಿಷ್ಟ್ಯ.

ಇಷ್ಟೇ ಅಲ್ಲದೆ ವೈಕುಂಠವರ್ಣನೆ, ಸಂಗ್ರಹ ರಾಮಾಯಣ ಮತ್ತು ಶ್ರೀಪಾದರಾಜರ ಮಧ್ವನಾಮಕ್ಕೆ ಫಲಸ್ತುತಿ ಇವನ್ನೂ ರಚಿಸಿದ್ದಾರೆ.

ಜಗನ್ನಾಥದಾಸರು ಹರಿದಾಸ ಪರಂಪರೆಯನ್ನು ಮುಂದುವರಿಸಲು ೧೨ ಜನರಿಗೆ ಅಂಕಿತೋಪದೇಶವನ್ನು ಮಾಡಿದ್ದಾರೆ. ಪ್ರಾಣೇಶವಿಠಲ, ಶ್ರೀದವಿಠಲ, ಶ್ರೀಶವಿಠಲ, ವೆಂಕಟವಿಠಲ, ಪ್ರಸನ್ನವಿಠಲ, ಗೋಪತಿವಿಠಲ, ಜ್ಞಾನಮಯವಿಠಲ, ಆನಂದಮಯವಿಠಲ, ಸಿರಿವತ್ಸಾಂಕಿತ, ಯೋಗೇಂದ್ರವಿಠಲ, ಬಾದರಾಯಣವಿಠಲ, ತಂದೆಜಗನ್ನಾಥವಿಠಲ ಇವರೇ ಆ ಹರಿದಾಸರು. ಜಗನ್ನಾಥದಾಸರು ಕ್ರಿ.ಶ.೧೮೦೯ರಲ್ಲಿ ಹರಿಪದವನ್ನು ಸೇರಿದರು.

(ಸಂ. ೧೪)

೫೦. ಜಯೇಶವಿಠಲರು (ಕಟ್ಟೆಮನೆ ವೆಂಕಟರಾವ್)

ಇವರು ಮೀರ್ ಅಮೀರ್ ಹುದ್ದೆಯ ಮನೆತನದವರು. ಕ್ರಿ.ಶ.೧೮೬೫ರಲ್ಲಿ ಜನನ. ರಾಮರಾಯರು ಮತ್ತು ರಾಧಾಬಾಯಿ ತಂದೆತಾಯಿಗಳು. ಜನ್ಮಸ್ಥಳ ಬೆಂಗಳೂರು. ಪಾಶ್ಚಾತ್ಯ ವಿದ್ಯಾಭ್ಯಾಸ (ಬಿ.ಎ. ಪದವಿ). ಅಧಿಕಾರ, ಐಶ್ವರ್ಯಗಳ

ನಡುವಿದ್ದರೂ ಆಧ್ಯಾತ್ಮದತ್ತ ಮನಸ್ಸು ತಿರುಗಿ ತಮ್ಮ ೨೩ನೇ ವಯಸ್ಸಿನಲ್ಲಿಯೇ ವಿಜಯರಾಮಚಂದ್ರವಿಠಲರಿಂದ ಅಂಕಿತ ಪಡೆದರು. ಅಮಲ್ದಾರರಾಗಿ, ಅಸಿಸ್ಟೆಂಟ್ ಕಮೀಶನರ್ ಆಗಿ, ನಿವೃತ್ತಿಯ ನಂತರ ಮೈಸೂರಿನ 'ಕಟ್ಟೆಮನೆ' ಎಂಬ ಸ್ಥಳವನ್ನು ತಮ್ಮ ಆಧ್ಯಾತ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡು ಅನೇಕರಿಗೆ ಅಂಕಿತಪ್ರದಾನ ಮಾಡಿದರು. ಇವರ ಪತ್ನಿ ಕಮಲಾಬಾಯಿ ಸಹ ಇವರಿಂದ 'ಗುರು ಜಯೇಶವಿಠಲ' ಎಂಬ ಅಂಕಿತ ಪಡೆದರು. ಸುಮಾರು ೭೮ ಕೀರ್ತನೆಗಳು ದೊರೆತಿವೆ. ತತ್ತ್ವಚಿಂತನೆಯೇ ಇವರ ಕೃತಿಗಳ ಪ್ರಮುಖ ವಸ್ತು. ದ್ವೈತ ಸಿದ್ಧಾಂತದ ತತ್ತ್ವಸಾರವನ್ನು ವಿಶೇಷವಾಗಿ ವಿಜಯದಾಸರು, ಜಗನ್ನಾಥದಾಸರ ಕೃತಿಗಳಲ್ಲಿ ಕಂಡುಬರುವ ತಾತ್ತ್ವಿಕ ಅಂಶಗಳನ್ನು ಕೀರ್ತನೆಯ ರೂಪದಲ್ಲಿ ಬಿಗಿಯಾದ ಬಂಧದಲ್ಲಿ ರಚಿಸಿದ್ದಾರೆ. ಮೈಸೂರಿನ ಸುಪ್ರಸಿದ್ಧ ವೇದಾಂತಿ ಡಾ. ಹಿರಿಯಣ್ಣ ಅವರು ಜಯೇಶವಿಠಲರ ಕುರಿತು ವಿಶೇಷ ಗೌರವವನ್ನು ಹೊಂದಿದ್ದರು. ೧೯೨೩ರಲ್ಲಿ ದೈವಾಧೀನರಾದರು.

(ಸಂ. ೨೭)

೫೧. ತಂದೆಮುದ್ದುಮೋಹನವಿಠಲ (ಪರಮಪ್ರಿಯ ಸುಬ್ಬರಾಯರು)

೧೯ನೇ ಶತಮಾನದ ಉತ್ತರಾರ್ಧದಲ್ಲಿ ಕ್ಷೀಣಿಸುತ್ತಿದ್ದ ದಾಸಪರಂಪರೆಗೆ ಪುನರುಜ್ಜೀವನ ನೀಡಿದವರಲ್ಲಿ ಪರಮಪ್ರಿಯ ಸುಬ್ಬರಾಯರು ಪ್ರಮುಖರು. ದೇವರಾಯನದುರ್ಗದ ಸಮೀಪ ನರಸೀಪುರವೆಂಬ ಗ್ರಾಮದಲ್ಲಿ ಕ್ರಿ.ಶ.೧೮೬೫ರಲ್ಲಿ ಜನಿಸಿದರು. ಶೇಷಪ್ಪ ಮತ್ತು ಲಕ್ಷ್ಮೀದೇವಮ್ಮ ತಂದೆತಾಯಿಗಳು. ಘಾಟಿ ಸುಬ್ರಹ್ಮಣ್ಯನ ಸೇವೆಯಿಂದ ಜನಿಸಿದವರಾದ್ದರಿಂದ ಸುಬ್ಬರಾಯನೆಂದು ಹೆಸರಿಡಲಾಯಿತು. ಚಿಕ್ಕವಯಸ್ಸಿನಲ್ಲಿಯೇ ಮನಸ್ಸು ಆಧ್ಯಾತ್ಮದ ಕಡೆಗೆ ತಿರುಗಿ ಅನ್ನಾಹಾರಗಳನ್ನು ಬಿಟ್ಟು ಗುಡ್ಡಗಾಡುಗಳಲ್ಲಿ ತಿರುಗುತ್ತಾ ಭಗವಂತನ ಸ್ಮರಣೆಯಲ್ಲಿ ಕಾಲ ಕಳೆಯುತ್ತಾ ಕ್ರಮೇಣ ದೊಡ್ಡಬಳ್ಳಾಪುರದ ಮುದ್ದುಮೋಹನವಿಠಲರಿಂದ ಅಂಕಿತ ಪಡೆದು ಹರಿದಾಸರಾದರು. ದೇವರಾಯನದುರ್ಗದಲ್ಲಿ ಕ್ರಿ.ಶ.೧೯೦೦ರಲ್ಲಿ 'ದ್ವೈತಮತ ಸಿದ್ಧಾಂತೋನ್ನಾಹಿನಿ ಸಭಾ' ಎಂಬ ಸಂಸ್ಥೆಯನ್ನು ದಾಸಧರ್ಮದ ಪ್ರಚಾರಕ್ಕಾಗಿ ಸ್ಥಾಪಿಸಿದರು. ಕರ್ನಾಟಕದಾದ್ಯಂತ ಧರ್ಮಪ್ರಚಾರಕ್ಕಾಗಿ ಸಂಚಾರವನ್ನು ಕೈಗೊಳ್ಳುತ್ತಾ ಒಟ್ಟು ೧೧೬೫ ಶಿಷ್ಯರಿಗೆ ಅಂಕಿತವನ್ನಿತ್ತರು. ಇವರ ಶಿಷ್ಯರಲ್ಲಿ ಪ್ರಮುಖರು 'ಪ್ರಾಣನಾಥವಿಠಲರು' 'ಸರ್ವೇಶವಿಠಲರು', 'ಉರಗಾದ್ರಿವಾಸವಿಠಲರು', 'ಮಾರುತೀಶವಿಠಲರು' ಮುಂತಾದವರು.

ಉಡುಪಿಯ ಪುತ್ತಿಗೆ ಮಠದ ಶ್ರೀಗಳಾದ ಶ್ರೀ ಸುಧೀಂದ್ರತೀರ್ಥರು ಇವರ ದಾಸಧರ್ಮ ಸೇವೆಯನ್ನು ಗಮನಿಸಿ 'ಪರಮಪ್ರಿಯ' ಎಂಬ ಬಿರುದನ್ನಿತ್ತರು. ಉತ್ತರಾದಿಮಠದ ಶ್ರೀ ಸತ್ಯಧ್ಯಾನತೀರ್ಥರು ಇವರನ್ನು ದಾಸಸಾಹಿತ್ಯ ಪರೀಕ್ಷಾ ಮಂಡಲಿಯ ಧರ್ಮದರ್ಶಿಗಳನ್ನಾಗಿ ನೇಮಿಸಿದ್ದರು. ೧೯೨೭ರಲ್ಲಿ ಪರಮಾರ್ಥ 'ಚಂದ್ರೋದಯ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ನಡೆಸುತ್ತಿದ್ದರು. ೧೯೪೦ರಲ್ಲಿ ದೈವಾಧೀನರಾದರು. ಕೆಲವೇ ಅವರ ಕೃತಿಗಳು ಲಭ್ಯವಿವೆಯಾದರೂ ಕೆಲವು ಶಿಷ್ಯರುಗಳನ್ನು ಕೀರ್ತನೆ ರಚನೆಯಲ್ಲಿ ತೊಡಗಿಸಿದ್ದುದು ವಿಶೇಷದ ಸಂಗತಿ.

(ಸಂ. ೧೫)

೫೨. ತಂದೆವರದಗೋಪಾಲವಿಠಲ

ಇವರ ಹೆಸರು ಕಳಸದ ಪ್ರಹ್ಲಾದಗೌಡ. ಇವರು ಬಾಲ್ಯದಲ್ಲಿ ಸೋದರಮಾವನಾದ ಕೃಷ್ಣಾಚಾರ್ಯರಲ್ಲಿ ಸಂಸ್ಕೃತಾಭ್ಯಾಸ ಮಾಡಿ ಶಾಸ್ತ್ರಪಂಡಿತರಾಗಿದ್ದರು. ಇವರಿಗೆ 'ತಂದೆ ವರದಗೋಪಾಲವಿಠಲ' ಎಂದು ಸ್ವಪ್ನಾಂಕಿತವನ್ನು ಇತ್ತವರು ಗೋಪಾಲದಾಸರು. ಇವರ ಸುಮಾರು ೮೮ ಕೀರ್ತನೆಗಳು ಲಭ್ಯವಾಗಿವೆ. ವಿಷಯ ವೈವಿಧ್ಯತೆಯಿಂದ ಕೂಡಿದ ಇವರ ಹಾಡುಗಳು ಚೆಲುವಾಗಿವೆ. ಇವರು ೨೦ನೇ ಶತಮಾನದ ಆರಂಭದಲ್ಲಿ ಇದ್ದವರು. 'ಪಂಚಭೇದ' ಎಂಬ ಮಧ್ವತತ್ತ್ವವನ್ನು ಗದ್ಯದಲ್ಲಿ ವಿವರಿಸಿದ್ದಾರೆ.

ಕಟ್ಟೆಮನೆ ನರಸಿಂಗರಾಯರು ಇವರ ಶಿಷ್ಯರು. ಅವರಿಗೆ 'ಗುರುತಂದೆವರದಗೋಪಾಲವಿಠಲ' ಎಂಬ ಅಂಕಿತಪ್ರದಾನ ಮಾಡಿದ್ದರು.

(ಸಂ. ೨೧-೨)

೫೩. ತಂದೆವರದವಿಠಲ (ಕಳಸದ ಶ್ರೀನಿವಾಸರಾಯರು)

ಇವರ ಹೆಸರು ನರಸಿಂಗರಾಯರು. ಇವರಿಗೆ ಪ್ರಹ್ಲಾದಗೌಡರು ದೀಕ್ಷೆಯಿತ್ತು 'ತಂದೆ ವರದವಿಠಲ' ಎಂಬ ಅಂಕಿತಪ್ರದಾನ ಮಾಡಿದ್ದರು. ಇವರ ಸುಮಾರು ೨೦ ಕೀರ್ತನೆಗಳು ದೊರೆತಿವೆ. ಕಾಲ ೧೯೧೨-೧೯೪೪.

ಗುರುಕಥಾಮೃತಸಾರ ಎಂಬ ಸುದೀರ್ಘ ಸುಳಾದಿ ಇವರಿಂದ ರಚಿತವಾಗಿದ್ದು, ಅದರಲ್ಲಿ ಶ್ರೀನಿವಾಸಾಚಾರ್ಯ ಎಂಬ ತಮ್ಮ ಗುರುಗಳನ್ನು ವರ್ಣಿಸಿದ್ದಾರೆ.

(ಸಂ. ೨೧-೨)

೫೪. ತುಪಾಕಿ ವೆಂಕಟರಮಣ (ತುಪಾಕಿ ವೆಂಕಟರಮಣಾಚಾರ್ಯರು)

ಇವರು ಮೂಲತಃ ಮೈಸೂರಿನವರಾದರೂ ನೆಲಸಿದ್ದು ಮಂಗಳೂರಿನಲ್ಲಿ. ಸುಮಾರು ೧೮೧೦ರಿಂದ ೧೮೯೦ ವರೆಗೆ ಜೀವಿಸಿದ್ದರೆಂದು ಊಹಿಸಬಹುದು. ಒಟ್ಟು ೩೮೯ ಹಾಡುಗಳು ದೊರೆತಿವೆ. ತಿರುಪತಿಯ ವೆಂಕಟೇಶನ ವಿವಿಧ ನಾಮಧೇಯಗಳನ್ನು ಅಂಕಿತದ ರೂಪದಲ್ಲಿ ಬಳಸಿದ್ದಾರೆ. ಸಾಂಪ್ರದಾಯಿಕವಾದ ಹರಿ ಕೀರ್ತನೆಗಳಲ್ಲದೆ ದಿನನಿತ್ಯದ ಕಷ್ಟಕೋಟಲೆಗಳು, ವರ್ಧಂತಿಗಳು, ಜೀವನದ ವಿಶೇಷ ಸಂದರ್ಭಗಳು, ಕ್ಷೇತ್ರ ದರ್ಶನ ಹೀಗೆ ಅನೇಕ ಸಂದರ್ಭಗಳಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಲೌಕಿಕವಾಗಿ ಕೋರ್ಟಿನಲ್ಲಿ ಕೆಲಸ ಮಾಡುತ್ತಿದ್ದರಾದರೂ ತಾಯಿಯ ಪ್ರಭಾವದಿಂದ ಕೀರ್ತನೆಗಳನ್ನು ರಚಿಸತೊಡಗಿ, ಹರಿದಾಸರಾದರು. ಜಗನ್ನಾಥದಾಸರು ಹಾಗೂ ಅವರ 'ಹರಿಕಥಾಮೃತಸಾರ' ಕೃತಿಯನ್ನು ಗುರುಭಕ್ತಿ ಭಾವದಿಂದ ಆತ್ಮಗತವಾಗಿ ಮಾಡಿಕೊಂಡಿದ್ದರು.

(ಸಂ. ೨೩)

೫೫. ನರಸಿಂಹವಿಠಲ

ಇವರ ಹೆಸರು ಕುಂಚೂರು ಹನುಮಂತಾಚಾರ್ಯ ಎಂದು. ಹಾವೇರಿಯಲ್ಲಿಯೋ ಅಥವಾ ಬೇರೆ ಎಲ್ಲಿಯೋ ಶಿಕ್ಷಣ ಖಾತೆಯಲ್ಲಿ ಇದ್ದರೆಂಬುದನ್ನು ಬಿಟ್ಟರೆ ಅವರ ಬೇರಾವ ವೈಯಕ್ತಿಕ ಮಾಹಿತಿಯೂ ಇಲ್ಲ. ಅವರ 'ನರಸಿಂಹವಿಠಲ' ಅಂಕಿತದಲ್ಲಿರುವ ೧೨೪ ಹಾಡುಗಳು ದೊರೆತಿವೆ. ಹಾಡುಗಳು ವೈವಿಧ್ಯದಿಂದ ಕೂಡಿವೆ.

(ಸಂ. ೨೧-೧)

೫೬. ನಿಡಂಬೂರು ರಾಮದಾಸರು

ನಿಡಂಬೂರು ರಾಮದಾಸ ಬಲ್ಲಾಳರು ಸುಪ್ರಸಿದ್ಧ ಸಾಹಿತಿಗಳಾದ ವ್ಯಾಸರಾಯ ಬಲ್ಲಾಳರ ತಂದೆ. ಉಡುಪಿಯ ಅಂಬಲಪಾಡಿ ಬೀಡಿನಲ್ಲಿ ೧೮೯೮ರಲ್ಲಿ ರಾಮದಾಸ ಬಲ್ಲಾಳರ ಜನನವಾಯಿತು.

ರಾಮದಾಸ ಬಲ್ಲಾಳರು ಸಂಸ್ಕೃತದ 'ಶಿರೋಮಣಿ' ಪದವಿ ಹಾಗೂ ಮದ್ರಾಸಿನ 'ಕನ್ನಡ ವಿದ್ವಾನ್' ಪರೀಕ್ಷೆಯಲ್ಲಿ ತೇರ್ಗಡೆಯಾದರು. ನಂತರದ ದಿನಗಳಲ್ಲಿ ಉಡುಪಿಯ ಮಾಡರ್ನ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದರು.

ರಾಮದಾಸ ಬಲ್ಲಾಳರು ಅನೇಕ ಸಂಸ್ಕೃತ ಕೃತಿಗಳನ್ನು ಹಾಗೂ ಕೆಲವು ನಾಟಕಗಳನ್ನು ರಚಿಸಿದ್ದಾರೆ. 'ಕಾಲ್ಯಾಷ್ಟಕ' ಹಾಗೂ 'ಮುಖ್ಯಪ್ರಾಣಸ್ತುತಿ'ಯು ಸಂಸ್ಕೃತದಲ್ಲಿದ್ದರೆ 'ಶ್ರೀಕೃಷ್ಣಸ್ತುತಿ' ಕೃತಿಯು ಕನ್ನಡದಲ್ಲಿದೆ. 'ಪುರಂದರದಾಸರು', 'ಪನ್ನಾದಾಯಿ' ಹಾಗೂ 'ತೊಳೆದ ಮುತ್ತು' ಎಂಬ ನಾಟಕಗಳನ್ನು ಬರೆದು, ರಂಗಪ್ರಯೋಗವನ್ನು ಮಾಡಿದ್ದಾರೆ. ಅಲ್ಲದೆ 'ಪುರಾಣ ಕಥೆಗಳು' ಎಂಬ ಗದ್ಯಕೃತಿಯನ್ನು ರಚಿಸಿದ್ದಾರೆ.

'ಶ್ರೀಕೃಷ್ಣಸ್ತುತಿ' ಒಂದು ದೀರ್ಘಕೃತಿ. ಇದರಲ್ಲಿ ೧೮೧ ಪದ್ಯಗಳಿವೆ. ಸಾಂಗತ್ಯ ಪದ್ಯಗಳಿವು. ದ್ವಿತೀಯಾಕ್ಷರ ಪ್ರಾಸವು ಅಷ್ಟಾಗಿ ಕಾಣುವುದಿಲ್ಲ. ಆದರೆ ಕಾವ್ಯವಾಚನಕ್ಕೆ ಅನುಕೂಲವಾಗಿದೆ.

ಈ ಕೃತಿಯಲ್ಲಿ ಪ್ರಧಾನವಾಗಿರುವುದು ಕೃಷ್ಣಸ್ತುತಿಯಾದರೂ ಇದರಲ್ಲಿ ಪ್ರಪಂಚದ ಸೃಷ್ಟಿ, ಕೃಷ್ಣನ ನಾನಾ ರೂಪಗಳು, ಅನೇಕ ಶಾಸ್ತ್ರಗಳು, ನವವಿಧ ಭಕ್ತಿ, ಗಾಯತ್ರಿ ಮಂತ್ರದ ಮಹಾತ್ಮೆ, ಪುರಾಣ ಪ್ರಸಂಗಗಳು, ತುಳುನಾಡಿನ ಮತ್ತು ಪರಶುರಾಮ ಕ್ಷೇತ್ರದ ವೈಶಿಷ್ಟ್ಯ, ಪರಿಸರ ದೇವತೆಗಳು ಮೊದಲಾದುವು ಚಿತ್ರಿತವಾಗಿವೆ. ದಾಸರು ಪ್ರಪಂಚದ ಎಲ್ಲ ಮತಗಳೂ ಒಂದೇ ಮೂಲದಿಂದ ಪ್ರವೃತ್ತವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ದಾಸರ ವಂಶಕ್ಕೆ ವಾದಿರಾಜ ಸ್ವಾಮಿಗಳಿಂದ ಮೂರವತಾರ ಮಾರುತೀ ಮತ್ತು ಭೂವರಾಹ ದೇವರ ವಿಗ್ರಹಗಳು ಕೊಡಲ್ಪಟ್ಟ ಉಲ್ಲೇಖವಿದೆ.

ನಿಡಂಬೂರು ರಾಮದಾಸರು ತಮ್ಮ ೯೦ನೇ ವಯಸ್ಸಿನಲ್ಲಿ, ೧೯೮೮ರಲ್ಲಿ ವೈಕುಂಠವಾಸಿಗಳಾದರು.

(ಸಂ. ೧೬)

೫೭. ಪುರಂದರವಿಠಲ

ಇವರ ನಿಜನಾಮ ಶೀನಪ್ಪನಾಯಕ, ತಾಯಿಯ ಹೆಸರು ಲಕ್ಷ್ಮೀದೇವಿ. ಪುರಂದರದಾಸರು ಕ್ರಿ.ಶ.೧೪೮೦ರಲ್ಲಿ ಜನಿಸಿದರು. ಇಂದು ಮಹಾರಾಷ್ಟ್ರದಲ್ಲಿರುವ ಪುರಂದರಗಡವು ಇವರ ಸ್ಥಳವಾಗಿರಬೇಕು. ಇವರು ಚಿನ್ನದ ವ್ಯಾಪಾರ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ.

ಶೀನಪ್ಪನಾಯಕರು ಜಿಪುಣರಾಗಿದ್ದರು. ಇವರ ಪತ್ನಿ ಸರಸ್ವತಿಬಾಯಿ ಭಕ್ತಿಸಂಪನ್ನರಾಗಿದ್ದರು. ಒಂದು ಸಂದರ್ಭದಲ್ಲಿ ಪತಿಯಾದ ಶೀನಪ್ಪನಾಯಕರ ಮೇಲೆ ಅವರ ಧರ್ಮಶ್ರದ್ಧೆ ಪರಿಣಾಮ ಬೀರಿದಾಗ ಅವರು ಆಧ್ಯಾತ್ಮದತ್ತ ಸೆಳೆಯಲ್ಪಟ್ಟರು. ಕೇವಲ ಹಣಗಳಿಕೆ ಮತ್ತು ಜಿಪುಣತನದ ಜೀವನಕ್ಕಿಂತ ಮುಕ್ತಿ ಗಳಿಸುವ ಪಾರಮಾರ್ಥಿಕ ಜೀವನ ಅವರಿಗೆ ಮುಖ್ಯವಾಗಿ ಕಂಡಿತು.

ನಂತರ ಅವರು ಪುರಂದರಗಡವನ್ನು ತೊರೆದು ಹಂಪಿಗೆ ಬಂದರು. ಅಲ್ಲಿ ಶ್ರೀ ವ್ಯಾಸರಾಯರಿಂದ ದೀಕ್ಷೆ ಪಡೆದು 'ಪುರಂದರವಿಠಲ' ಎಂಬ ಅಂಕಿತವನ್ನು ಹೊಂದಿ ಮಾಧ್ವ ಸಂಪ್ರದಾಯಬದ್ಧರಾಗಿ, ದಾಸ ಪರಂಪರೆಯ ಪ್ರಮುಖ ನೇತಾರರಾದರು.

ಜೀವನದ ನಿಜಸ್ವರೂಪವನ್ನು ಅರ್ಥ ಮಾಡಿಕೊಂಡು, ತಮ್ಮ ಸಂಪತ್ತನ್ನೆಲ್ಲ ದಾನ ಮಾಡಿ, ಹರಿದಾಸರಾಗಿ, ಸದ್ಗತಿ ಪಡೆಯಲು ಸಾಧನ ಕ್ರಮಗಳನ್ನು ತಿಳಿಹೇಳಿ ಕುಣಿಕುಣಿದಾಡಿದರು. ಅವರ ಗುರುಗಳಾದ ಶ್ರೀ ವ್ಯಾಸರಾಯರಿಂದಲೇ "ದಾಸರೆಂದರೆ ಪುರಂದರ ದಾಸರಯ್ಯಾ" ಎಂಬ ಅಪರೂಪವಾದ ಮೇಲ್ಮೆಯನ್ನು ಪಡೆದರು. ಪುರಂದರದಾಸರ ಕೃತಿಗಳಲ್ಲಿ ಸಂಗೀತ–ಸಾಹಿತ್ಯ ಎರಡೂ ಮೇಲ್ಮಟ್ಟದಲ್ಲಿದ್ದು, ಅವರಿಗೆ ಸಂಗೀತ ಲೋಕದಲ್ಲಿ 'ಕರ್ನಾಟಕ ಸಂಗೀತ ಪಿತಾಮಹ' ಎಂಬ ಬಿರುದನ್ನು ತಂದುಕೊಟ್ಟವು.

ಪುರಂದರದಾಸರು ಒಂದು ಲಕ್ಷ ಎಪ್ಪತ್ತೈದು ಸಾವಿರ ಕೃತಿರಚನೆ ಮಾಡಿದರೆಂದು ಪ್ರತೀತಿ ಇದೆ. ಆದರೆ ನಮಗೆ ಸಾವಿರಕ್ಕಿಂತ ಕಡಿಮೆ ದೊರೆತಿದೆ. ಗೀತ, ಠಾಯ, ಸುಳಾದಿ, ಉಗಾಭೋಗ, ಪದ್ಯ, ಪದ ಎಂಬ ಆರು ಬಗೆಯ ರಚನೆಗಳನ್ನು ಮಾಡಿದ್ದಾರೆ. ಪುರಂದರದಾಸರ ಕೀರ್ತನೆಗಳು ಅತ್ಯಂತ ಜನಪ್ರಿಯವಾಗಿವೆ.

ಅವರ ಕೀರ್ತನೆಗಳಲ್ಲಿ ಭಗವಂತನನ್ನು ಕುರಿತ ಭಕ್ತಿಯ ತನ್ಮಯತೆ ಮುಖ್ಯವಾಗಿದೆ. ಈ ಎಲ್ಲ ಗುಣಗಳೂ ಅಲ್ಲದೆ ರಾಗ–ತಾಳ ಸಹಿತ ಹಾಡಿದಾಗಲೇ ಅದರ ಸಾರ್ಥಕತೆ ಇದೆ. ಈ ಹಿನ್ನೆಲೆಯಲ್ಲಿ ಸತ್ವ ಮತ್ತು ಸಂಖ್ಯಾ ದೃಷ್ಟಿಯಿಂದಲೂ ಪುರಂದರದಾಸರೇ ಪ್ರಮುಖರಾಗಿದ್ದಾರೆ.

ಪುರಂದರದಾಸರ ಕೃತಿಗಳಲ್ಲಿ ವೈವಿಧ್ಯವಿದೆ. ಅಲಂಕಾರ, ಪ್ರತಿಮೆ, ಸಂಕೇತಗಳು ಸಹಜವಾಗಿ ಮೂಡಿಬಂದಿವೆ. ಗಾದೆಮಾತು, ಪಡಿನುಡಿಗಳು, ಆಡುಮಾತಿನ ಧಾಟಿ ಸಹಜವಾಗಿ ಪರಿಣಾಮಕಾರಿಯಾಗಿ ಪ್ರಯೋಗವಾಗಿದೆ. ಭಕ್ತಿ, ಆಧ್ಯಾತ್ಮ ಅನುಭಾವಗಳ ಜೊತೆಗೆ ಸಾಮಾಜಿಕ ಪ್ರಜ್ಞೆ, ವಿಡಂಬನೆ, ಜಾತ್ಯತೀತ ಪರಿಕಲ್ಪನೆಗಳು ಅವರ ಕೀರ್ತನೆಗಳಲ್ಲಿ ಉದ್ದಕ್ಕೂ ಕಂಡುಬರುತ್ತದೆ. ಬಾಲಕೃಷ್ಣನ ಚಿತ್ರಣವಂತೂ ತುಂಬಾ ಸುಂದರವಾಗಿದೆ. ಅವರ ಎಷ್ಟೋ ಕೀರ್ತನೆಗಳು ನೃತ್ಯಕ್ಕೆ ಸೊಗಸಾಗಿ ಅಳವಡುತ್ತವೆ.

ಕೃತಿರಚನೆ ಮಾಡುವುದರಲ್ಲಿ ಪುರಂದರದಾಸರು ಮುಂದಿನ ವಾಗ್ಗೇಯಕಾರರಿಗೆ ಮಾರ್ಗದರ್ಶಕರಾದರು. ಇವರ ಪದಗಳನ್ನೇ ಮಾದರಿಯಾಗಿಟ್ಟುಕೊಂಡು ಕ್ಷೇತ್ರಯ್ಯ, ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತರು, ತಾಳ್ಳಪಾಕ ಕವಿಗಳು, ಸೋಮಕವಿ, ವಾಸುದೇವ ಕವಿ ಮತ್ತು ಶಾಮಾಶಾಸ್ತ್ರಿಗಳು ತಮ್ಮ ಕೃತಿಗಳನ್ನು ರಚಿಸಿದರು. ತ್ಯಾಗರಾಜರಂತಹ ಪ್ರಸಿದ್ಧ ಸಂಗೀತಗಾರರ ಮೇಲೆ ಪುರಂದರದಾಸರ ದಟ್ಟ ಪ್ರಭಾವವಿರುವುದು ಕಂಡುಬರುತ್ತದೆ. ಕರ್ನಾಟಕ ಸಂಗೀತವನ್ನು ಅಭ್ಯಸಿಸಲು ಸೂತ್ರಬದ್ಧವಾದ ವ್ಯವಸ್ಥೆಯನ್ನು ಮಾಡಿದ ಕೀರ್ತಿಯೂ ಪುರಂದರದಾಸರಿಗೆ ಸಲ್ಲುತ್ತದೆ. ಪುರಂದರದಾಸರ ನಾಲ್ಕು ಗಂಡುಮಕ್ಕಳೂ ಸಹ ತಂದೆಯಂತೆಯೇ ಹರಿದಾಸರಾಗಿದ್ದರು. ದಾಸರು ಕ್ರಿ.ಶ.೧೫೬೪ರಲ್ಲಿ (ರಕ್ತಾಕ್ಷಿ ಸಂವತ್ಸರದ ಪುಷ್ಯ ಅಮಾವಾಸ್ಯೆ) ಹಂಪೆಯಲ್ಲಿ ವೈಕುಂಠವಾಸಿಗಳಾದರು.

(ಸಂ. ೨, ೪)

೫೮. ಪ್ರಸನ್ನವೆಂಕಟ (ಪ್ರಸನ್ನವೆಂಕಟದಾಸರು–ವೆಂಕಟೇಶ)

ಇವರ ತಂದೆ ಕಾಖಂಡಕಿ ನರಸಪ್ಪಯ್ಯನವರು. ತಾಯಿ ಲಕ್ಷ್ಮೀಬಾಯಿಯವರು. ದಾಸರು ಸು. ಕ್ರಿ.ಶ.೧೬೮೦ರಲ್ಲಿ ಜನಿಸಿದರು. ಚಿಕ್ಕ ವಯಸ್ಸಿನಲ್ಲಿಯೇ ತಾಯಿ ತಂದೆಯರನ್ನು ಕಳೆದುಕೊಂಡ ದಾಸರು, ಅತ್ತಿಗೆಯ ಕಾರಣದಿಂದಾಗಿ ಊರು ತೊರೆದು ಕಾಲ್ನಡಿಗೆಯಲ್ಲಿ ತಿರುಪತಿಗೆ ಬಂದರು. ಶ್ರೀನಿವಾಸದೇವರ ಅನುಗ್ರಹದಿಂದ 'ಪ್ರಸನ್ನವೆಂಕಟ' ಎಂಬ ಅಂಕಿತವನ್ನು ಇಟ್ಟುಕೊಂಡು ಕೃತಿಗಳನ್ನು ರಚಿಸಿದರು.

ಪ್ರಸಿದ್ಧ ವಿದ್ವಾಂಸರಾಗಿದ್ದ ಮುದ್ಗಲ ಜನಾರ್ದನಾಚಾರ್ಯರು ಪ್ರಸನ್ನವೆಂಕಟದಾಸರ ಗುರುಗಳು. ಅವರ ಶಿಷ್ಯರಾಗಿ ಸಂಸ್ಕೃತವನ್ನು ಕಲಿತು, ರಾಮಾಯಣ, ಭಾರತ, ಭಾಗವತ ಮತ್ತು ದ್ವೈತ ಸಿದ್ಧಾಂತದಲ್ಲಿ ಪಂಡಿತರಾಗಿ, ಬಾಗಲಕೋಟೆಗೆ ಹಿಂದಿರುಗಿದರು. ಅವರ ಹರಿಭಕ್ತಿ ಮತ್ತು ಪಾಂಡಿತ್ಯದಿಂದಾಗಿ ಅವರ ಪ್ರಸಿದ್ಧಿ ಹಬ್ಬಿ ಅನೇಕ ಸರದಾರರು, ಸಾಮಂತರು, ಸುಭೇದಾರರು ದಾಸರಿಗೆ ಹೊಲ ಮನೆಗಳನ್ನೂ ವರ್ಷಾಶನಗಳನ್ನೂ ಕೊಟ್ಟು ಗೌರವಿಸಿದರು.

ಪ್ರಸನ್ನ ವೆಂಕಟದಾಸರ ೪೪೯ ಕೃತಿಗಳು ಉಪಲಬ್ಧವಾಗಿವೆ. ಇವುಗಳಲ್ಲಿ ೬ ದೀರ್ಘಕೃತಿಗಳು. ೧೦ ಸುಳಾದಿಗಳು, ೭ ಉಗಾಭೋಗಗಳು ಸೇರಿವೆ. ಸತ್ಯಭಾಮಾವಿಲಾಸ, ನಾರಾಯಣಪಂಜರ, ಸಮಸ್ತನಾಮ ಮಣಿಗಣ ಷಟ್ಚರಣ ಪದ್ಯಮಾಲಾ, ಭೇದ ಮುಕ್ತಾವಲಿ, ನಾರದ ಕೊರವಂಜಿ, ಹಾಗೂ ಕನ್ನಡದಲ್ಲಿ ಭಾಗವತ ದಶಮಸ್ಕಂಧ, ಈ ಆರೂ ಅವರ ದೀರ್ಘಕೃತಿಗಳು.

ಕೀರ್ತನೆಗಳಲ್ಲಿ ಹರಿಸರ್ವೋತ್ತಮತ್ವ, ಹರಿನಾಮಮಹಿಮೆ, ಹರಿದಾಸರ ಹಿರಿಮೆ, ದ್ವೈತತತ್ವ ಪ್ರತಿಪಾದನೆ, ಆತ್ಮಶೋಧನೆ, ಲೋಕನೀತಿ ಇವುಗಳು ಅಭಿವ್ಯಕ್ತಿಯನ್ನು ಪಡೆದಿವೆ. ಗುರು ಜನಾರ್ದನಾರ್ಯರನ್ನು ಕುರಿತು ರಚಿಸಿರುವ ಕೀರ್ತನೆಗಳೊಂದಿಗೆ, ಮಾಧ್ವಗುರು ಪರಂಪರೆಯನ್ನು ಬಿಡಿಯಾಗಿಯೂ, ಒಟ್ಟಾಗಿಯೂ ಸ್ತುತಿಸಿರುವ ಕೀರ್ತನೆಗಳಿವೆ.

ಇವರ ಕೀರ್ತನೆಗಳಲ್ಲಿ ವಿಷಯ ವೈವಿಧ್ಯ ಇದೆ. ಕೃಷ್ಣನನ್ನು ಕುರಿತ ಅವನ ಬಾಲ್ಯದ ವರ್ಣನೆಗಳು, ದಶಾವತಾರ, ಕೃಷ್ಣ ರುಕ್ಮಿಣಿಯರನ್ನು ಹಸೆಗೆ ಕರೆಯುವ ಹಾಡುಗಳು ಸುಂದರವಾಗಿವೆ. ಜಾನಪದ ಧಾಟಿಯನ್ನು ಬಳಸಿಕೊಂಡೂ ಕೀರ್ತನೆ ರಚನೆಯಾಗಿರುವುದನ್ನು ಗಮನಿಸಬಹುದು.

ಪ್ರಸನ್ನವೆಂಕಟದಾಸರು ತಮ್ಮ ಕೊನೆಯ ದಿನಗಳನ್ನು ಬಾದಾಮಿಯಲ್ಲಿ ಕಳೆದು ೭೨ ವರ್ಷಗಳ ಸಾರ್ಥಕ ಜೀವನವನ್ನು ನಡೆಸಿ, ವೈಕುಂಠವಾಸಿಗಳಾದರು.

(ಸಂ. ೮)

೫೯. ಪ್ರಸನ್ನಶ್ರೀನಿವಾಸ (ಶ್ರೀನಿವಾಸದಾಸರು)

ಪ್ರಸನ್ನಶ್ರೀನಿವಾಸದಾಸರು ೧೯೦೦ರ ಸುಮಾರಿಗೆ ಕಾವೇರಿ ತೀರದಲ್ಲಿರುವ ಸೂಲಪುರವೆಂಬ ಗ್ರಾಮದಲ್ಲಿ ಜನಿಸಿದರು. ತಂದೆ ಸಾಮವೇದಿ ಶ್ರೀ ವೆಂಕಟಕೃಷ್ಣಾಚಾರ್ಯರು. ತಾಯಿ ಸೀತಮ್ಮ. ಮನೆ ಮಾತು ತಮಿಳು. ಕನ್ನಡ ಲಿಪಿ ಕಲಿತವರಲ್ಲವಾದರೂ ಶುದ್ಧ ಕನ್ನಡದಲ್ಲಿ ದೇವನಾಗರಿ ಲಿಪಿಯಲ್ಲಿ ಬರೆಯುತ್ತಿದ್ದರಂತೆ. ಇಂಗ್ಲೀಷ್ ಭಾಷೆಯ ಪರಿಚಯವೂ ಇತ್ತು. ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಬಾಲ್ಯದಿಂದಲೇ ಆಧ್ಯಾತ್ಮದೆಡೆಗೆ ಮನಸ್ಸಿತ್ತು. ಶ್ರೀ ರಾಘವೇಂದ್ರಸ್ವಾಮಿಗಳ, ತಿರುಪತಿ ವೆಂಕಟೇಶನ ಅನನ್ಯ ಭಕ್ತರಾಗಿದ್ದರು. ಗೋಪಾಲದಾಸರನ್ನು ಹಾಗೂ ಜಗನ್ನಾಥದಾಸರನ್ನು ತಮ್ಮ ಗುರುಗಳೆಂದು ಹೇಳಿದ್ದಾರೆ. 'ಪ್ರಸನ್ನ ಶ್ರೀನಿವಾಸ' ಎಂಬ ಅಂಕಿತ ತಿರುಪತಿಯಲ್ಲಿ ಸ್ವಪ್ನದಲ್ಲಿ ದೊರಕಿತಂತೆ. ಒಟ್ಟು ೧೫೮ ಕೀರ್ತನೆಗಳು ಲಭ್ಯವಿವೆ. ಮಾಧ್ವಮತದ ತತ್ತ್ವವಿಚಾರಗಳನ್ನು ತುಂಬಾ ವಿಶದವಾಗಿ ಅನೇಕ ಹಾಡುಗಳಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಶ್ರೀ ಬ್ರಹ್ಮಸೂತ್ರ, ಭಾಗವತಾಮೃತಸಾರ, ವಿಷ್ಣುಸಹಸ್ರನಾಮ ಸ್ತೋತ್ರರೂಪಭಾಷ್ಯ ಹೀಗೆ ಅನೇಕ ಕೃತಿಗಳು ಗಮನಾರ್ಹವಾಗಿವೆ. ದೇವಾನುದೇವತೆಗಳ ಸ್ತುತಿ ಪದ್ಯಗಳೊಂದಿಗೆ ರಾಮಾಯಣ, ಗಾಯತ್ರಿ ಪ್ರಣವಮಂತ್ರ ರಹಸ್ಯ, ಹನ್ನೆರಡು ರಾಶಿಗಳ ಮೇಲೆ ಹಾಡುಗಳು ವಿಶೇಷವಾಗಿವೆ. ಈಚೆಗೆ ಅಂದರೆ ೧೯೬೦ರಲ್ಲಿ ದೈವಾಧೀನರಾದರು.

(ಸಂ. ೨೨)

೬೦. ಪ್ರಾಣನಾಥವಿಠಲ ಶೇಷವಿಠಲ (ಬಾಗೇಪಲ್ಲಿ ಶೇಷದಾಸರು)

ಕ್ರಿ.ಶ.೧೮೬೫ರಲ್ಲಿ ದೇವರಾಯನದುರ್ಗದ ಬಳಿ ಇರಕಸಂದ್ರ ಎಂಬ ಗ್ರಾಮದಲ್ಲಿ ಜನನ. ನರಸಣ್ಣ–ಮಹಾಲಕ್ಷ್ಮಮ್ಮ ತಂದೆತಾಯಿಗಳು. ಬಾಲ್ಯದಿಂದಲೇ ಆಧ್ಯಾತ್ಮದೆಡೆಗೆ ಆಕರ್ಷಿತರಾಗಿ ಹರಿಕಥಾ ಕೀರ್ತನೆಯನ್ನು ಹೇಳುತ್ತಿದ್ದರು. ತಮ್ಮ ಹರಿಕಥೆಗಳ ನಡುವೆ ಹಾಡಲು ಅನುವಾಗುವಂತೆ ಅನೇಕ ಗೀತೆಗಳನ್ನು ರಚಿಸತೊಡಗಿದರು. ಪ್ರಾರಂಭಕ್ಕೆ 'ಶೇಷವಿಠಲ'

ಎಂಬ ಅಂಕಿತದಿಂದ ಗೀತೆಗಳನ್ನು ರಚಿಸುತ್ತಿದ್ದರಾದರೂ, ಮುಂದೆ ತಂದೆಮುದ್ದುಮೋಹನವಿಠಲ (ಪರಮಪ್ರಿಯ ಸುಬ್ಬರಾಯರು)ರಿಂದ 'ಪ್ರಾಣನಾಥವಿಠಲ'ನೆಂಬ ಅಂಕಿತಪ್ರದಾನವಾಯಿತು. ಅವರ ಪ್ರಥಮ ಶಿಷ್ಯರಿವರು. ಇವರ ೩೨ ಕೀರ್ತನೆಗಳು ಒಟ್ಟಿಗೆ ಲಭ್ಯವಿವೆ. ಶ್ರೀನಿಧಿಮೋಹನವಿಠಲರು, ಪ್ರಾಣನಾಥಮೋಹನವಿಠಲರು ಇವರ ಪ್ರಮುಖ ಶಿಷ್ಯರು. ಹೆಚ್ಚಿನ ಹಾಡುಗಳು ದೇವಾನುದೇವತೆಗಳನ್ನು ಕುರಿತ ಸಂಪ್ರದಾಯದ ಹಾಡುಗಳಾಗಿದ್ದು ಗೇಯಗುಣಭರಿತವಾಗಿವೆ. ೧೯೨೪ರಲ್ಲಿ ದೈವಾಧೀನರಾದರು.

(ಸಂ. ೧೫)

೭೧. ಪ್ರಾಣೇಶವಿಠಲ (ಪ್ರಾಣೇಶದಾಸರು)

ಪ್ರಾಣೇಶವಿಠಲರ ನಿಜನಾಮ ಯೋಗಪ್ಪನೆಂದು. ಲಿಂಗಸೂಗೂರಿನಲ್ಲಿ ಕ್ರಿ.ಶ.೧೭೩೭ರಲ್ಲಿ ಜನಿಸಿದರು. ತಂದೆ ಶಾನುಭೋಗ ತಿರುಕಪ್ಪನವರು. ಬಾಲ್ಯದಲ್ಲಿ ಶರೀರವೆಲ್ಲಾ ಬೆಳ್ಳಗಿದ್ದು ಮಂತ್ರಾಲಯದ ರಾಘವೇಂದ್ರ ಯತಿಗಳ ಸೇವೆಯಿಂದ ಸರಿಯಾಯಿತಂತೆ. ಮಾನ್ವಿಯ ಜಗನ್ನಾಥದಾಸರು ಇವರ ಖಾಸಾ ಗುರುಗಳು. ಅನೇಕ ವರ್ಷಗಳ ಕಾಲ ಗುರುಗಳ ಸೇವೆ ಮಾಡಿ ಅವರಿಂದ ತತ್ತ್ವೋಪದೇಶವನ್ನು ಪಡೆದಿದ್ದರು. ಮಂತ್ರಾಲಯದ ವರದೇಂದ್ರತೀರ್ಥ ಯತಿಗಳು ಲಿಂಗಸೂಗೂರಿನಲ್ಲಿ ಕೆಲಕಾಲ ತಂಗಿ ಕೊನೆಗೆ ಪ್ರಾಣೇಶವಿಠಲರನ್ನು ಅನುಗ್ರಹಿಸಿ ಅಲ್ಲಿಯೇ ಬೃಂದಾವನ ರೂಪದಲ್ಲಿ ನೆಲಸಿದರು. ಪ್ರಾಣೇಶವಿಠಲರ ಒಟ್ಟು ೨೫೨ ಹಾಡುಗಳು ಲಭ್ಯವಿವೆ. ದೇವಾನುದೇವತೆಗಳ ಸ್ತುತಿ ಪದ್ಯಗಳಲ್ಲದೆ, ಸ್ತ್ರೀಯರಿಗೆ ಅನುಕೂಲಕರವಾದ ಸಾಂಪ್ರದಾಯಿಕ ಹಾಡುಗಳು, ತತ್ತ್ವಪದಗಳು, ಉಗಾಭೋಗ, ಸುಳಾದಿಗಳು ಹೀಗೆ ಎಲ್ಲ ಪ್ರಕಾರದ ಹಾಡುಗಳನ್ನು ದಾಸರು ರಚಿಸಿದ್ದಾರೆ. ತಮ್ಮ ಪುತ್ರರಾದ ವೆಂಕಟರಾಯರಿಗೆ 'ಗುರುಪ್ರಾಣೇಶವಿಠಲ' ಎಂಬ ಅಂಕಿತವಿತ್ತು ದಾಸದೀಕ್ಷೆ ನೀಡಿದ್ದರು. ಕೀರ್ತನಾದಿಗಳಲ್ಲದೇ ೧೭ ದೀರ್ಘಕೃತಿಗಳನ್ನು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಬರೆದಿದ್ದಾರೆ. ಗಾಲವ ಚರಿತ್ರೆ, ಶ್ರೀಹರಿವಾಯುಸ್ತುತಿ, ಕಾಳೀ ಸ್ವಯಂವರ, ತಿಥಿತ್ರಯನಿರ್ಣಯ ಇತ್ಯಾದಿ. ಕ್ರಿ.ಶ.೧೮೨೨ರಲ್ಲಿ ದೈವಾಧೀನರಾದರು.

(ಸಂ. ೧೩)

೭೨. ಭಾಗ್ಯನಿಧಿವಿಠಲ

ಇವರು ಸವಣೂರ ದಿವಾನ ಖಂಡೇರಾಯರ ಮಕ್ಕಳು. ಸವಣೂರ ದಾಸರೆಂದೂ ದೊರಪ್ಪದಾಸರೆಂದೂ ಕರೆಯಿಸಿಕೊಳ್ಳುತ್ತಾರೆ. ಲೌಕಿಕ ಜೀವನದ ಕ್ರಮವನ್ನು ಬಿಟ್ಟು ಆಧ್ಯಾತ್ಮಿಕ ಜೀವನವನ್ನು ಅಪ್ಪಿಕೊಂಡವರು. ಇವರ ಕಾಲ ಸುಮಾರು ೧೮ನೇ ಶತಮಾನದ ಉತ್ತರಾರ್ಧ. ಕರ್ಜಗಿದಾಸರ ಅನುಗ್ರಹದಿಂದ 'ಭಾಗ್ಯನಿಧಿವಿಠಲ' ಎಂಬ ಅಂಕಿತವನ್ನು ಪಡೆದವರು. ಹರಿದಾಸರಾದ ನಂತರ ಕೃಷ್ಣರಾಜ ಒಡೆಯರನ್ನು ಭೇಟಿಮಾಡಿ, ಸನ್ಮಾನಿತರಾದರಂತೆ. ಇವರ ಒಂದೇ ಒಂದು ಹಾಡು ದೊರೆತಿದೆ.

(ಸಂ. ೨೧-೧)

೭೩. ಭೂಪತಿವಿಠಲ (ಕಾಖಂಡಕಿ ರಾಮಾಚಾರ್ಯರು)

ಇವರ ನಿಜ ಹೆಸರು ಕಾಖಂಡಕಿ ರಾಮಾಚಾರ್ಯರು. ಕ್ರಿ.ಶ.೧೮೯೭ರಲ್ಲಿ ಜನಿಸಿದ ಇವರು ೨೦ನೆಯ ಶತಮಾನದ ಹೊಸ ಯುಗದ ಹರಿದಾಸರು. ಭಗವದ್ಭಕ್ತರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ, ಸ್ವಾತಂತ್ರ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಗಲಗಲಿಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳ ವೃಂದಾವನವನ್ನು ಸ್ಥಾಪಿಸಿದವರು. ಭಜನೆ ಕೀರ್ತನೆಗಳಲ್ಲಿ ಒಲವು. ಈ ಅಂಶಗಳೆಲ್ಲ ಅವರ ಕೀರ್ತನೆಗಳಲ್ಲಿ ಪ್ರತಿಫಲಿಸಿವೆ.

ಇವರ ಸುಮಾರು ೫೦ ಹಾಡುಗಳು ಪ್ರಕಟವಾಗಿವೆ. ಅಲ್ಲದೆ ಇವರ ದೀರ್ಘಕೃತಿ 'ಪ್ರಸಾದ'ವು ನಾಲ್ಕು ಸಾಲುಗಳ ಪದ್ಯಗಳನ್ನೊಳಗೊಂಡಿದ್ದು ಹೃದ್ಯವಾಗಿದೆ. ೧೯೮೮ ಡಿಸೆಂಬರ್ ೨೩ರಂದು ಕಾಲವಾದರು.

(ಸಂ. ೨೧-೧)

೭೪. ಮಹಿಪತಿ (ಕಾಖಂಡಕಿ ಮಹಿಪತಿರಾಯರು)

ಧರ್ಮಸಮನ್ವಯವನ್ನು ಸಾರಿ ಆತ್ಮೋನ್ನತಿಯ ಮಾರ್ಗವನ್ನು ತೋರಿದವರು ಮಹಿಪತಿರಾಯರು. ರಾಜಕೀಯ ಅಸ್ಥಿರತೆ, ಸಾಮಾಜಿಕ ಅವನತಿಯೇ ತುಂಬಿದ ಕಾಲದಲ್ಲಿ ಧಾರ್ಮಿಕ ಮಾರ್ಗದಿಂದ ಮಾನವೀಯತೆಯನ್ನು ಎತ್ತಿಹಿಡಿದವರು. ವಿಜಾಪುರದ ಮುಸ್ಲಿಂ ಅರಸರ ಆಳ್ವಿಕೆಯಲ್ಲಿದ್ದ ಕಾಲದಲ್ಲಿ ಜನಿಸಿ, ಹಿಂದೂ ಸಂಸ್ಕೃತಿಯ ಪುನರುತ್ಥಾನಕ್ಕಾಗಿ ಶ್ರಮಿಸಿದವರು.

ಮಹ್ಮದ್ ಆದಿಲ್‌ಶಹನ ಕಾಲದಲ್ಲಿ ಇವರ ತಂದೆ ಕೋನೇರಿರಾಯರು ಪೌರಾಣಿಕ ವೃತ್ತಿಯನ್ನು ಅವಲಂಬಿಸಿ ವಿಜಾಪುರದಲ್ಲಿ ನೆಲೆಸಿದ್ದರು. ಕ್ರಿ.ಶ.೧೬೫೦ರಲ್ಲಿ ಮಹಿಪತಿ ರಾಯರ ಜನನವಾಯಿತು. ಇವರ ನಿಜನಾಮ ಗುರುರಾಯರೆಂದು. ಬಾಲ್ಯದಲ್ಲಿಯೇ ತಂದೆಯಂತೆ ಸುಶ್ರಾವ್ಯವಾಗಿ ಪುರಾಣಕತೆಗಳನ್ನು ಹೇಳುವ ಅಭ್ಯಾಸ ಬೆಳೆಯಿತು. ಓರ್ವ ಮುಸ್ಲಿಂ ಸರದಾರನಲ್ಲಿ ಕರಣಿಕ ವೃತ್ತಿಯನ್ನು ಕೈಗೊಂಡು ಕ್ರಮೇಣ ಆ ವೃತ್ತಿಯಲ್ಲಿ ಬೆಳೆಯುತ್ತಾ ಬಾದಶಹನ 'ಅಖ್ತಿಯಾರ್' ಆದರು. ಒಮ್ಮೆ ಸೂಫಿ ಸಂತನೊಬ್ಬನ ಸಲಹೆಯ ಮೇರೆಗೆ ಭಾಸ್ಕರಸ್ವಾಮಿಗಳ ಸಂಪರ್ಕಕ್ಕೆ ಬಂದು ಮಹಿಪತಿರಾಯರು (ಮತ್ತು ಪತ್ನಿ ತಿಮ್ಮವ್ವ) ಸ್ವಾಮಿಗಳಿಂದ ಆಶೀರ್ವಾದ ಪಡೆದು ಸಾರವಾಡಕ್ಕೆ ಬಂದು ನೆಲಸಿ ಸಂತರಾದರು. ಬಾದಶಹನ ಲೌಕಿಕ ಸೇವೆಯನ್ನು ತ್ಯಜಿಸಿ ಭಗವನ್ನಾಮಸ್ಮರಣೆಗೆ ತೊಡಗಿದರು. ಮುಂದೆ ಸಾರವಾಡದಿಂದ ವಿಜಾಪುರಕ್ಕೆ ಬಂದು ಜಾತಿ, ಮತ, ಪಂಥಗಳ ಭೇದವಿಲ್ಲದೆ ಶಿಷ್ಯರನ್ನು ಅನುಗ್ರಹಿಸಿದರು. ಸೂಫಿಸಂತರು, ಶೈವರು, ಅವಧೂತರು, ಕನ್ನಡ, ತೆಲುಗು, ದಖಣೀ, ಉರ್ದು ಭಾಷೆಯವರೂ ಇವರ ಶಿಷ್ಯರಾದರು. ಆ ಮುಂದೆ ಕಾಖಂಡಕಿಯಲ್ಲಿ ನೆಲಸಿದರು. ಇವರ ಒಟ್ಟು ೭೦೩ ಕೀರ್ತನೆಗಳು ಲಭ್ಯವಾಗಿವೆ. 'ಮಹಿಪತಿ' ಎಂಬ ಅಂಕಿತ ಪ್ರದಾನ ಯಾರಿಂದ ನಡೆಯಿತು ಎಂಬುದು ಸ್ಪಷ್ಟವಿಲ್ಲ. ಅವರು ಬಹುಭಾಷಾ ವಿಶಾರದರಾಗಿದ್ದರಿಂದ ವೀರಶೈವ ಶರಣ ಸಾಹಿತ್ಯ, ಸೂಫಿ, ಅವಧೂತ ಸಾಹಿತ್ಯಗಳನ್ನು ಓದಿಕೊಂಡಿದ್ದರು. ಮೂಲತಃ ಮಾಧ್ವ ಪರಂಪರೆಯ ದ್ವೈತ ಸಂಪ್ರದಾಯವನ್ನೇ ತಮ್ಮ ಕೀರ್ತನೆಗಳಲ್ಲಿ ಅನುಮೋದಿಸುತ್ತಾ ಹರಿಸರ್ವೋತ್ತಮತ್ವವನ್ನು ಸಾರಿದ್ದಾರಾದರೂ ಅಲ್ಲಲ್ಲಿ ಅನ್ಯ ಮತಗಳ ಒಳ್ಳೆಯ ಅಂಶಗಳನ್ನು ಎತ್ತಿ ಹಿಡಿದಿದ್ದಾರೆ. 'ದ್ವೈತ-ಅದ್ವೈತ ಎಂದು ಹೊಡೆದಾಡದಿರೋ ಪ್ರಾಣಿ' ಎಂದು ಸ್ಪಷ್ಟವಾಗಿ ಸಾರಿದ್ದಾರೆ. ತಾವು ಸಾಧನೆಗೆ ಅನುಸರಿಸಿದ ಯೋಗಮಾರ್ಗದ ರೀತಿನೀತಿಗಳನ್ನು ಹಾಡುಗಳಲ್ಲಿ ವರ್ಣಿಸಿದ್ದಾರೆ.

ಇವರ ಹಾಡುಗಳಲ್ಲಿ ೩೦೦ಕ್ಕಿಂತ ಹೆಚ್ಚು ಹರಿ-ಗುರುಗಳ ವರ್ಣನೆಯ ಕೀರ್ತನೆಗಳಿವೆ. ಹಾಗೆಯೇ ದತ್ತಾತ್ರೇಯ, ಸತ್ಸಂಗದ ಅಗತ್ಯ, ಸಿದ್ಧಪುರುಷರ ಲಕ್ಷಣ ಇತ್ಯಾದಿ ವಿವಿಧ ಆಸಕ್ತಿಯ ವಿಷಯಗಳೂ ಇವರ ಹಾಡುಗಳಲ್ಲಿವೆ. ಒಬ್ಬ ಅವಧೂತರಾಗಿ, ಯೋಗಿಗಳಿಗೆ ಮಹಿಪತಿರಾಯರು ಕಣ್ಸೆಳೆಯುತ್ತಾರೆ. ಪಂಡಿತ ವರ್ಗಕ್ಕಾಗಿ ಸಂಸ್ಕೃತ ಪದಭರಿತ ಕೀರ್ತನೆಗಳನ್ನು ರಚಿಸಿದಂತೆಯೇ ಪಾಮರರಿಗಾಗಿ ಲಾವಣಿ, ಹಂತಿಪದ, ಬಯಲಾಟದ ಮಟ್ಟುಗಳಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಆಗಿನ ಕಾಲದ ಆ ಪ್ರದೇಶದ ಆಡುಭಾಷೆಯ ನುಡಿಗಟ್ಟುಗಳನ್ನು ಅತ್ಯಂತ ಸಮರ್ಥವಾಗಿ, ಅರ್ಥಪೂರ್ಣವಾಗಿ ಬಳಸಿದರು. ತಮ್ಮ ಸಾಧನೆ, ಸಿದ್ಧಿಗಳಿಂದ ತಮ್ಮ ಕಾಲದಲ್ಲಿಯೇ ಅತ್ಯಂತ ಜನಪ್ರಿಯರಾಗಿ ಭೂಮಿ ಜಮೀನುಗಳನ್ನು ಸಂಪಾದಿಸಿದರಾದರೂ ಅದನ್ನೆಲ್ಲಾ ಉದಾರವಾಗಿ ದಾನಮಾಡಿ ಭಗವಂತನ, ಮನುಷ್ಯಕುಲದ ಸೇವೆಗೆ ಜೀವನವನ್ನು ಮುಡುಪಾಗಿಟ್ಟಿದ್ದರು. ೬೫ ವರ್ಷ ಬಾಳಿ ಕ್ರಿ.ಶ.೧೭೦೫ರಲ್ಲಿ ಕಾಖಂಡಕಿಯಲ್ಲಿ ದೈವಾಧೀನರಾದರು.

(ಸಂ. ೬)

೬೫. ಮಹಿಪತಿಸುತ (ಕಾಖಂಡಕಿ ಕೃಷ್ಣದಾಸರು)

ಕಾಖಂಡಕಿ ಕೃಷ್ಣದಾಸರ ತಂದೆಯವರು ಕಾಖಂಡಕಿ ಮಹಿಪತಿರಾಯರು. ವಿಜಾಪುರ ಜಿಲ್ಲೆಯ ಕಾಖಂಡಕಿಯು ಕೃಷ್ಣದಾಸರ ಊರು. ಇವರ ಕಾಲ ಸು. ಕ್ರಿ.ಶ.೧೬೭೩-೧೭೬೯. ಕೃಷ್ಣದಾಸರು ತಂದೆಯ ದಾರಿಯನ್ನೇ ಕ್ರಮಿಸಿ ಹರಿದಾಸರಾದರು. ಕೃಷ್ಣದಾಸರ ಮುದ್ರಿಕೆಗಳು ಇಂತಿವೆ:- ಮಹಿಪತಿನಂದನ, ಮಹಿಪತಿಕಂದ, ಮಹಿಪತಿ ಸುತ, ಮಹಿಪತಿಸುತಪ್ರಭು, ಇತ್ಯಾದಿಯಾಗಿ ಸುಮಾರು ೨೧ 'ಮಹಿಪತಿ' ಸಹಿತವಾದ ಮುದ್ರಿಕೆಗಳನ್ನು ಬಳಸಿ ಕೀರ್ತನೆಗಳನ್ನು ರಚಿಸಿದ್ದಾರೆ.

ಕೃಷ್ಣದಾಸರ ೭೫೮ ಕೀರ್ತನೆಗಳು ಉಪಲಬ್ಧವಾಗಿವೆ. ಅಲ್ಲದೆ ಸುಳಾದಿ, ವಚನಗಳು, ಖಂಡಕಾವ್ಯಗಳು ಹಾಗೂ ಆಖ್ಯಾನಗಳನ್ನು ರಚಿಸಿದ್ದಾರೆ. ಪರಮಾತ್ಮನಲ್ಲಿ ಅನನ್ಯವಾದ ಭಕ್ತಿ, ಸರ್ವಸಮರ್ಪಣಭಾವ, ಆತನ ದರ್ಶನ ಕುತೂಹಲ, ಆರ್ತಭಾವ, ವಾತ್ಸಲ್ಯಭಾವ ಅವರ ಕೀರ್ತನೆಗಳಲ್ಲಿ ಕಂಡುಬರುತ್ತವೆ. ಕೃಷ್ಣದಾಸರ ಕೀರ್ತನೆಗಳು ತಾರತಮ್ಯದ ರೀತ್ಯಾ ರಚನೆಯಾಗಿದ್ದರೂ, ಶಿವನ ಸ್ತುತಿಪರವಾದ ಕೀರ್ತನೆಗಳೂ ಅಧಿಕ ಸಂಖ್ಯೆಯಲ್ಲಿವೆ. ಶಿವಶರಣರ ವಚನಗಳ ಪ್ರಭಾವದಿಂದ ವಚನಗಳನ್ನೂ ರಚಿಸಿದ್ದಾರೆ. ಕೆಲವೊಮ್ಮೆ ಹರಿಹರ ಅಭೇದವನ್ನೂ ಹೇಳುತ್ತಾರೆ. ಸುಮಾರು ೧೦೦ಕ್ಕೂ ಅಧಿಕ ಕೃತಿಗಳಲ್ಲಿ ತಮಗೆ ಗುರುಗಳೂ ಆಗಿದ್ದ ತಂದೆ ಮಹಿಪತಿರಾಯರನ್ನು ಸ್ತುತಿಸಿದ್ದಾರೆ. ಗುರುಕರುಣೆಯ ಮಹತ್ವವನ್ನು ಪ್ರತಿಪಾದಿಸಿದ್ದಾರೆ.

ತಮ್ಮ ತಂದೆಯವರನ್ನು ತಮ್ಮ ಗುರುಗಳೆಂದು ಮಾತ್ರ ಗ್ರಹಿಸದೆ ಅವರ ಸಾಹಿತ್ಯ ಮಾರ್ಗವನ್ನೂ ಕೃಷ್ಣದಾಸರು ಅನುಸರಿಸಿರುವುದು ವಿಶೇಷವಾಗಿದೆ.

(ಸಂ. ೧೧)

೬೬. ಮಾನಿಧಿವಿಠಲ

ಇವರ ಹೆಸರು ಮೈಸೂರು ವೆಂಕಟರಮಣದಾಸರು. ತಂದೆ ಭೀಮಾಚಾರ್ಯರು. ಇವರು ಕದರ ಮಂಡಲಗಿಯಿಂದ ಮೈಸೂರಿಗೆ ಬಂದು ನೆಲಸಿದರು. ಇವರ ಕಾಲ ಕ್ರಿ.ಶ.೧೮೯–೧೮೮೪. ಮಾನನಿಧಿವಿಠಲ ಎಂಬ ಅಂಕಿತವಿರುವ ೧೦ ಹಾಡುಗಳು ಲಭ್ಯವಾಗಿವೆ.

(ಸಂ. ೨೧-೧)

೬೭. ಮುದ್ದುಮೋಹನವಿಠಲ

ದೊಡ್ಡಬಳ್ಳಾಪುರದ ರಾಘವೇಂದ್ರದಾಸರೆಂಬುದು ಇವರ ನಿಜನಾಮ. ಕ್ರಿ.ಶ.೧೮೩೦ರಲ್ಲಿ ಜನಿಸಿದರು. ಹುಲಬಂಡೆ ಮನೆತನಕ್ಕೆ ಸೇರಿದವರು. ಹುಟ್ಟು ಕುರುಡಿಯಾದ ಅಕ್ಕಣ್ಣಮ್ಮ ಎಂಬ ಕನ್ಯೆಯನ್ನು ವಿವಾಹಿತರಾಗಿದ್ದರು. ಶ್ರೀವರವಿಠಲದಾಸರಿಂದ ಅಂಕಿತ ಪಡೆದು ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾ ಕ್ರಮೇಣ ದೊಡ್ಡಬಳ್ಳಾಪುರದಲ್ಲಿ ಒಂದು ವಿಟ್ಠಲಮಂದಿರವನ್ನು ಸ್ಥಾಪಿಸಿ ಅದನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಅನೇಕ ಶಿಷ್ಯರಿಗೆ ಅಂಕಿತಪ್ರದಾನ ಮಾಡಿದರು. ದೇವರಾಯನದುರ್ಗದ ಪರಮಪ್ರಿಯ ಸುಬ್ಬರಾಯದಾಸರು ಇವರ ಪ್ರಮುಖ ಶಿಷ್ಯರು. ಇದಲ್ಲದೇ ಬಾಲಕೃಷ್ಣದಾಸರು, ಕರಿವರದವಿಠಲರು ಇತ್ಯಾದಿ ೧೧ ಜನರಿಗೆ ಅಂಕಿತವನ್ನಿತ್ತರು. ಗೃಹಸ್ಥರಾಗಿದ್ದರೂ ಯತಿಗಳಂತೆ ಆಚರಣೆಗಳನ್ನಿಟ್ಟುಕೊಂಡು ಸಮಾಜದಲ್ಲಿ ಗೌರವಿಸಲ್ಪಡುತ್ತಿದ್ದರು. ಇವರ ೭ ಕೀರ್ತನೆಗಳು ಮಾತ್ರ ಲಭ್ಯವಿವೆ. ಹರಿಕಥಾ ಪ್ರಸಂಗಗಳನ್ನು ನಡೆಸುವುದರ ಮೂಲಕ ಧಾರ್ಮಿಕ ಪ್ರಚಾರ ಮಾಡುತ್ತಿದ್ದರು. ಕ್ರಿ.ಶ.೧೯೮ರಲ್ಲಿ ದೈವಾಧೀನರಾದರು.

(ಸಂ. ೧೫)

೬೮. ಮೋಹನವಿಠಲ (ಮೋಹನದಾಸರು)

ಬಳ್ಳಾರಿ ಜಿಲ್ಲೆಯ ಚಿಪ್ಪಗಿರಿ ಇವರ ಜನ್ಮಸ್ಥಳ. ಕ್ರಿ.ಶ.೧೭೩೦ರಲ್ಲಿ ಜನನ. ತಂದೆ ಭೀಮಪ್ಪನಾಯಕ. ಶ್ರೀಮಂತ ಮನೆತನದಲ್ಲಿ ಹುಟ್ಟಿದರೂ ಕಾರಣಾಂತರಗಳಿಂದ ಅನಾಥನಂತೆ, ರೋಗಿಯಾಗಿ ಜೀವಿಸಿದ್ದ ಬಾಲಕನನ್ನು ಆನೆಗೊಂದಿಯಲ್ಲಿ ಒಮ್ಮೆ ಶ್ರೀ ವಿಜಯದಾಸರು ಕಂಡು, ಅನುಗ್ರಹಿಸಿ, ಆಶ್ರಯವನ್ನಿತ್ತು 'ಮೋಹನ' ಎಂದು ಹೆಸರಿಟ್ಟು ಬೆಳಸಿದರು. ಮುಂದೆ 'ಮೋಹನವಿಠಲ' ಎಂಬ ಅಂಕಿತವನ್ನಿತ್ತರು. ಮೋಹನದಾಸರು ವಿಜಯದಾಸರನ್ನು ಸ್ತುತಿಸಿ, ಸ್ಮರಿಸಿದ ಅನೇಕ ಹಾಡುಗಳು ಲಭ್ಯವಿವೆ. ಕೀರ್ತನೆಗಳು, ಉಗಾಭೋಗ, ಸುಳಾದಿ ಹೀಗೆ ನಾನಾ ಪ್ರಕಾರಗಳಲ್ಲಿ ಒಟ್ಟು ೬೧ ಹಾಡುಗಳು ಲಭ್ಯ. ಸಾಂಪ್ರದಾಯಿಕವಾದ ಹರಿಭಕ್ತಿಯನ್ನು ಸಾರುವ ಹಾಡುಗಳಲ್ಲದೇ ಜಗದ ಡಾಂಭಿಕತೆಯನ್ನು ತೆಗಳುವ, ಜಾತಿ ಪದ್ಧತಿಯನ್ನು ಧಿಕ್ಕರಿಸುವ ಹೊಸ ವಿಚಾರಧಾರೆಯಿಂದ ಕೂಡಿದ ಹಾಡುಗಳನ್ನು ಇವರಲ್ಲಿ ವಿಶೇಷವಾಗಿ ಕಾಣಬಹುದು. ಇವರಿಗೆ ವೆಂಕಪ್ಪದಾಸನೆಂಬ ಮಗನಿದ್ದು 'ತಂದೆಮೋಹನವಿಠಲ' ಎಂಬ ಅಂಕಿತದಿಂದ ಕೃತಿ ರಚನೆ ಮಾಡಿದ್ದಾನೆ. 'ಮಧ್ವವರದವಿಠಲ', 'ವಿರಜಿಪ್ರಾಣೇಶವಿಠಲ'ರು ಇವರ ಪ್ರಮುಖ ಶಿಷ್ಯರು. ೧೮೧೫ರಲ್ಲಿ ದೈವಾಧೀನರಾದರು.

(ಸಂ. ೧೩)

೬೯. ರಂಗೇಶವಿಠಲ (ಅರಕೆರೆ ಸಂಜೀವರಾವ್)

ಅರಕೆರೆ ಇವರ ಜನ್ಮಸ್ಥಳ. ಇವರ ತಂದೆ ರಾಮಣ್ಣ. ತಾಯಿ ಸಂಜೀವಮ್ಮ. ಸಂಜೀವರಾಯರು ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮಾ ಮಾಡಿ, ಕೆಲವು ಕಾಲ ಮೈಸೂರು ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಓವರ್‌ಸೀಯರ್ ಆಗಿ ಕೆಲಸ ಮಾಡಿ, ಅನಂತರ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದರು. ಆಗಾಗ ದೇಶಾಂತರ ಹೋಗುವುದೂ ಇವರ ಅಭ್ಯಾಸವಾಗಿತ್ತು. ೧೯೧೫ರಲ್ಲಿ ಸಂಜೀವರಾಯರು ಮುದ್ದುಮೋಹನದಾಸರಿಂದ ಹರಿದಾಸದೀಕ್ಷೆ ಪಡೆದರು. ಇವರ ೧೧೫ ಕೀರ್ತನೆಗಳು ದೊರೆತಿವೆ. ಎಸ್. ಬಿಂದೂರಾವ್ ಎಂಬುವರು ಇವರ ಕೀರ್ತನೆಗಳಿಗೆ ರಾಗ-ತಾಳಗಳನ್ನು ನಿರ್ಣಯಿಸಿ ಕೊಟ್ಟಿದ್ದರು. ಇವರು ಕೀರ್ತನೆಗಳಲ್ಲದೆ ಕೇಶವಾದಿ ಚತುರ್ವಿಂಶತಿ ರೂಪಲಕ್ಷಣ ವಿವರಣ ಸ್ತೋತ್ರಗಳನ್ನು ೨೫ ಷಟ್ಪದಿಗಳಲ್ಲಿ ರಚಿಸಿದ್ದಾರೆ. ಮಾಸ ನಿಯಾಮಕ ಪರಮಾತ್ಮನ ರೂಪಗಳ ಸ್ತುತಿಯನ್ನು ೧೫ ಭಾಮಿನೀಷಟ್ಪದಿಯಲ್ಲಿ ರಚಿಸಿದ್ದಾರೆ (೧೯೪೦). ಕೋಲಾರದಿಂದ ತಮ್ಮ ಊರಾದ ಅರಕೆರೆಗೆ ಬಂದು ನೆಲಸಿದ ನಂತರ ವ್ಯಾಸರಾಯಮಠದ ಗುರುಪೀಳಿಗೆ, [illegible]ಮಠದ ಗುರುಪೀಳಿಗೆ ಇವುಗಳನ್ನು ಭಾಮಿನೀಷಟ್ಪದಿಯಲ್ಲಿ ರಚಿಸಿದರು (೧೯೪೫). ಇವರು [illegible]ಗಳನ್ನು ಸಾಂಪ್ರದಾಯಿಕವಾಗಿ ಮಾಡಿದ್ದಾರೆ. ತತ್ವಚಿಂತನೆ ಹಾಗೂ ಆತ್ಮನಿವೇದನೆಯ ಗೀತೆಗಳು ಹೃದಯವನ್ನು [illegible]

ರಂಗೇಶವಿಠಲರು ಕೀರ್ತನೆಗಳನ್ನಲ್ಲದೆ 'ನಾಗರಾಜ' ಹಾಗೂ 'ಸುಮಿತ್ರಾ' ಎಂಬ ಎರಡು ಕಾದಂಬರಿಗಳನ್ನೂ ಬರೆದಿದ್ದಾರೆ. ನಾಗರಾಜ ಅಥವಾ ರಾಜಾರಾಮನಾಥ ಎಂಬುದು ಒಂದು ಐತಿಹಾಸಿಕ ಕಾದಂಬರಿ. 'ಸುಮಿತ್ರಾ' ಸಾಮಾಜಿಕ ಕಾದಂಬರಿಯಾಗಿದ್ದು ರೂಪ, ದನಿ, ಆಕಾರಗಳಲ್ಲಿ ಒಂದೇ ರೀತಿಯಾಗಿದ್ದ ಇಬ್ಬರು ಯುವತಿಯರ ಕಥೆಯಾಗಿದೆ. ರಂಗೇಶವಿಠಲರು ೧೯೫೪ರಲ್ಲಿ ನಿಧನ ಹೊಂದಿದರು.

(ಸಂ. ೨೭)

೭೦. ರಘುರಾಮವಿಠಲ (ಸುಬೋಧ ರಾಮರಾಯರು)

ಇವರ ತಂದೆ ಹನುಮಂತರಾಯರು. ತಾಯಿ ಭಾರತೀಬಾಯಿ. ಕ್ರಿ.ಶ.೧೮೯೦ರಲ್ಲಿ ರಾಮರಾಯರ ಜನನವಾಯಿತು. ರಾಮರಾಯರು ಚಿಕ್ಕ ವಯಸ್ಸಿನಲ್ಲೇ ತಾಯಿ ತಂದೆಯರನ್ನು ಕಳೆದುಕೊಂಡರು. ೧೯೦೯ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಹೊನ್ನಾಳಿಯಲ್ಲಿ ಸರಕಾರಿ ಕಚೇರಿಯೊಂದರಲ್ಲಿ ಗುಮಾಸ್ತೆಯಾಗಿ ಕೆಲಸ ಮಾಡಿದರು. ಹೊನ್ನಾಳಿಯಲ್ಲಿದ್ದಾಗಲೇ ಸಾಹಿತ್ಯ ಹಾಗೂ ಧಾರ್ಮಿಕ ಗ್ರಂಥಗಳ ಅಧ್ಯಯನ ಮಾಡಿದರು. ೧೯೧೧ರಲ್ಲಿ ಶ್ರೀರಾಮಪಟ್ಟಾಭಿಷೇಕ ಎಂಬ ಪದ್ಯಗ್ರಂಥವನ್ನು ಬರೆದರು. ಕೆಲ ಕಾಲಾನಂತರ ಸರಕಾರಿ ಕೆಲಸ ಬಿಟ್ಟು ೧೯೧೩ರಲ್ಲಿ ಬೆಂಗಳೂರಿಗೆ ಬಂದು ನೆಲೆಸಿದರು.

ರಾಮರಾಯರು ೧೯೧೫ರಲ್ಲಿ ಒಂದು ಮುದ್ರಣಾಲಯವನ್ನು ತೆರೆದು, ಸುಬೋಧ ಕುಸುಮಾಂಜಲಿ ಎಂಬ ಗ್ರಂಥಮಾಲೆಯನ್ನು ಆರಂಭಿಸಿದರು. ಇದರಲ್ಲಿ ಸುಮಾರು ೧೪೦ ವಿಭೂತಿಪುರುಷರ ಮತ್ತು ಸ್ತ್ರೀಯರ ಜೀವನಚರಿತ್ರೆಗಳನ್ನು ಬರೆದು ಪ್ರಕಟಿಸಿದರು. ಅಲ್ಲದೆ ಶ್ರೀಮನ್ಮಹಾಭಾರತದ ಕಥಾಸಾರ, ಶ್ರೀರಾಮಾಯಣ ಕಥಾ ಸಾರ, ಶ್ರೀಮದ್ಭಾಗವತ ಕಥಾಸಾರ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೧೯೧೮ರಲ್ಲಿ 'ಸುಬೋಧ' ಮಾಸಪತ್ರಿಕೆಯನ್ನೂ, ೧೯೩೩ರಲ್ಲಿ 'ನಗುವನಂದ' ಎಂಬ ಹಾಸ್ಯ ಪ್ರಧಾನವಾದ ಪತ್ರಿಕೆಯನ್ನೂ ಪ್ರಾರಂಭಿಸಿ ನಡೆಸಿಕೊಂಡು ಬಂದರು. ಎಲ್ಲಕ್ಕಿಂತ ಹೆಚ್ಚಾಗಿ 'ಹರಿದಾಸ ಕೀರ್ತನ ತರಂಗಿಣಿ' ಮಾಲಿಕೆಯಲ್ಲಿ ೯ ಸಂಪುಟಗಳು ಶುದ್ಧ ಪಾಠದ ಹರಿದಾಸ ಕೀರ್ತನ ಸಾಹಿತ್ಯಕ್ಕೆ ಇಂದಿಗೂ ಸಹ ಅಮೂಲ್ಯ ಆಕರ ಗ್ರಂಥಗಳಾಗಿವೆ. ೧೯೪೫ರಲ್ಲಿ ಮಾಧ್ವ ಯುವಕ ಸಂಘವನ್ನು ಸ್ಥಾಪಿಸಿದರು. ೧೯೪೮-೧೯೫೧ರವರೆಗೆ ಬೆಂಗಳೂರಿನ ಮುನಿಸಿಪಲ್ ಕೌನ್ಸಿಲರ್ ಆಗಿ ಸೇವೆ ಸಲ್ಲಿಸಿದರು. ಸುಬೋಧ ಪತ್ರಿಕೆಯಿಂದಾಗಿ ಅವರು ಸುಬೋಧ ರಾಮರಾವ್ ಎಂದೇ ಪ್ರಸಿದ್ಧರಾದರು.

'ರಘುರಾಮವಿಠಲ' ಎಂಬ ಇವರ ಅಂಕಿತದ ೧೫ ಹಾಡುಗಳು ದೊರಕಿವೆ. ಇವರಿಗೆ ಯಾರಿಂದ ಅಂಕಿತಪ್ರದಾನವಾಯಿತೆಂಬುದು ತಿಳಿದಿಲ್ಲ. ಶ್ರೀರಾಮನ ಅನನ್ಯ ಭಕ್ತರಾಗಿದ್ದರು. ಇವರ ಕೃತಿಗಳು ಸರಳವಾಗಿದ್ದು, ಇವರಿಗೆ ಪ್ರಿಯವಾದ ರಾಮಾಯಣಕ್ಕೆ ಸಂಬಂಧಿಸಿದುವಾಗಿವೆ. ಷೋಡಶೋಪಚಾರದ ಪೂಜೆಯ ಹಾಡೊಂದು ಸುಂದರವಾಗಿದೆ.

ಪಾವಂಜೆ ಗುರುರಾಯರು, ಗೊರಾಬಾಳ ಹನುಮಂತರಾಯರು ಮತ್ತು ಕಲಮದಾನಿ ನಾರಾಯಣರಾಯರ ಜೊತೆಗೆ ಕರ್ನಾಟಕ ಹರಿದಾಸ ಸಾಹಿತ್ಯದ ಸಂಗ್ರಹಣೆ, ಸಂಪಾದನೆ ಮತ್ತು ಪ್ರಕಟಣೆಗಳ ಆದ್ಯಪ್ರವರ್ತಕರಲ್ಲಿ ಸುಬೋಧ ರಾಮರಾಯರೂ ಒಬ್ಬರು. ರಾಮರಾಯರು ತಮ್ಮ ೮೦ನೇ ವಯಸ್ಸಿನಲ್ಲಿ ೧೯೭೦ರಂದು ನಿಧನರಾದರು.

(ಸಂ. ೧೬)

೭೧. ರಮಾಪತಿವಿಠಲರು

ಶ್ರೀದವಿಠಲರ ತಂಗಿಯ ಮಗನಾದ ನರೇಗಲ್ಲ ರಾಮಣ್ಣನೇ ರಮಾಪತಿವಿಠಲಾಂಕಿತರು. ಇವರು ಕೆಲವು ಕೀರ್ತನೆಗಳನ್ನು 'ವೆಂಕಟ' ಎಂಬ ಅಂಕಿತದಲ್ಲಿಯೂ ರಚಿಸಿದ್ದಾರೆ. ಮುಂದೆ ಕರ್ಜಗಿಯ ತೀರ್ಥಪಾದವಿಠಲರಿಂದ 'ರಮಾಪತಿವಿಠಲ' ಎಂಬ ಮುದ್ರಿಕೆಯು ದೊರೆಯಿತು. ಈ ಮುದ್ರಿಕೆಯಲ್ಲಿಯೂ ಹಾಡುಗಳ ರಚನೆಯಾಗಿದೆ. ಒಟ್ಟು ೯ ಹಾಡುಗಳು ಸಿಕ್ಕಿವೆ.

ತಾವೇ ಬರೆದಿಟ್ಟ ಹಸ್ತಪ್ರತಿಯಲ್ಲಿ 'ನರೇಗಲ್ಲ ರಾಮದಾಸ ನಾಮಕ ನರಕೀಟಕನ ಹಸ್ತಾಕ್ಷರ' ಎಂದು ಬರೆದು ಅದರ ಕಾಲವನ್ನು ಸೂಚಿಸಿದ್ದಾರೆ! ಬದುಕಿ ಇದ್ದ ಕಾಲ ೧೮೩೦-೧೯೦೦.

(ಸಂ. ೨೧-೨)

೭೨. ರಾಜಗೋಪಾಲ (ಕಡಕೋಳ ಭೀಮಾಚಾರ್ಯ)

ಭೀಮಾಚಾರ್ಯರು ಮೂಲತಃ ಧಾರವಾಡ ಜಿಲ್ಲೆಯ ಕಾರಡಗಿಯವರಾಗಿದ್ದು ಮುಂದೆ ಕಡಕೋಳದಲ್ಲಿ ನೆಲಸಿದರು. ರಾಜಗೋಪಾಲದಾಸರು ೧೯ನೆಯ ಶತಮಾನದ ಪೂರ್ವಾರ್ಧದಲ್ಲಿದ್ದರು.

ಇವರು ಆಶುಕವಿತ್ವಕ್ಕೆ ಪ್ರಸಿದ್ಧರಾಗಿದ್ದರು. ಒಮ್ಮೆ ಮೈಸೂರಿನ ಅರಸು ಕೃಷ್ಣರಾಜರನ್ನೂ ಭೇಟಿ ಮಾಡಿದ್ದರು. ಲಾವಣಿಯನ್ನೂ ಕೆಲವು ಕೀರ್ತನೆಗಳನ್ನೂ 'ಕೀಚಕವಧವು' ಎಂಬ ಕಿರು ಕಾವ್ಯವನ್ನೂ ರಚಿಸಿದ್ದಾರೆ.

(ಸಂ. ೨೧-೨)

೭೩. ಲಕ್ಷ್ಮೀನಾರಾಯಣ (ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ)

ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯನವರ ಜನನ ಕ್ರಿ.ಶ.೧೮೫೪ರಲ್ಲಿ; ಮೂಲ್ಕಿಯ ಸಮೀಪ ಅತ್ತೂರು ಎಂಬಲ್ಲಿ. ಸ್ಥಾನಿಕ ಬ್ರಾಹ್ಮಣ ವೆಂಕಟಕೃಷ್ಣಯ್ಯ ಇವರ ತಂದೆ. ಗೌಡಸಾರಸ್ವತ ಸಮಾಜದ ಕಾಶಿಮಠಸ್ಥ ಭುವನೇಂದ್ರತೀರ್ಥರ ಆಶ್ರಯದಲ್ಲಿ ಸಂಸ್ಕೃತ ಕಾವ್ಯಾದಿಗಳನ್ನು ಕಲಿತು ಹರಿದಾಸರಾದರು. ವಿಶೇಷವಾಗಿ ಹರಿಕಥೆಗಳನ್ನು ಹೇಳುತ್ತಾ, ಕ್ಷೇತ್ರದರ್ಶನ ಮಾಡುತ್ತಾ ಕೀರ್ತನೆಗಳನ್ನು ರಚಿಸತೊಡಗಿದರು. ಒಟ್ಟು ೨೩೭ ಹಾಡುಗಳು ದೊರೆತಿವೆ. ವಿಶೇಷವಾಗಿ ಕಾರ್ಕಳ ಕ್ಷೇತ್ರದಲ್ಲಿ ನಡೆಯುವ ವೆಂಕಟರಮಣನ ಉತ್ಸವಾದಿಗಳ ವಿಸ್ತಾರವಾದ ವರ್ಣನೆಗಳನ್ನು ಸಂವಾದ ರೂಪದಲ್ಲಿ ಮಾಡಿದ್ದಾರೆ. ಶಂಕರಾಚಾರ್ಯರ ಸ್ತುತಿ ಪದ್ಯವೂ ಇದೆ. ಪ್ರಾಮಾಣಿಕ ರೀತಿಯ ಅವರ ಆತ್ಮ ನಿವೇದನಾ ಪದ್ಯಗಳು ಮನಂಬುಗುವಂತಿವೆ; ೧೯೨೪ರಲ್ಲಿ ಮರಣ ಹೊಂದಿದರು.

(ಸಂ. ೨೩)

೭೪. ವರದೇಶವಿಠಲ (ಕುಪ್ಪಿ ಭೀಮರಾಯರು)

ಸ್ವಾಮಿರಾಯ ಎಂಬುದು ಇವರ ನಿಜನಾಮಧೇಯ. ಲಿಂಗಸುಗೂರಿನ ಬಳಿ ಸಂತೆಕೆಲೂರು ಎಂಬ ಗ್ರಾಮದಲ್ಲಿ ಕ್ರಿ.ಶ.೧೮೦೭ರಲ್ಲಿ ಜನಿಸಿದರು. ಕರಣಿಕವೃತ್ತಿಯ ಹನುಮಂತರಾಯರು ಮತ್ತು ಸೀತಮ್ಮ ತಂದೆತಾಯಿಯರು. ಆದರೆ ಇವರು ವಕೀಲಿವೃತ್ತಿಯನ್ನು ನಡೆಸುತ್ತಾ ಖ್ಯಾತರಾಗಿದ್ದರು. ವೃಂದಾವನಬಾಯಿ ಇವರ ಪತ್ನಿ. ಮಗುವನ್ನು ಕಳೆದುಕೊಂಡ ದುಃಖವನ್ನು ಮರೆಯಲು ಭಗವಂತನೆಡೆಗೆ ಮನಸ್ಸನ್ನು ತಿರುಗಿಸಿ ಪ್ರಾರಂಭಕ್ಕೆ 'ಕುಪ್ಪಿಭೀಮ' ಎಂಬ ಅಂಕಿತದಿಂದ ಕೃತಿ ರಚನೆಗೆ ತೊಡಗಿದರು. ಲಿಂಗಸೂಗೂರಿನ ವರದೇಂದ್ರರ ದಿವ್ಯ ಸಾನ್ನಿಧ್ಯದಿಂದ ತುಂಬಾ ಪ್ರಭಾವಿತರಾಗಿದ್ದರು. ಆರ್ಯ ಅಕ್ಷೋಭ್ಯತೀರ್ಥ ಮಠಾಧೀಶರಾದ ಶ್ರೀ ರಘುಕಾಂತತೀರ್ಥರು ಆಧ್ಯಾತ್ಮ ಗುರುಗಳು. ಅಂಕಿತ ಪ್ರದಾನವಾದದ್ದು ಗುರುಜಗನ್ನಾಥವಿಠಲರಿಂದ. ೩೯ ಹಾಡುಗಳು ಲಭ್ಯವಿವೆ. 'ಶ್ರೀವರದೇಂದ್ರಾಖ್ಯಾನ ಉತ್ಸವ ವರ್ಣನೆ' ಎಂಬ ೪೦೦ ನುಡಿಗಳ ದೀರ್ಘ ಕೀರ್ತನೆಯನ್ನು ರಚಿಸಿದ್ದಾರೆ. ಯತಿವರ್ಯರನ್ನು, ದಾಸವರ್ಯರನ್ನು ಕುರಿತು ಅನೇಕ ಕೀರ್ತನೆಗಳಿವೆ. ೧೯೧೮ರಲ್ಲಿ ಇಹಲೋಕ ವ್ಯಾಪಾರವನ್ನು ಮುಗಿಸಿದರು.

(ಸಂ. ೨೬)

೭೫. ವರಾಹತಿಮ್ಮಪ್ಪ (ನೆಕ್ಕಾರು ಕೃಷ್ಣದಾಸರು)

ಇವರ ನಿಜನಾಮಧೇಯ ನೆಕ್ಕಾರು ಕೃಷ್ಣದಾಸರೆಂದು. ಕ್ರಿ.ಶ.೧೭೫೯ರ ಕಾಲದಲ್ಲಿದ್ದವರೆಂದು ಹೇಳಬಹುದು. ಮೂಲತಃ ದಕ್ಷಿಣಕನ್ನಡ ಜಿಲ್ಲೆಯ ಉಡುಪಿಯ ಸಮೀಪದ ಗ್ರಾಮದವರು. ೭೦ ಕೀರ್ತನೆಗಳೂ, 'ಲಕ್ಷ್ಮೀಕಲ್ಯಾಣ' ಮತ್ತು 'ಶ್ರೀಕೃಷ್ಣಚರಿತ್ರೆ' ಎಂಬ ದೀರ್ಘಕಥಾನಕಗಳೂ ಲಭ್ಯವಿವೆ. ಹರಿಸಾರ್ವಭೌಮತ್ವ, ಸರ್ವಸಮರ್ಪಣಾಭಾವ, ಸಂಸಾರದ ನಶ್ವರತೆಯನ್ನು ಹೇಳುವ ಹಾಡುಗಳು ಅಧಿಕ ಸಂಖ್ಯೆಯಲ್ಲಿವೆ. ಇವರ ಆತ್ಮನಿವೇದನೆಯ ಹಾಡುಗಳು ಮನಮುಟ್ಟುವಂತಿವೆ. ಮಾರ್ಮಿಕವಾಗಿ ದಿನನಿತ್ಯದ ಕಷ್ಟಕೋಟಲೆಗಳನ್ನು ವರ್ಣಿಸುತ್ತವೆ. ತಿರುಪತಿಯ ಯಾತ್ರೆಯನ್ನು ಕುರಿತು ಸುದೀರ್ಘವಾದ ಹಾಡೊಂದನ್ನು ಬರೆದಿದ್ದಾರೆ. ಪ್ರಾಯಶಃ ಇದುವೆ ಕನ್ನಡದ ಪ್ರಥಮ ಕಾವ್ಯ ಎನ್ನಬಹುದು. ವಾದಿರಾಜರ ಲಕ್ಷ್ಮೀಶೋಭಾನೆ ಪ್ರಸಿದ್ಧವಾಗಿ ಇದ್ದುದಾದರೆ, ಇವರೂ 'ಲಕ್ಷ್ಮೀ ಕಲ್ಯಾಣ'ವೆಂಬ ಕಥನಕೃತಿಯನ್ನು ರಚಿಸಿದ್ದಾರೆ. ಕಥಾನಕ ಭಿನ್ನವಾದುದು. ತಿರುಪತಿ ತಿಮ್ಮಪ್ಪನನ್ನು ಕುರಿತ ಹಾಡುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಉಡುಪಿಯ ಶ್ರೀಕೃಷ್ಣನ ಪೂಜೆ, ಉತ್ಸವಗಳನ್ನು ವರ್ಣಿಸುವ 'ಶ್ರೀಕೃಷ್ಣಚರಿತ್ರೆ' ದೀರ್ಘಕೃತಿ. ಒಟ್ಟಿನ ರಚನೆಗಳು ಪ್ರೌಢತೆಗೆ ವಾಲಿದವುಗಳಾಗಿವೆ.

(ಸಂ. ೨೪)

೭೬. ವಿಜಯರಾಮಚಂದ್ರವಿಠಲ

ರಾಮಚಂದ್ರ ಇವರ ನಾಮಧೇಯ. ಜನ್ಮಸ್ಥಳ ತಮಿಳುನಾಡಿನ ರಾಮನಾಥಪುರವಾದರೂ ಮೂಲತಃ ಕನ್ನಡಿಗರು. ಕ್ರಿ.ಶ.೧೮೯೯ರಲ್ಲಿ ಜನನ. ವೆಂಕಟರಾಯರು ಮತ್ತು ಬಹಿಣಾಬಾಯಿ ತಂದೆ ತಾಯಿಗಳು. ಇಂಗ್ಲಿಷ್, ಸಂಸ್ಕೃತಗಳ ಪರಿಚಯವಿದ್ದಿತಲ್ಲದೇ ಮೆಟ್ರಿಕ್ ತೇರ್ಗಡೆಯಾಗಿ ಯಳಂದೂರು ಜಹಗೀರಿನಲ್ಲಿ ನೌಕರಿ ಮಾಡುತ್ತಿದ್ದರು. ಪತ್ನಿ ಮೀನಾಬಾಯಿ. ರಾಮಚಂದ್ರರು ಕುಂಭಕೋಣದ ವೆಂಕಟದಾಸರಿಂದ 'ವಿಜಯ ರಾಮಚಂದ್ರವಿಠಲ'ಎಂಬ ಅಂಕಿತ ಪಡೆದು ಕೃತಿರಚನೆಗೆ ತೊಡಗಿದರು. ಇಭರಾಮಪುರದ ಕೃಷ್ಣಾಚಾರ್ಯರಿಂದ ಪ್ರಭಾವಿತರಾಗಿದ್ದರು. ಒಟ್ಟು ೪೦ ಕೀರ್ತನೆಗಳು ದೊರೆತಿವೆ. ಲೋಕನೀತಿ, ವೈರಾಗ್ಯ ಬೋಧನೆಯ ಕೃತಿಗಳೇ ಹೆಚ್ಚು. ಅನೇಕ ಶಿಷ್ಯರಿಗೆ ಅಂಕಿತದಾನ ಮಾಡಿದ್ದಾರೆ. ಪಾಶ್ಚಾತ್ಯ ಪ್ರಭಾವದ ಆಧುನಿಕ ಕಾಲದಲ್ಲಿ ಭಕ್ತಿಪಂಥವನ್ನು ಸಂಘಟಿಸಿ ದಾಸಸಾಹಿತ್ಯವನ್ನು ಉತ್ತೇಜಿಸಿದ ಸಾಧನೆ ಇವರದು. ೧೮೭೨ರಲ್ಲಿ ವಿಧಿವಶರಾದರು.

(ಸಂ. ೨೭)

೭೭. ವಿಜಯವಿಠಲ (ವಿಜಯದಾಸರು)

ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಎರಡು ಕಾಲಘಟ್ಟಗಳಿಗೆ ಸೇತುವೆಯಂತಿರುವ ವಿಜಯದಾಸರ ಸ್ಥಾನ ತುಂಬಾ ವಿಶಿಷ್ಟವಾದುದು. ಮೊದಲ ಘಟ್ಟದ ದಾಸವರೇಣ್ಯರ ಪರಂಪರೆಯನ್ನು ಪುನರುಜ್ಜೀವನಗೊಳಿಸಿ ಮುಂದುವರೆಸಿದ ಕೀರ್ತಿ ಅವರದು. ರಾಯಚೂರು ಜಿಲ್ಲೆಯ ಚೀಕಲಪರವಿ ಎಂಬ ಗ್ರಾಮದಲ್ಲಿ ಕ್ರಿ.ಶ.೧೬೮೨ರಲ್ಲಿ ಜನಿಸಿದ ವಿಜಯದಾಸರ ನಾಮಧೇಯ ದಾಸಪ್ಪನೆಂದು. ಶ್ರೀನಿವಾಸಪ್ಪ ಮತ್ತು ಕೂಸಮ್ಮ ತಂದೆತಾಯಿಗಳು. ಬಡತನ, 'ಕೂಸೀ ಮಗ ದಾಸ'ನೆಂಬ ಅವಹೇಳನಗಳನ್ನು ಸಹಿಸುತ್ತಾ ಬೆಳೆದ ಬಾಲಕ ಸಾಂಪ್ರದಾಯಿಕ, ಧಾರ್ಮಿಕ ವಿದ್ಯಾಭ್ಯಾಸವನ್ನು ಪಡೆದರು. ಕಾಲಕ್ರಮೇಣ ಅರಳಮ್ಮನೆಂಬ ಕನ್ಯೆಯನ್ನು ವಿವಾಹವಾದರು. ಸಂಸಾರ ಸಂಕಷ್ಟ, ದಾರಿದ್ರ್ಯಗಳನ್ನು ಎದುರಿಸಲಾರದೇ ತೀರ್ಥಯಾತ್ರೆಗೆ ತೆರಳಿ ವಿರಾಗಿಗಳಾಗಿ ಅಲ್ಲಲ್ಲಿ ಅಲೆಯುತ್ತಾ ಒಮ್ಮೆ ಕಾಶಿಯಲ್ಲಿ ವಿಶ್ವನಾಥನ ಸನ್ನಿಧಿಯಲ್ಲಿದ್ದಾಗ ಸ್ವಪ್ನದಲ್ಲಿ ಪುರಂದರದಾಸರು ಅಂಕಿತವನ್ನಿತ್ತು ಅನುಗ್ರಹಿಸಿದರಂತೆ. ಅಲ್ಲಿಂದ ಮುಂದೆ ದಾಸರ ಹಾದಿ ನಿಚ್ಚಳವಾಯಿತು. ಪ್ರಪಂಚವೂ ಅವರನ್ನು ಗುರುತಿಸಿತು. ಸಾಧನೆಯ ಹಾದಿ ಸುಲಭವಾಯಿತು. ಅವರ ವಾಗ್‌ವೈಖರಿಗೆ ಜಗ ಮೆಚ್ಚಿತು. ಶಿಷ್ಯಪರಂಪರೆ ಬೆಳೆಯಿತು. ಇದೆಲ್ಲಾ ಸೌಭಾಗ್ಯದಿಂದ ವಿಚಲಿತರಾಗದ ವಿಜಯದಾಸರು ಹರಿನಾಮಸ್ಮರಣೆ, ಸಂಕೀರ್ತನೆಗಳನ್ನು ಮುಂದುವರೆಸಿದರು. ಭಜನೆ, ತೀರ್ಥಯಾತ್ರೆ, ಶ್ರೀಹರಿ ಸೇವೆಗಳಲ್ಲಿ ತಮ್ಮ ಜನ್ಮಸಾರ್ಥಕ್ಯವನ್ನು ಕಂಡುಕೊಂಡರು. ಈ ಅವಧಿಯಲ್ಲಿ ನೂರಾರು ಪವಾಡಗಳು ನಡೆದವೆಂದು ಐತಿಹ್ಯವಿದೆ. ಅನೇಕ ಶಿಷ್ಯರಿಗೆ ಅಂಕಿತವಿತ್ತು ಉದ್ಧರಿಸಿದರು. ಮೋಹನದಾಸರು, ಗೋಪಾಲದಾಸರು, ಜಗನ್ನಾಥದಾಸರು ಮತ್ತು ಪಂಗನಾಮ ತಿಮ್ಮಣ್ಣದಾಸರು ಇವರ ಶಿಷ್ಯರಲ್ಲಿ ಪ್ರಮುಖರು. ಕೀರ್ತನೆ, ಉಗಾಭೋಗ, ಸುಳಾದಿ ಹೀಗೆ ದಾಸಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು ೨೦೦೦ ಪದ್ಯಗಳು ವಿಜಯದಾಸರಿಂದ ರಚಿತವಾಗಿ ಲಭ್ಯವಾಗಿವೆ. ಕೀರ್ತನ ಸಂಖ್ಯೆಯಲ್ಲಿ ಇವರದೇ ಮೇಲುಗೈ. ತೀರ್ಥಕ್ಷೇತ್ರಗಳ ಬಗ್ಗೆ ಬರೆಯುವಾಗ ಅನೇಕ ಐತಿಹಾಸಿಕ ವಿಷಯಗಳ ಉಲ್ಲೇಖ ಕಂಡುಬರುವುದು ವಿಶೇಷ. ದೇವತಾಸ್ತುತಿ, ಯತಿವರೇಣ್ಯರ ಸ್ತುತಿ ಪದ್ಯಗಳಲ್ಲದೇ ಆತ್ಮನಿವೇದನೆಯ ಕೀರ್ತನೆಗಳು. ನಿಂದಾಸ್ತುತಿ ಪದ್ಯಗಳು, ಕೃಷ್ಣನ ಬಾಲಲೀಲಾ ವರ್ಣನೆಯ ಕೀರ್ತನೆಗಳು ವಿಶೇಷವಾಗಿ ಮನಸೆಳೆಯುತ್ತವೆ. ಶಾಸ್ತ್ರಜ್ಞಾನ, ಲೋಕಾನುಭವ, ಸಾಹಿತ್ಯಿಕ ಗುಣ, ಸಂಗೀತಮಾಧುರ್ಯ ಇವುಗಳ ಹದವಾದ ಮಿಲನದಿಂದುಂಟಾದ ಕೀರ್ತನೆಗಳು ವಿಜಯದಾಸರ ಕೃತಿಗಳ ವೈಶಿಷ್ಟ್ಯ ಎನ್ನಬಹುದು. ಅನ್ಯ ಜಾತಿಯವರೂ ಇವರ ಶಿಷ್ಯ ಸಂಪದದಲ್ಲಿ ಇದ್ದರು. ತಮ್ಮ ಅಂತ್ಯಕಾಲದಲ್ಲಿ ಗುಂತಕಲ್ ಬಳಿ ಚಿಪ್ಪಗಿರಿಯಲ್ಲಿ ನೆಲಸಿ ಕ್ರಿ.ಶ.೧೭೫೫ರಲ್ಲಿ ದೈವಾಧೀನರಾದರು.

(ಸಂ. ೧೨-೧೦)

೭೮. ವೆಂಕಟವಿಠಲ

ಇವರು ಪ್ರಾಣೇಶದಾಸರ ಪರಂಪರೆಯವರು. ನಿಜ ಹೆಸರು ತಿಳಿಯದು. ವಾಸವಾಗಿದ್ದುದು ತಮಿಳುನಾಡಿನ ಮಾನಾಮದುರೆಯಲ್ಲಿ. ದೊರೆತ ಹತ್ತು ಕೀರ್ತನೆಗಳು ಮಾಧ್ವಯತಿಗಳು ಹಾಗೂ ಪುರಂದರ, ವಿಜಯದಾಸರ ಸ್ತುತಿಪರವಾಗಿವೆ.

(ಸಂ. ೧೬)

೭೯. ವೇಣುಗೋಪಾಲವಿಠಲ (ಪಂಗನಾಮದ ತಿಮ್ಮಣ್ಣ)

ತಿಮ್ಮಣ್ಣ ಕ್ರಿ.ಶ.೧೭೩೨ರಲ್ಲಿ ಆದವಾನಿಯಲ್ಲಿ ಜನಿಸಿದರು. ಆದವಾನಿಯ ನವಾಬನ ಆಸ್ಥಾನದಲ್ಲಿ ದಿವಾನರಾಗಿದ್ದ ರುಕ್ಮಣ್ಣನವರ ಪುತ್ರರು. ವಿಜಯದಾಸರು ಬಾಲ್ಯದಲ್ಲಿಯೇ ಅನುಗ್ರಹಿಸಿ ಪಂಗನಾಮದ ತಿಮ್ಮಣ್ಣ ಎಂದು ಕರೆದರು. ಮುಂದೆ 'ವೇಣುಗೋಪಾಲವಿಠಲ' ಎಂಬ ಅಂಕಿತವನ್ನು ಇತ್ತರು. ತಂದೆಯ ಅನಂತರ ಇವರು ಸಹ ಆದವಾನಿಯ ಬಸಾಲತ್‌ಜಂಗನ ದಿವಾನರಾಗಿ ತುಂಬಾ ದಕ್ಷರಾದ ಅಧಿಕಾರಿಗಳೆಂದು ಹೆಸರು ಪಡೆದಿದ್ದರು. ಆಧ್ಯಾತ್ಮದತ್ತ ವಿಶೇಷವಾದ ಒಲವಿತ್ತು. ಆದರೂ ವಿಜಯದಾಸರ ಆಜ್ಞೆಯಂತೆ ಲೌಕಿಕ ಕರ್ತವ್ಯಗಳ ನಿರ್ವಹಣೆಗೆ ಸಹ ತಮ್ಮನ್ನು ತೊಡಗಿಸಿ ಕೊಂಡಿದ್ದರು. ಇದ್ದ ಮಗ ಮುಸ್ಲಿಮನಾಗಿ ಮತಾಂತರ ಹೊಂದಿ ಆದವಾನಿಯ ನವಾಬನಾದ ಮೇಲೆ ಇವರ ವೈರಾಗ್ಯ ಇನ್ನಷ್ಟು ಹೆಚ್ಚಿ ಲೌಕಿಕದಿಂದ ದೂರವಾಗಿ ಮಲಗವೇರಿ ಎಂಬ ಸ್ಥಳದಲ್ಲಿ ನಿರ್ಜಲ ನಿರಾಹಾರಗಳಿಂದ ಪ್ರಾಣತ್ಯಾಗ ಮಾಡಿದರಂತೆ. ಒಟ್ಟು ೨೬ ಹಾಡುಗಳು ಲಭ್ಯವಾಗಿವೆ. ಶ್ರೀ ವಿಜಯದಾಸರನ್ನು ವಿಶೇಷವಾಗಿ ಸ್ಮರಿಸಿದ್ದಾರೆ. ಸುಳಾದಿಗಳನ್ನು ಹೆಚ್ಚಾಗಿ ರಚಿಸಿದ್ದಾರೆ.

(ಸಂ. ೧೩)

೮೦. ವ್ಯಾಸವಿಠಲ (ಕಲ್ಲೂರು ಸುಬ್ಬಣ್ಣಾಚಾರ್ಯರು)

ಕ್ರಿ.ಶ.೧೮೯೦ರಲ್ಲಿ ಜನನ – ರಾಯಚೂರು ಜಿಲ್ಲೆಯ ಮಾನ್ವಿಯ ಬಳಿ ಕಲ್ಲೂರು ಎಂಬ ಹಳ್ಳಿಯಲ್ಲಿ. ಈ ಸ್ಥಳ ಲಕ್ಷ್ಮೀದೇವಿಯ ಆವಾಸಸ್ಥಾನವೆಂದು ಪ್ರಸಿದ್ಧಿ. ಸುಬ್ಬಣ್ಣಾಚಾರ್ಯರು ಸುಧಾಪಂಡಿತರೆಂದು ಪ್ರಸಿದ್ಧರಾಗಿದ್ದರು. ಸಂಸ್ಕೃತ ವಿದ್ವಾಂಸರಾಗಿದ್ದರಿಂದ ದಾಸಪರಂಪರೆಯ ಬಗ್ಗೆ ಅಂತಹ ಅಭಿಮಾನವಿರಲಿಲ್ಲ. ಆದರೆ ವಿಜಯದಾಸರ ಪ್ರಭಾವದಿಂದ ಭಕ್ತಿಪರಂಪರೆಯ ಬಗೆಗಿದ್ದ ಉದಾಸೀನತೆ ಕಡಿಮೆಯಾಗಿ ತಾವೇ ಅಂಕಿತ ಸ್ವೀಕರಿಸಿ 'ವ್ಯಾಸವಿಠಲ'ರಾಗಿ ಅನೇಕ ಹಾಡುಗಳನ್ನು ರಚಿಸಲಾರಂಭಿಸಿದರು. ಗುರುಗಳ ನೆನಪಿಗಾಗಿ ವಿಜಯಕವಚವೆಂಬ ಸ್ತೋತ್ರವನ್ನು ಹಾಡಿದ್ದಾರೆ. ಕಲ್ಲೂರಿನ ಲಕ್ಷ್ಮೀದೇವಿಯ ಮೇಲೆ ವಿಶೇಷವಾಗಿ ಕೃತಿರಚನೆ ಮಾಡಿದ್ದಾರೆ. ರಘುಪತಿವಿಠಲರು, ಶ್ರೀನಿವಾಸವಿಠಲರು, ಗುರುವ್ಯಾಸವಿಠಲರು, ವರದವ್ಯಾಸವಿಠಲರು ಇವರ ಪ್ರಮುಖ ಶಿಷ್ಯರು.

(ಸಂ. ೧೩)

೮೧. ಶಾಮಸುಂದರವಿಠಲ (ಕುರಡಿ ಗುಂಡಾಚಾರ್ಯರು)

ಇವರ ನಿಜವಾದ ಹೆಸರು ಗುಂಡಾಚಾರ್ಯ ಎಂಬುದು. ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ 'ಕುರಡಿ' ಗ್ರಾಮದ ಶ್ಯಾಮಾಚಾರ್ಯ ಮತ್ತು ಕೊಪ್ರಮ್ಮ ಇವರ ತಾಯಿ-ತಂದೆಯರು. ಇವರು ಕ್ರಿ.ಶ.೧೮೯೬ನೇ ಇಸವಿಯಲ್ಲಿ ಜನಿಸಿದರು. ಗುಂಡಾಚಾರ್ಯರ ತಾಯಿಯ ತಂಗಿ ರಿಂದಮ್ಮ ಮತ್ತು ಅವರ ಪತಿ ಗುರುಭೀಮಾಚಾರ್ಯರ ಆಶ್ರಯದಲ್ಲಿದ್ದು ಸಂಸ್ಕೃತ ಮತ್ತು ವೈದಿಕ ವಿದ್ಯೆಯನ್ನು ಕಲಿತರು. ಕನ್ನಡ ಮತ್ತು ಉರ್ದುವನ್ನು ಚೆನ್ನಾಗಿ ಕಲಿತು ಒಂದು ವರ್ಷ ಶಿರವಾರದಲ್ಲಿ ಮಾಸ್ತರರಾಗಿದ್ದರು. ಇವರಿಗೆ ಇಬ್ಬರು ಮಡದಿಯರು. ಸೀತಕ್ಕ ಮತ್ತು ಹನುಮಕ್ಕ.

ಇವರಿಗೆ ಬಾಲ್ಯದಿಂದಲೇ ಕಾವ್ಯರಚನಾ ಪ್ರತಿಭೆಯಿತ್ತು; ಆಶುಕವಿಗಳೂ ಆಗಿದ್ದರು. ಸಂಪ್ರದಾಯದ ಹಾಡುಗಳನ್ನು ಹೆಚ್ಚಾಗಿ ರಚಿಸಿದ್ದಾರೆ.

ಗುಂಡಾಚಾರ್ಯರು 'ಬಯಲಾಟ'ದ ರಚನೆಯೊಂದಿಗೆ ಅದರಲ್ಲಿ ಅಭಿನಯಿಸುತ್ತಲೂ ಇದ್ದರು. ತಾವೇ ಒಂದು ತಂಡವನ್ನೂ ಕಟ್ಟಿದರು. ಶ್ರೀರಾಮಪಾದುಕಾಪಟ್ಟಾಭಿಷೇಕ, ಏಕಾದಶೀ ವ್ರತಮಹಾತ್ಮೆ ಮತ್ತು ಲಂಕಾದಹನ ಎಂಬ ಮೂರು ಬಯಲಾಟಗಳನ್ನು ರಚಿಸಿದ್ದಾರೆ.

ಗುಂಡಾಚಾರ್ಯರ ೨೫೫ ಕೃತಿಗಳು ದೊರಕಿವೆ. ಇವರಿಗೆ ಯಾರಿಂದ ಅಂಕಿತಪ್ರದಾನವಾಯಿತೆಂದು ತಿಳಿದುಬರುವುದಿಲ್ಲ. ಮಧ್ವಸಿದ್ಧಾಂತದಲ್ಲಿ ಅದರಲ್ಲೂ ವಿಶೇಷವಾಗಿ ಹರಿಕಥಾಮೃತಸಾರದ ವ್ಯಾಖ್ಯಾನದಲ್ಲಿ ಅದ್ವಿತೀಯರಾಗಿದ್ದರು.

ಇವರ ಸ್ತೋತ್ರ ಪದಗಳು ತಾರತಮ್ಯೋಕ್ತವಾಗಿವೆ. ಅಲ್ಲದೆ ಆತ್ಮನಿವೇದನೆ, ಸಾಮಾಜಿಕ ನೀತಿ ನಿಂದನೆ, ಬದುಕಿನ ವಿಡಂಬನೆ ಅಲ್ಲದೆ ನಿಜಾಂ ಸರ್ಕಾರದ ದಮನನೀತಿಯ ಆಡಳಿತದಲ್ಲಿ ಜನರ ಕಷ್ಟ ಕಾರ್ಪಣ್ಯ, ಬಡತನದ ಬವಣೆ, ಭೀಕರ ಬರ, ರಜಾಕಾರರ ಹಾವಳಿ ಹಾಗೂ ಸಾಹಿತ್ಯ, ಸಂಸ್ಕೃತಿಗಳ ದುಸ್ಥಿತಿಗಳನ್ನು ಅನುಭವಿಸಿದ ಪ್ರಖರತೆ ಹಾಡುಗಳಲ್ಲಿ ವ್ಯಕ್ತವಾಗಿದೆ. ಇವರು ಇಸ್ಪೀಟ್ ಆಟದ ಮೇಲೆಯೇ ಒಂದು ಹಾಡನ್ನು ರಚಿಸಿದ್ದಾರೆ.

ಸಮಕಾಲೀನ ಹರಿದಾಸರ ಮತ್ತು ಮಂತ್ರಾಲಯದ ಯತಿಗಳ ಚರಿತ್ರೆಯನ್ನು ಹೇಳುವ ಇಲ್ಲಿಯ ಹಾಡುಗಳು ದಾಸಸಾಹಿತ್ಯ ಚರಿತ್ರೆಯಲ್ಲಿ ಒಂದು ಪುಟ್ಟ ವಿಶ್ವಕೋಶದಂತಿದೆ. ಶ್ರೀ ಹರಿವೃಂದ ಸ್ತೋತ್ರ, ದಾಸವೃಂದ, ಮತ್ತು ಸುಳಾದಿಗಳಲ್ಲಿ ೨೦ನೆಯ ಶತಮಾನದ ದಾಸಯತಿಗಳ ಚರಿತ್ರೆಯಿದೆ. ಶ್ರೀಸತ್ಯಪ್ರಮೋದತೀರ್ಥರು, ಶ್ರೀ ವಿದ್ಯಾಮಾನ್ಯತೀರ್ಥರ ಸ್ತೋತ್ರಗಳಿವೆ ಅಲ್ಲದೆ ಬಲ್ಲಟಿಕೆಯ ವೀರಶೈವ ಗುರುಪರಂಪರೆಯ ಜಡೆಸಿದ್ಧ ಶಿವಯೋಗಿಗಳ ಮಹಿಮೆಯನ್ನು ಗುಂಡಾಚಾರ್ಯರು 'ಶ್ರೀ ಜಡೆಮುನೀಂದ್ರ' ಎಂಬ ಹಾಡಿನಲ್ಲಿ ವರ್ಣಿಸಿದ್ದಾರೆ.

ಗುಂಡಾಚಾರ್ಯರು ಆಚಾರಕ್ಕಿಂತ ವಿಚಾರಕ್ಕೆ ಮಹತ್ವ ಕೊಟ್ಟವರು. ಬಂಡಾಯ ಮನೋಧರ್ಮದವರು. ಇವರ ಹಾಡುಗಳು ಮೌಲಿಕವಾಗಿವೆ. ವೈಶಿಷ್ಟ್ಯಪೂರ್ಣವಾಗಿವೆ. ಇಂಥ ಮಹಾನುಭಾವರು ೧೯೫೬ನೇ ಇಸವಿಯಲ್ಲಿ ಹರಿಪಾದ ಸೇರಿದರು.

(ಸಂ. ೩೦)

೮೨. ಶ್ರೀಕಾಂತ/ಲಕ್ಷ್ಮೀಕಾಂತ (ದಾಸರ ಲಕ್ಷ್ಮೀನಾರಾಯಣರಾಯರು)

ದಾಸರ ಲಕ್ಷ್ಮೀನಾರಾಯಣರಾಯರು ಜನಿಸಿದ್ದು ಕ್ರಿ.ಶ.೧೮೮೦ರಲ್ಲಿ. ದೊಡ್ಡಬಳ್ಳಾಪುರ ಜನ್ಮಸ್ಥಳ. ಬಾಲಕೃಷ್ಣ ರಾಯರು, ಭಾಗೀರಥಮ್ಮ ತಂದೆತಾಯಿಗಳು. ಇವರ ತಂದೆ ಮುದ್ದುಮೋಹನವಿಠಲ ಪರಂಪರೆಗೆ ಸೇರಿದ ಹರಿದಾಸರು. ಮೆಟ್ರಿಕ್ಯುಲೇಶನ್‌ವರೆಗೆ ಕಲಿತು ಸರಕಾರಿ ನೌಕರರಾಗಿದ್ದರೂ ಕ್ರಮೇಣ ತಮ್ಮ ವಂಶಸ್ಥರು ಬರೆದಿಟ್ಟಿದ್ದ ಹರಿದಾಸ ಕೀರ್ತನೆಗಳ ಸಂಗ್ರಹ, ಪ್ರಕಟಣೆಗಳ ಕಡೆಗೆ ಮನಗೊಟ್ಟು ಹರಿದಾಸ ಸಾಹಿತ್ಯ ಪ್ರವರ್ತಕರೆಂದು ಪ್ರಸಿದ್ಧರಾದರು. 'ಶ್ರೀಕಾಂತ' ಇವರ ಸ್ವಪ್ನಾಂಕಿತ. ಪ್ರಖ್ಯಾತ ಈಜುಗಾರರು. ಸಮಾಜ ಸೇವಕರು. ಹರಿಕಥಾಪ್ರಸಂಗಗಳನ್ನು ಮಾಡುವುದರಲ್ಲಿ ತುಂಬಾ ಪ್ರಸಿದ್ಧರು. ದೇಶಭಕ್ತಿ, ಸ್ವದೇಶೀ ಚಳುವಳಿ ಇತ್ಯಾದಿ ಸಮಕಾಲೀನ ವಸ್ತುಗಳನ್ನು ಸಹ ಹರಿಕಥೆಗೆ ಬಳಸಿಕೊಳ್ಳುತ್ತಿದ್ದರಂತೆ. ರಾಷ್ಟ್ರಪ್ರೇಮವನ್ನು ಬಿಂಬಿಸುವ 'ಪಂಚವಿಂಶತಿ' ರಾಷ್ಟ್ರೀಯ ಗೀತೆಗಳನ್ನು ರಚಿಸಿದ್ದರು. ಶ್ರೀಕಾಂತ ಅಥವಾ ಲಕ್ಷ್ಮೀಕಾಂತ ಎಂಬ ಅಂಕಿತದಲ್ಲಿ ಸುಮಾರು ನೂರು ಕೀರ್ತನೆಗಳು ಲಭ್ಯವಿವೆ. ಹಿಂದಿನ ಹರಿದಾಸ ಸಾಹಿತ್ಯದ ಪ್ರಭಾವದ ನೆರಳಿನಲ್ಲಿಯೇ ಅನೇಕ ಕೃತಿಗಳ ರಚನೆಯಾಗಿದೆ. ಪುರಂದರದಾಸರ ಕಥೆಯನ್ನು ೨೧ ನುಡಿಗಳಲ್ಲಿ ಹೇಳಿದ್ದಾರೆ. 'ಮಾಧವಗೀತ' ನೀತಿಬೋಧೆಗೆ ಮೀಸಲಾದ ಬಿಡಿ ಮುಕ್ತಕಗಳ ಮಾಲೆ. ೧೯೪೦ರಲ್ಲಿ ವಿಧಿವಶರಾದರು.

(ಸಂ. ೨೭)

೮೩. ಶ್ರೀಗುರು ಇಂದಿರೇಶ (ಹರಪನಹಳ್ಳಿ ವೆಂಕಟಾಚಾರ್ಯರು)

ಹರಪನಹಳ್ಳಿಯ ಮಧ್ವಾಚಾರ್ಯರ ಮಗ ವೆಂಕಟಾಚಾರ್ಯ. ಇವರು 'ಶ್ರೀಗುರು ಇಂದಿರೇಶ' ಎಂಬ ಅಂಕಿತದಲ್ಲಿ 'ಗುರುಕಥಾಮೃತ' ಎಂಬ ಮೂರು ಸಂಧಿಗಳನ್ನೊಳಗೊಂಡ ಕೃತಿಯನ್ನು ರಚಿಸಿದ್ದಾರೆ. ಹೆಚ್ಚಿನ ವಿವರಗಳು ತಿಳಿದು ಬಂದಿಲ್ಲ.

(ಸಂ. ೨೧-೨)

೮೪. ಶ್ರೀದವಿಠಲ (ಕರ್ಜಗಿ ದಾಸಪ್ಪನವರು)

ಹಾವೇರಿ ಜಿಲ್ಲೆಯ ಕರ್ಜಗಿ ಗ್ರಾಮವು ವರದಾನದಿಯ ದಂಡೆಯಲ್ಲಿದೆ. ಅಲ್ಲಿ ಕ್ರಿ.ಶ. ಸು.೧೭೪೦ರಲ್ಲಿ ಜನಿಸಿದವರು ದಾಸಪ್ಪನವರು. ಕರಣಿಕ ಮನೆತನಕ್ಕೆ ಸೇರಿದ ಅವರು ತುಂಬಾ ಲೌಕಿಕದಲ್ಲಿ ಮುಳುಗಿದ್ದರು. ಶ್ರೀ ಜಗನ್ನಾಥರು ಒಮ್ಮೆ ಕರ್ಜಗಿಗೆ ಬಂದಾಗ ಜೀವನ ದೆಸೆಯೇ ಬದಲಾಯಿತು. ಅವರಿಂದ 'ಶ್ರೀದವಿಠಲ' ಎಂಬ ಅಂಕಿತವನ್ನು ಪಡೆದು ಕೃತಿರಚನೆ ಮಾಡಿದರು. ಅಷ್ಟೇ ಅಲ್ಲದೆ ಜಗನ್ನಾಥದಾಸರ ಮೇರು ಕಾವ್ಯವಾದ 'ಹರಿಕಥಾಮೃತಸಾರ'ಕ್ಕೆ ಫಲಸ್ತುತಿಯನ್ನು ರಚಿಸಿದ್ದಾರೆ. ಇದೂ ಭಾಮಿನೀ ಷಟ್ಪದಿಯಲ್ಲಿದ್ದು, ೨೪ ಪದ್ಯಗಳನ್ನೊಳಗೊಂಡಿದೆ. ಆ ಭಾಗದ ಕರ್ನಾಟಕದಲ್ಲಿ ದಾಸಪ್ರಭಾವ ಹರಡುವುದಕ್ಕೆ ಕಾರಣರಾದರು. ಈ ಹರಿದಾಸರ ೬೩ ಹಾಡುಗಳು ಉಪಲಬ್ಧವಿದೆ.

(ಸಂ. ೨೧-೧)

೮೫. ಶ್ರೀನಿಧಿವಿಠಲ (ದೀಪದ ಅಣ್ಣಯ್ಯ)

ದೀಪದ ಅಣ್ಣಯ್ಯಾಚಾರ್ಯರು ಧಾರವಾಡದಲ್ಲಿದ್ದವರು. ತಿರುಪತಿಯಲ್ಲಿ ದೀಪಾರಾಧನ ಕಾರ್ಯವನ್ನು ನಡೆಸುತ್ತಿದ್ದುದರಿಂದ ಇವರ ಹೆಸರಿನ ಹಿಂದೆ 'ದೀಪದ' ಸೇರಿಕೊಂಡಿತು. ಇವರಿಗೆ ಹರಪನಹಳ್ಳಿಯ ವೆಂಕಟದಾಸರು

ದಾಸದೀಕ್ಷೆಯನ್ನು ಕೊಟ್ಟು, 'ಶ್ರೀನಿಧಿವಿಠಲ' ಎಂಬ ಅಂಕಿತವನ್ನು ನೀಡಿದರು. ಇವರು ಕೀರ್ತನೆ, ಪ್ರವಚನಗಳನ್ನು ಮಾಡುತ್ತಿದ್ದರು. ಹಲವರಿಗೆ ದಾಸದೀಕ್ಷೆಯನ್ನು ನೀಡಿದ್ದಾರೆ. ಇವರ ಕೆಲವೇ ಕೀರ್ತನೆಗಳು ಲಭ್ಯವಾಗಿವೆ.

(ಸಂ. ೨೧-೧)

೮೬. ಶ್ರೀರಾಮ (ಬಡೇಸಾಬ ರಾಮದಾಸರು)

ಮುಸ್ಲಿಮರಾಗಿ ಹುಟ್ಟಿ ತಮ್ಮ ಶ್ರದ್ಧೆ, ಸಾಧನೆಗಳಿಂದ ಹರಿದಾಸರಾಗಿ ಸಾರ್ಥಕ ಬದುಕನ್ನು ಬಾಳಿದವರು ರಾಮದಾಸರು. ಇವರ ನಿಜನಾಮ ಬಡೇಸಾಬರೆಂದು. ರಾಯಚೂರು ಜಿಲ್ಲೆಯ ಜೋಳದಹೆಡಗಿ ಎಂಬ ಗ್ರಾಮದಲ್ಲಿ ಮುಸಲ್ಮಾನ ಧರ್ಮಕ್ಕೆ ಸೇರಿದ ಪಿಂಜಾರ ಮನೆತನದಲ್ಲಿ ಕ್ರಿ.ಶ.೧೮೮೨ರಲ್ಲಿ ಇವರ ಜನನ. ತಂದೆ ಖಾಜಾಸಾಹೇಬ ತಾಯಿ ಪೀರಮ್ಮ. ಬಡತನದ ಬದುಕು. ಖಾಸಗಿ ಶಾಲೆಯಲ್ಲಿ ಅಧ್ಯಾಪಕ ವೃತ್ತಿ. ಹುಸೇನಮ್ಮ ಇವರ ಮೊದಲ ಪತ್ನಿ. ಅಲ್ಲಮ್ಮ ಎರಡನೇ ಪತ್ನಿ. ಲಿಂಗಸುಗೂರಿನ ಬಳಿ ಗೋನವಾರ ಎಂಬಲ್ಲಿ ಶಾಲೆ ನಡೆಸುತ್ತಾ ವೈದಿಕ ಧರ್ಮದ ಆಚರಣೆಯತ್ತ ಆಕರ್ಷಿತರಾದರು. ಗೋನವಾರದ ವೈದಿಕ ಗೆಳೆಯರ ಸಹಚರ್ಯದಿಂದ ಸಂಗೀತ, ಭಜನೆ, ಕೀರ್ತನೆ, ಪುರಾಣ ಪ್ರವಚನ, ಸಂಸ್ಕೃತ ವಿದ್ಯಾಭ್ಯಾಸಗಳತ್ತ ಆಸಕ್ತರಾಗಿ ಹಂಪಿಯಲ್ಲಿ ಸಾಧುಸಂತರ ಸೇವೆಯಲ್ಲಿ ತೊಡಗಿದರು. 'ಶ್ರೀರಾಮ' ಎಂಬ ಅಂಕಿತವನ್ನು ಹೊಂದಿ ಕೀರ್ತನೆಗಳನ್ನು ರಚಿಸಲಾರಂಭಿಸಿದರು. ದಾಸಕೂಟದ ಪರಂಪರೆಯಂತೆ ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ತತ್ತ್ವಚಿಂತನೆಗಳು ಇವರ ಕೀರ್ತನೆಯಲ್ಲಿ ಪ್ರಮುಖವಾಗಿವೆ, ಅಲ್ಲಲ್ಲಿ ತಮ್ಮ ಮಾರ್ಗವನ್ನು ಪ್ರಶ್ನಿಸುವ ಜನರಿಗೆ ಉತ್ತರಿಸುತ್ತಾ ರಾಮ ರಹೀಮರಲ್ಲಿ, ಯಾವ ವ್ಯತ್ಯಾಸವೂ ಇಲ್ಲ ಎಂದೂ ಜಾತಿಕುಲ ಧರ್ಮಗಳನ್ನು ಮೀರಿದ ಮಾನವತೆಯೊಂದೇ ಸತ್ಯವೆಂಬ ತತ್ತ್ವವನ್ನು ಪ್ರತಿಪಾದಿಸಿದ್ದಾರೆ. ಸಮಾಜದಲ್ಲಿನ ಗೊಡ್ಡು ಸಂಪ್ರದಾಯ, ಜಾತೀಯ ಪದ್ಧತಿ, ಇವುಗಳನ್ನು ಖಂಡಿಸಿದ್ದಾರೆ. ರಾಮದಾಸರ ಒಟ್ಟು ೭೭೭ ಕೃತಿಗಳು ಲಭ್ಯವಾಗಿವೆ. ಶತಾಷ್ಟಕಗಳೆಂಬ ನೂರೆಂಟು ಸಾಲಿನ ಸ್ತುತಿ ಪದ್ಯಗಳನ್ನೂ ಬರೆದಿದ್ದಾರೆ. ಬರಗಾಲದ ಬವಣೆಯನ್ನು ಕುರಿತು, ಶರಣ ಬಸವಣ್ಣನವರನ್ನು ಕುರಿತು ಬರೆದ ಪದ್ಯಗಳು ಗಮನಾರ್ಹ. ತಮ್ಮ ಬದುಕಿನ ಕೊನೆಯ ದಿನಗಳನ್ನು ದೇವದುರ್ಗ ತಾಲ್ಲೂಕಿನ ಲಿಂಗದಹಳ್ಳಿಯಲ್ಲಿ ಕಳೆದು ಅಲ್ಲಿಯೇ ೧೯೪೦ರಲ್ಲಿ ದೈವಾಧೀನರಾದರು. ಮತೀಯ ಸಾಮರಸ್ಯಕ್ಕೆ ನೀಡಿದ ಕೊಡುಗೆಯಿಂದ ರಾಮದಾಸರು ಸ್ಮರಣೀಯರು.

(ಸಂ. ೩೨)

೮೭. ಶ್ರೀವರವಿಠಲ (ಸವದಿ ರಾಮಚಂದ್ರಪ್ಪ)

ಇವರು ಬೆಳಗಾವಿ ಜಿಲ್ಲೆಯ ಸವದಿ ಗ್ರಾಮದವರು. ಧಾರವಾಡದಲ್ಲಿ ನೆಲಸಿದಾಗ ದೀಪದ ಅಣ್ಣಯ್ಯಾಚಾರ್ಯರ ಪರಿಚಯವಾಗಿ, ದಾಸದೀಕ್ಷೆ ಪಡೆದರು ಶ್ರೀವರವಿಠಲ ಎಂಬ ಅಂಕಿತದೊಂದಿಗೆ. ಆದರೇನು ಒಂದೇ ಒಂದು ಕೀರ್ತನೆ ದೊರೆತಿದೆ.

ದೊಡ್ಡಬಳ್ಳಾಪುರದ ರಾಘಣ್ಣ ಎಂಬವರಿಗೆ ದಾಸದೀಕ್ಷೆ ನೀಡಿ ಮುದ್ದುಮೋಹನವಿಠಲ ಎಂಬ ಮುದ್ರಿಕೆಯನ್ನು ಕೊಟ್ಟರು. ಶ್ರೀವರವಿಠಲರು ೧೮೭೩ರಂದು ನಿಧನರಾದರು.

ಇವರಿಂದ ದಾಸದೀಕ್ಷೆ ಪಡೆದ ಮುದ್ದುಮೋಹನವಿಠಲರಿಂದ ಇವರ ಪೀಳಿಗೆ ದಕ್ಷಿಣ ಕರ್ನಾಟಕದಲ್ಲಿ ಹಬ್ಬಿತು. ಮುದ್ದುಮೋಹನವಿಠಲರ ಶಿಷ್ಯರೇ ಸುಪ್ರಸಿದ್ಧ ಪರಮಪ್ರಿಯ ಸುಬ್ಬರಾಯದಾಸರು. ಇವರ ಅಂಕಿತವೇ ತಂದೆಮುದ್ದುಮೋಹನವಿಠಲ. ಇವರ ಅನೇಕ ಶಿಷ್ಯರಲ್ಲಿ ಗುರುಗೋವಿಂದವಿಠಲದಾಸರು ಒಬ್ಬರು. ಇವರು ೨೦ನೆಯ ಶತಮಾನದಲ್ಲಿ ಹರಿದಾಸ ಸಾಹಿತ್ಯದ ಪ್ರಸರಣಕ್ಕೆ ವಿಶೇಷವಾಗಿ ಶ್ರಮಿಸಿದವರು.

(ಸಂ. ೨೧-೧)

೮೮. ಶ್ರೀಶಕೇಶವ (ಚಿಟ್ಟೂರು ಶ್ರೀನಿವಾಸರಾಯರು)

ಇವರ ತಂದೆ ಸ್ವಾಮಿರಾವ್. ತಾಯಿ ಹುಚ್ಚವ್ವನವರು. ಕ್ರಿ.ಶ.೧೮೯೦ರಲ್ಲಿ ಇವರ ಜನನವಾಯಿತು. ಇವರು ಸಾಮಾನ್ಯ ವಿದ್ಯಾಭ್ಯಾಸದ ಜೊತೆಗೆ ಸಂಸ್ಕೃತವನ್ನು ಹಾಗೂ ಶಾಸ್ತ್ರಾಭ್ಯಾಸವನ್ನೂ ಮಾಡಿದ್ದರು. ಸೊರಬ ತಾಲ್ಲೂಕಿನ [illegible] ಗ್ರಾಮಗಳ ಶಾನುಭೋಗರಾಗಿಯೂ. ರೆವೆನ್ಯೂ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ್ದರು. ನಂತರ ಇಲಾಖೆಯ [illegible] ರಾಜೀನಾಮೆ ನೀಡಿ, ಎರಡನೇ ಮಹಾಯುದ್ಧದ ಕಾಲದಲ್ಲಿ ವಾರ್‌ಫ್ರಂಟ್ ಲೆಕ್ಚರರ್ ಆಗಿ ಕೆಲಸ ಮಾಡಿದರು.

ಶ್ರೀನಿವಾಸರಾಯರು ಚಿಕ್ಕಂದಿನಿಂದಲೂ ಕವನ, ನಾಟಕಗಳನ್ನು ರಚಿಸುತ್ತಿದ್ದರು. ರಾಘವೇಂದ್ರಸ್ವಾಮಿಗಳ ಭಕ್ತರಾಗಿದ್ದ ಇವರು ಶಿವಮೊಗ್ಗ, ಉಡುಗಣಿ, ಕಡೂರು, ದಾವಣಗೆರೆ ಮುಂತಾದ ಕಡೆ ಬೃಂದಾವನ ಸ್ಥಾಪನೆಯಾದ ಸಂದರ್ಭಗಳಲ್ಲಿ ಸ್ತೋತ್ರಗಳನ್ನು ರಚಿಸಿದ್ದಾರೆ. ಇವರು ಅನೇಕ ಕೀರ್ತನೆ ಲಾವಣಿಗಳನ್ನೂ 'ಪುರಂದರ ವಿಜಯ' ಎಂಬ ನಾಟಕವನ್ನೂ ಉಲ್ಪಿ ಗಂಗಾ, ಅನುಕೂಲಸಿಂಧು, ಮತ್ತು ಫ್ಯಾಷನ್ ಪಿಶಾಚಿ ಎಂಬ ಪ್ರಹಸನಗಳನ್ನೂ ರಚಿಸಿದ್ದಾರೆ.

ಇವರಿಗೆ ಬೇಲೂರಿನಲ್ಲಿ 'ಶ್ರೀಶಕೇಶವ' ಎಂಬ ಸ್ವಪ್ನಾಂಕಿತವಾಯಿತು. ಶ್ರೀಶಕೇಶವದಾಸರ ೧೪ ಕೃತಿಗಳು ದೊರಕಿವೆ. ದಾಸರ ಈ ೧೪ ಕೃತಿಗಳಲ್ಲಿ ೯ ಕೀರ್ತನೆಗಳು ಶ್ರೀ ರಾಘವೇಂದ್ರ ಸ್ವಾಮಿಗಳನ್ನೇ ಕುರಿತದ್ದಾಗಿದೆ. ಕೀರ್ತನೆಗಳು ಸರಳವೂ ಗೇಯಗುಣವುಳ್ಳವೂ ಆಗಿವೆ.

ಶ್ರೀಶಕೇಶವದಾಸರು ೬೫ ವರ್ಷಗಳ ಸಾರ್ಥಕಜೀವನ ನಡೆಸಿ ೧೯೫೫ರಲ್ಲಿ ನಿಧನರಾದರು.

(ಸಂ. ೧೬)

೫೯. ಶ್ರೀಶಪ್ರಾಣೇಶವಿಠಲ (ಲಿಂಗಸೂಗೂರಿನ ರಾಮರಾಯರು)

ಶ್ರೀಶಪ್ರಾಣೇಶವಿಠಲರು ಪ್ರಾಣೇಶದಾಸರ ಮೊಮ್ಮಗ. ಪ್ರಾಣೇಶದಾಸರ ಅಣ್ಣಂದಿರಾದ ರಾಘಣ್ಣನವರ ಮಗಳಾದ ಹಿರೇವೆಂಕಮ್ಮ ಮತ್ತು ಮುದುಗಲ್ಲಿನ ಪಾಗಾ ವಾಸುದೇವರಾಯರು ಇವರ ತಂದೆತಾಯಿಗಳು. ಜನನ ಕ್ರಿ.ಶ.೧೮೮೧ರಲ್ಲಿ. ಜಗನ್ನಾಥದಾಸರ, ವರದೇಂದ್ರರ ಅನುಗ್ರಹದಿಂದ ಹುಟ್ಟಿದವರೆಂದು ಪ್ರತೀತಿ. ಪ್ರಾಣೇಶದಾಸರ ಮಕ್ಕಳಾದ ಶ್ರೀಗುರುಪ್ರಾಣೇಶದಾಸರು ಇವರ ಗುರುಗಳು. ಅವರ ಆಶ್ರಯದಲ್ಲಿಯೇ ಬೆಳೆದು ಅವರಿಂದಲೇ ಅಂಕಿತ ಪಡೆದರು. ರಾಘಮ್ಮ ಎಂಬುವವರು ಇವರ ಪತ್ನಿ. ಲಿಂಗಸೂಗೂರಿನಲ್ಲಿ ವೆಂಕಟೇಶದೇವರ ಪೂಜೆ ಮಾಡುತ್ತಾ ಸತ್ಕರ್ಮದಲ್ಲಿ ತೊಡಗಿ ಕೃತಿರಚನೆಗೆ ಪ್ರಾರಂಭಿಸಿದರು. ಅಪರಿಗ್ರಹ ಇವರ ಗುಣವಾಗಿತ್ತು. ಭಕ್ತರಾಗಲೀ, ಅನುಯಾಯಿಗಳಾಗಲೀ ಹೆಚ್ಚಿನ ಧನ, ಕನಕ, ಹೊಲ, ಮನೆಗಳನ್ನು ಕೊಡಲು ಇಚ್ಛಿಸಿದರೆ ನಯವಾಗಿಯೇ ನಿರಾಕರಿಸುತ್ತಿದ್ದರು. ಪುಣ್ಯಸ್ಥಳವಾದ ಸ್ವಗ್ರಾಮದಲ್ಲಿಯೇ ಇರಲು ಇಚ್ಛಿಸುತ್ತಿದ್ದರು. ಇವರ ೧೬ ಕೃತಿಗಳು ಲಭ್ಯವಿವೆ. ದಶಾವತಾರ ಸ್ತೋತ್ರವಲ್ಲದೇ ಲಿಂಗಸೂಗೂರಿನ ಸುತ್ತಮುತ್ತ ಇರುವ ಮುಖ್ಯಪ್ರಾಣ, ಗುರು ರಾಘವೇಂದ್ರರು, ಬೆಳಗಾವಿಯ ಶಹಾಪೂರದ ಅನಂತಪದ್ಮನಾಭ ಹೀಗೆ ಅನೇಕ ಸ್ಥಾನಿಕ ದೇವರುಗಳ ಸ್ತುತಿ ಪದ್ಯಗಳನ್ನು ಬರೆದಿದ್ದಾರೆ. ೧೯೫೨ರಲ್ಲಿ ದೈವಾಧೀನರಾದರು.

(ಸಂ. ೧೬)

೬೦. ಸಿರಿಗುರುತಂದೆವರದಗೋಪಾಲವಿಠಲ

೧೯ನೇ ಶತಮಾನದವರು. ಇವರ ಹೆಸರೇನೋ ತಿಳಿಯದು. 'ಗುರುಕಥಾಮೃತಸಾರ' ಎಂಬ ಸುದೀರ್ಘ ಸುಳಾದಿ ಲಭ್ಯವಿದ್ದು, ಅದರಲ್ಲಿ ಶ್ರೀನಿವಾಸಾಚಾರ್ಯ ಎಂಬುವರನ್ನು ವರ್ಣಿಸಲಾಗಿದೆ. ಇವರ ಮುದ್ರಿಕೆ 'ಸಿರಿಗುರುತಂದೆ ವರದಗೋಪಾಲವಿಠಲ' ಎಂಬುದು ಪ್ರಾಯಶಃ ಕನ್ನಡ ದಾಸಸಾಹಿತ್ಯದಲ್ಲಿ ಅತ್ಯಂತ ದೀರ್ಘವಾದ ಮುದ್ರಿಕೆ. ಗುರುಗಳು ಕಟ್ಟಿಮನೆ ನರಸಿಂಗರಾಯರು ಎಂದು ತಿಳಿಯುತ್ತದೆ. ಇವರ ಐದು ಕೀರ್ತನೆಗಳು ಮಾತ್ರ ದೊರೆತಿವೆ.

(ಸಂ. ೨೧-೨)

೬೧. ಸಿರಿಗೋವಿಂದವಿಠಲ (ಅಸ್ಕಿಹಾಳ ಗೋವಿಂದದಾಸರು)

ಗೋವಿಂದದಾಸರೆಂಬುದು ಇವರ ನಿಜನಾಮ. ರಾಯಚೂರು ಜಿಲ್ಲೆಯ ಅಸ್ಕಿಹಾಳ ಜನ್ಮಸ್ಥಳ. ಕ್ರಿ.ಶ.೧೮೯೧ರಲ್ಲಿ ಜನಿಸಿದರು. ತಂದೆ ಶ್ರೀ ಗಿರಿರಾಯರು. ಬಾಲ್ಯದಲ್ಲಿಯೇ ತಬ್ಬಲಿಯಾಗಿ ಬಡತನದಲ್ಲಿ ಕಳೆದರು. ತುಳಸಮ್ಮ ಇವರ ಪತ್ನಿ. ಹುಟ್ಟಿದ ಗಂಡುಮಗು ಅಸು ನೀಗಿದಾಗ ಸಹಜವಾಗಿಯೇ ಮನಸ್ಸು ಆಧ್ಯಾತ್ಮದೆಡೆಗೆ ತಿರುಗಿ ದಾಸದೀಕ್ಷೆ ಪಡೆದು ಕೃತಿರಚನೆಗೆ ತೊಡಗಿದರು. ಜನಮನದೊಂದಿಗೆ ಸ್ಪಂದಿಸುತ್ತಾ, ಅವರ ಕಷ್ಟ-ಸುಖಗಳಲ್ಲಿ ಬೆರೆಯುತ್ತಾ ಸತ್ಸಂಗ, ಚರ್ಚೆ, ಉಪನ್ಯಾಸ ಮಾಡುತ್ತ ಜನಪ್ರಿಯರಾಗಿದ್ದರು. ಎಲ್ಲಾ ವರ್ಗದ, ಎಲ್ಲಾ ಜಾತಿಯ ಜನರು ಇವರ ಶಿಷ್ಯರಾಗಿದ್ದರು. 'ರಘುವೀರ ಮಂದಿರ'ವೆಂಬ ಸ್ಥಳದಲ್ಲಿ ನಿತ್ಯವೂ ಭಕ್ತಾದಿಗಳೊಂದಿಗೆ ಸೇರಿ ಭಗವನ್ನಾಮಸ್ಮರಣೆಯಲ್ಲಿ ತೊಡಗುತ್ತಿದ್ದರು. 'ಸಿರಿಗೋವಿಂದವಿಠಲ' ಎಂಬ ಮುದ್ರಿಕೆಯಲ್ಲಿರುವ ಅವರ ಒಟ್ಟು ೨೮ ಕೀರ್ತನೆಗಳು ದೊರೆತಿವೆ. ದೇವಾನುದೇವತೆಗಳ ಸ್ತುತಿ ಪದ್ಯಗಳು, ಸಂಪ್ರದಾಯದ ಹಾಡುಗಳು ಲಾಲಿ ಪದಗಳು, ಅಲ್ಲದೆ ಜನಪದ ಧಾಟಿಯಲ್ಲಿ ಲಾವಣಿ, ಗೀಗಿ,

ಬಯಲಾಟದಂತಹ ಸಾಹಿತ್ಯ ರಚನೆಯನ್ನು ಕೂಡ ಮಾಡಿದ್ದಾರೆ. ಒಮ್ಮೆ ಗುರುಗಳಾದ ಶ್ರೀ ಸತ್ಯಧ್ಯಾನತೀರ್ಥರು ರಾಯಚೂರಿಗೆ ಬಂದಾಗ 'ತಮ್ಮ ಮೇಲೆ ಕೀರ್ತನೆ ರಚಿಸಬಲ್ಲೆಯ?' ಎಂದುದಕ್ಕೆ ಆ ಕ್ಷಣದಲ್ಲಿ ಒಂದು ಕೀರ್ತನೆ, ರಚಿಸಿ ಹಾಡಿದರು. ಆದರೆ ಸುರುವಿಗೆ 'ಸತ್ಯಧ್ಯಾನರ ಕಾಟ ತಾಳಲಾರೆವೊ' ಎಂದು ಪ್ರಾರಂಭಿಸಿದರು! ನೆರೆದವರೆಲ್ಲರಿಗೆ ಗಾಬರಿ. ಆದರೆ ಮುಂದೆ 'ತಾಳಲಾರೆವೊ ಎಂದು ನಿತ್ಯ ದಿತಿಜರು ಕಲಿಗೆ ದೂರುತಿಹರು' ಎಂದು ಹೇಳಿದಾಗ ಶ್ರೀಗಳವರಾದಿಯಾಗಿ ಎಲ್ಲರೂ ಸಂತೋಷಪಟ್ಟರು. ಚಿಕ್ಕ ವಯಸ್ಸಿನಲ್ಲಿ ದೈವಾಧೀನರಾದರು (೧೯೧೯).

(ಸಂ. ೨೯-೨)

೯೨. ಸಿರಿವತ್ಸಾಂಕಿತ (ಚಿಕ್ಕೋಡಿ ಅನಂತಾಚಾರ್ಯ)

ಇವರನ್ನು ಚಿಕ್ಕೋಡಿ ಆಚಾರ್ಯರೆಂದೇ ಕರೆಯುತ್ತಾರೆ. ಇವರು ಯಾರಿಂದ ಅಂಕಿತ ಪಡೆದರೆಂದು ತಿಳಿಯುವುದಿಲ್ಲ. 'ಸಿರಿವತ್ಸಾಂಕಿತ' ಎಂಬ ಅಂಕಿತವಿದ್ದು ಸುಮಾರು ೨೫ ಹಾಡುಗಳು ದೊರೆತಿವೆ. ಇವರ ಕಾಲ ೧೯ನೇ ಶತಮಾನದ ಕೊನೆ ಹಾಗೂ ೨೦ನೆಯ ಶತಮಾನದ ಆರಂಭದ ದಶಕಗಳು.

(ಸಂ. ೨೧-೧)

೯೩. ಸಿರಿವಿಠಲ (ಕಲಮದಾನಿ ನಾರಾಯಣರಾಯರು)

ಕಲಮದಾನಿ ನಾರಾಯಣರಾಯರ ಹೆಂಡತಿ ರಮಾಬಾಯಿ. ಇವರ ಮಗಳು ಗೋದಕ್ಕ ಹಾಗೂ ಅಣ್ಣನ ಮಗಳು ತುಂಗಕ್ಕ; ಇಬ್ಬರಿಗೂ ದಾಸದೀಕ್ಷೆ ನೀಡಿ, ಸಿರಿನಾರಾಯಣ ಹಾಗೂ ತಂದೆಸಿರಿವಿಠಲ ಎಂಬ ಅಂಕಿತಪ್ರದಾನವನ್ನು ಮಾಡಿದ್ದರು. ಪ್ರತಿದಿನ ಸಂಜೆ ಮನೆಯಲ್ಲಿ ಭಜನೆ ನಡೆಯುತ್ತಿದ್ದಿತು.

ದಾಸಸಾಹಿತ್ಯದ ಪುನರುಜ್ಜೀವನಗೊಳಿಸಿದುದು ಇವರ ಅತಿ ಮುಖ್ಯವಾದ ಕೆಲಸವಾಗಿದೆ. ಹರಿದಾಸರ ಬಗ್ಗೆ ಮಾಹಿತಿಗಳನ್ನು ಕಲೆಹಾಕಿ, ಪರಿಚಯವನ್ನು ಒದಗಿಸಿದರು. ಇವುಗಳನ್ನೆಲ್ಲ ಸಂಗ್ರಹಿಸಿ ಅವರ ಮಗ ಕಲಮದಾನಿ ಗುರುರಾಯರು 'ಹರಿದಾಸರ ಕಥೆಗಳು' ಎಂಬ ಮೌಲಿಕವಾದ ಗ್ರಂಥವನ್ನು ಪ್ರಕಟಿಸಿದ್ದಾರೆ. ನಾರಾಯಣರಾಯರು 'The Mystic Teachings of Haridasas of Karnataka' ಎಂಬ ಕೃತಿಯಲ್ಲಿ ಹರಿದಾಸರನ್ನು ಕುರಿತು ಇಂಗ್ಲಿಷ್‌ನಲ್ಲಿ (೧೯೩೯) ಬರೆದಿದ್ದಾರೆ. ಎ.ಪಿ. ಕರಮರಕರ ಅವರು ಜೊತೆಗೂಡಿದ್ದಾರೆ. ಜಗನ್ನಾಥ ದಾಸರ ಚರಿತ್ರೆಯನ್ನು ಕುರಿತ ಇನ್ನೊಂದು ಕೃತಿಯಲ್ಲಿ ಅಲ್ಲಿಯ ತನಕ ಅಪರಿಚಿತವಾಗಿದ್ದ ಅವರ ೧೨೦೦ ತ್ರಿಪದಿಗಳನ್ನು ಪ್ರಕಟಿಸಿದ್ದಾರೆ. ಇದಲ್ಲದೆ ಶ್ರೀ ವಿಷ್ಣುತೀರ್ಥರು ರಚಿಸಿದ್ದ ಭಾಗವತ ಸಾರೋದ್ಧಾರಕ್ಕೆ ಟೀಕೆ, ಸುಮಧ್ವವಿಜಯ ಸಾರಸಂಗ್ರಹ, ಏಕಾದಶೀ ಮಹಾತ್ಮೆ ಮತ್ತು ಮಧ್ವನಾಮಗಳು ರಚನೆಗೊಂಡಿವೆ. ಇವರಿಂದ ಅನೇಕ ಹಾಡುಗಳು ರಚಿತವಾಗಿದ್ದರೂ ಕೇವಲ ೭ ಮಾತ್ರ ದೊರಕಿವೆ. ಇದಲ್ಲದೆ 'ಅಖಿಲಾಂಡ ಕೋಟಿ...' ಎಂಬ ೧೨೪ ನುಡಿಗಳ ದೀರ್ಘಕೃತಿಯನ್ನೂ ಉಲ್ಲೇಖಿಸಬೇಕು.

(ಸಂ. ೨೧-೨)

೯೪. ಸುಂದರವಿಠಲ (ಗೊರಾಬಾಳ ಹನುಮಂತರಾಯರು)

ಸುಂದರವಿಠಲಾಂಕಿತರಾದ ಗೊರಾಬಾಳ ಹನುಮಂತರಾಯರ ಕೊಡುಗೆ ವಿಶಿಷ್ಟವಾದುದು. ದಾಸರ ಕೃತಿಗಳನ್ನು ಸಂಶೋಧಿಸಿ, ಪ್ರಕಟಿಸಿ ಮನೆಮನೆಗೆ ತಲುಪಿಸಿದವರು. ಕ್ರಿ.ಶ.೧೮೯೩ರಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂಗೂರಿನ ಬಳಿ ಗೊರಾಬಾಳ ಎಂಬಲ್ಲಿ ಜನಿಸಿದರು. ವೆಂಕಣ್ಣ ಕುಲಕರ್ಣಿ ಇವರ ತಂದೆ. ವೃತ್ತಿಯಿಂದ ವಕೀಲರು. ಸಂಬಂಧಿಕರಾದ ವರದೇಶವಿಠಲರ ಸಂಪರ್ಕದಿಂದ ಹರಿದಾಸ ಸಾಹಿತ್ಯದ ಅಧ್ಯಯನ, ಚಿಂತನ, ಸಂಗ್ರಹ ಮುಂತಾದ ಕಾರ್ಯಗಳಲ್ಲಿ ಆಸಕ್ತಿ ಹುಟ್ಟಿತು. ತಮ್ಮ ಪತ್ನಿ ಹಾಗೂ ಏಳು ಜನ ಪುತ್ರಿಯರನ್ನು ಕಳೆದುಕೊಂಡರು; ಹರಿದಾಸ ಸಾಹಿತ್ಯ ಸೇವೆಯಲ್ಲಿ ತಮ್ಮ ನೋವನ್ನು ಮರೆಯಲು ಯತ್ನಿಸಿದರು. ದಾಸಾಂಕಿತವನ್ನು ಪಡೆದು ಕೆಲವು ಹಾಡುಗಳನ್ನು ರಚಿಸಿದ್ದಾರಾದರೂ, ಅವರು ಗ್ರಂಥಪ್ರಕಾಶನಕ್ಕಾಗಿ ಕಟ್ಟಿ ಬೆಳೆಸಿದ 'ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಳ'ದಿಂದ ಗೊರಾಬಾಳ ಹನುಮಂತರಾಯರು ನೂರಾರು ಗ್ರಂಥಗಳನ್ನು ಪ್ರಕಟಿಸಿ ಅನೇಕ ಹರಿದಾಸರನ್ನು ಜನತೆಗೆ ಪರಿಚಯಿಸಿ ಶಾಶ್ವತವಾಗಿ ನಿಲ್ಲುವ ಕೆಲಸವನ್ನು ಮಾಡಿದ್ದಾರೆ. ಇವರ ೨ ಕೀರ್ತನೆಗಳು ಮಾತ್ರಪ್ರಚಾರದಲ್ಲಿವೆ. ೧೯೬೯ರಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿದರು.

(ಸಂ. ೨೬)

೯೫. ಸುಖನಿಧಿವಿಠಲ (ಏರಿ ನಾರಾಯಣಾಚಾರ್ಯ):-

ಶ್ರೀದವಿಠಲರ ಒಬ್ಬ ಸಹೋದರಿಯ ಮಗ ಏರಿ ನಾರಾಯಣಾಚಾರ್ಯ ಎಂದು. ಇವರ ಕಾಲ ಕ್ರಿ.ಶ. ಸುಮಾರು ೧೭೭೦. ಒಮ್ಮೆ ತಿರುಪತಿಯಲ್ಲಿ ಪ್ರಾಣೇಶದಾಸರ ಭೇಟಿಯಾಗಿ ಅವರಿಂದ 'ಸುಖನಿಧಿವಿಠಲ' ಎಂಬ ಅಂಕಿತವನ್ನು ಪಡೆದು, ಕರ್ಜಗಿಯಲ್ಲಿ ನೆಲಸಿದರು. ಇವರು ಹಲವಾರು ಕೀರ್ತನೆಗಳನ್ನು ರಚಿಸಿದ್ದರೂ ದೊರೆತಿರುವುದು ಒಂದೇ ಒಂದು.

(ಸಂ. ೨೧-೧)

೯೬. ಹನುಮೇಶವಿಠಲ

ಇವರ ಪೂರ್ಣ ಹೆಸರು ಹನುಮಂತ ರಂಗರಾವ ಬುರ್ಲಿ. ಜನನ ಕ್ರಿ.ಶ.೧೮೫೪. ಹಾವೇರಿಯ ಕೋರ್ಟಿನಲ್ಲಿ ನಾಝರ ಎಂಬ ವೃತ್ತಿಯಲ್ಲಿದ್ದು, ನಿವೃತ್ತರಾದರು. ಗುತ್ತಲದಲ್ಲಿ ರಾಘವೇಂದ್ರಸ್ವಾಮಿಗಳ ಮೃತ್ತಿಕಾ ವೃಂದಾವನವನ್ನು ಪ್ರತಿಷ್ಠಾಪಿಸಿ, ನಡೆಸಿಕೊಂಡು ಬಂದರು. ಇವರಿಗೆ ಉತ್ತರಾದಿಮಠದ ಶ್ರೀ ಸತ್ಯಜ್ಞಾನರಿಂದ 'ಹನುಮೇಶವಿಠಲ' ಮುದ್ರಿಕೆಯು ದೊರೆಯಿತು. ಇವರ ೭೪ ಕೀರ್ತನೆಗಳು ದೊರೆತಿವೆ. ರಾಮಾಯಣದ ಸುಂದರಕಾಂಡವನ್ನು ಪದ್ಯರೂಪದಲ್ಲಿ ರಚಿಸಿದ್ದಾರೆ. ಅನುಭವಾಮೃತಸಾರ ಎಂಬ ಕಾವ್ಯವನ್ನೂ, ಹರಿಕಥಾಮೃತ ಸಾರಕ್ಕೆ ವಿಸ್ತೃತ ಟೀಕೆಯನ್ನೂ ಬರೆದಿದ್ದಾರೆ (ಅಪ್ರಕಟಿತ).

(ಸಂ. ೨೧-೧)

೯೭. ಹಸನ್ಮುಖವಿಠಲ

ಇವರು ಕದರಮಂಡಲಗಿಯ ದಾಸಮನೆತನಕ್ಕೆ ಸೇರಿದವರು. ಇವರ ಹೆಸರು ಇತ್ಯಾದಿ ವೈಯಕ್ತಿಕ ವಿವರ ತಿಳಿದಿಲ್ಲ. ಹಸನ್ಮುಖವಿಠಲ ಎಂಬ ಅಂಕಿತದಲ್ಲಿ ಎರಡೇ ಹಾಡುಗಳು ದೊರೆತಿವೆ.

(ಸಂ. ೨೧-೧)

೯೮. ಹೆನ್ನೆರಂಗವಿಠಲ

ಇವರ ನಿಜನಾಮಧೇಯ, ಜನ್ಮಸ್ಥಳ, ಕಾಲ ಇತ್ಯಾದಿ ವಿವರಗಳು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಅನಂತಪುರ ಜಿಲ್ಲೆಯ ಪೆನ್ನಅಹೋಬಲವೆಂಬ ಕ್ಷೇತ್ರದ ನರಸಿಂಹನೇ ಇವರ ಇಷ್ಟದೈವ. ಸುಮಾರು ೧೮೦೦ರಿಂದ ೧೮೬೦ರ ನಡುವೆ ಬದುಕಿರಬೇಕೆಂದೂ, ಸುರಪುರದ ವಾಸುದೇವ ನಾಯಕರ ಸಮಕಾಲೀನರಾಗಿರಬೇಕೆಂದೂ ಊಹಿಸಿದ್ದಾರೆ. ಮುಂದೆ ಗುಲ್ಬರ್ಗಾ ಜಿಲ್ಲೆಯ ಮುದನೂರಿನಲ್ಲಿ ಬಂದು ನೆಲಸಿದ್ದರೆಂದು ತೋರುತ್ತದೆ. ಒಟ್ಟು ೧೮೯ ಕೀರ್ತನೆಗಳು ಲಭ್ಯವಾಗಿವೆ. ಕೀರ್ತನೆಗಳಲ್ಲದೇ ಶತಕಗಳನ್ನೂ, ಸೀಸಪದ್ಯಗಳನ್ನೂ ರಚಿಸುತ್ತಿದ್ದರಂತೆ. 'ಹೆನ್ನೆರಂಗವಿಠಲ', 'ಹೆನ್ನೆವಿಠಲ' ಎಂಬ ಅಂಕಿತವನ್ನು ಬಳಸಿದ್ದಾರೆ. ಪ್ರಾದೇಶಿಕ ಭಾಷೆಯ ಬಳಕೆ, ಜನಪದ ಧಾಟಿಯ ಪ್ರಯೋಗ, ಪುರಾಣ ಪ್ರತಿಮೆಗಳ ಮೂಲಕ ಭಾವಾಭಿವ್ಯಕ್ತಿ ಇವರ ಕೃತಿಗಳ ವಿಶೇಷ.

(ಸಂ. ೨೯-೧)

(ಈ) ಶ್ರೀವೈಷ್ಣವ ಸಂಪ್ರದಾಯದ ಹರಿದಾಸರು

೯೯. ವೇಲಾಪುರಿಯ ವೈಕುಂಠ (ಬೇಲೂರು ವೈಕುಂಠದಾಸರು)

ಇವರು ಶ್ರೀವೈಷ್ಣವ ಹರಿದಾಸರಲ್ಲಿ ಮೊದಲನೆಯವರು. ಇವರ ನಿಜನಾಮ ಬೇಲೂರು ವೈಕುಂಠ ದಾಸರು ಎಂಬುದು. ತಂದೆ ತಿರುಮಲಾರ್ಯರು. ಇವರ ಕಾಲ ಸುಮಾರು ಕ್ರಿ.ಶ.೧೫೪೦. ಶ್ರೀ ವಾದಿರಾಜರು, ಪುರಂದರದಾಸರು ಹಾಗೂ ಕನಕದಾಸರು ವೈಕುಂಠದಾಸರನ್ನು ಸ್ತುತಿಸಿದ್ದಾರೆ. ಅಲ್ಲದೆ ತೆಲುಗಿನ ತಾಳ್ಳಪಾಕಂ ಮನೆತನದ ಅನ್ನಮಾಚಾರ್ಯರ ಮೊಮ್ಮಗ ಚೆನ್ನಯ್ಯ ಅವರೂ ವೈಕುಂಠದಾಸರನ್ನು ಸ್ತುತಿಸಿದ್ದಾರೆ. ಇವರ ೬೬ ಕೀರ್ತನೆಗಳು ಲಭ್ಯವಾಗಿವೆ. ಅಲ್ಲದೆ 'ಶನೇಶ್ವರ ದಂಡಕ' ಎಂಬ ಕೃತಿಯನ್ನೂ ರಚಿಸಿದಂತೆ ಕಂಡುಬರುತ್ತದೆ.

ದೊರೆತಿರುವ ಕೀರ್ತನೆಗಳಲ್ಲಿ ೯ ಸುಳಾದಿಗಳೂ ೨ ಉಗಾಭೋಗಗಳೂ ಇವೆ. ಕೀರ್ತನೆಗಳಲ್ಲಿ ಲಕ್ಷ್ಮೀಸ್ತುತಿ, ಗುರುಸ್ತುತಿ, ಆತ್ಮನಿವೇದನೆ, ಲೋಕನೀತಿ ಮತ್ತು ಕ್ಷೇತ್ರವರ್ಣನೆಗಳಲ್ಲಿ ಶ್ರೀವೈಷ್ಣವ ನಿಷ್ಠೆಯು ಒಡೆದು ತೋರುತ್ತದೆ.

(ಸಂ. [illegible])

೧೦೦. ಲಕ್ಷ್ಮೀಪತಿ (ಕವಿ ಲಕ್ಷ್ಮೀಶ)

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಲಕ್ಷ್ಮೀಶರು ಪ್ರಸಿದ್ಧ ಕವಿಯಾಗಿ ಗುರುತಿಸಿಕೊಂಡಿದ್ದಾರೆ. ತಂದೆಯು ಭಾರದ್ವಾಜ ಗೋತ್ರದ ವಡಗಲೆ ಸಂಪ್ರದಾಯದ ಹೆಬ್ಬಾರ್ ಮನೆತನದವನು. ಕವಿ ಲಕ್ಷ್ಮೀಶರು ಕಡೂರು ತಾಲೂಕು ದೇವನೂರಿನವರು. ಇದಕ್ಕೆ ಸುರಪುರ, ಸುಮನಸಪುರ ಎಂಬ ಹೆಸರುಗಳೂ ಇವೆ. ಅಲ್ಲಿಯ ಲಕ್ಷ್ಮೀಕಾಂತ ದೇವಾಲಯದ ಅರ್ಚಕ ಕುಟುಂಬದವರು. ಇವರ ನಿಜವಾದ ಹೆಸರು ಲಕ್ಷ್ಮೀಕಾಂತ ಹೆಬ್ಬಾರ್. ಕಾಲ ಸುಮಾರು ಕ್ರಿ.ಶ.೧೫೫೦–೧೬೦೦.

ಕವಿ ಲಕ್ಷ್ಮೀಶರು ಸುಪ್ರಸಿದ್ಧ 'ಜೈಮಿನಿ ಭಾರತ' ಕಾವ್ಯದ ಕರ್ತೃ. ಅಲ್ಲದೆ ಇವರ ೨೦ ಕೀರ್ತನೆಗಳು ಲಭ್ಯವಾಗಿವೆ. ಅಂಕಿತ 'ಲಕ್ಷ್ಮೀಪತಿ'. ಕೀರ್ತನೆಗಳು ಶ್ರೀ ಹರಿಸ್ತುತಿ, ಲಕ್ಷ್ಮೀಸ್ತುತಿ ಮತ್ತು ಆತ್ಮನಿವೇದನೆ ಇವೆಲ್ಲ ಶ್ರೀವೈಷ್ಣವತತ್ವಗಳಿಗೆ ಅನುಗುಣವಾಗಿ ರಚಿತವಾಗಿವೆ. 'ನಾದಲೋಲ ಲಕ್ಷ್ಮೀಶ' ಎಂಬ ಹೆಸರು ಸಾರ್ಥಕವಾಗಿದೆ.

(ಸಂ. ೩೫–೧)

೧೦೧. ಮಹದೇವಪುರದ ಶ್ರೀರಂಗ (ರಂಗದಾಸರು)

ಇವರ ಹೆಸರು ರಂಗದಾಸರು. ಇವರು ತುಮಕೂರು ಜಿಲ್ಲೆಯ ಊರ್ಡಿಗೆರೆ ಹೋಬಳಿಯಲ್ಲಿರುವ ಮಾದಗೊಂಡನಹಳ್ಳಿಯವರು. ರಂಗದಾಸರದು ಅಲ್ಲಿಯ ರಂಗನಾಥ ದೇವಾಲಯದ ಅರ್ಚಕ ವೃತ್ತಿ. ಕಾಲ ಸುಮಾರು ಕ್ರಿ.ಶ.೧೮೩೦–೧೯೧೧. ಇವರು ಸ್ವಂತ ಅಧ್ಯಯನದ ಮೂಲಕ ವಿಶಿಷ್ಟಾದ್ವೈತ ದರ್ಶನದಲ್ಲಿ ನಿಷ್ಣಾತರಾಗಿದ್ದರು. ಇವರಿಗೆ ಶ್ರೀ ರಂಗನಾಥನೇ ಗುರುವೂ ದೈವವೂ ಆಗಿದ್ದಾನೆ.

ರಂಗದಾಸರು ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ನಾನಾ ಮತೋತ್ಪತ್ತಿ ಸಿದ್ಧಾಂತ ಸುಧಾರಸ, ಶ್ರೀವೈಷ್ಣವ ಮನೋರಂಜನಿ, ಶ್ರೀವೈಷ್ಣವ ಮತಪ್ರದರ್ಶಿನಿ, ಶ್ರೀವೈಷ್ಣವ ಜೀವರತ್ನ ಇವು ನಾಲ್ಕು ಧಾರ್ಮಿಕ ಕೃತಿಗಳು.

ರಂಗದಾಸರು ೧೬ ಕೀರ್ತನೆಗಳನ್ನು 'ಮಹದೇವಪುರದ ಶ್ರೀರಂಗ' ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ದೊರೆತಿರುವ ಎಲ್ಲ ಕೀರ್ತನೆಗಳೂ ವಿಶಿಷ್ಟಾದ್ವೈತ ಪರವಾದ ವಿಷ್ಣುಸ್ತುತಿಗಳೇ ಆಗಿವೆ. ಈ ಕೀರ್ತನೆಗಳು ಇತರರ ಕೀರ್ತನೆಗಳಿಗಿಂತ ಭಿನ್ನವಾಗಿದ್ದು, ಪಲ್ಲವಿ ಅನುಪಲ್ಲವಿಯ ಸ್ಥಾನದಲ್ಲಿ ಬಹಳಷ್ಟು ಕಡೆ ಕಂದಪದ್ಯಗಳನ್ನು ಬಳಸಲಾಗಿದೆ. ಕೀರ್ತನೆಯ ಸಾರವನ್ನು ಕಂದಗಳಲ್ಲಿ ಸಂಗ್ರಹಿಸಲಾಗಿದೆ. ರಂಗದಾಸರಿಗೆ ಸಂಗೀತಜ್ಞಾನವೂ ಇದ್ದಿತೆಂಬುದು ತಿಳಿಯುತ್ತದೆ.

ರಂಗದಾಸರಿಂದ ಶಿಷ್ಯಪರಂಪರೆಯೇ ಬೆಳೆದಿದ್ದು ವಿಶಿಷ್ಟಾದ್ವೈತ ಹರಿದಾಸರ ಪರಂಪರೆ ಮುಂದುವರಿದಿದೆ.

(ಸಂ. ೩೫–೧)

೧೦೨. ವರದವಿಠಲ (ವೆಂಕಟವರದಾರ್ಯರು)

ಸರಗೂರು ವೆಂಕಟವರದಾರ್ಯ ಎಂಬುದು ಇವರ ಪೂರ್ಣ ಹೆಸರು. ೧೯ನೇ ಶತಮಾನದವರು. ಗುಂಡ್ಲುಪೇಟೆಯ
ಸಮೀಪದ ಸರಗೂರಿನವರು. ವ್ಯಾಘ್ರಾಚಲಕ್ಷೇತ್ರವೆಂದು ಪ್ರಸಿದ್ಧವಾದ ತೆರಕಣಾಂಬಿಯ ಸಮೀಪವಿರುವ ಹುಲುಗಿನಮುರುಡಿ
ಬೆಟ್ಟದ ಶ್ರೀನಿವಾಸನ ಭಕ್ತರಾಗಿದ್ದು ಆ ದೇವರ ಸ್ತುತಿಪದ್ಯಗಳನ್ನೇ ಹೆಚ್ಚಾಗಿ ಬರೆದಿದ್ದಾರೆ. ಜಗನ್ನಾಥದಾಸರ ಪ್ರಭಾವ
ವಿಶೇಷವಾಗಿ ಕಾಣುತ್ತದೆ. ಸಂಸ್ಕೃತ ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯವಿದ್ದು ಕೃತಿರಚನೆ ಮಾಡಿದ್ದಾರೆ. ಕೆಲವು
ಕೃತಿಗಳು ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಇವೆ. ಕೆಲವು ಯಕ್ಷಗಾನ ಪ್ರಸಂಗಗಳನ್ನೂ ರಚಿಸಿದ್ದಾಗಿ ಉಲ್ಲೇಖವಿದೆ.
ಒಟ್ಟು ೧೦೨ ಕೀರ್ತನೆಗಳು ಲಭ್ಯವಿವೆ. ಹೆಚ್ಚಿನ ಕೃತಿಗಳು ಶ್ರೀಹರಿಯ ವರ್ಣನೆಯವಾಗಿವೆ. ಮಳೆಯನ್ನು ಬೇಡುವ,
ಗೋವುಗಳಿಗೆ ಒದಗಿದ ರೋಗ ಪರಿಹರಿಸುವಂತೆ ಬೇಡುವ ಲೌಕಿಕ ಕೃತಿಗಳೂ ಇವೆ. ವಿಶೇಷವೆಂದರೆ ಇವರು ಹಲವು
ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ತಪತೀಪರಿಣಯ' ನಾಟಕವನ್ನು (ಸೂರ್ಯನ ಮಗಳು –
ತಪತೀ) ಆಗಿನ ಶಿಕ್ಷಣಾಧಿಕಾರಿ ಬಿ.ಎಲ್. ರೈಸರು, ಅದೊಂದು ಶ್ರೇಷ್ಠ ನಾಟಕವೆಂದು ಹೊಗಳಿ ಬರೆದಿದ್ದಾರೆ.

ವೆಂಕಟವರದಾರ್ಯರ ಕೀರ್ತನೆಗಳಲ್ಲಿ ದೈವಸ್ತುತಿ, ಆತ್ಮನಿವೇದನೆ ಮತ್ತು ತತ್ವಪ್ರತಿಪಾದನೆಯ ಸ್ತುತಿಗಳೇ ಹೆಚ್ಚು.
ಆದರೂ ಸಾಮಾಜಿಕ ಸಮಕಾಲೀನ ಸಮಸ್ಯೆಗಳೂ ದಾಸರ ಮನವನ್ನು ಕದಡಿದುದು ಒಂದೆರಡು ಅವರ ಕೀರ್ತನೆಗಳಲ್ಲಿ
[illegible] ಕಾಲದಲ್ಲಿ ಅಡರಿದ ಬರಗಾಲದ ವಿವರವನ್ನು ಅವರು ದಾಖಲಿಸಿದ್ದಾರೆ.

ವೆಂಕಟವರದಾರ್ಯರು ಬೆಳಕಿಗೆ ಬಂದದ್ದು ನಂಜನಗೂಡಿನ ತಿರುಮಲಾಂಬಾ ಅವರ 'ಸನ್ಮಾರ್ಗದರ್ಶಿ' ಹಾಗೂ 'ಕರ್ನಾಟಕ ನಂದಿನಿ' ಪತ್ರಿಕೆಗಳ ಮೂಲಕ.

(ಸಂ. ೧೫)

೧೦೩. ತುಳಸಿರಾಮದಾಸ (ತುಳಸಿರಾಮದಾಸರು)

ತುಳಸಿರಾಮದಾಸರ ಹೆಸರು ಹಾಗೂ ಅಂಕಿತವು ಒಂದೇ ಆಗಿದೆ. ಆಂಧ್ರಪ್ರದೇಶದ ಕಡಪ ಜಿಲ್ಲೆಯ ಸಿದ್ಧವಟ್ಟಂ ಎಂಬ ಗ್ರಾಮ. ಅಲ್ಲಿ ತುಳಸಿ ವಂಶಕ್ಕೆ ಸೇರಿದ ಕೊಂಡಯ್ಯ ಇವರ ತಂದೆ, ತಾಯಿ ವೆಂಕಟಲಕ್ಷ್ಮಮ್ಮ. ಇವರು ವಡಗಲೆ ಸಂಪ್ರದಾಯದ ಪ್ರಸನ್ನವೈಷ್ಣವ ಕುಲದವರು. ತುಳಸಿರಾಮದಾಸರು ಜನಿಸಿದ್ದು ಕ್ರಿ.ಶ.೧೮೪೭.

ಇವರ ಗುರುಗಳು ಶ್ರೀಪರ್ತಿ ಭಾಸ್ಕರಾಚಾರ್ಯರು. ತಮ್ಮ ೨೦ನೇ ವಯಸ್ಸಿಗೇ ವ್ಯಾಕರಣ, ಛಂದಸ್ಸು, ಸಂಗೀತ ಸಾಹಿತ್ಯ ಇತ್ಯಾದಿ ವಿದ್ಯೆಗಳಲ್ಲಿ ಪರಿಣತರಾಗಿದ್ದರಂತೆ. ಇವರು ಬೆಂಗಳೂರಿನಲ್ಲಿ ನೆಲಸಿ, ಹಲವು ಭಜನೆ ಮಂದಿರಗಳನ್ನು ಸ್ಥಾಪಿಸಿ, ನಡೆಸಿಕೊಂಡು ಬಂದರು. ಇವರು ರಾಮಕಥಾ ನಿಪುಣರಾಗಿದ್ದರು. ಜನತೆಯಿಂದ ಚಿನ್ನದ ಕಿರೀಟಸಹಿತ ಸನ್ಮಾನಿತರಾಗಿದ್ದಾರೆ. ಮೈಸೂರು ಮಹಾರಾಜರು ಚಿನ್ನದ ಕಡಗ ತೊಡಿಸಿ ಸತ್ಕರಿಸಿದ್ದರು.

ತುಳಸಿರಾಮದಾಸರು ೨೭೫ ಕೀರ್ತನೆಗಳನ್ನು ರಚಿಸಿದ್ದಾರೆ. ಅದರಲ್ಲಿ ಸುಮಾರು ೨೫ ಮಾತ್ರ ಕನ್ನಡದಲ್ಲಿದ್ದು, ಮಿಕ್ಕವು ತೆಲುಗಿನಲ್ಲಿವೆ. ಇವು ಶ್ರೀವೈಷ್ಣವ ಸಂಪ್ರದಾಯದ ರೀತ್ಯಾ ಶ್ರೀಹರಿಸ್ತುತಿ, ಲಕ್ಷ್ಮೀಸ್ತುತಿ ಹಾಗೂ ಆಳ್ವಾರರುಗಳ ಸ್ತುತಿಗಳಿವೆ. ಲೋಕನೀತಿ ಹಾಗೂ ಕ್ಷೇತ್ರ ವರ್ಣನೆಗಳೂ ಇವೆ.

೧೯ನೇ ಶತಮಾನದಲ್ಲಿ ವಿಶಿಷ್ಟಾದ್ವೈತ ಸಂಪ್ರದಾಯದ ಹರಿದಾಸ ಪರಂಪರೆಯನ್ನು ಮುಂದುವರಿಸಿ ಕೊಂಡು ಬಂದರು. ಅಲ್ಲದೆ ಅದಕ್ಕೆ ಭದ್ರ ಬುನಾದಿ ಹಾಕಿದ ಕೀರ್ತಿ ತುಳಸಿರಾಮದಾಸರಿಗೆ ಸಲ್ಲುತ್ತದೆ. ದಾಸರು ೧೯೦೩ರಲ್ಲಿ ವೈಕುಂಠವಾಸಿಗಳಾದರು.

(ಸಂ. ೩೫–೧)

೧೦೪. ಗುರುತುಲಸೀರಾಮ (ಚನ್ನಪಟ್ಟಣದ ಅಹೋಬಲದಾಸರು)

ಚನ್ನಪಟ್ಟಣದ ಅಹೋಬಲದಾಸರು ತಮ್ಮನ್ನು 'ಅವಧೂತ' ಎಂದು ಕರೆದುಕೊಂಡಿದ್ದಾರೆ. ಇವರ ಕಾಲ ಕ್ರಿ.ಶ.೧೮೫೦–೧೯೨೦. 'ಗುರುತುಲಸೀರಾಮ' ಎಂಬ ಅಂಕಿತದಿಂದ ಕೃತಿರಚನೆ ಮಾಡಿದ್ದಾರೆ. ತುಲಸಿರಾಮದಾಸರ ಶಿಷ್ಯಪರಂಪರೆಗೆ ಸೇರಿದವರು.

ಅಹೋಬಲದಾಸರು 'ವೇದಾಂತಸಿದ್ಧಾಂತ' ಎಂಬ ಒಂದು ಗ್ರಂಥರಚನೆ ಮಾಡಿದ್ದಾರೆ. ಇವರ ೧೧೭ ಕೀರ್ತನೆಗಳು ಉಪಲಬ್ಧವಾಗಿದೆ. ಇವರು ಕೀರ್ತನೆಗಳನ್ನು 'ಭಜನೆ', 'ಜಾವಡಿ'ಗಳೆಂದು ವಿಭಾಗ ಮಾಡಿದ್ದಾರೆ. ಆರತಿ, ಮಂಗಳ, ಸೋಬಾನೆ ಇತ್ಯಾದಿ ಸಂಪ್ರದಾಯದ ಹಾಡುಗಳನ್ನೂ ಕಾಣಬಹುದು. ಶೃಂಗೇರಿ ಶಂಕರಮಠ ಸ್ಥಾಪನೆಯಾದ ಕಾಲದಲ್ಲಿ, ಜಗದ್ಗುರುಗಳಾದ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತಿಯವರು ತಮ್ಮ ಜಯಂತ್ಯುತ್ಸವದಲ್ಲಿ ಬಂದಾಗ, ಸ್ವಾಗತಗೀತೆಯನ್ನು ೧೫ ನುಡಿಗಳಲ್ಲಿ ರಚಿಸಿರುವ ಗೀತೆಯು ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿದೆ.

ಅಹೋಬಲದಾಸರು ವಿಶಿಷ್ಟಾದ್ವೈತ ಮತಕ್ಕೆ ಸೇರಿದರೂ, ಅವರು ಸರ್ವ ದೇವ ಸ್ತುತಿಯನ್ನು ಮಾಡಿರುವುದು ವಿಶೇಷವಾಗಿದೆ. ಅವರ ವ್ಯಕ್ತಿವಿಶಿಷ್ಟತೆಯನ್ನು ಇದರಿಂದ ಗುರುತಿಸಬಹುದು.

(ಸಂ. ೩೫–೧)

೧೦೫. ಜಾಜೀಶ (ಶಾಮಶರ್ಮರು)

ಕೌಂಡಿಣ್ಯಗೋತ್ರಕ್ಕೆ ಸೇರಿದ ರಾಮಸ್ವಾಮಿ ಅಯ್ಯಂಗಾರ್ ಅವರು ಶಾಮಶರ್ಮರ ತಂದೆ. ರಂಗಮ್ಮಾಳ್ ತಾಯಿ. ದೊಡ್ಡಹೆಜ್ಜಾಜಿ ಊರಿನ ಲಕ್ಷ್ಮೀಚನ್ನಕೇಶವಸ್ವಾಮಿ ದೇವಾಲಯದ ಅರ್ಚಕ ಮನೆತನದವರು. ಶಾಮಶರ್ಮರು ಉಪಾಧ್ಯಾಯರಾಗಿದ್ದರು. ಇವರು ಪ್ರತಿದಿನ ಬೀದಿಬೀದಿಗಳಲ್ಲಿ ತಂಬೂರಿ ಹಿಡಿದು ಹಾಡುತ್ತ ಉಂಛವೃತ್ತಿಯನ್ನು ಮಾಡುತ್ತಿದ್ದರಂತೆ. ಕಾಲ ಕ್ರಿ.ಶ.೧೮೮೪–೧೯೭೨.

ಇವರು ಹರೇಕೃಷ್ಣನಾಮಾವಳಿ, ಶ್ರೀಗೋವಿಂದ ನಾಮಾವಳಿ, ಶ್ರೀಮನ್ನಾರಾಯಣ ಸುಧಾರಸ, ಕೇಶವನಾಮ ರಸಾಯನ ಎಂಬ ನಾಲ್ಕು ನಾಮಾವಳಿಗಳನ್ನು ರಚಿಸಿದ್ದಾರೆ.

ಶಾಮಶರ್ಮರ ೧೧೧೦ ಕೀರ್ತನೆಗಳು ದೊರೆತಿವೆ. ಶ್ರೀಹರಿಯ ಪರ, ವ್ಯೂಹ, ವಿಭವ ಮತ್ತು ಅರ್ಚಾ ರೂಪಗಳ ಹಲವು ಅವತಾರಗಳನ್ನು ಸ್ತುತಿಸಿದ್ದಾರೆ. ಬಾಲಕೃಷ್ಣನ ಲೀಲೆಗಳು, ಆಳ್ವಾರ್, ಆಚಾರ್ಯ ಸ್ತುತಿಗಳು ಶ್ರೀವೈಷ್ಣವಧರ್ಮಕ್ಕನುಗುಣವಾಗಿ ರಚನೆಯಾಗಿದೆ. ಹಸೆಗೆ ಕರೆವ ಹಾಡು, ಲಾಲಿಹಾಡು ಇತ್ಯಾದಿ ಸಂಪ್ರದಾಯದ ಹಾಡುಗಳನ್ನೂ ರಚಿಸಿದ್ದಾರೆ. ಅಷ್ಟೇ ಅಲ್ಲದೆ ನಾಡು-ನುಡಿಗಳ ಪ್ರೇಮವನ್ನು ಮೆರೆದಿದ್ದಾರೆ.

(ಸಂ. ೩೫-೨)

೧೦೬. ಶೆಲ್ವರಾಯ (ಸಂಪತ್ತಯ್ಯಂಗಾರ್ಯರು)

ದಾಸರ ತಂದೆ ಮೈಸೂರಿನ ಶ್ರೀರಂಗಾಚಾರ್ಯರು. ಸಂಪತ್ತಯ್ಯಂಗಾರ್ಯರು ೧೯೦೦ರಲ್ಲಿ ಜನಿಸಿದರು. ಪಾರಂಪರಿಕ ಸಂಸ್ಕೃತ ವಿದ್ಯಾಭ್ಯಾಸದೊಂದಿಗೆ, ಸಂಸ್ಕೃತ ಎಂ.ಎ. ಮಾಡಿ, ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಕನ್ನಡ, ಸಂಸ್ಕೃತ, ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿದ್ದರು. ಸಂಪತ್ತಯ್ಯಂಗಾರ್ಯರ ತಂದೆಯವರೇ ಅವರಿಗೆ ಗುರುಗಳೂ ಆಗಿದ್ದಾರೆ.

ಇವರು ೧೦ ಕೀರ್ತನೆಗಳು ದೊರೆತಿವೆ. 'ಶೆಲ್ವರಾಯ' ಎಂಬ ಅಂಕಿತವನ್ನು ಬಳಸಿದ್ದಾರೆ. ಇದರಲ್ಲಿ ಎಂಟು ಕನ್ನಡ ಕೀರ್ತನೆಗಳಿದ್ದು, ೨ ತಮಿಳು ಕೀರ್ತನೆಗಳಿವೆ. ಈ ಎಂಟು ಕನ್ನಡ ಕೃತಿಗಳಲ್ಲಿ ಆತ್ಮನಿವೇದನೆಯೊಂದಿಗೆ ಆಧ್ಯಾತ್ಮಿಕ ಅನುಭವದಿಂದ ಕೂಡಿ ತಾತ್ವಿಕ ಕೃತಿಗಳೂ ಆಗಿವೆ.

ಇವರು 'ಶ್ರೀವೈಷ್ಣವ ಸಿದ್ಧಾಂತ ಪ್ರಚಾರಿಣಿ ಸಭಾ' ಎಂಬ ಸಂಸ್ಥೆಯನ್ನು ಕಟ್ಟಿ, ಅದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. 'ಆನಂದ' ಎಂಬ ತ್ರೈಮಾಸಿಕ ಪತ್ರಿಕೆಯನ್ನೂ ಮೂರು ವರ್ಷಗಳ ಕಾಲ ನಡೆಸಿದರು. ಆನಂದ ಪತ್ರಿಕೆಯಲ್ಲಿಯೇ ಅವರ ಕೀರ್ತನೆಗಳು ಪ್ರಕಟವಾದದ್ದು.

ಸಂಪತ್ತಯ್ಯಂಗಾರ್ಯರು ೧೯೮೩ರಲ್ಲಿ ವೈಕುಂಠವಾಸಿಗಳಾದರು.

(ಸಂ. ೩೫-೨)

೧೦೭. ಜಾಜಿಪುರೀಶ (ನಾರಾಯಣಶರ್ಮ)

ಇವರ ನಿಜನಾಮ ನಾರಾಯಣಶರ್ಮ. ಕೌಂಡಿಣ್ಯಗೋತ್ರದ ವೆಂಕಟರಂಗನ್ ಇವರ ತಂದೆ. ತಾಯಮ್ಮಾಳ್ ಇವರ ತಾಯಿ. ೧೯೧೨ರಲ್ಲಿ ನಾರಾಯಣಶರ್ಮರು ಜನಿಸಿದರು. ಇವರ ಊರು ಬೆಂಗಳೂರು ಜಿಲ್ಲೆಯ ದೊಡ್ಡಹೆಜ್ಜಾಜಿ. ಕನ್ನಡ ಎಲ್.ಎಸ್. ತೇರ್ಗಡೆಯಾಗಿ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಇವರ ವಂಶಸ್ಥರೇ ಆದ ರಂಗದಾಸರನ್ನೂ, ಶಾಮಶರ್ಮರನ್ನೂ ಗುರುಗಳನ್ನಾಗಿ ಸ್ವೀಕರಿಸಿದ್ದರು. ಹೆಜ್ಜಾಜಿಯ ಚೆನ್ನಕೇಶವನ ಅನನ್ಯ ಭಕ್ತರಾಗಿದ್ದರು. ಅವನ ಹೆಸರಿನಲ್ಲೇ 'ಜಾಜಿಪುರವಾಸ', 'ಜಾಜಿಪುರೀಶ', ಮತ್ತು 'ನಾರಾಯಣಶರ್ಮದಾಸ' ಎಂಬ ಅಂಕಿತದಲ್ಲಿ ೨೬ ಕೀರ್ತನೆಗಳನ್ನು ರಚಿಸಿದ್ದಾರೆ. ಕೀರ್ತನೆಗಳಲ್ಲಿ ಶ್ರೀಹರಿ, ಆತ್ಮನಿವೇದನೆ, ಲೋಕನೀತಿ ಹಾಗೂ ತಾತ್ವಿಕ ದೃಷ್ಟಿಗಳು ಮೇಳೈಸಿವೆ ಅಲ್ಲದೆ ೭ ಧಾರ್ಮಿಕ ಗ್ರಂಥಗಳ ರಚನೆಯೂ ಆಗಿದೆ.

ಶ್ರೀವೈಷ್ಣವ ಮತ, ಸಂಕ್ಷಿಪ್ತ ಭಗವದಾರಾಧನ ಕ್ರಮ, ಯಜುರ್ವೇದ ಸಂಧ್ಯಾವಂದನ ವಿಧಾನ, ಶ್ರೀಮದ್ರಹಸ್ಯತ್ರಯ ಸಾರಸಂಗ್ರಹ, ಭಗವದ್ರಾಮಾನುಜ ಅಷ್ಟೋತ್ತರ ಶತನಾಮಾವಳಿ, ಅಳವಂದಾರ್ ಸ್ತೋತ್ರರತ್ನ ಸಂಗ್ರಹ, ಆತ್ಮಚರಿತ್ರೆ. ಈ ಏಳೂ ನಾರಾಯಣಶರ್ಮರಿಂದ ರಚಿತವಾಗಿರುವ ಗ್ರಂಥಗಳು.

ನಾರಾಯಣಶರ್ಮರು ೧೯೯೨ರಲ್ಲಿ ವೈಕುಂಠವಾಸಿಗಳಾದರು.

(ಸಂ. ೩೫-೨)

೧೦೮. ಪಾಂಗಿರಿರಂಗ (ಆಸೂರಿ ರಾಮಸ್ವಾಮಿ ಅಯ್ಯಂಗಾರ್)

ಇವರ ನಿಜನಾಮ ಆಸೂರಿ ಕೆ. ರಾಮಸ್ವಾಮಿ ಅಯ್ಯಂಗಾರ್ ಎಂದು. ಶ್ರೀನಿವಾಸ ಅಯ್ಯಂಗಾರ್ ಇವರ ತಂದೆ. ತಾಯಿ ವೆಂಕಟಲಕ್ಷಮ್ಮ. ೧೮೮೯ರಲ್ಲಿ ರಾಮನವಮಿಯಂದು ಜನಿಸಿದರು. ಬಾಲ್ಯದಿಂದಲೇ ದೈವಭಕ್ತರಾಗಿದ್ದು

ಅಕ್ಷರಾಭ್ಯಾಸಕ್ಕೆ ಮೊದಲೇ ನರಸಿಂಹನ ಸ್ತುತಿರೂಪದ ಹಲವು ದೇವರನಾಮಗಳನ್ನು ರಚಿಸಿದ್ದರಂತೆ. ಅರಕಲಗೂಡು ತಾಲ್ಲೂಕಿನ ಕೇರಳಾಪುರ ಇವರ ಊರು.

ಪ್ರಾರಂಭದಲ್ಲಿ ಉಪಾಧ್ಯಾಯರಾಗಿದ್ದು ಕ್ರಮೇಣ ಲೋಕೋಪಯೋಗಿ ಇಲಾಖೆಯಲ್ಲಿ ಅಕೌಂಟೆಂಟ್ ಆಗಿದ್ದರು. ದೇವರ ನಾಮಗಳ ರಚನೆಯ ಜೊತೆಜೊತೆಗೇ 'ಕಮಲಾಕರ ಡ್ರೆಮಾಟಿಕ್ಸ್ ಕಂಪನಿ' ಎಂಬ ನಾಟಕ ಕಂಪನಿಯನ್ನು ನಡೆಸುತ್ತಿದ್ದರು. ಸಂಗೀತದಲ್ಲೂ, ಪಿಟೀಲುವಾದನದಲ್ಲೂ ಪರಿಣತಿ ಇತ್ತು. ಮೈಸೂರಿನ ಜಯಚಾಮರಾಜ ಒಡೆಯರಿಂದ 'ಸರಳ ಕವಿ' ಎಂಬ ಬಿರುದು ಪಡೆದಿದ್ದರು.

ಮುಂದೆ ಸಾಯಿಬಾಬಾರ ಅನುಗ್ರಹದಿಂದ 'ಭರತಭಕ್ತಿ ಕಾವ್ಯ' ಎಂಬ ಕೃತಿಯನ್ನು ರಚಿಸಿದರು. ೭೦ನೇ ವಯಸ್ಸಿನಲ್ಲಿ ಇವರ ಕಣ್ಣುಗಳು ಮಂಜಾದಾಗ ಇವರ ಸೊಸೆ ಕಮಲಮ್ಮ ದಾಸರಿಗೆ ಲಿಪಿಗಾರ್ತಿಯಾದರು.

ಇವರು ಅನೇಕ ನಾಟಕಗಳನ್ನು ರಚಿಸಿದ್ದಾರೆ. ಪ್ರಹ್ಲಾದ ಚರಿತೆ, ಕೃಷ್ಣಲೀಲಾ, ಮದಾಲಸಾ, ಸುಪ್ರಭಾ ವಿಲಾಸ, ಕಬೀರದಾಸ, ಬಭ್ರುವಾಹನ, ಹರಿಮಾಯಾ, ಗೀತಕುಸುಮಾಕರ, ಸಂಗೀತಕಲ್ಯಾಣ – ಇವು ಪ್ರಮುಖ ನಾಟಕಗಳು.

ಭರತಭಕ್ತಿಕಾವ್ಯ, ಶ್ರೀನಿವಾಸಲೀಲಾವಿಲಾಸ, ಮಾರುತಿಭಕ್ತಿಸ್ತವ, ಶ್ರೀ ಗೋಕರ್ಣಮಹಿಮಾದರ್ಶನ, ಮಾರುತಿಭಕ್ತಿದರ್ಪಣ, ಶ್ರೀ ಆಳ್ವಾರರ ಚರಿತ್ರೆ ಇವು ಷಟ್ಪದಿ ಕಾವ್ಯಗಳು.

ಆಸೂರಿಯವರ ೪೪೬ ಕೀರ್ತನೆಗಳು ಉಪಲಬ್ಧವಾಗಿವೆ. ವಿಶಿಷ್ಟಾದ್ವೈತ ತತ್ತ್ವದ ವಿಶಿಷ್ಟ ಲಕ್ಷಣಗಳಾದ ಶ್ರೀಹರಿಯಲ್ಲಿ ಏಕನಿಷ್ಠೆ, ಶರಣಾಗತಿ ತತ್ತ್ವ, ಆಳ್ವಾರರುಗಳ ಸ್ತುತಿ ಇವಲ್ಲದೇ ಶ್ರೀವೈಷ್ಣವ ಕೀರ್ತನಕಾರರಲ್ಲಿ ಅಷ್ಟಾಗಿ ಕಾಣದ ಸರ್ವದೈವಸ್ತುತಿ ಇವರಲ್ಲಿ ವಿಶೇಷವಾಗಿದೆ. ಹರಿ-ಹರರಲ್ಲಿನ ಸಮಾನತಾ ಪ್ರತಿಪಾದನೆ ಇವರ ವೈಶಿಷ್ಟ್ಯ. ತಮ್ಮ ಅಂಕಿತವಾದ ಮಾಂಗಿರೀಶ ಹೆಸರಿನ ಮಾವಿನಕೆರೆ ರಂಗನಾಥನನ್ನೂ ಕುರಿತು ಹಾಡುಗಳಿವೆ. ಅದರಂತೆ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ಕುರಿತು ೧೫೦ಕ್ಕೂ ಮಿಕ್ಕಿ ಹಾಡುಗಳನ್ನು ರಚಿಸಿದ್ದಾರೆ. ಸಂಪ್ರದಾಯದ ಹಾಡುಗಳನ್ನೂ ರಚಿಸಿದ್ದಾರೆ. ಅಸೂರಿಯವರನ್ನು ಕುರಿತೇ ಎರಡು ಕೃತಿಗಳು ರಚನೆಯಾಗಿದೆ. ೧೯೮೪ರಲ್ಲಿ ಆಸೂರಿಯವರು ಪರಮಪದವನ್ನು ಸೇರಿದರು.

(ಸಂ. ೩೫-೨)

೧೦೯. ಕೋಸಲಪುರೀಶ

ಇವರ ಹೆಸರಿನಿಂದ ಮೊದಲ್ಗೊಂಡು ಜೀವನ ವಿವರಗಳು ಯಾವುದೂ ತಿಳಿದಿಲ್ಲ. 'ಕೋಸಲಪುರೀಶ' ಎಂಬ ಅಂಕಿತದಲ್ಲಿ ೧೬ ಮಾತ್ರ ಕೀರ್ತನೆಗಳು ಲಭ್ಯವಾಗಿದೆ. ಇವುಗಳಲ್ಲಿ ೧೨ ಹರಿಯ ಸ್ತುತಿಗಳೇ ಆಗಿವೆ. ಭಾಷೆ ಸಂಸ್ಕೃತ ಭೂಯಿಷ್ಠವಾಗಿದೆ. ಆದರೆ ಪ್ರಸಿದ್ಧ ಹರಿದಾಸರ ಕೀರ್ತನೆಗಳೊಂದಿಗೆ ಇವರ ಕೀರ್ತನೆಗಳೂ ಸ್ಥಾನ ಪಡೆದು ಸ್ವರಪ್ರಸ್ತಾರ ಹಾಕಿ ಸಂಗೀತಕ್ಕೆ ಅಳವಡಿಸುವಷ್ಟು ಮುಖ್ಯವಾಗಿದೆ.

(ಸಂ. ೩೫-೨)

೧೧೦. ವಿಠಲವ್ಯಾಸ (ಬಡಣ್ಣಾಚಾರ್ಯ)

ಇವರ ನಿಜನಾಮ ಬಡಣ್ಣಯ್ಯಾಚಾರ್ಯರು ಎಂದು. ಇವರನ್ನು ಅಣ್ಣಾವಧೂತರು ಎಂದೂ ಕರೆಯುತ್ತಾರೆ. ದೊರೆತಿರುವ ನಾಲ್ಕು ಕೀರ್ತನೆಗಳಲ್ಲಿ ಒಂದು ಉರ್ದೂ ಗೀತೆ ಇದೆ. ಸವಣೂರಿನ ನವಾಬನೊಂದಿಗೆ ಸಂಬಂಧವಿದ್ದ ಬಡಣ್ಣಾಚಾರ್ಯರು ಇವರೇ. ಇವರ ಕಾಲ ಸು. ೧೮೦೦.

(ಸಂ. ೩೫-೨)

೧೧೧. ರಂಗಸ್ವಾಮಿದಾಸ/ತುಲಸೀರಾಮ (ಮಳಗಿ ರಂಗಸ್ವಾಮಿದಾಸರು)

ಇವರ ನಿಜನಾಮ ಮಳಿಗೆ ರಂಗಸ್ವಾಮಿದಾಸರು. ತಂದೆ ಮುಳಬಾಗಿಲಿನ ಗಾಣಿಗಶೆಟ್ಟಿ ಮತಸ್ಥರಾದ ಮಳಿಗೆ ಅಣ್ಣಯ್ಯಸೆಟ್ಟಿ, ತಾಯಿ ಗುರ್ರಮ್ಮನವರು. ಕ್ರಿ.ಶ.೧೮೬೮ ಜನವರಿಯಲ್ಲಿ ಜನಿಸಿದವರು. ಸಕ್ಕರೆ ಮತ್ತು ಬೆಲ್ಲದ ವ್ಯಾಪಾರವು ಇದ್ದುದರಿಂದ ಇವರನ್ನು ಸವಿರಂಗಸ್ವಾಮಿ ಎಂದೂ ಕರೆಯುತ್ತಿದ್ದರಂತೆ. ಹರಿಕಥೆ, ಪ್ರವಚನ, ಉಪದೇಶಗಳು ಹಾಗು

ದೈವಧ್ಯಾನಗಳಿಂದ ಪ್ರಸಿದ್ಧರಾಗಿದ್ದ ತುಳಸೀರಾಮದಾಸರ ಶಿಷ್ಯರಾದ ಮೇಲೆ ವ್ಯಾಪಾರ ವಹಿವಾಟುಗಳನ್ನು ರಂಗಸ್ವಾಮಿದಾಸರು ಬಿಟ್ಟು, ತುಳಸೀರಾಮದಾಸರಿಂದಲೇ ದೀಕ್ಷೆಯನ್ನು ತೆಗೆದುಕೊಂಡರು.

ಗುರುಗಳಂತೆ ಇವರೂ ಅನೇಕ ಶಿಷ್ಯರನ್ನು ರೂಪಿಸಿದರು. ತುಳಸೀರಾಮದಾಸರು ಪ್ರಾರಂಭಿಸಿದ್ದ ಭಜನೆ, ಹರಿಕಥೆ, ತಿರುನಕ್ಷತ್ರ, ರಾಮೋತ್ಸವ, ಕೃಷ್ಣೋತ್ಸವಗಳ ಜೊತೆಗೆ ರಾಮಕೋಟಿ ಎಂಬ ಹೆಸರಿನ ಅಖಂಡ ನಾಮಸ್ಮರಣೆಯ ಭಜನೆಯನ್ನು ರೂಢಿಗೆ ತಂದರು. ಇದು ಕನಿಷ್ಠ ೨೪ ಗಂಟೆಗಳ ಮತ್ತು ಗರಿಷ್ಠ ೭ ದಿನಗಳ ನಿರಂತರ ಭಜನೆ. ೧೯೨೫ರಿಂದ ಮುಳಬಾಗಿಲಿನಲ್ಲಿ 'ತುಳಸೀರಾಮಾಲಯ ದೇವಾಲಯ'ವನ್ನು ನಿರ್ಮಿಸಿದ್ದಾರೆ. ಅವರ ತಂದೆಯವರು ಕಟ್ಟಿಸಿದ್ದ ಭಜನಾ ಮಂದಿರವನ್ನೇ ದೇವಾಲಯವಾಗಿ ಮಾರ್ಪಡಿಸಿದರು. ೧೯೩೯ರಲ್ಲಿ ದಾಸರ ವಿಗ್ರಹದೊಂದಿಗೆ ಶ್ರೀನಿವಾಸದೇವರ ವಿಗ್ರಹವನ್ನೂ ಪ್ರತಿಷ್ಠಾಪಿಸಿದರು.

ರಂಗಸ್ವಾಮಿದಾಸರ ೭೫ ಕೀರ್ತನೆಗಳು ಉಪಲಬ್ಧವಾಗಿವೆ. ಇವರ ಕೀರ್ತನೆಗಳಲ್ಲಿ ಹನುಮದ್ವಿಲಾಸವೂ (೧೦೧ ನುಡಿ), ರಾಮಕೃಷ್ಣ ನಾಮಾವಳಿಗಳೂ ಕೆಲವು ತೆಲುಗು ಕೀರ್ತನೆಗಳೂ ಇವೆ. ಶ್ರೀರಾಮನು ದಾಸರಿಗೆ ಪ್ರಿಯವಾದ ದೇವರು. ವಿಶಿಷ್ಟಾದ್ವೈತ ಭಕ್ತಿಮಾರ್ಗದಲ್ಲಿ ಶರಣಾಗತಿ ಧರ್ಮವನ್ನು ಅನುಸರಿಸಿದ್ದಾರೆ. ಇವರಿಗೆ ಅನೇಕ ಶಿಷ್ಯರಿದ್ದು, ಇವರ ಮೇಲೆ ಬರೆದ ಹಾಡುಗಳೂ ಇವೆ. ಪರಕಾಲಮಠದ ಸಂಪರ್ಕದಲ್ಲಿದ್ದ ದಾಸರಿಗೆ ಭಕ್ತ-ಶಿಷ್ಯರಿಂದ ಬೆಳ್ಳಿಯ ಕಿರೀಟದ ಸಮರ್ಪಣೆಯಾಗಿತ್ತಂತೆ. ಮಳಿಗೆ ರಂಗಸ್ವಾಮಿದಾಸರು ೧೯೪೧ರಲ್ಲಿ ಮುಳಬಾಗಿಲಿನಲ್ಲಿ ದೇಹತ್ಯಾಗ ಮಾಡಿದರು.

(ಸಂ. ೩೫-೧)

೧೧೨. ಅಚ್ಯುತವಿಠಲ

ಶ್ರೀವೈಷ್ಣವ ಹರಿದಾಸರು ಯಾರೂ ಸಾಮಾನ್ಯವಾಗಿ ವಿಠಲಾಂಕಿತರಲ್ಲ. ಆದ್ದರಿಂದ ಅಚ್ಯುತವಿಠಲರು ಮಾಧ್ವರೇ ಇರಬೇಕು. ಆದರೂ ಅವರು ರಚಿಸಿದ ಎರಡೇ ಕೀರ್ತನೆಗಳು ಲಭ್ಯವಿದ್ದು, ಅವು ಶ್ರೀವೈಷ್ಣವರಾದ ಬೇಲೂರು ವೈಕುಂಠದಾಸರ ಸ್ತುತಿಪರವಾಗಿವೆ. ಯಾವುದೋ ಕಾರಣದಿಂದ ವೈಕುಂಠದಾಸರನ್ನು ಟೀಕಿಸಿದ್ದರಿಂದ ಕಣ್ಣು ಹೋದುವಂತೆ. ಪಶ್ಚಾತ್ತಾಪಪಟ್ಟು ವೈಕುಂಠದಾಸರಿಗೆ ಶರಣು ಹೋದರಂತೆ. ಆಗ ಪುನಃ ದೃಷ್ಟಿಪ್ರಾಪ್ತವಾಯಿತೆಂಬ ಐತಿಹ್ಯವಿದೆ.

(ಸಂ. ೩೫-೧)

೧೧೩. ವೆಂಕಟದಾಸರು (ಚಿಕ್ಕನಾಗಪುರವಾಸ)

ವೆಂಕಟದಾಸರು ವಾಸುದೇವಾರ್ಯರ ಶಿಷ್ಯಪರಂಪರೆಯಲ್ಲಿ ಬರುವ ಒಬ್ಬ ಕೀರ್ತನಕಾರರು. ಇವರು ಬಬ್ಬೂರುಕಮ್ಮೆ ಕುಲದ ಅದ್ವೈತ ಬ್ರಾಹ್ಮಣರು. ಇವರ ಕಾಲ ಸು. ಕ್ರಿ.ಶ.೧೭೫೦. ಇವರ ಅಂಕಿತ 'ಚಿಕ್ಕನಾಗಪುರವಾಸ' ಎಂದು. ಇವರ ೧೬ ಹಾಡುಗಳು ದೊರಕಿವೆ. ಕೀರ್ತನೆಗಳು ಸರಳ ಭಾಷೆಯಲ್ಲಿದ್ದು, ಭಾವಬಂಧದಿಂದ ಕೂಡಿ ಸುಂದರವಾಗಿವೆ. ಆತ್ಮನಿವೇದನೆಯ ಕೃತಿಗಳಲ್ಲಿ ಅದ್ವೈತ ನಿಷ್ಠೆಗೆ ಅನುಗುಣವಾಗಿ, ಗುರುಗಳಲ್ಲೇ ನಿವೇದನೆಯನ್ನು ಮಾಡಿಕೊಂಡಿದ್ದಾರೆ.

ಇವರು ಸಂಸ್ಕೃತ ಹಾಗೂ ತೆಲುಗಿನಲ್ಲಿಯೂ ಕೃತಿಗಳನ್ನು ರಚಿಸಿದ್ದಾರೆಂದು ತಿಳಿದುಬರುತ್ತದೆ. ಅಲ್ಲದೆ 'ಅಖಂಡಾನಂದ ಸ್ವರೂಪ' ಎಂಬ ಅದ್ವೈತ ತತ್ವಗಳನ್ನು ನಿರೂಪಿಸುವ ಗದ್ಯಕೃತಿಯನ್ನೂ ರಚಿಸಿದ್ದಾರೆ.

(ಸಂ. ೩೦)

(ಉ) ಅದ್ವೈತ ಸಂಪ್ರದಾಯದ ಹರಿದಾಸರು

೧೧೪. ಗೋಪಾಲಾರ್ಯರು

ಇವರ ಹೆಸರೂ ಅಂಕಿತವೂ ಒಂದೇ ಆಗಿದೆ. ಇವರು ವೆಂಕಟದಾಸರ ಗುರುಗಳಾಗಿದ್ದರು. ಇದು ಬಿಟ್ಟರೆ ಇವರ ಜೀವನದ ಯಾವುದೇ ವಿವರವೂ ತಿಳಿದಿಲ್ಲ. ಇವರ ಕಾಲ ಸುಮಾರು ಕ್ರಿ.ಶ.೧೬೭೫. ಕಾಖಂಡಕಿ ಮಹಿಪತಿರಾಯರ ಸಮಕಾಲೀನರೆಂದು ಗೋಪಾಲಾರ್ಯರನ್ನು ಪರಿಗಣಿಸಿದರೆ, ಇವರೇ ಅದ್ವೈತ ಸಾಹಿತ್ಯದ ಮೊದಲಿಗರೆಂದು [illegible].

ಗೋಪಾಲಾರ್ಯರ ೩೪ ಕೀರ್ತನೆಗಳು ದೊರಕಿವೆ. ಇವರ ಕೀರ್ತನೆಗಳು ಬಿಗಿಬಂಧದಿಂದ ಕೂಡಿದೆ. ಗುರುವಿನಲ್ಲಿ ದೇವರನ್ನೂ ಕಾಣುವ ಅದ್ವೈತ ದೃಷ್ಟಿಯಿದೆ. ತೆಲುಗು ಹಾಗೂ ಸಂಸ್ಕೃತದಲ್ಲಿಯೂ ಕೀರ್ತನೆಗಳನ್ನು ರಚಿಸಿದ್ದಾರೆ.

ಮನುಷ್ಯನ ಸಮಯಸಾಧಕತೆ, ಸ್ವಾರ್ಥವನ್ನು ಮೂರನೆಯ ಪಥವನ್ನಾಗಿ ಕಂಡಿರುವ ದಾಸರ ಸಮಾಜದರ್ಶನ ಬದಲಾಗುತ್ತಿರುವ ಸಮಾಜಕ್ಕೆ ಕನ್ನಡಿಯಾಗಿದೆ. ಆಧುನಿಕ ಪ್ರಜ್ಞೆಯಿಂದ ಕೂಡಿದೆ.

(ಸಂ. ೩೦)

೧೧೫. ಭೀಮಾಶಂಕರರು

ಇವರ ನಿಜನಾಮ ಸಿಂದಗಿಯ ಕುಲಕರ್ಣಿ ಸಂಕಣ್ಣ(ಶಂಕರ) ಎಂದು. ಇವರು ತಮ್ಮ ಗುರುಗಳಾದ ಗುರಪ್ಪಯ್ಯನವರ ಉತ್ಕಟ ಭಕ್ತರು. ಗುರುಪ್ಪಯ್ಯನವರ ಇನ್ನೊಬ್ಬ ಭಕ್ತರು ಬಳಗಾನೂರ ಕುಲಕರ್ಣಿ ಭೀಮಣ್ಣ ಎಂಬುವವರು. ಗುರುಗಳ ಸಮಾಧಿ ಉತ್ಸವಕ್ಕೆ ಭೀಮಣ್ಣನವರು ಬರಲಿಲ್ಲ. ಸಂಕಣ್ಣನವರು ಕಾರಣಾಂತರದಿಂದ ತಡವಾಗಿ ಉತ್ಸವ ಮುಗಿದಮೇಲೆ ಬಂದರು. ಸಂಕಣ್ಣನವರ ಪಾರಮಾರ್ಥಿಕತೆ ಹಾಗೂ ಉತ್ಕಟ ಭಕ್ತಿಯಿಂದಾಗಿ, ಗುರುಗಳು ಗುಹಪ್ರವೇಶ ಮಾಡಿದ್ದರೂ, ಅವರನ್ನು ಒಳಗೆ ಕರೆದು 'ದುಃಖಿಸಬೇಡ. . . ನೀನೇ ಭೀಮಾ, ನೀನೇ ಶಂಕರ. ಆದ್ದರಿಂದ ನಿನಗೆ ಭೀಮಾಶಂಕರ' ಎಂದು ಹೆಸರಿಡುತ್ತೇನೆ ಎಂದರಂತೆ.

ಇವರ ಕಾಲ ಕ್ರಿ.ಶ.೧೭೬೦-೧೮೩೧. ಭೀಮಾಶಂಕರರ ಆಧ್ಯಾತ್ಮಿಕ ಜೀವನ, ಅವರು ಕೈಗೊಂಡ ತೀರ್ಥಯಾತ್ರೆ, ಅವರು ಸನ್ಯಾಸಾಶ್ರಮ ಸ್ವೀಕರಿಸಿದ್ದು, (ಇವರ ಚತುರ್ಥಾಶ್ರಮದ ಹೆಸರು ಶಂಕರಾನಂದಸರಸ್ವತಿ), ಹಂಪಿಯಲ್ಲಿ ವಿದ್ಯಾರಣ್ಯ ಪೀಠಾಧಿಪತಿಗಳಾಗಿದ್ದು, ನಾಲ್ಕು ವರ್ಷಗಳ ನಂತರ ಆ ಪೀಠತ್ಯಾಗ ಮಾಡಿ, ಮರಳಿ ಸಿಂದಗಿಗೆ ಬಂದದ್ದು ಮತ್ತು ಅವರ ಮಹಾಸಮಾಧಿಯ ಉತ್ಸವ ಈ ಎಲ್ಲ ವಿವರಣೆಗಳು 'ಶ್ರೀ ಭೀಮಾಶಂಕರ ಚರಿತ್ರೆ' ಎಂಬ ಗದ್ಯರೂಪದಲ್ಲಿರುವ, ೨೩ ಅಧ್ಯಾಯಗಳನ್ನೊಳಗೊಂಡ, ಹಸ್ತಲಿಖಿತ ಪ್ರತಿಯಲ್ಲಿ ದೊರಕುತ್ತದೆ.

ಇವರ ೨೬ ಗೀತೆಗಳು ದೊರಕಿವೆ. ಪರಮಾರ್ಥದತ್ತ ಮನುಷ್ಯನನ್ನು ಸೆಳೆಯುವ ಕಾರಣಗಳು, ಸದ್ಗುರು ಸ್ತವನ, ಆರಾಧ್ಯ ದೈವಗಳ ಸ್ತುತಿ, ಭಗವನ್ನಾಮ ಮಹಿಮೆ ಮತ್ತು ಸಾಧಕನಿಗೆ ಪರಮೇಶ್ವರನ ಕೃಪೆಯಿಂದ ಪ್ರಾಪ್ತವಾಗುವ ದಿವ್ಯ, ಅತೀಂದ್ರಿಯ ಅನುಭವಗಳು, ಅವರ ಗೀತೆಗಳಲ್ಲಿರುವ ವಿಷಯಗಳು, ಯೋಗ ಇತ್ಯಾದಿ ಆಧ್ಯಾತ್ಮ ಹಾಗೂ ಅದ್ವೈತ ತತ್ತ್ವಗಳನ್ನು ತಿಳಿಯಾದ ಕನ್ನಡದಲ್ಲಿ ಸಾರ್ಥಕವಾಗಿ ತಂದಿದ್ದಾರೆ. ಲಾಲಿಹಾಡು ಹಾಗೂ ಮಂಗಳಗಳಲ್ಲೂ ಪರಮಾರ್ಥ ತುಂಬಿದೆ. ಇವರ ಸಂಪ್ರದಾಯಕ್ಕೆ ಭೃಂಗುವಳ್ಳಿ ಸಂಪ್ರದಾಯವೆಂದೂ, ಸಿಂದಗಿ ಸಂಪ್ರದಾಯವೆಂದೂ ಕರೆಯುತ್ತಾರೆ.

(ಸಂ. ೨೦)

೧೧೬. ಶಂಕರ

ಇವರ ಹೆಸರು ಜಕ್ಕಪ್ಪಯ್ಯ ಎಂದು. ಇವರು ಭೀಮಾಶಂಕರರ ಪುತ್ರರು; ಸಿಂದಗಿಯವರೇ. ಕಾಲ ಕ್ರಿ.ಶ.೧೭೮೫-೧೮೭೯. ಇವರು ಅದ್ವೈತ ವೇದಾಂತದಲ್ಲಿ ಪಂಡಿತರು ಹಾಗೂ ಮಹಾತಪಸ್ವಿಗಳು. ಸಂಪ್ರದಾಯ ಪೂಜಾವಿಧಾನ, ಭಜನೆ, ಆರತಿಗಳ ಕ್ರಮ ಇವುಗಳಿಗೆ ವಿಶಿಷ್ಟ ನಿಯಮಗಳನ್ನು ರೂಪಿಸಿ ಕೊಟ್ಟವರು. ಸಿಂದಗಿಯಲ್ಲಿಯೆ ಸಮಾಧಿಸ್ಥರಾದರು.

ಜಕ್ಕಪ್ಪಯ್ಯನವರ ೨ ದೀರ್ಘಕೃತಿಗಳು ಹಾಗೂ ೪೬ ಹಾಡುಗಳು ದೊರೆತಿವೆ. ಶ್ರೀರಾಮಚಂದ್ರ ಚರಿತ್ರಾನುಸಂಧಾನ ಮತ್ತು ದತ್ತಾತ್ರೇಯ ಷಟ್ಪದಿ ಇವೆರಡೂ ದೀರ್ಘಕೃತಿಗಳು. ಇದರಲ್ಲಿ ಶ್ರೀರಾಮಚಂದ್ರ ಚರಿತ್ರಾನುಸಂಧಾನ ಕಾವ್ಯವು ಕೃಷ್ಣದಾಸ ಮುದಗಲ್ಲ ಅವರ ಮರಾಠಿಕೃತಿ 'ಯುದ್ಧಕಾಂಡ' ಎಂಬ ಕಾವ್ಯದ ಅನುವಾದ. ಇದರ ವಿಶೇಷತೆ ಏನೆಂದರೆ ಕನ್ನಡ ಹಾಗೂ ಮರಾಠಿ ಎರಡೂ ಭಾಷೆಗಳಲ್ಲಿದೆ. ಈ ಕೃತಿಯಲ್ಲಿ ತತ್ತ್ವಜ್ಞಾನ ವಿವೇಚನೆಯೂ ಹಾಸುಹೊಕ್ಕಾಗಿದೆ. ದತ್ತಾತ್ರೇಯ ಷಟ್ಪದಿಯು ಭಕ್ತಿಭಾವ ನಿರ್ಭರವಾಗಿದೆ. ಎರಡೂ ಕಾವ್ಯಗಳಲ್ಲಿ ಕನ್ನಡ ಭಾಷೆಯು ಸುಲಲಿತವಾಗಿ ಪ್ರಯೋಗವಾಗಿದೆ.

ಇವರ ಹಾಡುಗಳಲ್ಲಿ ಅದ್ವೈತ ಸಿದ್ಧಾಂತ ಎದ್ದುಕಾಣುವಂತಿದೆ. ಒಂದೆರಡು ಗೀತೆಗಳಲ್ಲಿ ಹಠಯೋಗದ ವಿವರಣೆಯಿದ್ದು, ಮತ್ತೊಂದು ಗೀತೆಯಲ್ಲಿ 'ತತ್ತ್ವಮಸಿ' ಶ್ರುತಿವಾಕ್ಯದ ವಿವರಣೆಯಿದೆ. ಬನಶಂಕರಿ, ಬಿಂದುಮಾಧವ, ದಶಾವತಾರದ ವರ್ಣನೆ ಇತ್ಯಾದಿಗಳಿವೆ. ಮತ್ತೊಂದು ವೈಶಿಷ್ಟ್ಯವೆಂದರೆ ಸವಣೂರಿನ ಶ್ರೀ ಸತ್ಯಬೋಧ ಯತಿಗಳ

ಸ್ತುತಿಯಿದೆ. ಒಟ್ಟಿನಲ್ಲಿ ಇವರ ರಚನೆಗಳಲ್ಲಿ ಆಧ್ಯಾತ್ಮಿಕ ನಿರೂಪಣೆ ಇರುವಂತೆಯೇ ಕವಿ ಹೃದಯದ ಅಭಿವ್ಯಕ್ತಿಯೂ ಇರುವುದನ್ನು ಗಮನಿಸಬಹುದು.

(ಸಂ. ೨೦)

೧೧೭. ತಿಮ್ಮಪ್ಪದಾಸರು (ಚಿಕನಾಗಪುರವಾಸ)

ಇವರ ನಿಜನಾಮ ತಿಮ್ಮಪ್ಪಯ್ಯ ಎಂದು. ತಂದೆ ನಾರಾಯಣಾರ್ಯ. ತಾಯಿ ಚೆನ್ನಾಂಬೆ. ತಿಮ್ಮಪ್ಪದಾಸರು ಬಬ್ಬೂರುಕಮ್ಮೆ ಕುಲದವರು. ಇವರ ಕಾಲ ಸು. ಕ್ರಿ.ಶ.೧೭೭೦–೧೮೬೦.

ದಾಸರು ಶ್ರೀರಂಗಪಟ್ಟಣದಲ್ಲಿ ಅರಸರ ಬಳಿ ರಾಯಸದ ವೃತ್ತಿಯಲ್ಲಿದ್ದರು. ಯಾವುದೋ ಒಂದು ಸಂದರ್ಭದಲ್ಲಿ ರಾಜರಿಗೆ ಮಾಡಿದ ಉಪಕಾರದಿಂದಾಗಿ ಹಾಸನ ಜಿಲ್ಲೆಯ ಅರಕಲಗೂಡು ಸಮೀಪ 'ಭಟಮಾನ್ಯ'ವನ್ನು ಪಡೆದಿದ್ದರು. ಆದರೂ ಬದುಕಿನ ಕೊನೆಗಾಲದಲ್ಲಿ ಬಡತನದಿಂದಾಗಿ ಸಾಲಗಾರರಾಗಿ ಬಾಳುವಂತಾಯಿತು.

ವಾಸುದೇವಾರ್ಯ ಎಂಬವರು ಅದ್ವೈತ ಪ್ರಮಾಣ ಪುರುಷರೂ, ಸಾಧಕರೂ, ಯತಿಗಳೂ ಆಗಿದ್ದವರು. ಜೊತೆಗೆ ತಿಮ್ಮಪ್ಪದಾಸರ ಪಿತಾಮಹರೂ ಹೌದು. ಅವರನ್ನೇ ತಿಮ್ಮಪ್ಪದಾಸರು ಗುರುಗಳನ್ನಾಗಿ ಸ್ವೀಕರಿಸಿದರು.ಇ ವರ ೧೬೦ ಕೀರ್ತನೆಗಳು ದೊರಕಿವೆ. ಇವರ ಅಂಕಿತ 'ಚಿಕನಾಗಪುರವಾಸ'. ಈ ೧೬೦ ಕೀರ್ತನೆಗಳಲ್ಲಿ ಪೂಜಾವಿಧಾನದ ಕೀರ್ತನೆಗಳು ೧೦೮. ಮಿಕ್ಕುಳಿದುವು ಗುರುಸ್ತುತಿ, ಸದ್ಗುರು ಬೋಧಾನುವಾದ ಸುಧೆ, ರಾಯಜೀವ ಸಂವಾದ, ಋಣಕೀರ್ತನೆಗಳು ಸಂಕೀರ್ಣ ಕೀರ್ತನೆಗಳು, ಒಬ್ಬಟ್ಟಿನ ಕೀರ್ತನೆಗಳು, ಇ.

ಪೂಜಾವಿಧಾನದ ವಿಧಿ–ವಿಧಾನಗಳನ್ನು ಅಳವಡಿಸಿಕೊಂಡು ಮಾಡುವ ಸ್ವಾಮಿಯ ಧ್ಯಾನ, ಸೇವೆ ಇವು ೧೦೮ ಕೀರ್ತನೆಗಳಲ್ಲಿ ಹರಡಿಕೊಂಡಿವೆ. 'ಇಷ್ಟದೇವತೆಗೆ ಅರ್ಪಿಸಲೆಂದು ಭಕ್ತಿಸೂತ್ರದಿಂದ ಕೋದ ಅಷ್ಟೋತ್ತರ ಶತನಾಮ ವಾಕ್‌ಪುಷ್ಪಮಾಲಿಕೆ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದನ್ನು 'ಗೇಯ ಪ್ರಬಂಧ' ಎಂದೂ ಕರೆಯಲಾಗಿದೆ. ಪೂಜೆಯ ಅಂಗವಾಗಿ ಬರುವ ಗೀತ, ನೃತ್ಯ, ವಾದ್ಯ ವೇದಗಳು, ಉಪನಿಷತ್ತು, ರಾಮಾಯಣ, ಭಾಗವತ, ಭಾರತ ಇವುಗಳಿಗೆಲ್ಲಾ ಪ್ರತ್ಯೇಕವಾದ ಹಾಡುಗಳಿದ್ದು ಶಿವನಿಗೂ ಕೃಷ್ಣ (ವೆಂಕಟೇಶ)ನಿಗೂ ಜೊತೆಜೊತೆಯಲ್ಲೇ ಪ್ರತ್ಯೇಕವಾದ ಹಾಡುಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಅದ್ವೈತ ತತ್ವದ ವಿಚಾರಗಳನ್ನು, ಹಾಗೆಯೇ ಸಾಮಾನ್ಯ ಭಕ್ತನೊಬ್ಬನ ಅಂತರಂಗದ ನಿವೇದನೆಯನ್ನು ಕಾಣಬಹುದು. ಒಬ್ಬಟ್ಟಿನ ಕೀರ್ತನೆಗಳು ಕೂಡ ಹೊಸ ಬಗೆಯದಾಗಿದೆ. ಸಂಭಾಷಣೆಯ ಶೈಲಿಯಲ್ಲಿದೆ.

ತಿಮ್ಮಪ್ಪ ದಾಸರ ಭಾಷಾಪ್ರೌಢಿಮೆ, ತತ್ವವಿಚಾರಗಳ ನಿರ್ವಹಣೆ ನೋಡಿದರೆ, ಅವರು ಪಂಡಿತರೂ ವಿದ್ವಾಂಸರೂ ಪ್ರತಿಭಾನ್ವಿತ ಕವಿಗಳೂ ಆಗಿದ್ದರೆಂದು ಹೇಳಬಹುದು.

(ಸಂ. ೨೪)

೧೧೮. ನಾರಾಯಣದಾಸ

ಇವರು ತಿಮ್ಮಪ್ಪದಾಸರ ಪುತ್ರರೂ ಶಿಷ್ಯರೂ ಆಗಿದ್ದರು. ಕ್ರಿ.ಶ.೧೯೦೨ರ ವರೆಗೆ (೮೦ ವರ್ಷ) ಬದುಕಿದ್ದರು. ಇವರು ಸ್ಮಾರ್ತಬ್ರಾಹ್ಮಣ ಕಮ್ಮೆಕುಲದವರು.

ಇವರ ೩೭ ಕೀರ್ತನೆಗಳು ದೊರಕಿವೆ. ಇವುಗಳಲ್ಲಿ ಶ್ರೀರಾಮ, ವೆಂಕಟೇಶ್ವರ ಹಾಗೂ ಚಾಮುಂಡೇಶ್ವರಿಯ ಸ್ತುತಿಗಳಿವೆ. ಗುರುಸ್ತುತಿಯಲ್ಲಿ ಶೃಂಗೇರಿ ಗುರುಪರಂಪರೆಯನ್ನು ಸ್ತುತಿಸಿರುವುದು ವಿಶೇಷವಾಗಿದೆ. ಇವರು ಕನ್ನಡ ಹರಿದಾಸ ಸಾಹಿತ್ಯದಲ್ಲಿಯೇ ವಿಶಿಷ್ಟವಾಗಿರುವ 'ಋಣಕೀರ್ತನ'ಕಾರರೆಂದು ಹೆಸರಾಗಿದ್ದಾರೆ. ಮೈಸೂರು ಅರಮನೆಯಲ್ಲಿ ನಡೆಯುವ ದಸರಾ, ಪೂಜೆ, ಆಡಳಿತ ಬದಲಾವಣೆ ಇತ್ಯಾದಿ ಆಡಳಿತ ಸಂಬಂಧವಾದ ವಿಷಯಗಳನ್ನು ತಾವು ಕಂಡಂತೆ ಸುಂದರವಾಗಿ ಚಿತ್ರಿಸಿದ್ದಾರೆ. ಈ ಮೂಲಕ ಅವರ ಕೀರ್ತನೆಗಳನ್ನು ಐತಿಹಾಸಿಕವಾಗಿಯೂ ಗುರುತಿಸುವಂತಾಗಿದೆ.

ಇವರ ಕೀರ್ತನೆಗಳಲ್ಲಿ ವಿಷಯ ವೈವಿಧ್ಯತೆಯಿದೆ ಮತ್ತು ಸಂಗೀತ ಪ್ರಜ್ಞೆಯ ಅರಿವಿನಿಂದಲೇ ರಾಗ–ತಾಳಬದ್ಧವಾಗಿ ರಚನೆಯಾಗಿವೆ. ತಮ್ಮ ಕೀರ್ತನೆಗಳಲ್ಲಿ ಭಗವದ್ಭಕ್ತಿಯ ಪರಮಾನಂದದ ಸ್ವರೂಪವನ್ನು ಸೊಗಸಾಗಿ ಚಿತ್ರಿಸಿದ್ದಾರೆ.

(ಸಂ. ೨೦)

೧೧೯. ಶಿವರಾಮ

ಇವರು ಭೀಮಾಶಂಕರರ ಎರಡನೆಯ ಮಗ. ಕಾಲ ಸು. ೧೭೦೦. ಇವರೂ ಸಿಂದಗಿಯವರೇ. ಸಂಸ್ಕೃತ, ಕನ್ನಡ ಮತ್ತು ಮರಾಠಿಯಲ್ಲಿ ವಿದ್ವಾಂಸರು. ಅದ್ವೈತ ವೇದಾಂತ ಪಾರಂಗತರು. ಸನಾತನ ಸಂಪ್ರದಾಯದವರಾದರೂ ಉದಾರ ಮತದವರು. ತಮ್ಮ ಮನೆತನದಲ್ಲಿ ನಡೆದುಬಂದಿದ್ದ, ಮುತ್ತೈದೆಯರಿಗೆ ಸಂಬಂಧಪಟ್ಟ ಒಂದು ಅಬದ್ಧವಾದ ಆಚರಣೆಯನ್ನು ನಿಲ್ಲಿಸಿದರೆಂದು ಪ್ರತೀತಿ ಇದೆ. ಇವರ ಎರಡು ಹಾಡುಗಳು ಮಾತ್ರ ದೊರೆತಿವೆ. ಶಿವರಾಮರ ಸಮಾಧಿ ಬಾಗಲಕೋಟೆಯಲ್ಲಿ ಇದೆ.

(ಸಂ. ೨೦)

೧೨೦. ಗುರುರಾಮಲಿಂಗ

ಗುರುರಾಮಲಿಂಗ ಅವರು ಗುಲ್ಬರ್ಗಾ ಜಿಲ್ಲೆಯ ಯಾಳಗಿಯ ಕುಲಕರ್ಣಿ ಮನೆತನಕ್ಕೆ ಸೇರಿದವರು. ಶ್ರೀವತ್ಸ ಗೋತ್ರದವರಾದ ಇವರ ತಂದೆಯ ಹೆಸರು ನರಸಿಂಹ. ತಾಯಿ ಲಿಂಗಾಂಬಿಕೆ. ಇವರಿಗೆ ಸಿಂದಗಿ ಸಂಪ್ರದಾಯದ ಅಪ್ಪಯ್ಯ ಅವರಿಂದ ರಾಮಮಂತ್ರೋಪದೇಶವಾಗಿತ್ತು. ಇವರು ಮಣಿಚೂಲ ಪರ್ವತದ ಗುಹೆಯಲ್ಲಿ ತಪಸ್ಸು ಮಾಡಿದ್ದರು. ಶಿಷ್ಯರಿಗೆ ವೇದಾರ್ಥವನ್ನು ಬೋಧಿಸುತ್ತಿದ್ದರೆಂದೂ ಯಾವಾಗಲೂ ಬ್ರಹ್ಮಾಕಾರ ವೃತ್ತಿಯಲ್ಲಿ ಇರುತ್ತಿದ್ದರೆಂದೂ ಉಲ್ಲೇಖವಿದೆ. ಇವರ ಮೂರು ಹಾಡುಗಳು ಮಾತ್ರ ದೊರೆತಿವೆ.

(ಸಂ. ೨೦)

೧೨೧. ಶ್ರೀಪತಿ* ೧೨೨. ನರಸಿಂಹ* (ಸಂ. ೨೦)

೧೨೩. ನರಸಪ್ಪ (ಭವತಾರಕ)

ಇವರ ನಿಜವಾದ ಹೆಸರು ನರಸಪ್ಪ ಕುಲಕರ್ಣಿ. ಗದಗ ಜಿಲ್ಲೆಯ ಮಲ್ಲಿಗೆವಾಡ ಎಂಬ ಗ್ರಾಮದಲ್ಲಿ ಭವತಾರಕರು ವಾಸಿಸುತ್ತಿದ್ದರು. ಅಲ್ಲಿಯ ಶಾನುಭೋಗರಾಗಿದ್ದರು. ೧೯ನೆಯ ಶತಮಾನದ ಪೂರ್ವಾರ್ಧವು ಅವರ ಕಾಲ. ಪರಮ ವೈರಾಗ್ಯಪರರು. ಅದೇ ಊರಿನ ಸೋಮೇಶ್ವರನ ಭಕ್ತರು. ಒಕ್ಕಲಿಗ ಭಕ್ತನಾದ ಕಲಿವಾಳದ ನಿಂಗಪ್ಪ ಎಂಬುವನನ್ನು ಭವಬವಣೆಯಿಂದ ಎಚ್ಚರಿಸಲು ನಾಲ್ಕು ಹಾಡುಗಳನ್ನು ರಚಿಸಿದ್ದಾರೆ. ಅಲ್ಲದೆ ಪಕ್ಕದ ಊರಾದ ಕೋಳಿವಾಡ ಗ್ರಾಮದಲ್ಲಿ ವಾಲೀಕಾರನಾದ ಹುಲಗಪ್ಪ ಎಂಬುವವನು ಸಹ ಆತ್ಮಾನುಭವಿಯಾಗಿದ್ದು ಈ ಇಬ್ಬರೂ ಭವತಾರಕರಿಗೆ ಆತ್ಮೀಯ ಶಿಷ್ಯರಾಗಿದ್ದರು.

ಇವರ ೬೯ ಹಾಡುಗಳು ದೊರೆತಿವೆ. ಅದ್ವೈತ ವೇದಾಂತವನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಉಪದೇಶಿಸಿದ್ದಾರೆ. ನಿಜಗುಣಶಿವಯೋಗಿಗಳ ಮೇಲೆ ಅವರಿಗೆ ಆದರಭಾವವಿರುವುದನ್ನು ಕಾಣಬಹುದು. ಯೋಗವನ್ನು ಕುರಿತು ಅವರ ಒಂದು ಹಾಡಿನಲ್ಲಿ ವಿವರವಿದೆ. ಜೀವನದಲ್ಲಿಯ ದುಃಖ, ನಿರಾಶೆ ಇತ್ಯಾದಿ ದೃಷ್ಟಿಯ ಅಭಿವ್ಯಕ್ತಿಯಿರದೆ ಉತ್ಸಾಹ, ಹರ್ಷ, ಆನಂದದ ಭಾವವನ್ನು ತಮ್ಮ ಹಾಡುಗಳಲ್ಲಿ ತಂದಿದ್ದಾರೆ. ಜ್ಞಾನೇಶ್ವರ, ಕಬೀರ, ತುಲಸೀದಾಸರಿಗೆ ಇರುವ ಸ್ಥಾನವನ್ನೇ ಕನ್ನಡದ ಭವತಾರಕರಿಗೆ ವಿಮರ್ಶಕರು ನೀಡಿದ್ದಾರೆ.

(ಸಂ. ೨೦)

೧೨೪. ವಿಶ್ವಪತಿ* ೧೨೫. ಸಿದ್ಧಗುರು ಶ್ರೀ ಪುರಾಂತರ* ೧೨೬. ಜ್ಞಾನಬೋಧ* (ಸಂ. ೨೦)

೧೨೭. ಚಿದಾನಂದಾವಧೂತರು (ಚಿದಾನಂದ)

ಇವರ ಮೂಲ ಹೆಸರು ಝುಂಕಪ್ಪ ಎಂದು. ಆಂಧ್ರ ಪ್ರದೇಶದ ಆದವಾನಿ ತಾಲ್ಲೂಕಿನ ದೊಡ್ಡಹರಿವಾಣ ಎಂಬ ಊರಿನಲ್ಲಿದ್ದ ಲಕ್ಷ್ಮೀಪತಿ ಹಾಗೂ ಅಣ್ಣಮ್ಮ ಎಂಬುವವರು ಇವರ ತಂದೆ ತಾಯಿಗಳು. ಝುಂಕಪ್ಪ ಕಡೆಯ ಮಗನಾಗಿ ಕ್ರಿ.ಶ.೧೭೦೦ರಲ್ಲಿ ಜನಿಸಿದರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ದೊಡ್ಡಹರಿವಾಣದಲ್ಲೇ ಆಯಿತು. ವೇದಾಧ್ಯಯನ ಮನೆಯಲ್ಲೇ ನಡೆಯುತ್ತಿತ್ತು.

ಒಮ್ಮೆ ಕುಟುಂಬ ಸಮೇತ ಅಹೋಬಲಕ್ಕೆ ದೇವರ ದರ್ಶನಕ್ಕೆಂದು ಹೋದಾಗ, ಅಲ್ಲಿ ನಾರಪ್ಪ [illegible] ಪರಿಚಯವಾಗಿ, ಅವರೊಂದಿಗೆ ಗಂಗಾವತಿಗೆ ಬಂದರು. ಲಕ್ಷ್ಮಕ್ಕ ಎನ್ನುವವರ ಆಶ್ರಯದಲ್ಲಿ ಉಳಿದರು. ಆಧಾ[illegible]

ಒಲವೂ ಇದ್ದುದನ್ನು ಕಂಡ ಲಕ್ಷ್ಮಕ್ಕ ಒಂದು ಲಕ್ಷ್ಮೀ ವಿಗ್ರಹವನ್ನು ಪೂಜೆಗಾಗಿ ಕೊಟ್ಟಳು. ಅಲ್ಲೇ ಸಮೀಪದಲ್ಲಿದ್ದ ಅಯೋಧ್ಯೆ ಎಂಬಲ್ಲಿ ಚಿದಾನಂದ ಎಂಬ ಸಿದ್ಧಪುರುಷರೊಬ್ಬರು ಝುಂಕಪ್ಪನ ಆಧ್ಯಾತ್ಮಿಕ ಆಸಕ್ತಿಯನ್ನು ಗಮನಿಸಿ, ತಮ್ಮ ಶಿಷ್ಯನನ್ನಾಗಿ ಪರಿಗ್ರಹಿಸಿದರು. ಅವರು ಝುಂಕಪ್ಪನಿಗೆ 'ಚಿದಾನಂದಾವಧೂತ' ಎಂದು ಆಶ್ರಮನಾಮವನ್ನು ಕೊಟ್ಟರು.

ಇವರು ಅಯೋಧ್ಯೆಯಲ್ಲಿದ್ದ ಬಗಳಾಮುಖಿಯ ಭಕ್ತರು. ಈ ದೇವಾಲಯವು ಸಿದ್ಧಪರ್ವತವೆಂದು ಪ್ರಸಿದ್ಧವಾದ ಬೆಟ್ಟದಲ್ಲಿದೆ. ಆ ದೇವಿಯನ್ನು ಆರಾಧಿಸಿ ಪ್ರತ್ಯಕ್ಷ ಮಾಡಿಕೊಂಡರೆಂದು ಹೇಳುತ್ತಾರೆ.

ಗಂಗಾವತಿಯ ಸಮೀಪ ಇರುವ ಕನಕಗಿರಿಯನ್ನು ಆಳುತ್ತಿದ್ದ ಕನಕಪ್ಪ ಉಡಿಚನಾಯಕ ಎಂಬವನ ಕರೆಯನ್ನು ಮನ್ನಿಸಿ ಚಿದಾನಂದಾವಧೂತರು ಅಲ್ಲಿಗೆ ಬಂದರು. ಅಲ್ಲಿಯೂ ಬಗಳಾಮುಖಿ ದೇವಾಲಯವನ್ನು ಆ ನಾಯಕನು ಕಟ್ಟಿಸಿಕೊಟ್ಟನು. ಬರುವ ಮುನ್ನ ತಮ್ಮ ಶಿಷ್ಯನಾದ ಬ್ರಹ್ಮಚಾರಿ ಎಂಬವನಿಗೆ 'ಸಿದ್ಧದೀಕ್ಷೆ' ಕೊಟ್ಟು 'ಸಿದ್ಧಾವಧೂತ' ಎಂಬ ಆಶ್ರಮನಾಮವನ್ನಿತ್ತು, ಪೂಜಾದಿಗಳ ವ್ಯವಸ್ಥೆ ಮಾಡಿದರು. ಕನಕಗಿರಿಯಲ್ಲಿ ಇರುವಾಗಲೂ ಹಲವಾರು ಕೃತಿಗಳನ್ನು ರಚಿಸಿ ೧೭೮೧ರಲ್ಲಿ ಜೀವಂತ ಸಮಾಧಿಯನ್ನು ಹೊಂದಿದರು.

ಇವರು ಹಲವಾರು ಗ್ರಂಥಗಳನ್ನು ರಚನೆ ಮಾಡಿದ್ದಾರೆ. ಜ್ಞಾನಸಿಂಧು, ಪಂಚೀಕರಣ, ತತ್ವಚಿಂತಾಮಣಿ, ಚಿದಾನಂದ ಸವಾಯಿ, ನಾರಾಯಣಿ ಸ್ತುತಿ, ಪಾರ್ವತೀಮಹಾತ್ಮೆ, ಅಲ್ಲದೆ ಕಾಮವಿಡಂಬನೆ, ಬಗಳಾಂಬಾ ಸ್ತೋತ್ರ, ಶಂಕರಾಚಾರ್ಯ ಸ್ತೋತ್ರಮಾಲಾ, ನವಚಕ್ರ ಕುಲರೇಖಾಲಕ್ಷಣ, ಇವೇ ಮೊದಲಾದವು ಚಿದಾನಂದರ ಕೃತಿಗಳಾಗಿವೆ.

ಇವರ ೪೨೮ ಕೀರ್ತನೆಗಳು ದೊರೆತಿವೆ. ಚಿದಾನಂದ ಎಂಬ ಅಂಕಿತವನ್ನು ಬಳಸಿದ್ದಾರೆ. ಇವರು ತಮ್ಮ ಆರಾಧ್ಯದೇವಿಯಾದ ಬಗಳಾಂಬ ದೇವಿಯನ್ನು ಕುರಿತು ವಿಶೇಷವಾಗಿ ಕೀರ್ತನೆಗಳನ್ನು ರಚಿಸಿದ್ದಾರೆ. ಅವಧೂತರಾದುದರಿಂದ ಸಹಜವಾಗಿಯೇ ಜ್ಞಾನ, ವೈರಾಗ್ಯ, ಭಕ್ತಿ, ಬ್ರಹ್ಮಾನುಭವ ಇತ್ಯಾದಿ ವಿಷಯಗಳ ಮೇಲೆ ಕೀರ್ತನೆಗಳನ್ನು ರಚಿಸಿದ್ದಾರೆ. ಹಾಡಲು ಅನುಕೂಲವಾಗಿವೆ. ಕೆಲವು ಗದ್ಯದ ಧಾಟಿಯಲ್ಲಿಯೂ ಇವೆ. ಇವರ ಕೀರ್ತನೆಗಳು ನೀತಿ ಪ್ರಧಾನವಾಗಿದ್ದು ಓದುಗರನ್ನು ಚಿಂತನೆಗೆ ಪ್ರೇರೇಪಿಸುತ್ತದೆ.

(ಸಂ. ೨೫)

೧೨೮. ವೆಂಕಟರಾವ್

ಬಿ. ವೆಂಕಟರಾವ್ ಅವರು ಕ್ರಿ.ಶ.೧೮೮೬ನೇ ಇಸವಿಯಲ್ಲಿ ಜನಿಸಿದರು. ವಿದ್ಯಾಭ್ಯಾಸದ ನಂತರ ಇವರು ಮಂಗಳೂರಿನ ಸಮೀಪದಲ್ಲಿರುವ ನಿಡ್ಡೋಡಿ ಮತ್ತು ಕಟೀಲುಗಳಲ್ಲಿ ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ಅಧ್ಯಾಪಕರಾಗಿದ್ದರು. ಇವರು ಸ್ಮಾರ್ತ ಸಂಪ್ರದಾಯದವರು.

ವೆಂಕಟರಾಯರು ಕಟೀಲಿನ ದುರ್ಗಾಪರಮೇಶ್ವರಿಯ ಪರಮಭಕ್ತರು. ಇವರ ೪೩ ಕೀರ್ತನೆಗಳು ಉಪಲಬ್ಧವಾಗಿವೆ. ಇವರ ಹೆಚ್ಚಿನ ಕೀರ್ತನೆಗಳು ದುರ್ಗಾಪರಮೇಶ್ವರಿಯ ಮೇಲೇ ರಚಿತವಾಗಿವೆ. ಇವರ ಹಾಡುಗಳಲ್ಲಿ ಅಂಕಿತವು ಎಲ್ಲಿಯೂ ಕಾಣುವುದಿಲ್ಲ. ಕೀರ್ತನೆಗಳು ಸರಳ, ಸುಲಭ ಶೈಲಿಯಲ್ಲಿವೆ. ತಮ್ಮ ಕೀರ್ತನೆಗಳನ್ನು ದುರ್ಗಾಪರಮೇಶ್ವರಿಯ ಸಮ್ಮುಖದಲ್ಲಿ ವಿವಿಧ ವಾದ್ಯಗಳ ಹಿಮ್ಮೇಳದೊಂದಿಗೆ ತಾವೇ ಹಾಡುತ್ತಿದ್ದರು.

(ಸಂ. ೧೬)

೧೨೯. ಕೋಣೆ ಲಕ್ಷ್ಮೀರಮಣ (ಪರಮದೇವ)

ಇವರ ನಿಜನಾಮ ಪರಮೇಶ್ವರ ಎಂದು. ತಂದೆ ಶಂಕರನಾರಾಯಣಯ್ಯ. ತಾಯಿ ದೈವಭಕ್ತೆಯಾಗಿದ್ದ ಮಹಾಲಕ್ಷ್ಮಿ. ಇವರಿಗೆ 'ಕಪಿ ಪರಮದೇವ' ಎಂಬ ಹೆಸರೂ ಇದೆ. ಜನನ ಕ್ರಿ.ಶ.೧೭೭೧ರಲ್ಲಿ. ಮೂಲತಃ ಹೊಸನಗರ ತಾಲ್ಲೂಕಿನ ನಿಟ್ಟೂರಿನ ಹತ್ತಿರದ ಸುಳಗೋಡಿನವರು. ಹವ್ಯಕ ಬ್ರಾಹ್ಮಣ. ಪತ್ನಿ ಭಾಗೀರಥಿ. ಇವರು ತಮ್ಮ ೧೭ನೇ ವಯಸ್ಸಿನಲ್ಲಿಯೇ ಭಾಗವತ ವೇಷಧಾರಿಯಾಗಿ, ಅರ್ಥಧಾರಿಯಾಗಿ ಪ್ರಸಿದ್ಧರಾಗಿದ್ದರು. ಬಡತನದ ಕಾರಣದಿಂದಾಗಿ ಸುಳಗೋಡನ್ನು ಬಿಟ್ಟು ಇಕ್ಕೇರಿಯ ಗಣಪತಿ ದೇವಾಲಯದಲ್ಲಿ ಪರಿಚಾರಕರಾಗಿದ್ದರು. ಚಿಪ್ಪಳಿ ನಾರಾಯಣಯ್ಯ ಎಂಬವರ ಸಹಾಯದಿಂದ ಚಿಪ್ಪಳಿ ವೇಣುಗೋಪಾಲ ಹಾಗೂ ಕೇದಿಗೆ ಸರಹುವಿನ ಮಹಾಗಣಪತಿ ದೇವಾಲಯದ ಅರ್ಚಕರಾಗಿದ್ದರು. ಚಿಪ್ಪಳಿಯ ಲಕ್ಷ್ಮೀನಾರಾಯಣಯ್ಯ ಎಂಬುವರು ಇವರಿಂದ ಅನೇಕ ಕಾವ್ಯ, ಶಾಸ್ತ್ರ, ಪುರಾಣಾದಿಗಳನ್ನು ಪ್ರತಿ ಮಾಡಿಸಿದುದೇ

ಅಲ್ಲದೆ ಕಾವ್ಯವಾಚನ, ಪುರಾಣ ಪ್ರವಚನವನ್ನೂ ನಡೆಸಲು ಪ್ರೇರೇಪಿಸಿದರು. ಇದು ಪರಮದೇವರ ವ್ಯಕ್ತಿತ್ವಕ್ಕೆ ಹೊ
ಆಯಾಮವನ್ನು ನೀಡಿತು.

ಇವರು ನಾರಾಯಣಾಕ್ಷರಮಾಲಿಕಾಸ್ತೋತ್ರ ಎಂಬ ೫೨ ಶ್ಲೋಕಗಳಿಂದ ಕೂಡಿದ ಗ್ರಂಥವನ್ನೂ ೫೪ ಪದ್ಯಗಳಿಂದ ಕೂಡಿದ ಅದ್ವೈತ ತತ್ವದ ಗ್ರಂಥವನ್ನೂ ರಚಿಸಿದ್ದಾರೆ. ಇವರ 'ತುರಂಗಭಾರತ' ಮಹಾಕಾವ್ಯದಲ್ಲಿ ೪೭೨೫ ವಾರ್ಧಕ ಷಟ್ಪದಿಗಳಿವೆ. ಇದರಲ್ಲಿ ವ್ಯಾಸಭಾರತದ ಕಥೆಯಲ್ಲದೆ ಜಾನಪದೀಯ ಹಾಗೂ ಮೌಖಿಕವಾದ ಭಾರತ ಕಥೆಗಳೂ ಸೇರಿವೆ.

ಪರಮದೇವರ ೧೪೭ ಕೀರ್ತನೆಗಳು 'ಕೋಣೆ ಲಕ್ಷ್ಮೀನಾರಾಯಣ' ಎಂಬ ಅಂಕಿತದಲ್ಲಿ ದೊರೆತಿವೆ. ಇವರ ಕೀರ್ತನೆಗಳ ಮೇಲೆ ಪುರಂದರದಾಸಾದಿಗಳ ಪ್ರಭಾವ ಕಂಡುಬರುತ್ತದೆ. ತಾತ್ವಿಕ ಗೀತೆಗಳಷ್ಟೇ ಅಲ್ಲದೆ, ಸಮಕಾಲೀನ ಇತಿಹಾಸದ ವಿವರವೂ ಇವರ ಕೀರ್ತನೆಗಳಲ್ಲಿ ಕಂಡುಬರುವುದು ವಿಶೇಷವಾಗಿದೆ. ಭಕ್ತಿ, ದೈವೋಪಾಸನೆ, ಆರಾಧನಾ ಭಾವ, ಲೋಕದ ಅನಿತ್ಯತೆ, ಪರಮಸುಖದ ಮಾರ್ಗ ಇವು ಈ ಕೀರ್ತನೆಗಳ ವೈಶಿಷ್ಟ್ಯ. ಪರಮದೇವ ಕವಿ ತನ್ನ ೮೪ನೇ ವಯಸ್ಸಿನಲ್ಲಿ ತುಂಬು ಜೀವನ ನಡೆಸಿ, ೧೮೦೫ರಲ್ಲಿ ದೈವಾಧೀನರಾದರು.

(ಸಂ. ೩೩)

೧೩೦. ಚೆನ್ನಕೇಶವ, ದೂರ್ವಾಪುರೀಶ (ಕೇಶವ ಭಟ್ಟ ಬುರ್ಡೆ/ಕರ್ಕಿ)

ಇವರು ಕರ್ಕಿ ಕೇಶವದಾಸ ಎಂದೂ ಖ್ಯಾತರಾಗಿದ್ದಾರೆ. ತಂದೆ ಭೈರವ ಭಟ್ಟ ಬುರ್ಡೆ. ತಾಯಿ ಲಕ್ಷ್ಮೀ. ಇವರು ೧೯೦೦ನೇ ಇಸವಿಯಲ್ಲಿ ಕರ್ಕಿಯಲ್ಲಿ ಜನಿಸಿದರು. ಕೇಶವದಾಸರು ಬಾಲ್ಯದಿಂದಲೇ ದೈವಭಕ್ತರು. ಹೊನ್ನಾವರದ ಸೇಂಟ್ ಥಾಮಸ್ ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ ಪರೀಕ್ಷೆ ಮುಗಿಸಿದರು. ಅದೇ ಸಂದರ್ಭದಲ್ಲಿ ನಡೆಯುತ್ತಿದ್ದ ಕಾಂಗ್ರೆಸ್‌ನ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿ ಕಾರ್ಯಕರ್ತರಾಗಿ ಕೆಲವೆಡೆ ಸಂಚಾರ ಮಾಡಿದರು. ನಂತರ ಚನ್ನಕೇಶವ ದೇವಾಲಯದಲ್ಲಿ ಗೆಳೆಯರೊಂದಿಗೆ ಇದ್ದು, ಕೆಲವು ಕೀರ್ತನೆಗಳನ್ನು ರಚಿಸಿದರು.

ಮುಂದೆ 'ಹೈಕೋರ್ಟ್ ಪ್ಲೀಡರ್'ಗೆ ಅಧ್ಯಯನ ಮಾಡಿ, ಹೊನ್ನಾವರದಲ್ಲಿ ವಕೀಲಿವೃತ್ತಿ ನಡೆಸಿದರು. ಸ್ವಾತಂತ್ರ್ಯ ಚಳುವಳಿಯ ಕಾರಣದಿಂದ ಎರಡು ಬಾರಿ ಜೈಲುವಾಸ ಅನುಭವಿಸಿದರು. ೧೯೩೫ರ ನಂತರ ಮುಂಬೈ ಭೂಶಾಸನದ ವಿರುದ್ಧ ಹೋರಾಟ, ಹೊನ್ನಾವರದ ಪುರಸಭಾ ಸದಸ್ಯರಾಗಿ ಸಮಾಜಸೇವೆ. ಹವ್ಯಕ ಸಮಾಜದ ಸಹಕಾರಿ ಬ್ಯಾಂಕ್ ಸ್ಥಾಪಿಸಿ ಅದರ ಅಧ್ಯಕ್ಷರೂ ಆಗಿ ಸೇವೆ, ಶಾಲೆಯ ಸ್ಥಾಪನೆ ಹೀಗೆ ಹಲವು ಹತ್ತು ಸಮಾಜಸೇವೆಯಲ್ಲಿ ನಿರತರಾಗಿದ್ದರು. ಹೊನ್ನಾವರದ ಸಮೀಪವಿರುವ ರಾಮತೀರ್ಥದಲ್ಲಿ ರಾಮೇಶ್ವರ ದೇವಸ್ಥಾನವನ್ನೂ, ದತ್ತಮಂದಿರವನ್ನೂ ನಿರ್ಮಿಸಿದರು.

ಇವರ ೬೫ ಕೀರ್ತನೆಗಳು ಲಭ್ಯವಾಗಿವೆ. ರಾಮೇಶ್ವರಾಷ್ಟಕ, ರಾಮತೀರ್ಥಸ್ತವ, ರಾಮೇಶ್ವರ ಪಂಚಾಕ್ಷರೀಸ್ತೋತ್ರಂ, ಶ್ರೀದತ್ತಮೂರ್ತಿಗುರ್ವಷ್ಟಕಂ, ಶ್ರೀಕರಿಕಾನ ಪರಮೇಶ್ವರಿ ಮಂಗಳಗೀತ, ಶ್ರೀಕರಿಕಾನ ಪರಮೇಶ್ವರಿ ವಂದನಾಷ್ಟಕ, ಶ್ರೀ ಕರಿಕಾನ ಪರಮೇಶ್ವರೀ ಸ್ತೋತ್ರಮಾಲಾ ಇವು ಸಂಸ್ಕೃತದಲ್ಲಿವೆ.

ಇವರ ಕೀರ್ತನೆಗಳು ಭಕ್ತಿಪ್ರಧಾನವಾದುವು; ಹೆಚ್ಚಿನ ಕೃತಿಗಳಲ್ಲಿ ಪೌರಾಣಿಕ ಸಂದರ್ಭಗಳನ್ನು ತೆಗೆದುಕೊಂಡು ರಚಿಸಿದವುಗಳಾಗಿವೆ. ದೈವಭಕ್ತಿ, ದೇವರಲ್ಲಿ ಶರಣಾಗತಿ, ಅನನ್ಯಧ್ಯಾನ, ಭಗವಂತನ ಪ್ರೀತಿಯಿಂದ ಮನುಷ್ಯನು ಶಾಂತಿ ನೆಮ್ಮದಿ, ಮುಂತಾದುವನ್ನು ತಮ್ಮ ಕೀರ್ತನೆಗಳಲ್ಲಿ ನಿರೂಪಿಸಿದ್ದಾರೆ. ಇವರು ೧೯೭೫ರಲ್ಲಿ ನಿಧನರಾದರು.

(ಸಂ. ೩೩)

೧೩೧. ಕೆಳದಿ ವೆಂಕಣ್ಣ (ಕೆಳದಿ ರಾಮೇಶ)

ಕೆಳದಿಯ ವೆಂಕಣ್ಣ 'ವೆಂಕ-ವಿಬುಧ' ಎಂದು ಖ್ಯಾತರಾಗಿದ್ದವರು. 'ಕೆಳದಿ ಲಿಂಗಪ್ಪ ಸನ್ಮಂತ್ರಿ ಭಾಸ್ಕರನಾತ್ಮೋಭವ'ನಾದ 'ವೆಂಕವಿಬುಧಂ' ಎಂದು ಅವರ ಪಾರ್ವತೀವಲ್ಲಭ ಶತಕದಲ್ಲಿ ಉಲ್ಲೇಖವಿದೆ. ಇವರ ಕಾ
ಸು. ಕ್ರಿ.ಶ.೧೭೭೫.

ಪಾರ್ವತೀವಲ್ಲಭ ಶತಕ. ಗಣಸಹಸ್ರನಾಮ, ನರಹರಿವಿಜಯ ಹಾಗೂ ಕೆಲವು ಕೀರ್ತನೆಗಳು ಇವರ ರಚನೆಗಳು. ಕೆಳದಿ ರಾಮೇಶ್ವರ ಮತ್ತು ಇತರ ದೇವರ ಅಂಕಿತಗಳು ಕೀರ್ತನೆಗಳಲ್ಲಿ ಕಾಣಸಿಗುತ್ತದೆ. ಅಲ್ಲದೆ ಅಂಕಿತರಹಿತವಾದ ಅವರ ಬೇರೆ ಕೆಲವು ಹಾಡುಗಳೂ ದೊರೆತಿವೆ.

ಕೆಳದಿ ವೆಂಕಣ್ಣ ಅಂಕಿತವಿರುವ ೪೧ ಗೀತೆಗಳು, ಅಂಕಿತರಹಿತವಾದ ೧೦ ಗೀತೆಗಳೂ ಒಟ್ಟಿಗೆ ಇವೆ. ಹಾಡುಗಳಲ್ಲಿ ಮುಖ್ಯವಾಗಿ ಭಗವದ್ಭಕ್ತಿಯನ್ನು ಪ್ರತಿಪಾದಿಸುತ್ತಾರೆ. ಸಮಾಜದ ಓರೆಕೋರೆಗಳನ್ನು ಗಮನಿಸಿ ಅದನ್ನು ಸರಿಪಡಿಸಬೇಕೆಂಬ ಹಂಬಲ ವ್ಯಕ್ತವಾಗಿದೆ. ಭಾಷೆ ಕೂಡ ಗೀತೆಗಳ ಭಾವಕ್ಕೆ ತಕ್ಕಂತೆ ಸರಳವಾಗಿದೆ.

(ಸಂ. ೨೫)

೧೩೨. ಬೇಟೆರಾಯ ದೀಕ್ಷಿತ (ಧೇನುಪುರೀಶ)

ಇವರ ನಿಜನಾಮ ಬೇಟೆರಾಯ ದೀಕ್ಷಿತರು ಎಂದು. ಕ್ರಿ.ಶ.೧೮೬೬ರಲ್ಲಿ ಜನಿಸಿದರು. ತುರುವೇಕೆರೆಯವರಾದ ಇವರು ಕುಣಿಗಲ್ಲಿನಲ್ಲಿ ವ್ಯಾಸಂಗ ಮಾಡಿ, ಅಲ್ಲಿಯೇ ಎ.ವಿ.ಸ್ಕೂಲ್‌ನಲ್ಲಿ ಅಧ್ಯಾಪಕರಾದರು. ತಮ್ಮ ಗುರುಗಳಾದ ಕುಣಿಗಲ್ ಈಶ್ವರಶಾಸ್ತ್ರಿಗಳಿಂದ ಸಂಸ್ಕೃತ ಕಾವ್ಯ, ನಾಟಕ, ಚಂಪೂಕಾವ್ಯ, ಸಾಹಿತ್ಯ, ವ್ಯಾಕರಣ, ಅಲಂಕಾರ, ತರ್ಕ, ಮೀಮಾಂಸೆಗಳನ್ನು ಅಧ್ಯಯನ ಮಾಡಿದ್ದರು. ವಯಲಿನ್ ಹಾಗೂ ಸಂಗೀತದಲ್ಲಿ ಅನುಭವಿಗಳಾಗಿದ್ದ ಶ್ರೀ ಶಂಕರಪ್ಪ ಎಂಬುವರ ನಿಕಟವರ್ತಿಯಾಗಿ ದೀಕ್ಷಿತರು ಸಂಗೀತದಲ್ಲಿಯೂ ಪರಿಣತಿ ಪಡೆದರು.

ದೀಕ್ಷಿತರು ರಾಮಾಯಣವನ್ನು ಅಧ್ಯಯನ ಮಾಡಿ, ಪ್ರವಚನಗಳನ್ನು ಮಾಡುತ್ತಾ 'ರಾಮಾಯಣ ದೀಕ್ಷಿತರು'ಎಂಬ ಹೆಸರನ್ನೇ ಪಡೆದಿದ್ದರು. ಜೊತೆಗೆ ಶ್ರೀಶಂಕರವಿಜಯ, ಹನುಮದ್ವಿಜಯವಿಲಾಸ, ಅನುಸೂಯಚರಿತ್ರೆ ಮುಂತಾಗಿ ಹರಿಕಥಾಕಾಲಕ್ಷೇಪವನ್ನು ಮಾಡುತ್ತಿದ್ದರು. ಧಾರವಾಡ, ಬೆಳಗಾವಿಗಳಲ್ಲಿ ಅವರಿಗೆ 'ನಿರುಪಮವಾಣಿ', 'ರಾಮಕಥಾಭೂಷಣ' ಎಂಬ ಬಿರುದುಗಳು ಬಂದಿದ್ದವು.

ಇವರು ಸಂಪ್ರದಾಯದ ಹಾಡುಗಳನ್ನೂ, ತಾವು ಭೇಟಿ ಕೊಟ್ಟ ಊರುಗಳಲ್ಲಿನ ದೇವದೇವತೆಗಳನ್ನು ಕುರಿತು ಹಾಡುಗಳನ್ನೂ ಮತ್ತು ಸಂದರ್ಭಾನುಸಾರ ರಾಮಾಯಣದ ಪ್ರವಚನಕ್ಕೆ ಬೇಕಾಗುವ ಹಾಡುಗಳನ್ನು ರಚಿಸುತ್ತಿದ್ದರು. ಹಾಗೆಯೇ ಆಶುಕವಿತೆಯಲ್ಲಿ ಕೀರ್ತನೆಗಳನ್ನು ರಚಿಸುತ್ತಿದ್ದುದೂ ಇದೆ. ಚೂರ್ಣಿಕೆಗಳನ್ನು ಕೂಡ ಬರೆದಿದ್ದಾರೆ.

ಇವರ ೮೮ ಕೀರ್ತನೆಗಳು ದೊರೆತಿವೆ. ಪ್ರವಚನಕಾರರೂ-ಹರಿಸಂಕೀರ್ತನಕಾರರೂ ಆಗಿದ್ದುದರಿಂದ ಆತ್ಮನಿವೇದನೆಯ ಗೀತೆಗಳು ಹೆಚ್ಚಾಗಿ ಕಂಡುಬರದೆ, ದೈವಸ್ತುತಿ, ಅದ್ವೈತ ತತ್ವದ ಪ್ರತಿಪಾದನೆ ಹಾಗೂ ಹರಿ-ಹರ ಅಭೇದದ ಪ್ರತಿಪಾದನೆ ಇದೆ. ಭಾಷಾಪ್ರೌಢಿಮೆ, ನಾದಗಾಂಭೀರ್ಯ, ಅರ್ಥಗಾಂಭೀರ್ಯವು ಇವರ ಗೀತೆಗಳಲ್ಲಿ ಕಂಡುಬರುತ್ತದೆ. ಇವರ ಕೀರ್ತನೆಗಳ ಮೇಲೆ ಪುರಂದರದಾಸರ ಪ್ರಭಾವವನ್ನು ಕಾಣಬಹುದು.

ದೀಕ್ಷಿತರು ೧೯೩೦ರಲ್ಲಿ ನಿಧನರಾದರು.

(ಸಂ. ೩೩)

೧೩೩. ಭಟ್ಕಳ ಅಪ್ಪಯ್ಯ (ಗುರುವಿಮಲಾನಂದ)

ಇವರ ನಿಜನಾಮ ಲಕ್ಷ್ಮಣ. ಆದರೆ ತಾಯಿಯವರು ಅಪ್ಪಯ್ಯ ಎಂದು ಕರೆಯುತ್ತಿದ್ದರಂತೆ. ತಂದೆ ನಾಡಘರ ರಾಮರಾಯರು. ಇವರು ೧೭ನೇ ಶತಮಾನದ ಕೊನೆಯ ಭಾಗದಲ್ಲಿ ಜನಿಸಿದರು. ಊರು ಭಟಕಳ. ಮಡದಿ ಭಾಗೀರಥಿ. ಅಪ್ಪಯ್ಯನವರು ಬಾಲ್ಯದಲ್ಲಿಯೇ ಓದು, ಬರಹ, ವ್ಯವಹಾರಜ್ಞಾನದಲ್ಲಿ ನೈಪುಣ್ಯ, ಸಂಗೀತ, ವಾದ್ಯ, ಬಿಲ್ಲುಗಾರಿಕೆ, ಹಾಗೂ ವ್ಯಾಯಾಮ ಮುಂತಾದ ವಿದ್ಯೆಗಳಲ್ಲಿ ಪರಿಣತಿ ಪಡೆದಿದ್ದರು.

ಅಪ್ಪಯ್ಯನವರ ಗುರುಗಳು ವಿಮಲಾನಂದ ಸ್ವಾಮಿಗಳು. ಅವರಿಂದ ಅಪ್ಪಯ್ಯನವರಿಗೆ ದೀಕ್ಷೆ ದೊರೆಯಿತು. ಅಂದಿನಿಂದ ಅವರು ಕೀರ್ತನೆಗಳನ್ನು ರಚಿಸಿದರು. ಹೆಂಡತಿಯ ನಿಧನದ ನಂತರ ಗುರುಸೇವೆಯಲ್ಲಿರುತ್ತ ಹಾಗೆಯೇ ಊರಿಂದೂರಿಗೆ ಓಡಾಡುತ್ತ, ಜನರನ್ನು ಸನ್ಮಾರ್ಗದತ್ತ ತಿರುಗಿಸಲು ತುಂಬ ಪ್ರಯತ್ನ ಮಾಡಿದರು. ಇವರು ಪವಾಡಸದೃಶ ವ್ಯಕ್ತಿತ್ವವನ್ನು ಪಡೆದವರು. ಇವರ ಸಮಾಧಿ ಭಟ್ಕಳದಲ್ಲಿದೆ.

(ಸಂ. ೩೩)

೧೩೪. ರುಕ್ಮಾಂಗದ ಪಂಡಿತ (ರುಕ್ಮ)

ತಂದೆ ಕೃಷ್ಣ ಪಂಡಿತ. ತಾಯಿ ಲಕ್ಷ್ಮೀದೇವಿ, ಅಕ್ಕ ಭಾಗೀರಥಿ. ತಂದೆ ಬಿಜಾಪುರದ ಆದಿಲ್‌ಶಾಹಿ ಬಾದಶಹನ ನ್ಯಾಯಖಾತೆಯಲ್ಲಿ ಉಚ್ಚ ಅಧಿಕಾರಿಗಳಾಗಿದ್ದರು ಹಾಗೂ ವೈದ್ಯರೂ ಆಗಿದ್ದರು. ತೀರ್ಥಯಾತ್ರೆಯನ್ನು ಮಾಡುತ್ತ

ಹಂಪೆಗೆ ಬಂದಾಗ ಗೌರಾನಂದ ಯತಿಗಳ ಅನುಗ್ರಹದಿಂದ ಮಗ, ಮಗಳನ್ನು ಪಡೆದರು. ರುಕ್ಮಾಂಗದ ಪಂಡಿತರ ಜನನ ಕ್ರಿ.ಶ.೧೬೧೦ರಲ್ಲಾಯಿತು. ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡು ಅಕ್ಕನ ಪೋಷಣೆಯಲ್ಲಿದ್ದರು. ವಿದ್ಯೆ ಇಲ್ಲದೇ ಇದ್ದ ರುಕ್ಮಾಂಗದರಿಗೆ ಅದೇ ಗೌರಾನಂದ ಯತಿಗಳ ಅನುಗ್ರಹದಿಂದಾಗಿ, ವೇದವೇದಾಂತಗಳ ಅಧ್ಯಯನ, ಅಧ್ಯಾಪನ, ವಿಜಯವಿಠಲನ ಪೂಜೆ, ಪುರಾಣ ಪ್ರವಚನ, ಕೀರ್ತನವಲ್ಲದೆ ರಾತ್ರಿ ವೇಳೆ ಗ್ರಂಥಗಳ ರಚನೆ ಹೀಗೆ ಕ್ರಿಯಾಶೀಲರಾದರು. ಜೊತೆಗೆ ವೈದ್ಯಕೀಯದಲ್ಲಿಯೂ ಪಾರಂಗತರಾಗಿ, ಆಯುರ್ವೇದ ಪಾಠಶಾಲೆಯನ್ನೂ ತೆಗೆದು, ಜನೋಪಯೋಗಿಯಾದರು.

ಗೌರಾನಂದ ಯತಿಗಳು ರುಕ್ಮಾಂಗದ ಪಂಡಿತರ ಗುರುಗಳಾದರೆ, ರಾಜೀವಾನಂದರು ರುಕ್ಮಾಂಗದರ ಪ್ರಮುಖ ಶಿಷ್ಯರು. ಈ ಶಿಷ್ಯರು ಮರಾಠಿಯಲ್ಲಿ ರಚಿಸಿದ 'ಗುರುಮಾಲಿಕಾ' ಗ್ರಂಥದಲ್ಲಿ ರುಕ್ಮಾಂಗದರ ಜೀವನವನ್ನು ಕುರಿತ ವಿವರವು ದೊರೆಯುತ್ತದೆ.

'ರುಚಿರಾನಂದ ಸರಸ್ವತಿ' ಎಂಬುದು ಇವರ ಸನ್ಯಾಸಾಶ್ರಮದ ಹೆಸರು. ೧೭೧೦ರ ವಿಕೃತಿನಾಮ ಸಂವತ್ಸರ ಫಾಲ್ಗುಣ ಶುದ್ಧ ದ್ವಾದಶಿಯ ದಿನ ರುಕ್ಮಾಂಗದರು ವಿಜಾಪುರದಲ್ಲಿ ಸಮಾಧಿಸ್ಥರಾದರು.

ಇವರ ೩೧ ಹಾಡುಗಳು ದೊರೆತಿವೆ. ರುಕ್ಮ, ರುಕ್ಮಭೂಷ ಎಂಬ ಅಂಕಿತಗಳು ಕಂಡುಬರುತ್ತವೆ. ಶರಣಾಗತಿ ಭಾವ, ಏಕದೇವೋಪಾಸನೆ, ಕ್ಷುದ್ರದೈವಗಳ ಉಪಾಸನೆ ಮಾಡದಿರುವಿಕೆ, ಕೃಷ್ಣನ ಅನುಗ್ರಹಕ್ಕಾಗಿ ಹಂಬಲಿಕೆ ಇತ್ಯಾದಿ ವಿಷಯಗಳು ಅವರ ಹಾಡುಗಳಲ್ಲಿ ಕಾಣುತ್ತದೆ. ಆಧ್ಯಾತ್ಮ ಮತ್ತು ಅದ್ವೈತ ತತ್ವಗಳನ್ನು ಸರಳವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ರಚಿಸಿದ್ದಾರೆ.

(ಸಂ. ೨೦)

೧೩೪. ಶಂಕರಭಟ್ಟ ಅಗ್ನಿಹೋತ್ರಿ (ಶಂಕರಗುರು)

ಇವರ ಹೆಸರು ಶಂಕರಭಟ್ಟ ಅಗ್ನಿಹೋತ್ರಿ ಎಂದು. ತಂದೆ ಶ್ರೀನಿವಾಸಭಟ್ಟ ಜೋಶಿ. ತಾಯಿ ಅಂಬವ್ವನವರು. ಇವರು ಕ್ರಿ.ಶ.೧೮೯೭ರಲ್ಲಿ ಜನಿಸಿದರು. ಶಂಕರಭಟ್ಟರು ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ಹೊಂಬಳದವರು. ಏಳನೇ ತರಗತಿಯಲ್ಲಿ ತೇರ್ಗಡೆಯಾದ ಅವರು ಶಿಕ್ಷಕ ತರಬೇತಿಯನ್ನು ಮುಗಿಸಿ ಹೊಂಬಳದ ಕನ್ನಡ ಶಾಲೆಯಲ್ಲಿ ಶಿಕ್ಷಕರಾಗಿದ್ದು ೧೯೫೧ರಲ್ಲಿ ನಿವೃತ್ತರಾದರು.

ಶಂಕರಭಟ್ಟರು ಭಗವದ್ಗೀತೆ, ಪ್ರಭುದೇವರ ವಚನಗಳು, ಕನ್ನಡ ಜ್ಞಾನೇಶ್ವರಿ, ಭಾಗವತ ಇತ್ಯಾದಿ ಆಧ್ಯಾತ್ಮ ವಿಷಯಗಳ ಪಾರಾಯಣ, ಪ್ರವಚನಗಳನ್ನು ಮಾಡುತ್ತಿದ್ದರು. ಇವರು ಬೋಧನಾರಾಯಣ, ಸಾಧನಪಂಚಕ, ಶ್ರೀಮದ್ಭಗವದ್ಗೀತಾಸಾರ, ವಿವೇಕವೈಭವ, ಪಂಚಪಾವನಗಂಗಾ, ಬೋಧದೀಪಾವಲಿ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಬೋಧದೀಪಾವಲಿಯಲ್ಲಿ ಭಗವಾನ್ ಶಂಕರರ ವೇದಾಂತಪಂಡಿತ, ಅಪರೋಕ್ಷಾನುಭೂತಿ, ಮತ್ತು ಮೋಹ ಮುದ್ಗರ ಇವುಗಳ ಪದ್ಯಾನುವಾದ ಮಾಡಿದ್ದಾರೆ.

ಇವರ ೯೬ ಕೀರ್ತನೆಗಳು ಲಭ್ಯವಾಗಿವೆ. ಶಂಕರಗುರು, ಶಂಕರಾರ್ಯ ಎಂಬ ಅಂಕಿತದಲ್ಲಿ ಇವರ ಕೀರ್ತನೆಗಳಿವೆ. ಆತ್ಮನಿವೇದನೆ, ಲೋಕನೀತಿ, ಹಾಗೂ ಗುರುಸ್ತುತಿಯ ಗೀತೆಗಳೇ ಹೆಚ್ಚಾಗಿ ಕಂಡುಬರುತ್ತವೆ. ಸರಳವಾದ ಶೈಲಿಯಲ್ಲಿ ಮನಮುಟ್ಟುವಂತಿವೆ.

೧೯೮೭ರಲ್ಲಿ ಶಂಕರಭಟ್ಟರು ನಿಧನರಾದರು.

(ಸಂ. ೩೩)

೧೩೫. ಹೊಸಕೆರೆ ಚಿದಂಬರಯ್ಯನವರು (ಚಿನ್ಮಯ)

ಇವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ೬ ಜನವರಿ ೧೮೭೦ರಂದು ಜನಿಸಿದರು. ಮೊದಲು ಶಿಕ್ಷಕರಾಗಿದ್ದು ವೇದಾಂತಿಗಳಾದರು. ಅದ್ವೈತ ಧರ್ಮಪ್ರಚಾರ, ಗ್ರಂಥರಚನೆ, ಪ್ರವಚನ, ಕೀರ್ತನ, ಗ್ರಂಥಸಂಪಾದನೆಗಳನ್ನು ನಿರಂತರವಾಗಿ ನಡೆಸಿದರು. ಸ್ವಂತವಾಗಿ ಕನ್ನಡ, ಇಂಗ್ಲಿಷ್, ಮರಾಠಿ ಹಾಗೂ ಸಂಸ್ಕೃತದಲ್ಲಿ ಪಾಂಡಿತ್ಯ ಗಳಿಸಿದರು.

ಪರಮಾರ್ಥ, ಭಕ್ತಬಂಧು, ಸುಧರ್ಮ ಈ ಪತ್ರಿಕೆಗಳ ಸಂಪಾದಕರಾಗಿದ್ದರು. 'ಆರ್ಯಧರ್ಮಪ್ರದೀಪ', ಭಕ್ತಿಗೀತಾವಳಿ, ವಿದ್ಯಾರಣ್ಯಕಾವ್ಯವೆಂಬ ಚಂಪೂಕಾವ್ಯ, ಕೀರ್ತನಕಂಠಾಭರಣವೆಂಬ ಹರಿಕಥಾಗ್ರಂಥ ಇವರ ರಚನೆಗಳು. ೮ ನಾಟಕಗಳು. ೭ ಜೀವನಚರಿತ್ರೆ, ೬ ಗೀತಾಗ್ರಂಥಗಳು ೪ ಕಾದಂಬರಿ, ೨ ಕಥಾಸಂಕಲನ ೪೮ ಹರಿಕಥೆಗಳು, ೨೦ಕ್ಕೂ ಹೆಚ್ಚು ಧಾರ್ಮಿಕ ಗ್ರಂಥಗಳನ್ನು, ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಸರ್ವಾರ್ಥದರ್ಶಿನಿ ಎಂಬ ಹೆಸರಿನ ಟೀಕೆಯ 'ಅನುಭವಾಮೃತ', ವೇದಾಂತ ಜೀವಾಳ, ಭರತಖಂಡದ ಜೀವಜ್ಯೋತಿಗಳು ಇತ್ಯಾದಿ ಕೃತಿಗಳನ್ನೂ ಪ್ರಕಟಿಸಿದ್ದಾರೆ.

ಇವರು ಸುಮಾರು ೩೦೦ ಕೀರ್ತನೆಗಳನ್ನು ರಚಿಸಿದ್ದಾರೆ. ಆದರೆ ೬ ಮಾತ್ರ ಇಲ್ಲಿ ಪ್ರಕಟವಾಗಿವೆ. ಅದ್ವೈತ ಪರವಾದ ಹರಿಹರ ಅಭೇದ, ಹಾಗೂ ಸರ್ವದೇವ ಸಮಾನತೆಯನ್ನು ಹೇಳಿದ್ದಾರೆ. ಚಿನ್ಮಯ, ಚಿದ್ರಾಸ ಇತ್ಯಾದಿ ಅಂಕಿತಗಳನ್ನು ಬಳಸಿದ್ದಾರೆ.

ಮೊದಲ ಬಾರಿಗೆ ಅದ್ವೈತ ಸಿದ್ಧಾಂತವನ್ನು ಮತ್ತು ಶರಣರ ಕೃತಿಗಳನ್ನು ಮುದ್ರಣರೂಪವಾಗಿ ಕನ್ನಡಕ್ಕೆ ತಂದ ಕೀರ್ತಿ ಇವರದು. ಇವರು ೧೯೫೯ರಲ್ಲಿ ನಿಧನರಾದರು.

(ಸಂ. ೩೦)

(ಊ) ದಕ್ಷಿಣ ಕನ್ನಡದ ಇತರ ಕೆಲವು ಹರಿದಾಸರು

– ಶಿವ ಬ್ರಾಹ್ಮಣರು –

೧೩೭. ಸದಾನಂದ

ಶ್ರೀನಿವಾಸಯ್ಯ ಇವರ ನಿಜನಾಮಧೇಯ. ಶಿವಬ್ರಾಹ್ಮಣ ಪಂಡಿತರಾಗಿದ್ದ ಶಿವಪ್ಪಯ್ಯ ಮತ್ತು ಸತ್ಯವತಿ ತಂದೆತಾಯಿಯರು. ಕ್ರಿ.ಶ.೧೮೭೬ರಲ್ಲಿ ಪಣಂಬೂರಿನಲ್ಲಿ ಜನನ. ಗೋಪಾಲಕೃಷ್ಣನ ಉಪಾಸಕರು. ಯಕ್ಷಗಾನ ಪ್ರಸಂಗಗಳಲ್ಲಿ ಹಾಸ್ಯಗಾರರಾಗಿ ಪ್ರಸಿದ್ಧರು. ಕಾವ್ಯವಾಚನ, ಪ್ರವಚನಗಳಲ್ಲಿ ವಿಶೇಷ ಆಸಕ್ತಿಯಿತ್ತು. ಸದಾನಂದ ಅಥವಾ ಶ್ರೀನಿವಾಸ ಎಂಬ ಅಂಕಿತದಲ್ಲಿ ಇವರ ೭೦ ಹಾಡುಗಳು ಲಭ್ಯವಿವೆ. ಶ್ರೀಹರಿ–ಲಕ್ಷ್ಮೀ ಸ್ತುತಿರೂಪದ ಹಾಡುಗಳು ಹೆಚ್ಚಾಗಿವೆ. ಗುರುವಂದನೆಯ ಹಾಡುಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಬಾಲಕೃಷ್ಣನನ್ನು ಕುರಿತ ಹಾಡುಗಳಲ್ಲಿ ಹೊಸತನವಿದೆ. ಸರಳಜೀವನ, ಸಾರ್ವಜನಿಕ ಸೇವೆ ಇವರ ಜೀವನದ ಗುರಿಯಾಗಿತ್ತು. ೧೯೪೬ರಲ್ಲಿ ದೈವಾಧೀನರಾದರು.

(ಸಂ. ೨೪)

೧೩೮. ಪಾವಂಜೇಶ

ಶ್ರೀ ಬೆಳ್ಳೆ ದಾಸಪ್ಪಯ್ಯ ಇವರ ನಿಜ ನಾಮಧೇಯ. ಶಿವಬ್ರಾಹ್ಮಣರಾಗಿದ್ದ ಪುಟ್ಟಣ್ಣಯ್ಯ ಮತ್ತು ಅಮ್ಮಕ್ಕ ತಂದೆತಾಯಿಗಳು. ಕ್ರಿ.ಶ.೧೮೭೭ರಲ್ಲಿ ಬೆಳ್ಳೆ ಗ್ರಾಮದಲ್ಲಿ ಜನನ. ಲೋವರ್‌ಗ್ರೇಡ್ ತರಬೇತಿ ಪಡೆದು ಶಿಕ್ಷಕರಾಗಿ, ಮುಖ್ಯೋಪಾಧ್ಯಾಯ ವೃತ್ತಿಯಲ್ಲಿದ್ದರು. ಪದ್ಮಾವತಿ ಇವರ ಪತ್ನಿ. ಪಾವಂಜೆಯ ಜ್ಞಾನಶಕ್ತಿ ಸುಬ್ರಹ್ಮಣ್ಯನ ಆರಾಧಕರು. ಹಾಗಾಗಿ ಇವರ ಹೆಚ್ಚಿನ ಹಾಡುಗಳು ಪಾವಂಜೆಯ ಕುಮಾರಸ್ವಾಮಿಯನ್ನು ಕುರಿತಾಗಿಯೇ ಇವೆ. ಪುರಾಣಪ್ರಜ್ಞೆ, ಸರಳವಾದ ಲಯಜ್ಞತೆ, ಭಾವಲಹರಿ ಇವರ ಕೃತಿಗಳ ವೈಶಿಷ್ಟ್ಯ. ಒಟ್ಟು ೭೨ ಹಾಡುಗಳು ಲಭ್ಯವಿವೆ. ಚಿತ್ತೂರು ಪದ್ಮಿನಿಯ ಕತೆಯನ್ನು ಯಕ್ಷಗಾನ ರೂಪದಲ್ಲಿ ಬರೆದು ಆಡಿಸುತ್ತಿದ್ದರಂತೆ. ಜನಪ್ರಿಯ ಶಿಕ್ಷಕರಾಗಿ, ಸಾರ್ವಜನಿಕ ರಂಗದಲ್ಲಿ ಗಣ್ಯವ್ಯಕ್ತಿಯಾಗಿ ಹೆಸರಾಗಿದ್ದರು. ೧೯೫೬ರಲ್ಲಿ ದೈವಾಧೀನರಾದರು.

(ಸಂ. ೨೪)

೧೩೯. ಗೋವಿಂದ (ಗೋವಿಂದ ಗೋಳಿ)

ಇವರ ತಂದೆ ವೆಂಕಟರಾಯರು. ೧೯೦೨ರಲ್ಲಿ ಉಡುಪಿ ತಾಲ್ಲೂಕು ಕೊಕ್ಕರ್ಣೆ ಸಮೀಪದ ಮೈರ್ಮಾಡಿಯಲ್ಲಿ ಜನಿಸಿದರು. ವಿದ್ಯಾಭ್ಯಾಸ ಕೇವಲ ೫ನೇ ತರಗತಿಯವರೆಗೆ ಮಾತ್ರವಾದರೂ ರಾಮಾಯಣ, ಮಹಾಭಾರತ, ಯಕ್ಷಗಾನ ಪ್ರಸಂಗ ವಾಚನ ಇವುಗಳು ಕರಗತವಾಗಿದ್ದವು. ಯಕ್ಷಗಾನದಲ್ಲಿ ಅರ್ಥವಂತಿಕೆ ಮಾಡುತ್ತಿದ್ದ ಕುಟುಂಬದವರಾದ್ದರಿಂದ

ಬಾಲ್ಯದಿಂದಲೇ ಹಳಗನ್ನಡ ಕಾವ್ಯವಾಚನ ಪರಿಚಿತವಾಗಿತ್ತು. ಐಗಳ ಮಠದಲ್ಲಿ ಅಧ್ಯಾಪಕರಾಗಿ ದುಡಿಯುತ್ತಿದ್ದರು. ೨೬ನೇ ವಯಸ್ಸಿನಲ್ಲಿ ಕಣ್ಣಿನ ದೃಷ್ಟಿ ಕಳೆದುಕೊಂಡು ಭಗವಂತನ ನಾಮಸ್ಮರಣೆಗೆ ಜೀವನವನ್ನು ಮೀಸಲಾಗಿಟ್ಟು ಹಾಡುಗಳನ್ನು ಕನ್ನಡ ಮತ್ತು ತುಳು ಭಾಷೆಯಲ್ಲಿ ರಚಿಸತೊಡಗಿದರು. ಒಟ್ಟು ೧೩೮ ಕನ್ನಡ ಹಾಡುಗಳು ಲಭ್ಯ. ಶ್ರೀಹರಿ-ಹರರನ್ನು ಏಕಭಾವದಿಂದ ಸ್ತುತಿಸಿದ್ದಾರೆ. ಅವರಲ್ಲಿ ಭೇದಭಾವವಿಲ್ಲೆಂದು ಸಾರಿದ್ದಾರೆ. ನೇರವಾದ ಮಾತು, ಗೇಯಾಂಶ ಇವರ ಕೃತಿಗಳಲ್ಲಿನ ವಿಶೇಷ. ೧೯೫೯ರಲ್ಲಿ ಇಹಲೋಕದ ಯಾತ್ರೆ ಮುಗಿಸಿದರು.

(ಸಂ. ೨೪)

೧೪೦ ರಿಂದ ೧೪೬ ರ ವರೆಗಿನ ದಾಸರು

ಇವರ ಎರಡೆರಡು ಕೀರ್ತನೆಗಳು ಮಾತ್ರ ಲಭ್ಯ. ಜೀವನ ವಿಚಾರಗಳು ತಿಳಿದು ಬಂದಿಲ್ಲ. ಎಲ್ಲರೂ ೧೯ನೆಯ ಶತಮಾನದ ಉತ್ತರಾರ್ಧದ ಹಾಗೂ ೨೦ರ ಪೂರ್ವಾರ್ಧ ಕಾಲದವರು. ಆದರೆ ರಚಿಸಿದ ಹಾಡುಗಳು ಮಾತ್ರ ವೈಶಿಷ್ಟ್ಯಪೂರ್ಣವಾಗಿವೆ. ಉದಾಹರಣೆಗೆ, ಬಂಗ್ಲೆ ನಾರಾಯಣ ಕಾಮತರು ತಮ್ಮ ಕೀರ್ತನೆಯಲ್ಲಿ ಶ್ರೀಹರಿಯ ಹತ್ತು ಅವತಾರಗಳೊಂದೊಂದರ ಜ್ಯೋತಿಷ್ಯವನ್ನು ಹೇಳಿದುದು.

(ಸಂ. ೨೪)

* * * * *

ಪ್ರಕರಣ ೩

ಇಲ್ಲಿ ಬಾರದೆ ಇದ್ದ ಹರಿದಾಸರು

೧. ಅಚ್ಯುತವಿಠಲರು – ಭಜನಮಂಜರಿ, ಸಂ.ಪುಷ್ಕರಾಚಾರ್ಯ
   – ಪ್ರ, ಎಚ್.ಬಿ. ಆಚಾರ್ಯ, ಬೆಂಗಳೂರು
೨. ಅಭಿನವಜನಾರ್ದನವಿಠಲರು (ಪ್ರೇಮದಾಸ)
   – ಪ್ರ, ಶ್ರೀರಾಮಭಜನೆ
೩. ಅಭಿನವ ಪ್ರಾಣೇಶವಿಠಲರು (ಲಿಂಗಸುಗೂರಿನ ಹನುಮಂತರಾವ)
   – ವರದೇಂದ್ರ ಸಾಹಿತ್ಯ ಮಂಡಳಿ. ಲಿಂಗಸುಗೂರು
೪. ಕೆಲ್ಲಂಗೆರೆ ತಿಮ್ಮಪ್ಪದಾಸರು
   – ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು
೫. ಗುರುಗೋಪಾಲವಿಠಲರು (ಶೀನಪ್ಪದಾಸ ಗೋಪಾಲದಾಸರ ತಮ್ಮ)
೬. ಗುರುಶ್ರೀಶವಿಠಲರು
   – ಸಂ. ಧೀರಣ್ಣ ವೈದ್ಯ, ಕಂಪ್ಲಿ–೧೯೫೫
೭. ಗುರುಮಧ್ವಪತಿವಿಠಲರು
   – (ಪುರಂದರದಾಸರ ಮಗ?)
೮. ತಂದೆವೆಂಕಟೇಶವಿಠಲರು (ಚಿತ್ರದುರ್ಗದ ರಾಮಚಂದ್ರರಾಯರು)
೯. ತಂದೆಶ್ರೀಪತಿವಿಠಲರು (ಹರಪನಹಳ್ಳಿ ವೆಂಕಟದಾಸರು)
೧೦. ನಿಜಪುರಂದರವಿಠಲೇಶ
೧೧. ಫಣಿಶಾಯಿವಿಠಲರು
೧೨. ಕಮಲೇಶವಿಠಲರು (ಸುರಪುರದ ಆನಂದದಾಸರು)
   – ಸಂ. ದಾಸಾಚಾರ್ಯ ತಂಗೋಡ. ಪ್ರ, ಗುರುರಾಜ ಭಜನ ಮಂಡಲಿ, ಸುರಪುರ.
೧೩. ಲಕ್ಷ್ಮೀಪತಿವಿಠಲರು (ಕಂಪಲಿಯವರು)
೧೪. ರಾಮಚಂದ್ರವಿಠಲರು
   – ಸಂ. ಮತ್ತು ಪ್ರ, ಗುರುಗೋವಿಂದವಿಠಲದಾಸರು, ಮೈಸೂರು, ೧೯೭೭
೧೫. ಬಾದರಾಯಣವಿಠಲರು
   – (ಮೋಹನದಾಸರ ಶಿಷ್ಯರು)
೧೬. ಲಕುಮೀಶ (ಕುರುಡಿ ರಾಘವೇಂದ್ರಾಚಾರ್ಯ)
   – ಲಕುಮೀಶರ ಕೀರ್ತನಮಂಜರಿ, ಭಾಗ ೧–೨, ಸುಧಾ ಪ್ರಕಾಶನ, ರಾಯಚೂರ, ೨೦೦೦
೧೭. ವರದಗೋಪಾಲವಿಠಲರು
   – (ಸುಬ್ಬಣ್ಣ; ಗೋಪಾಲದಾಸರ ಇನ್ನೊಬ್ಬ ತಮ್ಮ)
೧೮. ರಮಾಕಾಂತವಿಠಲರು (ಚಳ್ಳಕೆರೆ ಕೃಷ್ಣರಾವ್)
   – ಸಂ. ಜಯಸಿಂಹ, ಪ್ರ, ಪರಿಮಳ ಪ್ರಕಾಶನ, ೨೦೦೫.
೧೯. ಮಧ್ವೇಶವಿಠಲರು
೨೦. ಪದುಮನಾಭವಿಠಲ (ಉಕ್ಕಲಿ ಕುಪ್ಪೇರಾಯರು)
೨೧. ವೆಂಕಟಾದ್ರಿವಿಠಲರು (ನಾರಾಯಣಸ್ವಾಮಿ, ಎಚ್)
   – ಪ್ರ, ಜಯತಾರಾ ಪ್ರಕಾಶನ, ಬೆಂಗಳೂರು, ೧೯೮೭
೨೨. ಶ್ರೀಶವಿಠಲರು (ಹುಂಡೇಕಾರದಾಸರು)
೨೩. ತಂದೆಪುರಂದರವಿಠಲ (ರಂಗ ಒಲಿದ ಚಿಕ್ಕ ದಾಸರು)
   (ಕಡಲೂರು ಶಾಮರಾಯರು)

ಸೂಚನೆ : ಇವರುಗಳಲ್ಲದೆ ಇಪ್ಪತ್ತನೆಯ ಶತಮಾನದ ಮೂವತ್ತಕ್ಕೂ ಹರಿದಾಸರ ಕೀರ್ತನೆಗಳು ಇವೆ. ಸರಕಾರದ ನಿಯಮದ ಪ್ರಕಾರ 'ಸಮಗ್ರ' ಕೀರ್ತನ ಸಂಗ್ರಹದಲ್ಲಿ ೧೯೦೦ಕ್ಕಿಂತ ಮುಂಚೆ ಜನಿಸಿದವರಷ್ಟೇ ಸಮಾವೇಶಗೊಂಡಿದ್ದಾರೆ.

ಪ್ರಕರಣ ೪

ಹರಿದಾಸರ ಕೀರ್ತನೆಗಳ ಸ್ಥೂಲ ವರ್ಗೀಕರಣ

೧ ಶ್ರೀಹರಿ/ಹರಿಭಕ್ತಿ
೧.೧ ಶ್ರೀಹರಿಯ ಅಂಗಾಂಗ ವರ್ಣನೆ
೧.೧೧ ಶ್ರೀಪಾದದ್ವಯ ಮಹಿಮೆ
೧.೨ ಶ್ರೀಹರಿಯ ನಾಮವೈವಿಧ್ಯ*
೧.೩ ಕೇಶವಾದಿ ನಾಮಸ್ಮರಣೆ
೧.೪ ಶ್ರೀಹರಿಯ ಷಣ್ಮಹಿಷಿಯರು*
೧.೫ ಶ್ರೀಹರಿಯ ಸಂಖ್ಯಾನ್ವಯ ವರ್ಣನೆ
೧.೬ ಶ್ರೀಹರಿಯ ಅನಂತರೂಪ

೨ ಶ್ರೀಹರಿಯ ಅವತಾರಗಳು
೨.೧ ದಶಾವತಾರಗಳು
೨.೧೧ ಮತ್ಸ್ಯಾವತಾರ
೨.೧೨ ಕೂರ್ಮಾವತಾರ
೨.೧೩ ವರಾಹಾವತಾರ
೨.೧೪ ಶ್ರೀನರಸಿಂಹ
೨.೧೫ ವಾಮನಾವತಾರ/ಶ್ರೀ ತ್ರಿವಿಕ್ರಮ
೨.೧೬ ಪರಶುರಾಮ ಅವತಾರ
೨.೧೭ ಶ್ರೀರಾಮಚಂದ್ರ
೨.೧೭.೧ ಸೀತಾದೇವಿ
೨.೧೮ ಶ್ರೀಕೃಷ್ಣ
೨.೧೮.೧ ಬಾಲಕೃಷ್ಣ
೨.೧೮.೨ ಬಾಲಕೃಷ್ಣನ ವೇಣುಗಾನ
೨.೧೮.೩ ಶ್ರೀಕೃಷ್ಣನ ಅಷ್ಟಮಹಿಷಿಯರು
೨.೧೮.೪ ಶ್ರೀಕೃಷ್ಣನ ಪರಿವಾರ*
೨.೧೯ ಬೌದ್ಧಾವತಾರ
೨.೧೯.೧ ಕಲ್ಕಿ ಅವತಾರ
೨.೨ ಶ್ರೀಹರಿಯ ಅನ್ಯ ಅವತಾರಗಳು*
೨.೨೧ ಶ್ರೀವೆಂಕಟೇಶ
೨.೨೨ ಶ್ರೀವಿಠಲ
೨.೨೩ ಶ್ರೀರಂಗನಾಥ
೨.೨೪ ಶ್ರೀವೇದವ್ಯಾಸರು/ಬಾದರಾಯಣ
೨.೩ ಮಹಾಲಕ್ಷ್ಮಿ
೨.೪ ತುಳಸೀದೇವಿ

೩ ದೇವತೆಗಳು
೩.೧ ಬ್ರಹ್ಮದೇವರು
೩.೧೧ ಸರಸ್ವತಿ/ಶಾರದಾದೇವಿ
೩.೨ ಅವತಾರತ್ರಯ/ವಾಯುದೇವರು
೩.೨೧ ಹನುಮಂತದೇವರು (ಮುಖ್ಯಪ್ರಾಣ)
೩.೨೧.೧ ಭಾರತೀದೇವಿ
೩.೨೨ ಭೀಮಸೇನದೇವರು
೩.೨೩ ಶ್ರೀ ಮಧ್ವಾಚಾರ್ಯರು
೩.೩ ಗರುಡದೇವರು
೩.೩.೧ ವಾರುಣೀದೇವಿ
೩.೪ ಶೇಷದೇವರು
೩.೪.೧ ಸೌಪರ್ಣಿಕಾ
೩.೫ ಇಂದ್ರದೇವರು
೩.೬ ಋಷಿ/ಮುನಿಗಳು*
೩.೬.೧ ನಾರದರು
೩.೭ ಋಜುಗಣದವರು
೩.೭.೧ ಕಕ್ಷದೇವತೆಗಳು
೩.೮ ಶ್ರೀಹರಿಹರ/ಶ್ರೀರಾಮೇಶ್ವರ
೩.೯ ದೇವತೆಗಳು (ಇತರ)*

೪ ರುದ್ರದೇವರು/ಹರಭಕ್ತಿ
೪.೧ ರುದ್ರದೇವರ ನಾಮವೈವಿಧ್ಯ*
೪.೨ ಪಾರ್ವತಿದೇವಿ
೪.೩ ಷಣ್ಮುಖ/ಸುಬ್ರಹ್ಮಣ್ಯ
೪.೪ ಗಣೇಶ

೫ ಸ್ತ್ರೀ ದೇವತೆಗಳು
೫.೧ ದುರ್ಗಾದೇವಿ
೫.೨ ಚಾಮುಂಡೇಶ್ವರಿ
೫.೩ ಚಂದ್ರಲಾದೇವಿ

೫.೪ ಬಗಳಾಂಬಾದೇವಿ

೫.೫ ಗಾಯತ್ರಿದೇವಿ

೫.೬ ತುಳಜಾಭವಾನಿ

೫.೭ ಕನ್ಯಾಕುಮಾರಿ

೫.೮ ಸ್ತ್ರೀದೇವತೆಗಳು (ಇತರ)*

(ಇಲ್ಲಿ ಮಾಧ್ವತಾರತಮ್ಯವನ್ನು ಕಟ್ಟುನಿಟ್ಟಾಗಿ ಅನುಸರಿಸಿಲ್ಲ.)

೬ ಪೌರಾಣಿಕ ವ್ಯಕ್ತಿ-ವಿಷಯಗಳು

೬.೧ ಪೌರಾಣಿಕ ವ್ಯಕ್ತಿಗಳು*

೬.೨ ಪೌರಾಣಿಕ ಮಹಿಳೆಯರು*

೬.೩ ಪೌರಾಣಿಕ ಕಥಾನಕಗಳು*

೬.೪ ಕೊರವಂಜಿ*

೬.೫ ಜ್ಯೋತಿರ್ವಿಷಯಗಳು (ಖಗೋಳ)*

೬.೬ ರಾಮಾಯಣ*

೬.೭ ಮಹಾಭಾರತ*

೬.೮ ವೇದ-ವೇದಾಂಗಗಳು*

೬.೮.೧ ಭಗವದ್ಗೀತೆ

೬.೯ ಪುರಾಣಗಳು*

೬.೯.೧ ಭಾಗವತ

೭ ತೀರ್ಥ-ಕ್ಷೇತ್ರಗಳು

೭.೧ ನದ-ನದಿಗಳು*

೭.೨ ಕ್ಷೇತ್ರಗಳು

೮ ತತ್ತ್ವವಿಚಾರ

೮.೧ ನವವಿಧಭಕ್ತಿ*

೮.೨ ಮುಂಡಿಗೆ

೮.೩ ಯೋಗವಿಚಾರ

೮.೪ ಓಂಕಾರ

೮.೫ ಸೃಷ್ಟಿ-ಸ್ಥಿತಿ-ಲಯ

೮.೬ ಪೂರ್ವಕರ್ಮ

೯ ಆತ್ಮನಿವೇದನೆ

೯.೧ ಆಪತ್ಪರಿಹಾರ

೯.೨ ಗೃಹಸಮರ್ಪಣೆ

೯.೩ ಹುಟ್ಟುಹಬ್ಬದ ಪ್ರಾರ್ಥನೆ

೯.೪ ಶರಣಾಗತಿ/ಸರ್ವಸಮರ್ಪಣ

೯.೫ ಮರಣವಿಚಾರ

೯.೬ ಭಕ್ತಿ-ಮುಕ್ತಿ

೧೦ ಲೋಕನೀತಿ/ನೀತಿಬೋಧೆ

೧೧ ಗುರುನಮನ

೧೧.೧ ಸಜ್ಜನಸಂಗ/ಸತ್ಸಂಗ

೧೧.೨ ಯತಿವೃಂದ*

೧೧.೨೧ ಶ್ರೀ ಜಯತೀರ್ಥರು

೧೧.೨೨ ಶ್ರೀ ಶ್ರೀಪಾದರಾಜರು

೧೧.೨೩ ಶ್ರೀ ವ್ಯಾಸರಾಯರು

೧೧.೨೪ ಶ್ರೀ ವಾದಿರಾಜರು

೧೧.೨೪.೧ ಶ್ರೀ ಭೂತರಾಜರು

೧೧.೨೫ ಶ್ರೀ ರಾಘವೇಂದ್ರರು

೧೧.೨೬ ಶ್ರೀ ವರದೇಂದ್ರರು

೧೧.೨೭ ಶ್ರೀ ಸತ್ಯಬೋಧರು

(ಇತರರಿಗಾಗಿ ೧೧.೨ದಲ್ಲಿಯೇ ನೋಡಿರಿ)

೧೧.೩ ಆಚಾರ್ಯವರ್ಯರು*

೧೧.೪ ಹರಿದಾಸರುಗಳು*

೧೧.೪೧ ಅಂಕಿತಪ್ರದಾನ

೧೧.೫ ಶ್ರೀಹರಿಯ ಭಕ್ತರು

೧೧.೬ ಗುರುಹಿರಿಯರ ಆಶೀರ್ವಚನ

೧೧.೭ ಗುರುಹಿರಿಯರ ಚರಮಗೀತೆ*

೧೨ ಮತ-ಧರ್ಮ

೧೨.೧ ಅದ್ವೈತ ಮತ

೧೨.೧೧ ಶ್ರೀ ಶಂಕರಾಚಾರ್ಯರು

೧೨.೧೨ ದತ್ತಪಂಥ/ಶ್ರೀ ದತ್ತಾತ್ರೇಯ

೧೨.೧೩ ಸಾರಸ್ವತರ ಪರಂಪರೆ

೧೨.೨ ವಿಶಿಷ್ಟಾದ್ವೈತ ಮತ

೧೨.೨೧ ಶ್ರೀ ರಾಮಾನುಜಾಚಾರ್ಯರು

೧೨.೩ ದ್ವೈತ ಮತ/ಮಾಧ್ವ ಪರಂಪರೆ

೧೨.೩೧ ಮಾಧ್ವಮಠಗಳು*

೧೨.೩೨ ಮಾಧ್ವಗ್ರಂಥಸಂಪದ*

೧೨.೩೩ ಮಾಧ್ವ ತಾರತಮ್ಯ

೧೨.೪ ಧಾರ್ಮಿಕ ವಿಧಿಗಳು*

೧೨.೪೧ ಏಕಾದಶೀವ್ರತ

೧೨.೫ ಹಬ್ಬ/ಉತ್ಸವಗಳು*

೧೨.೬ ದ್ವೈತ-ಅದ್ವೈತ ತುಲನೆ

೧೨.೬೧ ಹರಿ-ಹರ ತುಲನೆ

೧೩ ಪ್ರಾಪಂಚಿಕ

೧೩.೧ ಐತಿಹಾಸಿಕ*

೧೩.೨ ಲೌಕಿಕ*

೧೩.೩ ಜಾನಪದೀಯ

೧೩.೪ ಕುಲವಿಚಾರ

೧೪ ಸಂಪ್ರದಾಯದ ಹಾಡುಗಳು

೧೪.೧ ಉದಯಗೀತೆ

೧೪.೧೧ ಶಯನಗೀತೆ

೧೪.೨ ಮಂಗಳಪದಗಳು

೧೪.೩ ಜೋಗುಳ ಪದಗಳು

೧೪.೪ ಆರತಿ ಪದಗಳು

೧೪.೫ ವ್ರತದ ಹಾಡುಗಳು*

೧೪.೬ ಮದುವೆ/ಮುಯ್ಯದ ಹಾಡುಗಳು

೧೪.೭ ಹಸೆಗೆ ಕರೆವ ಹಾಡುಗಳು

೧೪.೮ ಕೋಲಾಟದ ಪದಗಳು

೧೪.೮.೧ ಸುವ್ವಾಲೆ ಪದಗಳು

೧೪.೯ ಸಂಗೀತ-ನೃತ್ಯ

೧೫ ಸಾಹಿತ್ಯಿಕ

೧೫.೧ ಕಲ್ಪಕತೆ/ಚತುರೋಕ್ತಿ

೧೫.೧೧ ಆನೆಗೆ ಹೋಲಿಸಿ ಸ್ತುತಿ

೧೫.೨ ನಿಂದಾಸ್ತುತಿ

೧೫.೩ ಉಪಮಾಲಂಕಾರ

೧೫.೪ ಕವನ ಪ್ರಕಾರಗಳು*

೧೫.೫ ಕೆಲವು ಕವಿಗಳು

– – –

ಸೂಚನೆ:

* ಗುರುತಿನ ನಮೂದುಗಳು ಸ್ಥೂಲವಾದ ವರ್ಗೀಕರಣ; ವಿವರಣಗಳಿಗೆ ಮುಂದಿನ ನಿರ್ದಿಷ್ಟ ವಿಷಯಗಳನ್ನು ನೋಡುವುದು....

ಪ್ರಕರಣ ೫

ಕೀರ್ತನೆಗಳಲ್ಲಿ ಬಂದಿರುವ ವಿಷಯಗಳ ಅಕಾರಾದಿ ಸೂಚಿ

ವಿಷಯ	ಪು.ಸಂ.

— * —

ಅಂಕಿತಪ್ರದಾನ

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧	ಗುರುಗೋವಿಂದವಿಠಲ	ಅಂಜನಾಸುತ ವರದವಿಠಲ ಪೊರೆ	೩೧-೨
೨	ಗುರುಗೋವಿಂದವಿಠಲ	ಅಂತರಾತ್ಮಕ ವಿಠಲ ಪೊರೆಯಬೇಕಿವಳಾ	೩೧-೨
೩	ಗುರುಗೋವಿಂದವಿಠಲ	ಅಕ್ರೂರ ವರದವಿಠಲ	೩೧-೨
೪	ಗುರುಗೋವಿಂದವಿಠಲ	ಅಚ್ಯುತಾನಂತವಿಠಲ ಸಲಹಬೇಕಿವನಾ	೩೧-೨
೫	ಗುರುಗೋವಿಂದವಿಠಲ	ಅನಂತ ಹರಿ ವಿಠಲ ಕಾಪಾಡೊ ಇವನಾ	೩೧-೨
೬	ಗುರುಗೋವಿಂದವಿಠಲ	ಅನಂತಗಿರಿವಿಠಲ ಪಾಲಿಸೋ ಇವಳಾ	೩೧-೨
೭	ಗುರುಗೋವಿಂದವಿಠಲ	ಅನಂತಗುಣಪೂರ್ಣ ವಿಠಲ ಪೊರೆ ಇವನಾ	೩೧-೨
೮	ಗುರುಗೋವಿಂದವಿಠಲ	ಅನಂತಪದ್ಮನಾಭ ವಿಠ್ಠಲನೆ ನೀನಿವನ	೩೧-೨
೯	ಗುರುಗೋವಿಂದವಿಠಲ	ಅನಂತಶಯನ ವಿಠಲಾ ಕಾಪಾಡೊ	೩೧-೨
೧೦	ಗುರುಗೋವಿಂದವಿಠಲ	ಅಮಿತ ಮಹಿಮೋಪೇತ ವಿಠಲ ಸಲಹೋ	೩೧-೨
೧೧	ಗುರುಗೋವಿಂದವಿಠಲ	ಅಸಾಧಾರಣ ವಿಠಲ ನೀ ಸಲಹೊ	೩೧-೨
೧೨	ಗುರುಗೋವಿಂದವಿಠಲ	ಆನಂದ ಗಿರಿಪತಿವಿಠಲ ಶ್ರೀನಿವಾಸ	೩೧-೨
೧೩	ಗುರುಗೋವಿಂದವಿಠಲ	ಆನಂದ ಗಿರಿವಿಠಲ ಕಾಪಾಡೊ ಇವಳ	೩೧-೨
೧೪	ಗುರುಗೋವಿಂದವಿಠಲ	ಆನಂದನಿಲಯ ವಿಠಲನೆ ನೀನಿವಳ ಸಲಹಬೇಕು	೩೧-೨
೧೫	ಗುರುಗೋವಿಂದವಿಠಲ	ಆನಂದವಾಹನ ವಿಠಲ ನೀನಿವಳ ಕಾಯಬೇಕೋ	೩೧-೨
೧೬	ಗುರುಗೋವಿಂದವಿಠಲ	ಆನಂದಾದ್ರಿವಾಸ ವಿಠಲ ಪೊರೆ ಇವನಾ	೩೧-೨
೧೭	ಗುರುಗೋವಿಂದವಿಠಲ	ಆನಂದಾದ್ರಿವಿಠಲ ನೀನೇ ಪೊರೆ ಇವಳಾ	೩೧-೨
೧೮	ಗುರುಗೋವಿಂದವಿಠಲ	ಆನಂದಾನಂತ ವಿಠಲ ನೀನಿವನ	೩೧-೨
೧೯	ಗುರುಗೋವಿಂದವಿಠಲ	ಆಪದ್ಬಾಂಧವ ವಿಠಲ ಕಾಪಾಡೊ ಇವಳಾ	೩೧-೨
೨೦	ಗುರುಗೋವಿಂದವಿಠಲ	ಇಂದು ಭಾಗ ಹರಿ ವಿಠಲ ಪೊರೆಯಬೇಕಿವಳ	೩೧-೨
೨೧	ಗುರುಗೋವಿಂದವಿಠಲ	ಉಪೇಂದ್ರ ವಿಠ್ಠಲನೆ ಕೃಪೆಯಿಂದ	೩೧-೨
೨೨	ಗುರುಗೋವಿಂದವಿಠಲ	ಉಪೇಂದ್ರ ಹರಿ ವಿಠಲ ಕೃಪೆಯಲಿಂದಲಿ	೩೧-೨
೨೩	ಗುರುಗೋವಿಂದವಿಠಲ	ಉರಗಗಿರಿವಾಸ ವಿಠಲ ಪೊರೆಯಬೇಕಿವಳಾ	೩೧-೨
೨೪	ಗುರುಗೋವಿಂದವಿಠಲ	ಋಗ್ವೇದ ಪ್ರಿಯ ವಿಠಲ ಸದ್ಗುಣಾರ್ಣವನೇ	೩೧-೨
೨೫	ಗುರುಗೋವಿಂದವಿಠಲ	ಋಜುರಾಜ ಸನ್ನುತ	೩೧-೨
೨೬	ಗುರುಗೋವಿಂದವಿಠಲ	ಕದರಿ ನರಹರಿವಿಠಲ ಮುದದಿ	೩೧-೨
೨೭	ಗುರುಗೋವಿಂದವಿಠಲ	ಕನಕಾದ್ರಿ ಹರಿ ವಿಠಲ ಕಾಪಾಡೊ ಇವಳ	೩೧-೨
೨೮	ಗುರುಗೋವಿಂದವಿಠಲ	ಕಮಲಾ ರಮಣ ಹರಿ ವಿಠಲ	೩೧-೨
೨೯	ಗುರುಗೋವಿಂದವಿಠಲ	ಕಮಲಾಲಯ ವಿಠಲ ಕಾಪಾಡೊ ಇವಳ	೩೧-೨
೩೦	ಗುರುಗೋವಿಂದವಿಠಲ	ಕರಿವರದ ಗೋಪಾಲ ವಿಠಲ ಸಲಹೋ	೩೧-೨
೩೧	ಗುರುಗೋವಿಂದವಿಠಲ	ಕೈವಲ್ಯಪತಿ ವಿಠಲ ಇವಳ ನೀ ಸಲಹೋ	೩೧-೨
೩೨	ಗುರುಗೋವಿಂದವಿಠಲ	ಕೋನೇರಿ ವಾಸ ವಿಠಲ	೩೧-೨
೩೩	ಗುರುಗೋವಿಂದವಿಠಲ	ಖಗವರಧ್ವಜ ವಿಠಲ ಪೊರೆಯಬೇಕಿವನ	೩೧-೨
೩೪	ಗುರುಗೋವಿಂದವಿಠಲ	ಗಂಗಾ ಜನಕ ವಿಠಲ ಅಂಗನೆಯ ಪೊರೆಯೊ	೩೧-೨
೩೫	ಗುರುಗೋವಿಂದವಿಠಲ	ಗಿರಿಜಾಪತಿ ಪ್ರಿಯ ವಿಠಲ ಪೊರೆಯಬೇಕಿವನಾ	೩೧-೨
೩೬	ಗುರುಗೋವಿಂದವಿಠಲ	ಗುರು ಜಗದೀಶ ವಿಠಲ ಪೊರೆಯಬೇಕಿವನಾ	೩೧-೨
೩೭	ಗುರುಗೋವಿಂದವಿಠಲ	ಗುರು ಪಾಂಡುರಂಗ ವಿಠಲ ಪರಿಪಾಲಿಸಿವನಾ	೩೧-೨
೩೮	ಗುರುಗೋವಿಂದವಿಠಲ	ಗುರು ಪ್ರಸನ್ನ ವಿಠಲ ಪೊರೆಯಬೇಕಿವನಾ	೩೧-೨
೩೯	ಗುರುಗೋವಿಂದವಿಠಲ	ಗುರು ಭಾರತೀಶ ಪ್ರಿಯ ವಿಠಲ ಪೊರೆ ಇವಳ	೩೧-೨
೪೦	ಗುರುಗೋವಿಂದವಿಠಲ	ಗುರು ಮಧ್ವೇಶ ವಿಠಲ ಪೊರೆಯಬೇಕಿವಳಾ	೩೧-೨
೪೧	ಗುರುಗೋವಿಂದವಿಠಲ	ಗುರು ಮೋಹನ ವಿಠಲ ಸಲಹಬೇಕಿವನಾ	

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೪೨	ಗುರುಗೋವಿಂದವಿಠಲ	ಗುರು ರಾಘವೇಂದ್ರ ವಿಠಲ ಪೊರೆಯಬೇಕಿವಳಾ	೩೧-೨
೪೩	ಗುರುಗೋವಿಂದವಿಠಲ	ಗುರುರಾಜ ಹರಿವಿಠಲ ಪೊರೆಯಬೇಕಿವಳಾ	೩೧-೨
೪೪	ಗುರುಗೋವಿಂದವಿಠಲ	ಗುರುರಾಜನುತ ವಿಠಲ ಪೊರೆಯಬೇಕಿವಳಾ	೩೧-೨
೪೫	ಗುರುಗೋವಿಂದವಿಠಲ	ಗುರುರಾಜವರದ ವಿಠಲ ಪೊರೆಯಬೇಕಿವಳಾ	೩೧-೨
೪೬	ಗುರುಗೋವಿಂದವಿಠಲ	ಗುರುವರ ಹರಿ ವಿಠಲ ಪೊರೆಯಬೇಕಿವಳಾ	೩೧-೨
೪೭	ಗುರುಗೋವಿಂದವಿಠಲ	ಗೋಪಗೋವಿಂದ ವಿಠಲ ನೀ ಪಾಲಿಸಿವಳಾ	೩೧-೨
೪೮	ಗುರುಗೋವಿಂದವಿಠಲ	ಗೋಪಾಲ ಹರಿ ವಿಠಲ ನೀ ಪಾಲಿಸಿವಳಾ	೩೧-೨
೪೯	ಗುರುಗೋವಿಂದವಿಠಲ	ಗೋಪಿನಾಥ ವಿಠಲ ನೀ ಪಾಲಿಸಿವಳಾ	೩೧-೨
೫೦	ಗುರುಗೋವಿಂದವಿಠಲ	ಗೋಪೀಶ ವಿಠ್ಠಲನೆ ನೀ ಪಾಲಿಸಿವಳಾ	೩೧-೨
೫೧	ಗುರುಗೋವಿಂದವಿಠಲ	ಚಂದ್ರಭಾಗ ಹರಿ ವಿಠಲ ಸಲಹಬೇಕಿವಳಾ	೩೧-೨
೫೨	ಗುರುಗೋವಿಂದವಿಠಲ	ಜಗತ್ಸಾರ ವಿಠಲ ನೀನಿವಳ ಸಲಹೋ	೩೧-೨
೫೩	ಗುರುಗೋವಿಂದವಿಠಲ	ಜಗದೀಶ ವಿಠ್ಠಲನೆ ಮಗುವ ಕಾಯೋ	೩೧-೨
೫೪	ಗುರುಗೋವಿಂದವಿಠಲ	ಜಯ ಗೋಪಾಲ ವಿಠಲ ದಯೆ ತೋರೋ	೩೧-೨
೫೫	ಗುರುಗೋವಿಂದವಿಠಲ	ಜಯ ಪಾಂಡುರಂಗ ವಿಠಲ ದಯದಿ ಪೊರೆ ಇವನಾ	೩೧-೨
೫೬	ಗುರುಗೋವಿಂದವಿಠಲ	ಜಯಶ್ರೀ ನರಹರಿ ವಿಠಲ ಕಾಯಬೇಕಿವಳಾ	೩೧-೨
೫೭	ಗುರುಗೋವಿಂದವಿಠಲ	ಜಾಂಬುವತಿ ಪ್ರಿಯ ವಿಠಲ	೩೧-೨
೫೮	ಗುರುಗೋವಿಂದವಿಠಲ	ಜಾನಕೀಶ ವಿಠಲ ನೀನಿವನ ಪೊರೆಯೋ	೩೧-೨
೫೯	ಗುರುಗೋವಿಂದವಿಠಲ	ಜ್ಞಾನಪ್ರದ ನರಸಿಂಹ ವಿಠಲ ನೀ ಸಲಹೊ	೩೧-೨
೬೦	ಗುರುಗೋವಿಂದವಿಠಲ	ತಿರುಮಲೇಶ ಹರಿ ವಿಠ್ಠಲ ಪೊರೆಯ	೩೧-೨
೬೧	ಗುರುಗೋವಿಂದವಿಠಲ	ತಿರುಮಲೇಶವಿಠಲಾ ಪೊರೆಯಬೇಕಿವಳಾ	೩೧-೨
೬೨	ಗುರುಗೋವಿಂದವಿಠಲ	ತುಲಸಿವಂದಿತ ವಿಠಲ ಕಾಪಾಡೊ ಇವಳಾ	೩೧-೨
೬೩	ಗುರುಗೋವಿಂದವಿಠಲ	ದಧಿವಾಮನ ವಿಠಲ ಉದ್ಧರಿಸೊ ಇವನ	೩೧-೨
೬೪	ಗುರುಗೋವಿಂದವಿಠಲ	ದಾಮ ಶೋಭಿತ ವಿಠಲ ಸಾಮ ಸನ್ನುತನೇ	೩೧-೨
೬೫	ಗುರುಗೋವಿಂದವಿಠಲ	ದಾಮೋದರ ವಿಠಲನೆ ಸಲಹಬೇಕಿವಳಾ	೩೧-೨
೬೬	ಗುರುಗೋವಿಂದವಿಠಲ	ದಾಸವರ ವರದವಿಠಲ ಸಲಹೊ	೩೧-೨
೬೭	ಗುರುಗೋವಿಂದವಿಠಲ	ದಾಸವರವರದ ವಿಠಲ ಸಲಹೊ ಇವಳಾ	೩೧-೨
೬೮	ಗುರುಗೋವಿಂದವಿಠಲ	ದ್ವಾರಕಾನಾಥ ವಿಠಲ ಪೊರೆಯಬೇಕಿವಳಾ	೩೧-೨
೬೯	ಗುರುಗೋವಿಂದವಿಠಲ	ನರ್ತನಗೋಪ ಕೃಷ್ಣ ವಿಠಲ ಪೊರೆ ಇವನಾ	೩೧-೨
೭೦	ಗುರುಗೋವಿಂದವಿಠಲ	ನಾರಾಯಣ ಕೃಷ್ಣವಿಠಲ ಪೊರೆಯಬೇಕಿವನಾ	೩೧-೨
೭೧	ಗುರುಗೋವಿಂದವಿಠಲ	ನಾರಾಯಣ ವಿಠ್ಠಲನೆ ನೀನಿವನ ಕಾಪಾಡೊ	೩೧-೨
೭೨	ಗುರುಗೋವಿಂದವಿಠಲ	ನಾರಾಯಣ ಹರಿ ವಿಠಲ ಪೊರೆಯಬೇಕಿವಳಾ	೩೧-೨
೭೩	ಗುರುಗೋವಿಂದವಿಠಲ	ನಾರಾಯಣಾಚ್ಯುತ ವಿಠಲ ಪೊರೆಯಬೇಕಿವಳಾ	೩೧-೨
೭೪	ಗುರುಗೋವಿಂದವಿಠಲ	ಪಂಕಜಾಸನ ವಂದ್ಯ ವೆಂಕಟಾದ್ರಿವಿಠಲ	೩೧-೨
೭೫	ಗುರುಗೋವಿಂದವಿಠಲ	ಪಂಢರಿನಾಥ ವಿಠಲ ತೊಂಡನುನು ಸಲಹೋ	೩೧-೨
೭೬	ಗುರುಗೋವಿಂದವಿಠಲ	ಪದ್ಮಾಪತಿ ವಿಠಲ ನೀನಿವಳ ಸಲಹ ಬೇಕೋ	೩೧-೨
೭೭	ಗುರುಗೋವಿಂದವಿಠಲ	ಪದ್ಮೇಶ ವಿಠ್ಠಲನೆ ಪೊರೆಯಬೇಕಿವನ	೩೧-೨
೭೮	ಗುರುಗೋವಿಂದವಿಠಲ	ಪನ್ನಗಾದ್ರಿವಿಠಲ ನನ್ನಿಯಿಂ ಸಲಹೋ	೩೧-೨
೭೯	ಗುರುಗೋವಿಂದವಿಠಲ	ಪರತತ್ವ ವಿಠಲನೇ ಪೊರೆಯಬೇಕಿವಳಾ	೩೧-೨
೮೦	ಗುರುಗೋವಿಂದವಿಠಲ	ಪರಸೌಖ್ಯಪ್ರದ ವಿಠಲ	೩೧-೨
೮೧	ಗುರುಗೋವಿಂದವಿಠಲ	ಪವಮಾನವರದ ವಿಠಲ	೩೧-೨
೮೨	ಗುರುಗೋವಿಂದವಿಠಲ	ಪವಮಾನವಿಠಲ ಕಾಪಾಡೊ ಇವನಾ	೩೧-೨
೮೩	ಗುರುಗೋವಿಂದವಿಠಲ	ಪಾಂಡುರಂಗ ವಿಠಲ ಪೊರೆಯ	೩೧-೨
೮೪	ಗುರುಗೋವಿಂದವಿಠಲ	ಪಾಂಡುರಂಗ ಹರಿ ವಿಠಲ ಕಾಪಾಡೊ	೩೧-೨

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೮೫	ಗುರುಗೋವಿಂದವಿಠಲ	ಪುಂಡರೀಕ ವರದ ವಿಠಲ ಪೊರೆಯಿವನಾ	೩೧-೨
೮೬	ಗುರುಗೋವಿಂದವಿಠಲ	ಪುಂಡರೀಕ ವರದ ಹರಿ ವಿಠಲ ಪೊರೆ	೩೧-೨
೮೭	ಗುರುಗೋವಿಂದವಿಠಲ	ಪ್ರಕಾಶರೂಪಿ ವಿಠಲಾ ತೋಕನ್ನ [ಮಗ] ಸಲಹೋ	೩೧-೨
೮೮	ಗುರುಗೋವಿಂದವಿಠಲ	ಪ್ರದ್ಯುಮ್ನ ವಿಠಲ ನೀನಿವಳ	೩೧-೨
೮೯	ಗುರುಗೋವಿಂದವಿಠಲ	ಪ್ರಭು ಪಾಂಡುರಂಗ ವಿಠಲ	೩೧-೨
೯೦	ಗುರುಗೋವಿಂದವಿಠಲ	ಪ್ರವಹ ಸನ್ನುತ ವಿಠಲ	೩೧-೨
೯೧	ಗುರುಗೋವಿಂದವಿಠಲ	ಪ್ರಹ್ಲಾದ ವರದ ವಿಠಲ	೩೧-೨
೯೨	ಗುರುಗೋವಿಂದವಿಠಲ	ಪ್ರಾಣ ಗುರು ಜಯ ವಿಠಲ ಕಾಪಾಡು	೩೧-೨
೯೩	ಗುರುಗೋವಿಂದವಿಠಲ	ಪ್ರಾಣ ಗುರು ಹರಿ ವಿಠಲ	೩೧-೨
೯೪	ಗುರುಗೋವಿಂದವಿಠಲ	ಪ್ರಾಣ ಗುರುರಾಮವಿಠಲ ನೀನೆ ಪೊರೆ	೩೧-೨
೯೫	ಗುರುಗೋವಿಂದವಿಠಲ	ಪ್ರಾಣ ನರಹರಿವಿಠಲ ಪಾಲಿಸೋ	೩೧-೨
೯೬	ಗುರುಗೋವಿಂದವಿಠಲ	ಪ್ರಾಣನರಹರಿ ಮೋದ ವಿಠಲ	೩೧-೨
೯೭	ಗುರುಗೋವಿಂದವಿಠಲ	ಪ್ರಾಣಪತಿ ಗೋಪಾಲವಿಠಲ	೩೧-೨
೯೮	ಗುರುಗೋವಿಂದವಿಠಲ	ಪ್ರಾಣಪತಿ ಶ್ರೀನಿವಾಸ ವಿಠಲ ಪೊರೆ ಇವಳ	೩೧-೨
೯೯	ಗುರುಗೋವಿಂದವಿಠಲ	ಪ್ರಾಣಪತಿ ಹರಿ ವಿಠಲ ಪೊರೆಯಬೇಕಿವನಾ	೩೧-೨
೧೦೦	ಗುರುಗೋವಿಂದವಿಠಲ	ಪ್ರಾಣಮತ ನರಸಿಂಹ ವಿಠಲ ಪೊರೆ ಇವಳಾ	೩೧-೨
೧೦೧	ಗುರುಗೋವಿಂದವಿಠಲ	ಪ್ರಾಣಸನ್ನುತ ನರಸಿಂಹ ವಿಠಲ ಪೊರೆ ಇವಳಾ	೩೧-೨
೧೦೨	ಗುರುಗೋವಿಂದವಿಠಲ	ಪ್ರಾಣಸನ್ನುತ ವಿಠಲ ನೀನೆ ಪೊರೆ	೩೧-೨
೧೦೩	ಗುರುಗೋವಿಂದವಿಠಲ	ಪ್ರಾಣೇಶ ಹರಿ ವಿಠಲ ಪೊರೆಯಬೇಕಿವಳಾ	೩೧-೨
೧೦೪	ಗುರುಗೋವಿಂದವಿಠಲ	ಪ್ರಿಯ ಪಾಂಡುರಂಗ ವಿಠಲ ದಯದೋರೊ ಇವಗೆ	೩೧-೨
೧೦೫	ಗುರುಗೋವಿಂದವಿಠಲ	ಪ್ರಿಯ ಹಯಾಸ್ಯವಿಠಲ ದಯದಿ ಪೊರೆ ಇವನಾ	೩೧-೨
೧೦೬	ಗುರುಗೋವಿಂದವಿಠಲ	ಬದರೀ ಪ್ರಸನ್ನವಿಠಲ ಮುದದಿ ಪೊರೆ	೩೧-೨
೧೦೭	ಗುರುಗೋವಿಂದವಿಠಲ	ಬದರೀನಾಥ ವಿಠಲ ಪೊರೆಯ	೩೧-೨
೧೦೮	ಗುರುಗೋವಿಂದವಿಠಲ	ಬಾಲಕೃಷ್ಣ ಹರಿ ವಿಠಲ ಪಾಲಿಸೋ ಇವಳಾ	೩೧-೨
೧೦೯	ಗುರುಗೋವಿಂದವಿಠಲ	ಬಾಲಕೃಷ್ಣವಿಠಲ ಕಾಪಾಡೊ ಇವನಾ	೩೧-೨
೧೧೦	ಗುರುಗೋವಿಂದವಿಠಲ	ಭಕ್ತಾರ್ತಿಹರ ವಿಠಲ ತೆತ್ತಿಗನ	೩೧-೨
೧೧೧	ಗುರುಗೋವಿಂದವಿಠಲ	ಭಾರತೀಪತಿನುತ ವಿಠಲ	೩೧-೨
೧೧೨	ಗುರುಗೋವಿಂದವಿಠಲ	ಭಾರತೀಶ ಕಾಂತ ವಿಠಲ ಪೊರೆಯ	೩೧-೨
೧೧೩	ಗುರುಗೋವಿಂದವಿಠಲ	ಭೀಮಾತಟ ಹರಿ ವಿಠಲ ಪೊರೆಯಬೇಕಿವಳ	೩೧-೨
೧೧೪	ಗುರುಗೋವಿಂದವಿಠಲ	ಭೀಮಾತಟಗ ವಿಠಲ ಕಾಪಾಡೊ	೩೧-೨
೧೧೫	ಗುರುಗೋವಿಂದವಿಠಲ	ಭೂತರಾಜನುತ ವಿಠಲ ಕಾಪಾಡೊ ಇವನ	೩೧-೨
೧೧೬	ಗುರುಗೋವಿಂದವಿಠಲ	ಭೂತೇಶನುತ ವಿಠಲ ಕಾಪಾಡೋ ಇವನ	೩೧-೨
೧೧೭	ಗುರುಗೋವಿಂದವಿಠಲ	ಭೂರಮಣ ರಘುರಾಮ ವಿಠ್ಠಲನೆ ನೀನಿವಳ	೩೧-೨
೧೧೮	ಗುರುಗೋವಿಂದವಿಠಲ	ಭೂವರಾಹ ವಿಠಲನೆ ಸೇವಕನ	೩೧-೨
೧೧೯	ಗುರುಗೋವಿಂದವಿಠಲ	ಮಧ್ವವರಡ ವಿಠಲ ಕಾಯಬೇಕಿವಳಾ	೩೧-೨
೧೨೦	ಗುರುಗೋವಿಂದವಿಠಲ	ಮಧ್ವವರದ ಹಯಾಸ್ಯ ವಿಠಲ ಸಲಹೊ	೩೧-೨
೧೨೧	ಗುರುಗೋವಿಂದವಿಠಲ	ಮಧ್ವವರದಾ ಕೃಷ್ಣಾ ವಿಠಲ ಪೊರೆಯಿವಳ	೩೧-೨
೧೨೨	ಗುರುಗೋವಿಂದವಿಠಲ	ಮನಸಿಜ ಪಿತ ವಿಠಲ ನೀನಿವನ ಸಲಹೋ	೩೧-೨
೧೨೩	ಗುರುಗೋವಿಂದವಿಠಲ	ಮನುಜ ಮೃಗವೇಷ ವಿಠಲ ಪೊರೆ ಇವಳಾ	೩೧-೨
೧೨೪	ಗುರುಗೋವಿಂದವಿಠಲ	ಮನ್ಮಥಪಿತ ವಿಠಲ ನೀನಿವಳ ಸಲಹೊ	೩೧-೨
೧೨೫	ಗುರುಗೋವಿಂದವಿಠಲ	ಮಾಧವ ಭೂವರಾಹ ವಿಠಲ ಪೊರೆ ಇವನ	೩೧-೨
೧೨೬	ಗುರುಗೋವಿಂದವಿಠಲ	ಮಾಧವ ವಿಠಲ ನೀ ದಯದಿ ಕಾಪಾಡೊ ಇವಳ	೩೧-೨
೧೨೭	ಗುರುಗೋವಿಂದವಿಠಲ	ಮಾಧವ ಸ್ವಾಮಿ ವಿಠಲ	೩೧-೨

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೨೮	ಗುರುಗೋವಿಂದವಿಠಲ	ಮಾವಿನುತ ಹರಿ ವಿಠಲ ಸಲಹ	೩೧-೨
೧೨೯	ಗುರುಗೋವಿಂದವಿಠಲ	ಮುಕುಂದ ಹರಿ ವಿಠಲ ಸಾಕಬೇಕಿವನಾ	೩೧-೨
೧೩೦	ಗುರುಗೋವಿಂದವಿಠಲ	ಮುಚುಕುಂದ ವರದ ವಿಠಲ	೩೧-೨
೧೩೧	ಗುರುಗೋವಿಂದವಿಠಲ	ಮುದ್ದುಕೃಷ್ಣ ವಿಠಲ ಕಾಪಾಡೋ	೩೧-೨
೧೩೨	ಗುರುಗೋವಿಂದವಿಠಲ	ಮುದ್ದುವೆಂಕಟವಿಠಲ	೩೧-೨
೧೩೩	ಗುರುಗೋವಿಂದವಿಠಲ	ಮುರಳಿವಿನೋದ ವಿಠಲ ಪೊರೆಯಬೇಕಿವನಾ	೩೧-೨
೧೩೪	ಗುರುಗೋವಿಂದವಿಠಲ	ಮುರಳೀ ಮನೋಹರ ವಿಠಲ ಪೊರೆ	೩೧-೨
೧೩೫	ಗುರುಗೋವಿಂದವಿಠಲ	ಮುರಳೀ ವಿಹಾರಿ ವಿಠಲ	೩೧-೨
೧೩೬	ಗುರುಗೋವಿಂದವಿಠಲ	ಮೂಲ ಕಾರಣ ವಿಠಲ ಪಾಲಿಸಿವಳಾ	೩೧-೨
೧೩೭	ಗುರುಗೋವಿಂದವಿಠಲ	ಮೋದ ಪ್ರದ ನರಹರಿ ವಿಠಲ ಪೊರೆ ಇವಳಾ	೩೧-೨
೧೩೮	ಗುರುಗೋವಿಂದವಿಠಲ	ಮೋಹನ ಕೃಷ್ಣವಿಠಲ ಸಲಹಬೇಕಿವಳಾ	೩೧-೨
೧೩೯	ಗುರುಗೋವಿಂದವಿಠಲ	ಯತಿ ಸನ್ನುತ ವಿಠಲಾ ಹಿತದಿ ಪೊರೆ ಇವಳಾ	೩೧-೨
೧೪೦	ಗುರುಗೋವಿಂದವಿಠಲ	ಯೋಗಿ ಸನ್ನುತ ವಿಠಲ	೩೧-೨
೧೪೧	ಗುರುಗೋವಿಂದವಿಠಲ	ರಘುಕುಲ ತಿಲಕ ವಿಠಲ ಇವಳ	೩೧-೨
೧೪೨	ಗುರುಗೋವಿಂದವಿಠಲ	ರಮಾ ನಿವಾಸ ವಿಠಲ ಪೊರೆಯಬೇಕಿವಳ	೩೧-೨
೧೪೩	ಗುರುಗೋವಿಂದವಿಠಲ	ರಮಾವಿನುತ ವಿಠಲ ಪೊರೆಯಬೇಕೊ	೩೧-೨
೧೪೪	ಗುರುಗೋವಿಂದವಿಠಲ	ರಾಘವ ಹರಿ ವಿಠಲ ಕಾಪಾಡೋ ಇವಳ	೩೧-೨
೧೪೫	ಗುರುಗೋವಿಂದವಿಠಲ	ರಾಘವೇಂದ್ರ ವಿಠಲ ಪೊರೆಯಬೇಕಿವನ	೩೧-೨
೧೪೬	ಗುರುಗೋವಿಂದವಿಠಲ	ರಾಘವೇಂದ್ರ ಹರಿ ವಿಠಲ	೩೧-೨
೧೪೭	ಗುರುಗೋವಿಂದವಿಠಲ	ರಾಧಾರಮಣ ವಿಠಲ ನೀನಿವಳ	೩೧-೨
೧೪೮	ಗುರುಗೋವಿಂದವಿಠಲ	ರಾಮಕೃಷ್ಣವಿಠಲ ಪೊರೆಯಬೇಕಿವಳ	೩೧-೨
೧೪೯	ಗುರುಗೋವಿಂದವಿಠಲ	ರಾಮಚಂದ್ರ ವಿಠ್ಠಲನೆ	೩೧-೨
೧೫೦	ಗುರುಗೋವಿಂದವಿಠಲ	ರಾಮಚಂದ್ರ ಹರಿ ವಿಠಲ ನೀನಿವನ ಸಲಹೊ	೩೧-೨
೧೫೧	ಗುರುಗೋವಿಂದವಿಠಲ	ರಾಮಾನಂದ ವಿಠಲ ಪ್ರೇಮದಲಿ ಪೊರೆಯೋ	೩೧-೨
೧೫೨	ಗುರುಗೋವಿಂದವಿಠಲ	ರುಕ್ಮಿಣೀಶ ವಿಠಲ ಕಾಪಾಡೊ	೩೧-೨
೧೫೩	ಗುರುಗೋವಿಂದವಿಠಲ	ರುದ್ರವಂದಿತ ವಿಠಲ	೩೧-೨
೧೫೪	ಗುರುಗೋವಿಂದವಿಠಲ	ಲಕ್ಷ್ಮಿನರಹರಿ ವಿಠಲ	೩೧-೨
೧೫೫	ಗುರುಗೋವಿಂದವಿಠಲ	ಲಕ್ಷ್ಮೀ ಮನೋಜ್ಞ ವಿಠಲ	೩೧-೨
೧೫೬	ಗುರುಗೋವಿಂದವಿಠಲ	ಲಕ್ಷ್ಮೀ ಮನೋಹರ ವಿಠಲ	೩೧-೨
೧೫೭	ಗುರುಗೋವಿಂದವಿಠಲ	ಲಕ್ಷ್ಮೀ ವೆಂಕಟೇಶ ವಿಠಲ ರಕ್ಷಿಸೋ	೩೧-೨
೧೫೮	ಗುರುಗೋವಿಂದವಿಠಲ	ಲಕ್ಷ್ಮೀನಾಥ ವಿಠಲ	೩೧-೨
೧೫೯	ಗುರುಗೋವಿಂದವಿಠಲ	ಲಕ್ಷ್ಮೀನಾರಾಯಣ ವಿಠಲ	೩೧-೨
೧೬೦	ಗುರುಗೋವಿಂದವಿಠಲ	ಲಕ್ಷ್ಮೀಪತಿ ವಿಠಲ ರಕ್ಷಿಸೊ	೩೧-೨
೧೬೧	ಗುರುಗೋವಿಂದವಿಠಲ	ಲಕ್ಷ್ಮೀಲೋಲ ವಿಠಲ ರಕ್ಷಿಸಲಿ	೩೧-೨
೧೬೨	ಗುರುಗೋವಿಂದವಿಠಲ	ಲಕ್ಷ್ಮೀವಲ್ಲಭ ವಿಠಲ	೩೧-೨
೧೬೩	ಗುರುಗೋವಿಂದವಿಠಲ	ಲಕ್ಷ್ಮೀಶ ಗೋವಿಂದ ವಿಠಲ	೩೧-೨
೧೬೪	ಗುರುಗೋವಿಂದವಿಠಲ	ಲಕ್ಷ್ಮೀಶ ನರಹರಿ ವಿಠ್ಠಲನೆ	೩೧-೨
೧೬೫	ಗುರುಗೋವಿಂದವಿಠಲ	ಲಕ್ಷ್ಮೀಶ ವಿಠಲಾ ರಕ್ಷಿಸೋ ಇವನಾ	೩೧-೨
೧೬೬	ಗುರುಗೋವಿಂದವಿಠಲ	ಲಕ್ಷ್ಮೀಶ ಹರಿ ವಿಠಲ ರಕ್ಷಿಸೋ	೩೧-೨
೧೬೭	ಗುರುಗೋವಿಂದವಿಠಲ	ಲೀಲಾ ಮನೋಹರ ವಿಠಲ	೩೧-೨
೧೬೮	ಗುರುಗೋವಿಂದವಿಠಲ	ವರಗಡದಿನ್ನಿಶೇಷ ವಿಠಲ ಪೊರೆ ಇವನಾ	೩೧-೨
೧೬೯	ಗುರುಗೋವಿಂದವಿಠಲ	ವರದ ಗುರು ಗೋವಿಂದ ವಿಠಲ ಪೊರೆ ಇವನಾ	೩೧-೨
೧೭೦	ಗುರುಗೋವಿಂದವಿಠಲ	ವರದ ನರಹರಿ ವಿಠಲ ಪೊರೆಯಬೇಕಿವಳ	೩೧-೨

ಅನು ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೭೧	ಗುರುಗೋವಿಂದವಿತಲ	ವರದರಾಜ ವಿತಲ ಪೊರೆಯಬೇಕಿವನಾ	೩೧-೨
೧೭೨	ಗುರುಗೋವಿಂದವಿತಲ	ವರಾಹ ಹರಿ ವಿತಲ ಕಾಪಾಡೋ ಇವನಾ	೩೧-೨
೧೭೩	ಗುರುಗೋವಿಂದವಿತಲ	ವರಾಹ ಹರಿ ವಿತಲ ಪೊರೆಯಬೇಕಿವಳ	೩೧-೨
೧೭೪	ಗುರುಗೋವಿಂದವಿತಲ	ವಸುಮತೀಶ ವಿಠ್ಠಲನೇ ನೀನಿವಗೆ	೩೧-೨
೧೭೫	ಗುರುಗೋವಿಂದವಿತಲ	ವಾಜಿ ವದನ ವಿತಲ ಕಾಪಾಡೊ ಇವಳಾ	೩೧-೨
೧೭೬	ಗುರುಗೋವಿಂದವಿತಲ	ವಾಣಿಪತಿನುತ ವಿತಲ ದಿನೆಯನು ಪೊರೆಯೊ	೩೧-೨
೧೭೭	ಗುರುಗೋವಿಂದವಿತಲ	ವಾದಿರಾಜ ಹರಿ ವಿತಲ ಪರಿಪಾಲಿಸಿವಳಾ	೩೧-೨
೧೭೮	ಗುರುಗೋವಿಂದವಿತಲ	ವಾನರ ವಂದ್ಯ ವಿತಲ ನೀನೆ ಪೊರೆ ಇವಳಾ	೩೧-೨
೧೭೯	ಗುರುಗೋವಿಂದವಿತಲ	ವಾಯುವಂದಿತ ವಿತಲ ಪೊರೆಯಬೇಕಿವನಾ	೩೧-೨
೧೮೦	ಗುರುಗೋವಿಂದವಿತಲ	ವಾಸಿಷ್ಠ ಕೃಷ್ಣ ವಿತಲ	೩೧-೨
೧೮೧	ಗುರುಗೋವಿಂದವಿತಲ	ವಾಸುಕೀಶಯನ ವಿತಲ	೩೧-೨
೧೭೮೮೭	ಮಹಿಪತಿಸುತ	ಪ್ರಾಣನ್ನೋಡಿರೇ ಮುಖ್ಯಪ್ರಾಣನ್ನೋಡಿರೇ	೧೧-೧
೧೭೮೮೮	ಮಹಿಪತಿಸುತ	ಬಣ್ಣಿಸಲಳವಲ್ಲ ನಿಮ್ಮ	೧೧-೧
೧೭೮೮೯	ಮಹಿಪತಿಸುತ	ಶರಣೆಂಬೆ ಗುರುರಾಯಾ ಶರಣ ಜನರಾಶ್ರಯಾ	೧೧-೧
೧೭೮೯೦	ಮಹಿಪತಿಸುತ	ಹನುಮಾ ಹನುಮಾ ಯೆನ್ನ ಉದ್ಧರಿಸುವೆ ನೀ	೧೧-೧
೧೭೮೯೧	ಮಾಂಗಿರಿರಂಗ	ತವ ಸಂಸ್ಮರಣಂ ಭವಪರಿಹಾರೀ (ಸಂ)	೩೫-೨
೧೭೮೯೨	ಮಾಂಗಿರಿರಂಗ	ನಮೋಸ್ತು ಹನುಮಾನ್	೩೫-೨
೧೭೮೯೩	ಮಾಂಗಿರಿರಂಗ	ಭಜರೇ ಧೀಮಂತಂ ಮಾನಸ (ಸಂ)	೩೫-೨
೧೭೮೯೪	ಮೋಹನವಿಠಲ	ಸಂಜೀವನ ಗಿರಿಧರ ಪಾಹಿಮಾಂ	೧೩
೧೭೮೯೫	ರಂಗವಿಠಲ (ಶ್ರೀ ಶ್ರೀಪಾದರಾಜರು)	ಜಾಣ ನೀನಹುದೋ ಗುರುಮುಖ್ಯಪ್ರಾಣ	೧
೧೭೮೯೬	ರಂಗೇಶವಿಠಲ	ಮಲಗು ಮಲಗಯ್ಯ ಹನುಮ	೨೭
೧೭೮೯೭	ರಮಾವಲ್ಲಭವಿಠಲ	ಯಂತ್ರೋದ್ಧಾರಕ ಪ್ರಾಣರಾಯ ಎನ್ನ ಚಿಂತೆ	೧೮-೪
೧೭೮೯೮	ಲಕ್ಷ್ಮೀನಾರಾಯಣ	ಇವನ್ಯಾರೆ ದೂರದಿ ಬರುವವ	೨೩
೧೭೮೯೯	ಲಕ್ಷ್ಮೀನಾರಾಯಣ	ಎಲ್ಲಿರುವೇನೋ ಮಾರುತಿ ಸುವ್ರತಿ	೨೩
೧೭೯೦೦	ಲಕ್ಷ್ಮೀನಾರಾಯಣ	ಕಮಲದಳಾಕ್ಷಿ ಪೇಳೆಲೆ ಈತನ್ಯಾರೆ	೨೩
೧೭೯೦೧	ಲಕ್ಷ್ಮೀನಾರಾಯಣ	ದಿಟ್ಟ ಮುಖ್ಯಪ್ರಾಣನೆ ಜಗಜಟ್ಟಿ ಬಾ ಸುತ್ರಾಣನೆ	೨೩
೧೭೯೦೨	ಲಕ್ಷ್ಮೀನಾರಾಯಣ	ಪಾಲಿಸೆನ್ನ ಪಾವಮಾನಿ ಪಾವನಾತ್ಮಸುಜ್ಞಾನಿ	೨೩
೧೭೯೦೩	ಲಕ್ಷ್ಮೀನಾರಾಯಣ	ಮರೆಯಲಿನ್ನೆಂತುಪಕಾರ ಮಾರುತಿ	೨೩
೧೭೯೦೪	ಲಕ್ಷ್ಮೀನಾರಾಯಣ	ರಾಮನಾಮಾಮೃತ ಪಾನಸುಖಧಾಮನು ಮುಖ್ಯಪ್ರಾಣ	೨೩
೧೭೯೦೫	ಲಕ್ಷ್ಮೀನಾರಾಯಣ	ಶ್ರೀ ಸೀತಾಪತಿದಾಸವರ್ಯ ಜೀವೇಶ ನಿಜವಿಲಾಸ	೨೩
೧೭೯೦೬	ಲಕ್ಷ್ಮೀನಾರಾಯಣ	ಸಾಮಧಾನವು ಸಾಮಧಾನ ಪವಮಾನ	೨೩
೧೭೯೦೭	ವರಾಹತಿಮ್ಮಪ್ಪ	ಹನುಮಂತ ಬಲವಂತ ಬಲು ಭಾಗ್ಯವಂತ (ದೀ)	೨೪
೧೭೯೦೮	ವಾಸುದೇವವಿಠಲ	ಮನವೆ ಮಾನ್ಯನ ಮನ್ನಿಸು ಶ್ರೀವ್ಯಾಸ	೨೮
೧೭೯೦೯	[illegible]	ಎಂತು ವರ್ಣಿಪೆ ನಮ್ಮಮ್ಮಾ	೯-೧
೧೭೯೧೦	[illegible]	ಏನು ಸೇವಿಸಿದೆ ಗುರು ಯೆಲೊ ಮಾರುತಿಸಖನ	೯-೧
೧೭೯೧೧	[illegible]	ಕೋತಿಯಾದರೆ ಬಿಡೆನೋ ಬಲುಪರಿ	೧೦-೨

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೭೯೧೨	ವಿಜಯವಿಠಲ	ಜಲಜಸಂಭವನ ಪಟ್ಟಕ್ಕೇರುವ ಗುರುವೆ	೧೦-೨
೧೭೯೧೩	ವಿಜಯವಿಠಲ	ದಾಶರಥ ಪಾದಸರಸಿಜ ಮಧುಕರ	೯-೧
೧೭೯೧೪	ವಿಜಯವಿಠಲ	ಮರುತಗಳ ನಾಮವನು ಉದಯದಲಿಯೆದ್ದು	೯-೧
೧೭೯೧೫	ವಿಜಯವಿಠಲ	ಯೆಂತು ವರ್ಣಿಸಲಮ್ಮ ಈ ಗುರುಗಳ	೯-೧
೧೭೯೧೬	ವಿಜಯವಿಠಲ	ರಕ್ಷಿಸೆನ್ನ ರಮಣ ಪಂಚಪರಣಾ ಜಗತ್ಪಾವನಾ	೯-೧
೧೭೯೧೭	ವೆಂಕಟವಿಠಲ	ಬಿಡುವೇನೇನಯ್ಯಾ ಹನುಮ ನಿನ್ನ	೧೩
೧೭೯೧೮	ವೇಣುಗೋಪಾಲವಿಠಲ	ಪರಮ ಮುಖ್ಯಪ್ರಾಣನೆ ಪರಿಶುದ್ಧಚರಿತನೆ (ಸು)	೧೩
೧೭೯೧೯	ವೇಣುಗೋಪಾಲವಿಠಲ	ಮರುತಾ ನಿನ್ನ ಮಹಿಮೆ (ಸು)	೧೩
೧೭೯೨೦	ಶಂಕರ	ಎಂಥ ಮಹಿಮನು ನೋಡು ನಮ್ಮ ಯಲಗೂರ	೨೦
೧೭೯೨೧	ಶಂಕರ	ಜೋ ಜೋ ಜೋ ಅಂಜನಿಕಂದ	೨೦
೧೭೯೨೨	ಶಾಮಸುಂದರವಿಠಲ	ಅಡವಿನಿಲಯ ನಿನ್ನಡಿಗೆರಗುವೆ	೩೦
೧೭೯೨೩	ಶಾಮಸುಂದರವಿಠಲ	ಕರುಣಿಸೋ ಗುರು ಮಾರುತಿ	೩೦
೧೭೯೨೪	ಶಾಮಸುಂದರವಿಠಲ	ಕಾಯೋ ದಯಾಭರಿತ ಮಾರುತಿ	೩೦
೧೭೯೨೫	ಶಾಮಸುಂದರವಿಠಲ	ದೇವ ಮಾರುತಿ ಜಯಮಂಗಲಂ	೩೦
೧೭೯೨೬	ಶಾಮಸುಂದರವಿಠಲ	ನಮಿಸುವೆ ಪಾಲಿಸೊ ಪ್ರಾಣಪತೇ	೩೦
೧೭೯೨೭	ಶೇಷಗಿರೀಶ	ಮೌನಮೇಂ ಪ್ರಾಣೇಶ ಎನ್ನೊಳೀಪರಿ ರೋಷ	೧೮-೪
೧೭೯೨೮	ಶೇಷವಿಠಲ	ನಡೆದು ಬಾರಯ್ಯ ಪ್ರಾಣರಾಯ ಪಿಡಿ	೧೫
೧೭೯೨೯	ಶ್ರೀ-ಶ್ರೀನಿವಾಸ	ನೆನೆ ಮನವನುದಿನ ಹನುಮದೀಶನ	೧೮-೪
೧೭೯೩೦	ಶ್ರೀಕಾಂತ	ಹನುಮಂತ ದೇವನ ನೋಡಿ	೨೭
೧೭೯೩೧	ಶ್ರೀರಾಮ	ಆರು ಸರಿ ಮಾರುತಿಯೆ ನಿನಗೆ	೩೨
೧೭೯೩೨	ಶ್ರೀರಾಮ	ಏನು ಬಲ್ಲಿದನೋ ಹನುಮಂತ ನೀನು	೩೨
೧೭೯೩೩	ಶ್ರೀರಾಮ	ತನುಮನ ಧನದಿಂದ್ಧನುಮ (ಶ)	೩೨
೧೭೯೩೪	ಶ್ರೀರಾಮ	ನಮೋ ಹನುಮ ಜೈ ಬಲವಂತ	೩೨
೧೭೯೩೫	ಶ್ರೀರಾಮ	ಪರಮಪಾವನ ಪ್ರಾಣದೇವ ನಂಬಿದೆ ನಿನ್ನ	೩೨
೧೭೯೩೬	ಶ್ರೀರಾಮ	ಮಾರುತಿ ಪ್ರಾಣಮೂರುತಿ ಸಾರುವೆ	೩೨
೧೭೯೩೭	ಶ್ರೀರಾಮ	ಮಾರುತಿಪಾದವ ಸ್ಮರಿಸಿರೋ ಸಾರದುರಿತ	೩೨
೧೭೯೩೮	ಶ್ರೀರಾಮ	ಹನುಮ ಮಧ್ವಾಧಿಪತೇ ನಮೋ ನಮೋ	೩೨
೧೭೯೩೯	ಶ್ರೀರಾಮ	ಹನುಮಂತ ನೀನೆಂಥ ಬಲವಂತ	೩೨
೧೭೯೪೦	ಶ್ರೀಶಪ್ರಾಣೇಶವಿಠಲ	ಪಾಲಿಸಯ್ಯಾ ಶ್ರೀ ಪ್ರಾಣರಾಯ	೧೭
೧೭೯೪೧	ಶ್ರೀಶಪ್ರಾಣೇಶವಿಠಲ	ಪ್ರಾಣರಾಯ ನೀನಲ್ಲದೆ ಮತ್ತನ್ಯ	೧೭
೧೭೯೪೨	ಶ್ರೀಶಪ್ರಾಣೇಶವಿಠಲ	ಬಾಗಿಸೋಪಿಲಿ ವಾಸವಾಗಿಹ	೧೭
೧೭೯೪೩	ಸದಾನಂದ	ಧನ್ಯನಾದೆನು ಮುಖ್ಯಪ್ರಾಣ	೨೪
೧೭೯೪೪	ಸದಾನಂದ	ನಲಿದು ಬಾರೋ ಹನುಮಂತ	೨೪
೧೭೯೪೫	ಸದಾನಂದ	ಬಾರೆನ್ನ ಪ್ರಾಣ ಶ್ರೀ ಗುರು ಮುಖ್ಯಪ್ರಾಣ	೨೪
೧೭೯೪೬	ಸಿರಿಗೋವಿಂದವಿಠಲ	ಮುದದಿ ಪಾಲಿಸೊ ಮುದತೀರಥದ ರಾಯ	೨೯-೨
೧೭೯೪೭	ಸುಂದರವಿಠಲ	ವ್ರತವೆ ಉತ್ತಮ ವ್ರತವೆಂದು ಪೇಳಿಹರು	೨೬
೧೭೯೪೮	ಹಯವದನ (ಶ್ರೀ ವಾದಿರಾಜರು)	ಅಸುರರನ್ನು ಅಳಿಯ ಬಂದೆನು ನಾನು	೨
೧೭೯೪೯	ಹಯವದನ (ಶ್ರೀ ವಾದಿರಾಜರು)	ಅಹುದಹುದೊ ಹನುಮಂತ ನಿನ್ನ ಮಹಿಮೆ	೨
೧೭೯೫೦	ಹಯವದನ (ಶ್ರೀ ವಾದಿರಾಜರು)	ಆಂಜನೇಯನೆ ಅಮರವಂದಿತ ಕಂಜನಾಭನ ದೂತನೆ	೨
೧೭೯೫೧	ಹಯವದನ (ಶ್ರೀ ವಾದಿರಾಜರು)	ಎಣೆಯಾರೊ ನಿನಗೆ ಹನುಮಂತರಾಯ	೨
೧೭೯೫೨	ಹಯವದನ (ಶ್ರೀ ವಾದಿರಾಜರು)	ಎದ್ದು ನಿಂತ ಖಳರ ಕೃತಾಂತ	೨
೧೭೯೫೩	ಹಯವದನ (ಶ್ರೀ ವಾದಿರಾಜರು)	ಎದ್ದು ನಿಂತ ಬಂದು ನಿಂತ ಮುಂದೆ ನಿಂದಂಥ	[illegible]
೧೭೯೫೪	ಹಯವದನ (ಶ್ರೀ ವಾದಿರಾಜರು)	ಎಷ್ಟು ಸಾಹಸವಂತ ನೀನೆ ಬಲವಂತ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೭೯೫೫	ಹಯವದನ (ಶ್ರೀ ವಾದಿರಾಜರು)	ದಿತಿಜರಿಗೆದುರಾಂತ ಕೃತಾಂತ	೨
೧೭೯೫೬	ಹಯವದನ (ಶ್ರೀ ವಾದಿರಾಜರು)	ಪ್ರಾಣನ ನೋಡಿರೈ ಮುಖ್ಯಪ್ರಾಣನ ಪಾಡಿರೈ	೨
೧೭೯೫೭	ಹಯವದನ (ಶ್ರೀ ವಾದಿರಾಜರು)	ಬಾರೊ ಮುಂದಿರೊ ಪರನಾರಿ ಸಹೋದರ	೨
೧೭೯೫೮	ಹಯವದನ (ಶ್ರೀ ವಾದಿರಾಜರು)	ಮುದ್ದು ಮುಖದಾತ ನಮ್ಮ ಮುಖ್ಯಪ್ರಾಣನಾಥನೊ	೨
೧೭೯೫೯	ಹಯವದನ (ಶ್ರೀ ವಾದಿರಾಜರು)	ಮುದ್ದುರಾಮರ ಬಂಟ ಬುದ್ಧಿವುಳ್ಳ ಹನುಮಂತ	೨
೧೭೯೬೦	ಹಯವದನ (ಶ್ರೀ ವಾದಿರಾಜರು)	ಹನುಮ ಭೀಮ ಮಧ್ವ ಮುನಿರಾಯ (ಉ)	೨
೧೭೯೬೧	ಹೆನ್ನೆರಂಗವಿಠಲ	ಲಂಕೆ ನಿರ್ಧಾಮ ಮಾಡಲು	೨೯-೧
೧೭೯೬೨	ಹೆನ್ನೆರಂಗವಿಠಲ	ಹನುಮ ಶ್ರೀರಾಮ ದೇವರ	೨೯-೧
೧೭೯೬೩	ಹೆಳವನಕಟ್ಟೆರಂಗ	ಮಂಗಳ ಮುಖ್ಯಪ್ರಾಣೇಶಗೆ ಜಯ	೧೮-೧
		ಹಬ್ಬ/ಉತ್ಸವಗಳು	
೧೭೯೬೪	ಗೋವಿಂದ	ನಲ್ಲ ಕೃಷ್ಣನ ಬರಹೇಳಿಂದುಮುಖಿಯೇ	೨೪
೧೭೯೬೫	ತಿರುಪತಿವೆಂಕಟ	ಉಯ್ಯಾಲೆಯ ತೂಗುತಿಹರು ಶ್ರೀಹರಿಯ	೩೦
೧೭೯೬೬	ಯದುಗಿರಿಯಮ್ಮ	ಕೃತ್ತಿಕೋತ್ಸವ ನೋಡುವ ಬಾರೆ	೧೮-೪
೧೭೯೬೭	ಯದುಗಿರಿಯಮ್ಮ	ಕೊಟ್ಟಿಗೋತ್ಸವ ನೋಡಿ ಸೃಷ್ಟೀಶ್ವರನ	೧೮-೪
೧೭೯೬೮	ಯದುಗಿರಿಯಮ್ಮ	ಕೋಲುವ ನೋಡುವ ಬನ್ನಿ ಶ್ರೀರಂಗನಾಯಕಿಯ	೧೮-೪
೧೭೯೬೯	ಯದುಗಿರಿಯಮ್ಮ	ಕೌಶಿಕೋತ್ಸವ ನೋಡುವ	೧೮-೪
೧೭೯೭೦	ಯದುಗಿರಿಯಮ್ಮ	ಚೈತ್ರಮಾಸದ ಕೃಷ್ಣಪಕ್ಷ	೧೮-೪
೧೭೯೭೧	ಲಕ್ಷ್ಮೀಕಾಂತ / ಶ್ರೀಕಾಂತ	ಇಂದುಮುಖಿಯರು ಬಂದು ನೆರೆದು	೩೫-೧
೧೭೯೭೨	ಲಕ್ಷ್ಮೀನಾರಾಯಣ	ಇದೀಗ ಮನವು ಇಂದಿರಾಕ್ಷಿ	೨೩
		ಹಬ್ಬ/ಉತ್ಸವಗಳು–ಜ್ಯೇಷ್ಠಾಭಿಷೇಕ	
೧೭೯೭೩	ಯದುಗಿರಿಯಮ್ಮ	ನೋಡಿದೆ ಜ್ಯೇಷ್ಠಾಭಿಷೇಕದುತ್ಸವವ	೧೮-೪
		ಹಬ್ಬ/ಉತ್ಸವಗಳು–ತೆಪ್ಪೋತ್ಸವ	
೧೭೯೭೪	ಗೋಪಾಲಕೃಷ್ಣವಿಠಲ	ತೆಪ್ಪದುತ್ಸವ ನಿನಗೆ ಏನು ಹಿತವೋ	೧೮-೩
		ಹಬ್ಬ/ಉತ್ಸವಗಳು–ತೇರು ಉತ್ಸವ	
೧೭೯೭೫	ಮಾಂಗಿರಿರಂಗ	ರಂಗನ ತೇರಿಗೆ ಬನ್ನಿರೋ	೩೫-೨
		ಹಬ್ಬ/ಉತ್ಸವಗಳು–ದೀಪಾವಳಿ	
೧೭೯೭೬	ಶೇಷಗಿರೀಶ	ಸರೋಜಲೋಚನ ಸುರಾರಿಮಥನ	೧೮-೪
		ಹಬ್ಬ/ಉತ್ಸವಗಳು–ದೀಪೋತ್ಸವ	
೧೭೯೭೭	ಲಕ್ಷ್ಮೀನಾರಾಯಣ	ನೋಡೆ ಇಂದಿನ ಉತ್ಸಹದತಿ ಲೀಲೆ	೨೩
		ಹಬ್ಬ/ಉತ್ಸವಗಳು–ಧನುರ್ಮಾಸ	
೧೭೯೭೮	ಯದುಗಿರಿಯಮ್ಮ	ಧನುರ್ಮಾಸದ ಸೇವೆಯ	೧೮-೪
		ಹಬ್ಬ/ಉತ್ಸವಗಳು–ನವರಾತ್ರಿ	
[illegible]	[illegible]	ಏನೆಂದುಸುರುವೆ ಈ ನವರಾತ್ರಿಯಾ	[illegible]
		ಹಬ್ಬ/ಉತ್ಸವಗಳು–ಪವಿತ್ರೋತ್ಸವ	
[illegible]	[illegible]	ಪವಿತ್ರ ಉತ್ಸವವನ್ನು ನೋಡುವ ಬನ್ನಿ	೧೮-೪

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ

ಹಬ್ಬ/ಉತ್ಸವಗಳು–ಪಾರ್ವಟೆ ಉತ್ಸವ

೧೮೯೮೧	ಯದುಗಿರಿಯಮ್ಮ	ನೋಡಿದೆ ನೋಡಿದೆ ಪಾರ್ವಟೆ ಉತ್ಸವ	೧೮-೪

ಹಬ್ಬ/ಉತ್ಸವಗಳು–ಪುಷ್ಯ ಮಾಸೋತ್ಸವ

೧೮೯೮೨	ಯದುಗಿರಿಯಮ್ಮ	ಮಕರಪುಷ್ಯದ ಶುದ್ಧ ಷಷ್ಠಿಯಲಿ	೧೮-೪

ಹಬ್ಬ/ಉತ್ಸವಗಳು–ಪುಷ್ಪಪೂಜೆ

೧೮೯೮೩	ಯದುಗಿರಿಯಮ್ಮ	ಪುಷ್ಪವನ್ನು ಧರಿಸುವ ಉತ್ಸವ ನೋಡುವ	೧೮-೪
೧೮೯೮೪	ಯದುಗಿರಿಯಮ್ಮ	ಪುಷ್ಪಸೇವೆಯ ನೋಡುವಾ ಬನ್ನಿರೆ	೧೮-೪

ಹಬ್ಬ/ಉತ್ಸವಗಳು–ರಾಮಕೋಟಿಸೇವೆ

೧೮೯೮೫	ರಂಗಸ್ವಾಮಿದಾಸ	ಕೌಸಲ್ಯಾಗರ್ಭಾಬ್ಧಿ ಸೋಮಾ ಸ್ವಾಮಿ	೩೦
೧೮೯೮೬	ರಂಗಸ್ವಾಮಿದಾಸ	ಚನ್ನಪಟ್ಟಣ ಶ್ರೀಹರಿ ಸರ್ವಚೇತನೋದ್ಧರೀ	೩೦
೧೮೯೮೭	ರಂಗಸ್ವಾಮಿದಾಸ	ದಯಾಬ್ಧಿ ಸಿರಿಧರಣಾ ಪಾಹಿಮಾಂ	೩೦
೧೮೯೮೮	ರಾಮಕೃಷ್ಣ	ಗುರುವೆ ಪೂಜಿಪೆ ನಿಮ್ಮಯ ಚರಣಗಳನ್ನು	೩೦

ಹಬ್ಬ/ಉತ್ಸವಗಳು–ವಸಂತೋತ್ಸವ

೧೮೯೮೯	ಪ್ರಸನ್ನವೆಂಕಟ	ದ್ವಂದ್ವವೆ ವಸಂತದ ಹಬ್ಬ	೮
೧೮೯೯೦	ಯದುಗಿರಿಯಮ್ಮ	ವರ್ಣಿಸಲಳವೆ ವೈಶಾಖದುತ್ಸವವ	೧೮-೪
೧೮೯೯೧	ವಿಜಯವಿಠಲ	ಬಡನಡುವು ಬಾಲೆಯರ ಕೂಡಿ	೯-೧

ಹಬ್ಬ/ಉತ್ಸವಗಳು–ವಿಜಯದಶಮಿ

೧೮೯೯೨	ತುಪಾಕಿ ವೆಂಕಟರಮಣ	ಜಯ ಜಯ ದೇವ ಹರಿ	೨೩

ಹಬ್ಬ/ಉತ್ಸವಗಳು–ಹೋಳಿ

೧೮೯೯೩	ತುಪಾಕಿ ವೆಂಕಟರಮಣ	ಧುಮ್ಮಿಶಾಲನೆನ್ನಿ ನಮ್ಮ ರಮೆಯರಸ	೨೩
೧೮೯೯೪	ಮಹಿಪತಿಸುತ	ದುಮು ದುಮು ಬಸವಂತನ ಹಬ್ಬಾ	೧೧-೨
೧೮೯೯೫	ಮಹಿಪತಿಸುತ	ದುಮ್ಮ ಬಸವಂತನ ಹಬ್ಬಾ	೧೧-೨
೧೮೯೯೬	ವಿಜಯವಿಠಲ	ರಂಗನಾಡಿದನೊ ಮನ್ನಾರಿ ಕೃಷ್ಣನಾಡಿದನೊ	೯-೧

ಹರಿ–ಹರ ತುಲನೆ

೧೮೯೯೭	ಕಾಗಿನೆಲೆಯಾದಿಕೇಶವ	ಆರು ಬಲ್ಲರು ಹರಿ ಹರಾದಿಗಳ ಮಹಿಮೆಯನು	೫-೧
೧೮೯೯೮	ಕಾಗಿನೆಲೆಯಾದಿಕೇಶವ	ರಾಮಾನುಜ ಮತೋದ್ಧಾರಕ	೫-೧
೧೮೯೯೯	ಗೋವಿಂದ	ಸುಮ್ಮನೆ ವಿಷ್ಣುವ ಜರಿದೀರಿ ಯಾಕೆ	೨೪
೧೯೦೦೦	ಜಯೇಶವಿಠಲ	ಎಲ್ಲ ದೇವರ ಗಂಡ ಕೃಷ್ಣ	೨೭
೧೯೦೦೧	ಪುರಂದರವಿಠಲ	ಜಲದನೀಲಗಾತ್ರ ಏತರ ಚೆಲುವ ರುಕ್ಮಿಣಿ	೩-೨
೧೯೦೦೨	ಪುರಂದರವಿಠಲ	ಶಿವನೆ ದುರ್ವಾಸ ಕಾಣಿರೊ (ಸು)	೩
೧೯೦೦೩	ಪುರಂದರವಿಠಲ	ಹರಿ ಹರರು ಸರಿಯೆಂಬ ಅರಿಯದಜ್ಞಾನಿಗಳು	೩-೨
೧೯೦೦೪	ಪುರಂದರವಿಠಲ	ಹರಿಯಧಿಕ ಹರನಧಿಕ ಎಂದು ಹೋರಾಡದಿರಿ	೩-೨
೧೯೦೦೫	ಮಾಂಗಿರಿರಂಗ	ನಾಟ್ಯಕಲಾವಿದ ಶಿವನೋ ಕೇಶವನೋ	೩೫-೨
೧೯೦೦೬	ಮಾಂಗಿರಿರಂಗ	ಮಾಧವನಿವನೋ ಉಮಾಧವನಿವನೋ	೩೫-೨
೧೯೦೦೭	ಮಾಂಗಿರಿರಂಗ	ಶಿವನೋ ಕೇಶವನೋ ನಾನರಿಯೆ	೩೫-೨

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೦೦೮	ವಿಜಯವಿಠಲ	ನಮೋ ನಮೋ ನಾರಾಯಣ ನಮೋ	೯-೧
೧೮೦೦೯	ವಿಜಯವಿಠಲ	ಭವಿತ ಭಾವಿತ ಲೋಕವೆಂದೆಂಬ ನಿಗಮಾರ್ಥ (ಉ)	೯-೨
೧೮೦೧೦	ವಿಜಯವಿಠಲ	ಶ್ರೀಕೇಶವಾದಿ ಯಾವದೊಂದಂಗಾ	೧೦-೧
೧೮೦೧೧	ವಿಜಯವಿಠಲ	ಹರಿ ಹರರಿಬ್ಬರು ಒಂದೇ	೧೦-೧
೧೮೦೧೨	ಶಾಂತಿಪಾಲಿಪಗುರು	ವೈಕುಂಠವಾಸಿ ನಾರಾಯಣಗೆ	೧೮-೪
೧೮೦೧೩	ಸಿರಿಕೃಷ್ಣ(ಶ್ರೀ ವ್ಯಾಸರಾಯರು)	ಹರಿಹರರು ಸರಿಯೆಂಬ ಮರುಳು ಜನರು	೧
೧೮೦೧೪	ಹಯವದನ (ಶ್ರೀ ವಾದಿರಾಜರು)	ಒಂದು ಮೂರುತಿಯಲ್ಲಿ ಹರಿ ಹರದೇವರಿಬ್ಬರು	೨
೧೮೦೧೫	ಹಯವದನ (ಶ್ರೀ ವಾದಿರಾಜರು)	ಹುಂಕಾರದಿಂದಲಿ ನಿತ್ಯ ಭೂತಗಳಟ್ಟಿ	೨
೧೮೦೧೬	ಹೆಳವನಕಟ್ಟೆರಂಗ	ಈತ ರಂಗನಾದ ಹರಿಯು ಆತ ಲಿಂಗನಾದ ಹರನು	೧೮-೧
೧೮೦೧೭	ಹೆಳವನಕಟ್ಟೆರಂಗ	ಈತ ಲಿಂಗದೇವ ಶಿವನು ಆತ ರಂಗಧಾಮ ವಿಷ್ಣು	೧೮-೧

ಹರಿದಾಸರು

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೦೧೮	ಕಮಲನಾಭವಿಠಲ	ಜೋಜೋ ಜೋಜೋ ಜೋ ವೆಂಕಟೇಶ	೧೮-೨
೧೮೦೧೯	ಕಮಲನಾಭವಿಠಲ	ದಾಸರ ದೂಷಿಪರೊ ಕುಜನರು	೧೮-೨
೧೮೦೨೦	ಕಾಗಿನೆಲೆಯಾದಿಕೇಶವ	ಕ್ಷಮಿಸುವುದೆಮ್ಮ ತಪ್ಪುಗಳ ಸ್ವಾಮಿ	೫-೧
೧೮೦೨೧	ಕೃಷ್ಣವಿಠಲ	ತಂಬೂರಿ ಹಿಡಿಸಿದನು	೧೫
೧೮೦೨೨	ಕೃಷ್ಣವಿಠಲ	ಲಜ್ಜೆ ಲಜ್ಜೆ ನಿನ್ನ ನಂಬಿ ಕೆಟ್ಟೆ ನಾನು ಮಾಡೊದೇನು	೧೫
೧೮೦೨೩	ಕೃಷ್ಣವಿಠಲ	ಹರಿದಾಸನ ಮಾಡಿಕೊಂಬುವಿಯ ಎನ್ನ	೧೫
೧೮೦೨೪	ಗುರುಗೋವಿಂದವಿಠಲ	ಕರಿವರದ ಗೋಪಾಲ ವಿಠಲ ಸಲಹೋ	೩೧-೨
೧೮೦೨೫	ಗುರುರಾಮವಿಠಲ	ದಾರಿ ಒಳ್ಳೇದಾಗಿರಬೇಕೂ ಹರಿದಾಸನಾದ ಮೇಲೆ	೩೪
೧೮೦೨೬	ಗುರುರಾಮವಿಠಲ	ದಾಸನು ನಾನೆಂಬ ಧೈರ್ಯವಿದ್ದರೆ ನಿನಗೆ	೩೪
೧೮೦೨೭	ಗುರುರಾಮವಿಠಲ	ಬಂದರು ಹರಿದಾಸರು ಅಲ್ಲಿ	೩೪
೧೮೦೨೮	ಗೋಪಾಲಕೃಷ್ಣವಿಠಲ	ದಾಸ ಭಾಗ್ಯವೆ ಭಾಗ್ಯ ಹರಿಕೊಟ್ಟ ಸೌಭಾಗ್ಯ (ಉ)	೧೮-೩
೧೮೦೨೯	ಗೋಪಾಲಕೃಷ್ಣವಿಠಲ	ದಾಸರೆಂದು ಕರೆದ ಮಾತ್ರದಿ ಈಗ ಎಮ್ಮ	೧೮-೩
೧೮೦೩೦	ಗೋಪಾಲಕೃಷ್ಣವಿಠಲ	ನಗಬೇಡಿ ನಗಬೇಡಿ ನೀವ್	೧೮-೩
೧೮೦೩೧	ಗೋಪಾಲಕೃಷ್ಣವಿಠಲ	ಹೊಟ್ಟೆಪಾಡಿನ ಕೃತ್ಯವಲ್ಲವಿದು ವಿಠ್ಠಲನ ಸೇವೆ	೧೮-೩
೧೮೦೩೨	ಜಗನ್ನಾಥವಿಠಲ	ಹರಿದಾಸರಿಗೆ ಒಬ್ಬರ ಗೊಡವೆ ಯಾತಕೆ	೧೪
೧೮೦೩೩	ತುಪಾಕಿ ವೆಂಕಟರಮಣ	ಸಾಟಿಯುಂಟೆ ಶ್ರೀನಿವಾಸನ ದಾಸಕೂಟದ ಮ್ಯಾಳಕ್ಕೆ	೨೩
೧೮೦೩೪	ಪುರಂದರವಿಠಲ	ಇರಲಿ ನಿನ್ನಲ್ಲಿ ಭಕ್ತಿ ಎನಗೆ ಇರದಿರಲಿ (ಉ)	೪
೧೮೦೩೫	ಪುರಂದರವಿಠಲ	ತಂಬೂರಿ ಮೀಟಿದವ (ಉ)	೪
೧೮೦೩೬	ಪುರಂದರವಿಠಲ	ಹರಿದಾಸರ ಸಂಗ ದೊರೆಯಿತು ಎನಗೀಗ	೩-೧
೧೮೦೩೭	ಪ್ರಸನ್ನವೆಂಕಟ	ಕ್ಷುಲ್ಲರಿಗೊದಗದು ಫುಲ್ಲನಾಭನ ಪದ	೮
೧೮೦೩೮	ಮಹಿಪತಿಸುತ	ಕೊಡು ಹರಿಯೇ ದಾಸರ ಸಂಗವನು	೧೧-೧
೧೮೦೩೯	ಮಹಿಪತಿಸುತ	ದಾಸರ ಸಂಗವನಾ	೧೧-೨
೧೮೦೪೦	ಮಹಿಪತಿಸುತ	ನೀಡೆಲೋ ಶ್ರೀರಂಗಾ ನಿನ್ನ ದಾಸರ ಸಂಗಾ	೧೧-೧
೧೮೦೪೧	ಮಹಿಪತಿಸುತ	ಸಂಗಮಾಡೆಲೋ ಶ್ರೀಹರಿದಾಸರಾ	೧೧-೧
೧೮೦೪೨	ರಂಗವಿಠಲ (ಶ್ರೀ ಶ್ರೀಪಾದರಾಜರು)	ಏನು ಸುಖವೊ ಎಂಥಾ ಸುಖವೊ	೧
೧೮೦೪೩	ವರದವಿಠಲ	ಹರಿಕೃಪೆಯಿಂದಲಿ ದೊರೆತಿತು ಯನಗೀ ಶಿರಿಕರ ತಂಬೂರಿ	೧೫
೧೮೦೪೪	ವಿಜಯವಿಠಲ	ಏನಾದರೇನು ಮೋಕ್ಷವಿಲ್ಲ ಜ್ಞಾನವಿಲ್ಲದೆ	೯-೨
೧೮೦೪೫	[illegible]	ಕಂಗೆಡದಿರು ಮನವೆ ಕಂಗೆಡದಿರು ಒಡನೊಡನೆ	೯-೨
೧೮೦೪೬	[illegible]	ದಾಸನಾಗುವುದು ಅಶೇಷ (ಸು)	೧೦-೩
೧೮೦೪೭	[illegible]	ಯಾತರೊಳಗೆ ಗಣನೆ ಎನ್ನಯ ಸ್ವರೂಪ	೧೦-೨
೧೮೦೪೮	[illegible]	ಯಾಯಾವಾರವ ನೀಡಿ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೦೪೯	ವಿಜಯವಿಠಲ	ಹರಿದಾಸನಾದರೆ ಹ್ಯಾಂಗಿರಲಿಬೇಕು ನರಲೋಕದ	೯-೨
೧೮೦೫೦	ವಿಜಯವಿಠಲ	ಹರಿದಾಸರ ಲಕ್ಷಣ ಇರಬೇಕು (ಸು)	[illegible]
೧೮೦೫೧	ವಿಜಯವಿಠಲ	ಹರಿದಾಸರೊಡನಾಡು ಹರಿಯಂಘ್ರಿಯುಗ್ಮ (ಸು)	[illegible]
೧೮೦೫೨	ಶಾಮಸುಂದರವಿಠಲ	ಪರಮೇಷ್ಟಿ ಪಿತನಾಜ್ಞೆ	[illegible]
೧೮೦೫೩	ಸಿರಿಗೋವಿಂದವಿಠಲ	ಕೇಶವನ ದಾಸರಿಗೆ ಘಾಸಿಯುಂಟೆ	೨೯-೨
೧೮೦೫೪	ಸುಂದರವಿಠಲ	ದಾಸರಿಗೊಂದಿಸುವೆ ಶ್ರೀಹರಿ	[illegible]

ಹರಿದಾಸರು–ಅಚ್ಯುತದಾಸರು

೧೮೦೫೫	ವೈಕುಂಠವಿಠಲ	ಕೊಡುವುದಿಲ್ಲದೆ ಪೋದ ಕಣ್ಣು ನಾಲಿಗೆಯ	೩೫-೧

ಹರಿದಾಸರು–ಅಪ್ಪಯ್ಯದಾಸರು (ದೇವಗಿರಿ)

೧೮೦೫೬	ಶಂಕರ	ದೇವರಗಿರಿಯ ಅಪ್ಪಯ್ಯನವರು ದೇವದುರ್ಗಸ್ಥಳ	೨೦

ಹರಿದಾಸರು–ಅಭಿನವ ಪ್ರಾಣೇಶದಾಸರು

೧೮೦೫೭	ಶಾಮಸುಂದರವಿಠಲ	ಪೂರ್ವಜನ್ಮ ಸುಕೃತ ಪುಣ್ಯಸಾಧನದಿಂದ	೩೦

ಹರಿದಾಸರು–ಆಸೂರಿ ರಾಮಸ್ವಾಮಿ ಅಯ್ಯಂಗಾರ್

೧೮೦೫೮	ವಿಠಲವ್ಯಾಸ	ಸುದಿನ ದುರ್ದಿನವೆಂಬುದವರವರ ಸಂಪ್ರಾಪ್ತಿ	೩೫-೨
೧೮೦೫೯	ಸೂರ್ಯನಾರಣಪ್ಪ ಎಚ್	ಸರಳಕವಿ ರಾಮಾರ್ಯ ಹರುಷದಿ	೩೫-೨

ಹರಿದಾಸರು–ಉರಗಾದ್ರಿವಾಸವಿಠಲರು

೧೮೦೬೦	ಕಮಲನಾಭವಿಠಲ	ಗುರುಗಳ ನೆರೆ ನಂಬಿರೊ	೧೮-೨
೧೮೦೬೧	ಕಮಲನಾಭವಿಠಲ	ಚಿಂತೆಯಾತಕೆ ಮನವೆ ಗುರುಗಳ ಪಾದ	೧೮-೨
೧೮೦೬೨	ಕಮಲನಾಭವಿಠಲ	ಸ್ಮರಿಸಿ ಬದುಕಿರೊ ಗುರುವರರಾ	೧೮-೨
೧೮೦೬೩	ಕಮಲನಾಭವಿಠಲ	ಸ್ಮರಿಸಿ ಬೇಡುವೆ ಗುರುವರರ	೧೮-೨

ಹರಿದಾಸರು–ಕನಕದಾಸರು

೧೮೦೬೪	ಕಾಗಿನೆಲೆಯಾದಿಕೇಶವ	ಕನಕದಾಸನ ಮೇಲೆ ದಯ ಮಾಡಲು ವ್ಯಾಸಮುನಿ	೫-೧
೧೮೦೬೫	ಗದುಗಿನ ವೀರನಾರಾಯಣ	ಕನಕಾ ನಿನ್ನ ಕೆಣಕಿ ನಾನು	೨೧-೨

ಹರಿದಾಸರು–ಗುರುತುಲಶೀರಾಮರು

೧೮೦೬೬	ಗುರುತುಲಶೀರಾಮ	ಓಡಿತೆನ್ನಯ ಭವಗಳೆಲ್ಲವು ಕಂಡೆ ನಾ	೩೫-೧

ಹರಿದಾಸರು–ಗುರುಪ್ರಾಣೇಶದಾಸರು

೧೮೦೬೭	ವರದೇಶವಿಠಲ	ಗುರು ಪ್ರಾಣೇಶದಾಸರಾಯಾ	೨೭
೧೮೦೬೮	ವರದೇಶವಿಠಲ	ದಾಸರಾಯರ ದಿವ್ಯ ಚರಣ ಭಜನೆ	೨೭
೧೮೦೬೯	ಶಾಮಸುಂದರವಿಠಲ	ಪ್ರಭುರಾಯ ಪ್ರಭುರಾಯ	[illegible]
೧೮೦೭೦	ಶ್ರೀಶಪ್ರಾಣೇಶವಿಠಲ	ದಾಸರಾಯರಾ ಚರಣಕಮಲ	[illegible]

ಹರಿದಾಸರು–ಗುರುರಾಮವಿಠಲರು (ಸ್ವ)

೧೮೦೭೧	ಗುರುರಾಮವಿಠಲ	ಒಬ್ಬನೆ ದಾಸ ಹುಟ್ಟಿದವನಿವನೊಬ್ಬನೆ ದಾಸ	[illegible]

ಹರಿದಾಸರು–ಗೋಪಾಲಕೃಷ್ಣ

೧೮೦೭೨	ವಾಸುದೇವವಿಠಲ	ವಿನಯದಲಿ ವಿಜ್ಞಾಪನವ ಮಾಡುವೆ	[illegible]

ಹರಿದಾಸರು–ಗೋಪಾಲದಾಸರು

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೦೭೩	ಕಾರ್ಪರನರಹರಿ	ಗೋಪಾಲದಾಸರಾಯ ಮಾಂಪಾಲಯ	೨೯-೨
೧೮೦೭೪	ಗುರುಗೋವಿಂದವಿಠಲ	ಕಾಪಾಡು ಕಾಪಾಡು ಗೋಪಾಲರಾಯಾ	೩೧-೨
೧೮೦೭೫	ಗುರುಗೋವಿಂದವಿಠಲ	ಕೃಪೆಯ ತೋರಬಾರದೇನೋ	೩೧-೨
೧೮೦೭೬	ಗುರುಗೋವಿಂದವಿಠಲ	ಗೋಪಾಲದಾಸರ ಸ್ಮರಣೆ ಬಹು	೩೧-೨
೧೮೦೭೭	ಗುರುಗೋವಿಂದವಿಠಲ	ಧೇನುಪಾಲ ದಾಸಾರ್ಯಾ	೩೧-೨
೧೮೦೭೮	ಗುರುಗೋವಿಂದವಿಠಲ	ಬಾರಯ್ಯ ಭಾಗಣ್ಣನೇ ಯೆನ್ನ ಮನಕೆ	೩೧-೨
೧೮೦೭೯	ಗುರುಗೋವಿಂದವಿಠಲ	ಭಾಗಣ್ಣ ಗುರು ನಿನ್ನ	೩೧-೨
೧೮೦೮೦	ಜಗನ್ನಾಥವಿಠಲ	ಗೋಪಾಲದಾಸರಾಯ ನಿನ್ನಯ ಪಾದ	೧೪
೧೮೦೮೧	ತಂದೆವರದಗೋಪಾಲವಿಠಲ	ಕರದಾಗ ಬಾರದೇ ವೈದುಗ ಬಂದು	೨೧-೨
೧೮೦೮೨	ತಂದೆವರದಗೋಪಾಲವಿಠಲ	ಕೃಪಣವತ್ಸಲನೆ ನಿನ್ನ ಚರಣ	೨೧-೨
೧೮೦೮೩	ತಂದೆವರದಗೋಪಾಲವಿಠಲ	ಲೇಸಾಗಿ ಭಜಿಸುವೆ ಗೋಪಾಲದಾಸರ	೨೧-೨
೧೮೦೮೪	ತಂದೆವರದಗೋಪಾಲವಿಠಲ	ಸ್ಮರಿಸಿ ಸುಖಿಸೆಲೊ ಮಾನವಾ	೨೧-೨
೧೮೦೮೫	ಪ್ರಸನ್ನಶ್ರೀನಿವಾಸ	ನಿನ್ನ ದಯದಿಂದಲೇ ಎನ್ನ ಜೀವನವು	೨೨
೧೮೦೮೬	ಪ್ರಸನ್ನಶ್ರೀನಿವಾಸ	ಭಾಗಣ್ಣ ಗೋಪಾಲ ದಾಸಾರ್ಯರ ಪಾದಕ್ಕೆ (ದೀ)	೨೨
೧೮೦೮೭	ಭೂಪತಿವಿಠಲ	ಗೋಪಾಲದಾಸರಾಯರ ಪಾದ ನಂಬಿದರೆ	೨೧-೧
೧೮೦೮೮	ವಿಜಯವಿಠಲ	ಗೋಪಾಲವಿಠ್ಠಲ ನಿನ್ನ ಪೂಜೆ ಮಾಡುವೆನು	೯-೨
೧೮೦೮೯	ಶಾಮಸುಂದರವಿಠಲ	ಪಾಲಿಸೈ ಗೋಪಾಲರಾಯಾ ಶೀಲ	೩೦
೧೮೦೯೦	ಶಾಮಸುಂದರವಿಠಲ	ಬಾಗಿ ಬೇಡುವೆ ಪಿಡಿಯೊ ಕೈಯ್ಯ ಭಾಗವತ	೩೦
೧೮೦೯೧	ಶ್ರೀರಾಮ	ಗೋಪಾಲವಿಠಲ ಶ್ರೀಪಾದ ಕಮಲಮಂ (ಉ)	೩೨

ಹರಿದಾಸರು–ಜಗನ್ನಾಥದಾಸರು

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೦೯೨	ಉರಗಾದ್ರಿವಾಸವಿಠಲ	ರಕ್ಷಿಸೋ ಜಗನ್ನಾಥದಾಸ	೧೬
೧೮೦೯೩	ಕಮಲಾಪತಿವಿಠಲ	ಅಂಬುಜಾಕ್ಷಿ ಸ್ತಂಭದಿಹನ್ಯಾರೇ	೧೩
೧೮೦೯೪	ಕಾರ್ಪರನರಹರಿ	ಮಂಗಲ ಮಾನವಿ ನಿಲಯ	೨೯-೨
೧೮೦೯೫	ಕಾರ್ಪರನರಹರಿ	ಸೇರಿ ಸುಖಿಸು ಮಾನವ ಗುರುಚರಣ ಸರೋಜವ	೨೯-೨
೧೮೦೯೬	ಕೃಷ್ಣವಿಠಲ	ರಕ್ಷಿಸೋ ಗುರುವರ ರಕ್ಷಿಸೋ	೧೫
೧೮೦೯೭	ಗುರುಗೋವಿಂದವಿಠಲ	ದಾಸರ ಭಾಗ್ಯವಿದು ಮಾನವಿ ದಾಸರ	೩೧-೨
೧೮೦೯೮	ಗುರುಗೋವಿಂದವಿಠಲ	ದಾಸರಾಯರ ಪಾಡಿರೋ	೩೧-೨
೧೮೦೯೯	ಗುರುಗೋವಿಂದವಿಠಲ	ನಮೋ ದಾಸವರ್ಯ ಪೂತಾತ್ಮ ಪದ	೩೧-೨
೧೮೧೦೦	ಗುರುಗೋವಿಂದವಿಠಲ	ಪಾಲಿಸೊ ಜಗನ್ನಾಥ ದಾಸವರ್ಯ	೩೧-೨
೧೮೧೦೧	ಗುರುಗೋವಿಂದವಿಠಲ	ಮಾನವಿ ದಾಸರ ನಿ ಸೇರೋ	೩೧-೨
೧೮೧೦೨	ಗುರುಗೋವಿಂದವಿಠಲ	ರಂಗವಲಿದರ ಪಾದ	೩೧-೨
೧೮೧೦೩	ಗುರುಜಗನ್ನಾಥವಿಠಲ	ರಂಗ ಒಲಿದ ದಾಸರಾಯರ ಪಾದಪದುಮ	೨೬
೧೮೧೦೪	ಗುರುಜಗನ್ನಾಥವಿಠಲ	ರಂಗ ಒಲಿದ ದಾಸರಾಯರ ಪಾದಯುಗ್ಮ	[illegible]
೧೮೧೦೫	ಗುರುಜಗನ್ನಾಥವಿಠಲ	ಶ್ರೀ ಗುರುವರ ಮಾಂ ಪಾಲಯ ಭೋ	[illegible]
೧೮೧೦೬	ಗುರುತಂದೆವರದಗೋಪಾಲವಿಠಲ	ಅಕ್ಕ ನೋಡೆ ನಾನಾ ನಿನ್ನ ದಯದಿಂದ	೩೦-೨
[illegible]	[illegible]	ಎನ್ನ ಬಿನ್ನಪ ಕೇಳು ಧನ್ವಂತ್ರಿ ದಯಮಾಡು	[illegible]
[illegible]	[illegible]	ಯಾತಕಿನ್ನನಾಥನೆಂಬುವುದು ಕರುಣಾಳು	[illegible]
[illegible]	[illegible]	ಯಾತಕೀಹಂಕಾರವು ಸರ್ವವು	[illegible]
[illegible]	[illegible]	ಶ್ರೀ ಜಗನ್ನಾಥತೀರ್ಥರ ದಿವ್ಯಮಹಿಮ	[illegible]
[illegible]	[illegible]	ಬಾಗುವೆ ಶಿರ ಪುರಂದರ ವಿಜಯ ಗೋಪಾಲ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೧೧೨	ಪ್ರಸನ್ನಶ್ರೀನಿವಾಸ	ಶ್ರೀರಮಣಿ ಕರಕಮಲ ಪೂಜಿತ ಪದಾಂಬೋಜ (ದೀ)	೨೨
೧೮೧೧೩	ಪ್ರಾಣೇಶವಿಠಲ	ತಂಗಿ ನೋಡಿದೆಯೇನಿಂದು	೧೭
೧೮೧೧೪	ಪ್ರಾಣೇಶವಿಠಲ	ತಿಳಿಯನು ಎಂದೆಂದಿಗನ್ಯ ರಂಗ	೧೭
೧೮೧೧೫	ಪ್ರಾಣೇಶವಿಠಲ	ಶ್ರೀಕಾಂತೊಲಿದ ದಾಸರೀ ಕಲಿಯುಗದಲ್ಲಿ	೧೭
೧೮೧೧೬	ಭೂಪತಿವಿಠಲ	ವಂದಿಪೆವು ಶ್ರೀ ಜಗನ್ನಾಥದಾಸರಿಗೆ	೨೧-೧
೧೮೧೧೭	ವರದೇಶವಿಠಲ	ಗುರುವೆ ನೀನೊಲಿದು ಪಾಮರತರನಾದೆನ್ನ	೨೬
೧೮೧೧೮	ವರದೇಶವಿಠಲ	ದಾಸಾರ್ಯರ ಚರಣ ಕಮಲಕಾನಮಿಪೆ	೨೬
೧೮೧೧೯	ಶಾಮಸುಂದರವಿಠಲ	ಕರವ ಪಿಡಿ ಗುರುರಾಯ	೩೦
೧೮೧೨೦	ಶಾಮಸುಂದರವಿಠಲ	ಕರುಣಿಸಿ ಪಿಡಿಯೊ ಕೈಯ್ಯಾ	೩೦
೧೮೧೨೧	ಶಾಮಸುಂದರವಿಠಲ	ಕಾಯೋ ಸರ್ವದ ನಂಬಿದೆ ತತ್ವದ	೩೦
೧೮೧೨೨	ಶಾಮಸುಂದರವಿಠಲ	ಗುರುಗಳ ಭಜಿಸೋ ದುರಿತ ತ್ಯಜಿಸೋ	೩೦
೧೮೧೨೩	ಶಾಮಸುಂದರವಿಠಲ	ಗುರುಗಳ ಶ್ರೀಪಾದವ ನಿತ್ಯ ಭಜಿಸು	೩೦
೧೮೧೨೪	ಶಾಮಸುಂದರವಿಠಲ	ಗುರುಜಗನ್ನಾಥಾರ್ಯ ಕರುಣ	೩೦
೧೮೧೨೫	ಶಾಮಸುಂದರವಿಠಲ	ಗುರುರಾಯ ಗುರುರಾಯ ಮರಿಯದೆ	೩೦
೧೮೧೨೬	ಶಾಮಸುಂದರವಿಠಲ	ಜಗನ್ನಾಯಕ ಗುರು ಪಾಹಿಮಾಂ	೩೦
೧೮೧೨೭	ಶಾಮಸುಂದರವಿಠಲ	ಜೋ ಜೋ ಸಹ್ಲಾದರಾಜ	೩೦
೧೮೧೨೮	ಶಾಮಸುಂದರವಿಠಲ	ತೂಗಿರೆ ಶ್ರೀ ರಂಗವಲಿದ	೩೦
೧೮೧೨೯	ಶಾಮಸುಂದರವಿಠಲ	ತೂಗಿರೆ ಶ್ರೀ ರಂಗವಲಿದ	೩೦
೧೮೧೩೦	ಶಾಮಸುಂದರವಿಠಲ	ನಂಬಿ ಭಜಿಸೋ ನಿರಂತರ ನೆರೆ ನಂಬಿ ಭಜಿಸು	೩೦
೧೮೧೩೧	ಶಾಮಸುಂದರವಿಠಲ	ನೋಡಿ ಭಕ್ತಿಮಾಡಿ ಪಾಡಿರಿ	೩೦
೧೮೧೩೨	ಶಾಮಸುಂದರವಿಠಲ	ಪೊಂದಿ ಭಜಿಸು ಸತತ (ಸು)	೩೦
೧೮೧೩೩	ಶಾಮಸುಂದರವಿಠಲ	ಪೊಗಳು ಮನವೆ ನೀ	೩೦
೧೮೧೩೪	ಶಾಮಸುಂದರವಿಠಲ	ಬಾರೈ ಪ್ರಭುವೆ ಬಾರೈ ಪ್ರಭುವೆ	೩೦
೧೮೧೩೫	ಶಾಮಸುಂದರವಿಠಲ	ಭೋ ದಾತಾ ಬಾರೋ ಗುರುವರಿಯಾ	೩೦
೧೮೧೩೬	ಶಾಮಸುಂದರವಿಠಲ	ಮಂಗಳಂ ಮಂಗಳಂ ದಯಾಬ್ಧೆ	೩೦
೧೮೧೩೭	ಶಾಮಸುಂದರವಿಠಲ	ಯಾತರಂಜಿಕೆ ಜಗದೊಳಗೆ ಜಗ	೩೦
೧೮೧೩೮	ಶಾಮಸುಂದರವಿಠಲ	ರಂಗವಲಿದ ಗುರುರಾಯರ	೩೦
೧೮೧೩೯	ಶಾಮಸುಂದರವಿಠಲ	ರಂಗವಲಿದ ದಾಸರಾಯ ಸತ್ಕವಿಜನಗೇಯ	೩೦
೧೮೧೪೦	ಶಾಮಸುಂದರವಿಠಲ	ರಂಗವಲಿದ ದಾಸಾಗ್ರಣಿ ಮಾನವ	೩೦
೧೮೧೪೧	ಶಾಮಸುಂದರವಿಠಲ	ರಂಗವಲಿದ ರಾಯರ ಪಾಡಿರೆ	೩೦
೧೮೧೪೨	ಶಾಮಸುಂದರವಿಠಲ	ರಂಗವಲಿದ ರಾಯಾ ನೀ ಸತ್ಸಂಗ	೩೦
೧೮೧೪೩	ಶಾಮಸುಂದರವಿಠಲ	ರಂಗವಲಿದ ರಾಯಾ ಸಜ್ಜನ ಸಂಗ	೩೦
೧೮೧೪೪	ಶಾಮಸುಂದರವಿಠಲ	ರಂಗವೊಲಿದ ದಾಸರಾಯ ಸಾಧುಸಂಗ	೩೦
೧೮೧೪೫	ಶಾಮಸುಂದರವಿಠಲ	ರಥವೇರಿ ಬರುತಿಹ ಗುರುರಾಯ	೩೦
೧೮೧೪೬	ಶಾಮಸುಂದರವಿಠಲ	ಶ್ರೀ ಗುರುಜಗನ್ನಾಥಾರ್ಯ	೩೦
೧೮೧೪೭	ಶಾಮಸುಂದರವಿಠಲ	ಶ್ರೀಮತ್ ಕವಿಕುಲ ನಾಯಕ	೩೦
೧೮೧೪೮	ಶಾಮಸುಂದರವಿಠಲ	ಸಾಗಿ ಬಾರೋ ಲೇಸಾಗಿ ಬಾರೊ	೩೦
೧೮೧೪೯	ಶಾಮಸುಂದರವಿಠಲ	ಸ್ಮರಿಸಿ ಸುಖಿಸೊ ನರನೆ	೩೦
೧೮೧೫೦	ಶಾಮಸುಂದರವಿಠಲ	ಸ್ಮರಿಸು ಜೀವಿಸು ಮಾನವ	೩೦
೧೮೧೫೧	ಶ್ರೀದವಿಠಲ	ತಂಗಿ ನೀ ಕೇಳಿದ್ಯಾ ಅಂಗನಾಮಣಿ	೨೧-೧
೧೮೧೫೨	ಶ್ರೀದವಿಠಲ	ತೆರಳಿದರು ಶ್ರೀ ಜಗನ್ನಾಥದಾಸಾರ್ಯರು	೨೧-೧
೧೮೧೫೩	ಶ್ರೀದವಿಠಲ	ಯಾತಕಿನ್ನಾಥನೆಂಬುವದೂ	೨೧-೧
೧೮೧೫೪	ಶ್ರೀದವಿಠಲ	ಶ್ರೀ ಜಗನ್ನಾಥದಾಸ ನಮಿಪೆ	೨೧-೧

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೧೫೫	ಶ್ರೀದವಿಠಲ	ಸಂಗಸುಖವ ಬಯಸಿ ಬದುಕಿರೊ	೨೧-೧
೧೮೧೫೬	ಶ್ರೀದವಿಠಲ	ಹರಿಕಥಾಮೃತಸಾರ ಶ್ರೀಮದ್ಗುರುವರ (ಫಲಶ್ರುತಿ)	೨೧-೧
೧೮೧೫೭	ಶ್ರೀನಿಧಿವಿಠಲ	ಸೇರಿ ಸುಖಿಸು ಮಾನವ	೨೧-೧
೧೮೧೫೮	ಶ್ರೀಶಪ್ರಾಣೇಶವಿಠಲ	ರಾಯರ ನೋಡಿರೈ ದಾಸರಾಯರ	೧೭
೧೮೧೫೯	ಸದಾನಂದ	ಶಾರದಾವರ ಶರಣು	೨೪
೧೮೧೬೦	ಸಿರಿವತ್ಸಾಂಕಿತ	ತಂಗಿ ನೋಡಿದೆಯೇನಿಂದು	೨೧-೧

ಹರಿದಾಸರು–ತಂದೆಮುದ್ದುಮೋಹನದಾಸರು

೧೮೧೬೧	ಗೋಪಾಲಕೃಷ್ಣವಿಠಲ	ಆನಂದರತ್ನ ಪರಮಪ್ರಿಯರೆಂಬೊ ಬಿರುದುಳ್ಳ	೧೮-೩

ಹರಿದಾಸರು–ತಂದೆಮುದ್ದುಮೋಹನದಾಸರು (ಪರಮಪ್ರಿಯ)

೧೮೧೬೨	ಉರಗಾದ್ರಿವಾಸವಿಠಲ	ಪಾಲಿಸೋ ದಾಸರಾಯ	೧೬
೧೮೧೬೩	ಗುರುಗೋವಿಂದವಿಠಲ	ಕರುಣದಿ ಕಾಯೊ ಮದ್ಗುರುವೆ	೩೧-೨
೧೮೧೬೪	ಗುರುಗೋವಿಂದವಿಠಲ	ಕರೆದು ಕೈ ಪಿಡಿಯೊ ಎನ್ನ	೩೧-೨
೧೮೧೬೫	ಗುರುಗೋವಿಂದವಿಠಲ	ಕಾಪಾಡು ಕಾಪಾಡು ಕಾಪಾಡು ಗುರುವೇ	೩೧-೨
೧೮೧೬೬	ಗುರುಗೋವಿಂದವಿಠಲ	ಕಾಯೋ ಕಾಯೋ ಗುರುವರ್ಯ	೩೧-೨
೧೮೧೬೭	ಗುರುಗೋವಿಂದವಿಠಲ	ಗುರುಭಾಗ್ಯ ಗುರುಭಾಗ್ಯವಯ್ಯ	೩೧-೨
೧೮೧೬೮	ಗುರುಗೋವಿಂದವಿಠಲ	ಗುರುವೆ ನೀ ಕರುಣಿಸದಿರಲಿನ್ಯಾರು	೩೧-೨
೧೮೧೬೯	ಗುರುಗೋವಿಂದವಿಠಲ	ತಂದೆ ಮುದ್ದುಮೋಹನ ನಮಿಪೆ ಗುರು	೩೧-೨
೧೮೧೭೦	ಗುರುಗೋವಿಂದವಿಠಲ	ತಂದೆ ಮುದ್ದುಮೋಹನ ನಿನ್ನಂದ ಪಾದದಿ ಬಿದ್ದಿಹೆ	೩೧-೨
೧೮೧೭೧	ಗುರುಗೋವಿಂದವಿಠಲ	ತಂದೆ ಮುದ್ದುಮೋಹನರ ಪೊಂದಿ ಭಜಿಸಲು	೩೧-೨
೧೮೧೭೨	ಗುರುಗೋವಿಂದವಿಠಲ	ತಂದೆ ಮುದ್ದುಮೋಹನಾ ನಿನ್	೩೧-೨
೧೮೧೭೩	ಗುರುಗೋವಿಂದವಿಠಲ	ತಂದೆ ಮುದ್ದುಮೋಹನ್ನ ತವ	೩೧-೨
೧೮೧೭೪	ಗುರುಗೋವಿಂದವಿಠಲ	ತಂದೆ ಮುದ್ದುಮೋಹನ್ನ ನೀ ಕಾಯಬೇಕೆನ್ನ	೩೧-೨
೧೮೧೭೫	ಗುರುಗೋವಿಂದವಿಠಲ	ತಂದೆ ಮುದ್ದುಮೋಹನ್ನಾ ನಿನ್ನಯ	೩೧-೨
೧೮೧೭೬	ಗುರುಗೋವಿಂದವಿಠಲ	ತೆರಳಿದರೋ ತಂದೆಮುದ್ದುಮೋಹನರು	೩೧-೨
೧೮೧೭೭	ಗುರುಗೋವಿಂದವಿಠಲ	ದಾಸರ ಭಾಗ್ಯವಿದು	೩೧-೨
೧೮೧೭೮	ಗುರುಗೋವಿಂದವಿಠಲ	ದಾಸರಾಯಾ ತಂದೇ ಮುದ್ದು ಮೋಹನದಾಸ	೩೧-೨
೧೮೧೭೯	ಗುರುಗೋವಿಂದವಿಠಲ	ನಮಾಮಿ ತಂದೆಯೇ ಮುದ್ದುಮೋಹನ	೩೧-೨
೧೮೧೮೦	ಗುರುಗೋವಿಂದವಿಠಲ	ನೋಡಿದ್ರ್ಯಾ ಕಂಡಿದ್ರ್ಯಾ	೩೧-೨
೧೮೧೮೧	ಗುರುಗೋವಿಂದವಿಠಲ	ಪರಮಪ್ರೀಯಾ ದಾಸರಾಯಾ	೩೧-೨
೧೮೧೮೨	ಗುರುಗೋವಿಂದವಿಠಲ	ಪಾಲಿಸೊ ಗುರುವರನೇ	೩೧-೨
೧೮೧೮೩	ಗುರುಗೋವಿಂದವಿಠಲ	ವಂದಿಸಿ ಬದುಕಿ ತಂದೆಮುದ್ದುಮೋಹನರ	೩೧-೨
೧೮೧೮೪	ಗುರುಗೋವಿಂದವಿಠಲ	ವಂದಿಸುವೆ ನಾ ನಿಮ್ಮ ದ್ವಂದ್ವ ಪಾದಕ್ಕೆ	೩೧-೨
೧೮೧೮೫	ಗುರುಗೋವಿಂದವಿಠಲ	ಶ್ರೀ ರಮಾವಿನುತ ಪದ ತಾಮರಸಪಲ್ಲವನೆ	೩೧-೨
೧೮೧೮೬	ಗುರುಗೋವಿಂದವಿಠಲ	ಸಾಮಜಾದ್ರಿ ನಿವಾಸ ಮಮಹೃದಯ ಸದ್ಧಾಮದಲಿ	೩೫-೧
೧೮೧೮೭	ಗುರುತುಲಶೀರಾಮ	ಕರವೆತ್ತಿ ಮುಗಿಯುವೆನು ಗುರು ನಾರಸಿಂಹನಿಗೆ	೩೪
೧೮೧೮೮	ಗುರುರಾಮವಿಠಲ	ಗುರುರಾಮವಿಠಲ ಶ್ರೀರಾಮವಿಠಲ	೧೮-೩
೧೮೧೮೯	ಗೋಪಾಲಕೃಷ್ಣವಿಠಲ	ಇಂದಿರೇಶನ ಪದದ್ವಂದ್ವಕಮಲ ಭಜಿಪ ಶ್ರೀಗುರು	೧೮-೩
[illegible]	ಗೋಪಾಲಕೃಷ್ಣವಿಠಲ	ಎಂದಿಗೆ ನಿಮ್ಮ ಪದ ಕಾಂಬೆನೊ ಗುರು	೧೮-೩
[illegible]	[illegible]	ಏನು ಮಹಿಮರೊ ನಮ್ಮ ಶ್ರೀ ಗುರುಗಳು	೧೮-೩
[illegible]	[illegible]	ಏಳು ಶ್ರೀ ಗುರುರಾಯ ಏಳು ಪರಮಪ್ರಿಯ	[illegible]
[illegible]	[illegible]	ಕಂಡು ಧನ್ಯಳಾದೆ ನಾನೀಗ ಈ ದಿವ್ಯಪಾದ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೧೯೪	ಗೋಪಾಲಕೃಷ್ಣವಿಠಲ	ಗುರುರತ್ನ ಪರಮ ಪ್ರಿಯ ಕರುಣಾನಿಧೆ ನಿಮ್ಮ	೧೮-೩
೧೮೧೯೫	ಗೋಪಾಲಕೃಷ್ಣವಿಠಲ	ಗುರುರಾಜ ನಮಿಪರ ಸುರಭೋಜ	೧೮-೩
೧೮೧೯೬	ಗೋಪಾಲಕೃಷ್ಣವಿಠಲ	ಗುರುವೆ ನಿಮ್ಮನು ನಾ ಮೊರೆಹೊಕ್ಕೆನಲ್ಲದೆ	೧೮-೩
೧೮೧೯೭	ಗೋಪಾಲಕೃಷ್ಣವಿಠಲ	ತಂದೆ ಮುದ್ದುಮೋಹನ ದಾಸರಾಯರ ಪದವ	೧೮-೩
೧೮೧೯೮	ಗೋಪಾಲಕೃಷ್ಣವಿಠಲ	ತಂದೆಮುದ್ದುಮೋಹನದಾಸರೆನಿಸಿದ	೧೮-೩
೧೮೧೯೯	ಗೋಪಾಲಕೃಷ್ಣವಿಠಲ	ತೆರಳಿ ಪೋದರು ದಿವ್ಯ ನರಹರಿಯ ಪುರಕೆ	೧೮-೩
೧೮೨೦೦	ಗೋಪಾಲಕೃಷ್ಣವಿಠಲ	ತೊರೆದು ಜೀವಿಸಬಹುದೆ ಗುರು ನಿಮ್ಮ ಚರಣವ	೧೮-೩
೧೮೨೦೧	ಗೋಪಾಲಕೃಷ್ಣವಿಠಲ	ತೊರೆದು ಪೋಗುವುದುಚಿತವೇ ಶ್ರೀ ಗುರುವರ	೧೮-೩
೧೮೨೦೨	ಗೋಪಾಲಕೃಷ್ಣವಿಠಲ	ತೋರೆನಗೆ ಶ್ರೀ ಕೃಷ್ಣ ತೋಯಜಾಂಬಕ ನಿನ್ನ	೧೮-೩
೧೮೨೦೩	ಗೋಪಾಲಕೃಷ್ಣವಿಠಲ	ಧನ್ಯ ಧನ್ಯ ಧನ್ಯ ಧನ್ಯ ಗುರುವರಾ	೧೮-೩
೧೮೨೦೪	ಗೋಪಾಲಕೃಷ್ಣವಿಠಲ	ಧನ್ಯರಾದರು ಗುರುಗಳನು ಪೂಜಿಸುತ	೧೮-೩
೧೮೨೦೫	ಗೋಪಾಲಕೃಷ್ಣವಿಠಲ	ಪರಮ ಕರುಣಾಕರನೆ ಕರಪಿಡಿದು ಸಲಹೆನ್ನ	೧೮-೩
೧೮೨೦೬	ಗೋಪಾಲಕೃಷ್ಣವಿಠಲ	ಪರಮ ಕರುಣಾಳುಗಳು ಈ ಗುರುಗಳು	೧೮-೩
೧೮೨೦೭	ಗೋಪಾಲಕೃಷ್ಣವಿಠಲ	ಪರಮ ಕಾರುಣ್ಯ ಗುರು ಕರುಣಿಸೆನಗ್ಹರಿ ಪದವ	೧೮-೩
೧೮೨೦೮	ಗೋಪಾಲಕೃಷ್ಣವಿಠಲ	ಪರಮ ಪಾವನಕಾಯ ಗುರುರಾಯ ಜೀಯ	೧೮-೩
೧೮೨೦೯	ಗೋಪಾಲಕೃಷ್ಣವಿಠಲ	ಪರಮಪ್ರಿಯರೆಂದೆಂಬ ಕರುಣ ಜಲಧಿ ನಿಮ್ಮ	೧೮-೩
೧೮೨೧೦	ಗೋಪಾಲಕೃಷ್ಣವಿಠಲ	ಪರಿಪರಿ ದೇಹ ಧರಿಸಿ ನರ ಜನ್ಮದಲಿ ಬಂದು	೧೮-೩
೧೮೨೧೧	ಗೋಪಾಲಕೃಷ್ಣವಿಠಲ	ಪೊರೆಯೊ ಈ ವೇಳೆಯಲಿ ಕರಿಗಿರಿನಿಲಯ	೧೮-೩
೧೮೨೧೨	ಗೋಪಾಲಕೃಷ್ಣವಿಠಲ	ಬಡಿ ಜಾಗಟೆ ಹೊಡಿ ನಗಾರಿ ಪಿಡಿ ತುತ್ತೂರಿಯನು	೧೮-೩
೧೮೨೧೩	ಗೋಪಾಲಕೃಷ್ಣವಿಠಲ	ಬಿನ್ನೈಸಲೇನಿನ್ನು ಎನ್ನ ಗುರುವೇ	೧೮-೩
೧೮೨೧೪	ಗೋಪಾಲಕೃಷ್ಣವಿಠಲ	ಬೇಗನೆ ಬಾರೊ ಶ್ರೀಹರಿಯನೆ ತೋರೋ	೧೮-೩
೧೮೨೧೫	ಗೋಪಾಲಕೃಷ್ಣವಿಠಲ	ಭಕ್ತರುದ್ಧಾರಕ ದಾಸರಾಯರಿವರ್ಯಾರೇ ಪೇಳಕ್ಕ	೧೮-೩
೧೮೨೧೬	ಗೋಪಾಲಕೃಷ್ಣವಿಠಲ	ಮಂಗಳಂ ಶ್ರೀ ಗುರುವರ್ಯರಿಗೆ ಮಂಗಳಾಂಗರಿಗೆ	೧೮-೩
೧೮೨೧೭	ಗೋಪಾಲಕೃಷ್ಣವಿಠಲ	ಮಾಯವಾಯಿತು ರತುನ ಮರೆ ಮೋಸ ಮಾಡಿ	೧೮-೩
೧೮೨೧೮	ಗೋಪಾಲಕೃಷ್ಣವಿಠಲ	ವಿಜಯರಾಯರ ದಿನದಿ ವಿಜಯ ಪಯಣವ ಮಾಳ್ಪೆ	೧೮-೩
೧೮೨೧೯	ಗೋಪಾಲಕೃಷ್ಣವಿಠಲ	ಶ್ರೀ ಗುರುವರ್ಯರಿಗೆ ಜಯಮಂಗಳ ನಿತ್ಯ	೧೮-೩
೧೮೨೨೦	ರಂಗೇಶವಿಠಲ	ವರಗುರು ತಂದೆ ಮುದ್ದುಮೋಹನದಾಸ	೨೭

ಹರಿದಾಸರು-ತಂದೆವರದಗೋಪಾಲದಾಸರು

೧೮೨೨೧	ತಂದೆವರದವಿಠಲ	ಶ್ರೀಮತ್ ತಂದೆವರದಗೋಪಾಲದಾಸ	೨೧-೨

ಹರಿದಾಸರು-ತಂದೆವೆಂಕಟೇಶವಿಠಲದಾಸರು

೧೮೨೨೨	ಕಮಲನಾಭವಿಠಲ	ವಂದಿಪೆ ತವ ಪಾದಕೆ ಭವದ	೧೮-೨

ಹರಿದಾಸರು-ತಾಳ್ಳಪಾಕಂ ಚಿನ್ನಯ್ಯ

೧೮೨೨೩	ವೈಕುಂಠವಿಠಲ	ನೋಡಲು ಬೇಕೇ ಎನ್ನೊಡೆಯನನೂ	೩೫-೧

ಹರಿದಾಸರು-ತುಪಾಕಿ ವೆಂಕಟರಮಣಾಚಾರ್ಯ

೧೮೨೨೪	ತುಪಾಕಿ ವೆಂಕಟರಮಣ	ದಯಾನಿಧೆ ಪವಮಾನ ವರದ	[illegible]

ಹರಿದಾಸರು-ತುಳಸೀರಾಮದಾಸರು

೧೮೨೨೫	ಕೃಷ್ಣದಾಸ	ಚರಣಸೇವೆಯ ಬೇಡುವೆ ಗುರು ತುಳಸೀರಾಮನ	[illegible]
೧೮೨೨೬	ಗುರುತುಲಶೀರಾಮ	ದಯಮಾಡಬಾರದೇಕೊ ದಾಸನೊಳೆ ನೀ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೨೨೭	ಗುರುತುಲಶೀರಾಮ	ಬಂದರ್‍ನೋಡೀ ಸುಂದರ್‍ರು	೩೫-೧
೧೮೨೨೮	ಗುರುತುಲಶೀರಾಮ	ಬೆಂಗಳೂರಿಗೆ ಹೋಗಿ ಬಂದರೂ	೩೫-೧
೧೮೨೨೯	ಗುರುತುಲಶೀರಾಮ	ಭಜರೇ ಗುರುಚರಣಂ ದುಸ್ತಿರ	೩೫-೧
೧೮೨೩೦	ತೂಪ್ಪಲ್ ವೆಂಕಟ	ಮಂಗಳಂ ಶ್ರೀನೃಹರಿಯೆ ಶ್ರೀನಿವಾಸಾಯ	೩೫-೧
೧೮೨೩೧	ದರಿಶಕುಪ್ಪ ವೆಂಕಟದಾಸ	ಗುರುವರ ತುಳಸೀರಾಮ ದೇಶಿಕ	೩೫-೧
೧೮೨೩೨	ದರಿಶಕುಪ್ಪ ವೆಂಕಟದಾಸ	ಗುರುವೆ ತುಳಸಿರಾಮ ಕರುಣಿಸು	೩೫-೧
೧೮೨೩೩	ದರಿಶಕುಪ್ಪ ವೆಂಕಟದಾಸ	ಜಯ ಜಯ ತುಳಸೀರಾಮಾ	೩೫-೧
೧೮೨೩೪	ಮಹದೇವಪುರದ ಶ್ರೀರಂಗ	ಮೋಸ ಹೋದೆ ತುಳಸಿರಾಮ	೩೫-೧
೧೮೨೩೫	ಮಳಿಗೆ ರಂಗಸ್ವಾಮಿದಾಸ	ಶ್ರೀ ಶಠಕೋಪ ದಯಾಪಾತ್ರಂ	೩೫-೧
೧೮೨೩೬	ರಂಗಸ್ವಾಮಿದಾಸ	ಗುರುವರ ತುಲಸೀರಾಮಯ್ಯಾ ಪೂರ್ವದ್ವಾರ	೩೦
೧೮೨೩೭	ರಂಗಸ್ವಾಮಿದಾಸ	ಜಯ ತುಲಸೀರಾಮಾ ಜಗದಭಿರಾಮ	೩೦
೧೮೨೩೮	ರಂಗಸ್ವಾಮಿದಾಸ	ಜೋ ಜೋ ತುಲಸೀರಾಮ ಜೋ ಜೋ ಶ್ರೀರಾಮ	೩೦
೧೮೨೩೯	ರಂಗಸ್ವಾಮಿದಾಸ	ಸ್ವಾಮಿ ಲಾಲಿ ತುಲಸೀ ರಾಮಲಾಲೀ	೩೦
೧೮೨೪೦	ವಿಠಲಂ ಮುನಿಸ್ವಾಮಾಚಾರ್ಯ	ಶ್ರೀ ತುಳಸಿರಾಮಾರ್ಯ ನಮೋಸ್ತುತೇ	೩೫-೧
೧೮೨೪೧	ವೇದಾಂತಶಿವರಾಮಶಾಸ್ತ್ರಿ	ಶ್ರೀವಾಣಿ ವಿಭವ ಪ್ರಭಾವ (ಸಂ)	೩೫-೧

ಹರಿದಾಸರು-ನರಸಿಂಹದಾಸರು ಬ್ಯಾಗವಟಿ

೧೮೨೪೨	ಜಗನ್ನಾಥವಿಠಲ	ತೆರಳಿದರು ವೈಕುಂಠ ಪುರದರಸನ	೧೪
೧೮೨೪೩	ಜಗನ್ನಾಥವಿಠಲ	ನಂಬಿದೆ ನಿನ್ನ ಪಾದಾಂಬುಜ ನರಸಿಂಹ	೧೪

ಹರಿದಾಸರು-ಪುರಂದರದಾಸರು

೧೮೨೪೪	ಕಮಲನಾಭವಿಠಲ	ದಾಸರ ಭಜಿಸುತ ಕ್ಲೇಶವ ಕಳೆಯಿರೊ	೧೮-೨
೧೮೨೪೫	ಕಾರ್ಪರನರಹರಿ	ಗುರುವರ್ಯ ಪುರಂದರ ಗುರುವರ್ಯ	೨೯-೨
೧೮೨೪೬	ಕೃಷ್ಣವಿಠಲ	ಎಂತು ಪೊಗಳಲಿ ನಾನು	೧೫
೧೮೨೪೭	ಗದುಗಿನ ವೀರನಾರಾಯಣ	ಜಿಪುಣರೈ ನೀವೆಂದು ಹೇಳಿದುದು	೨೧-೨
೧೮೨೪೮	ಗುರುಗೋವಿಂದವಿಠಲ	ಏಸು ಮಹಿಮೆಯೋ ಪುರಂದರದಾಸರ	೩೧-೨
೧೮೨೪೯	ಗುರುಗೋವಿಂದವಿಠಲ	ದಾಸ ಜನರ ಹೃತ್ ತೋಷನೆ ಪುರಂದರದಾಸ	೩೧-೨
೧೮೨೫೦	ಗುರುಗೋವಿಂದವಿಠಲ	ದಾಸರಾಯ ಪಾದ ವನಜಸೂಸಿ	೩೧-೨
೧೮೨೫೧	ಗುರುಗೋವಿಂದವಿಠಲ	ಪುರಂದರ ದಾಸರಾಯಾ ನಮಿಸೆ ನಿಮ್ಮ ಚರಣ	೩೧-೨
೧೮೨೫೨	ಗುರುಗೋವಿಂದವಿಠಲ	ಭಾಸಿಸುತಿಹ ದಾಸರ ನೋಡಿ	೩೧-೨
೧೮೨೫೩	ಗುರುಗೋವಿಂದವಿಠಲ	ವಾಸವನಾಮಕ ದಾಸರ ನೆರೆನಂಬೂ	೩೧-೨
೧೮೨೫೪	ಗುರುಗೋವಿಂದವಿಠಲ	ಶರಣು ಶರಣು ಶರಣು ಸುರಮುನಿ	೩೧-೨
೧೮೨೫೫	ಗೋಪಾಲಕೃಷ್ಣವಿಠಲ	ಎಷ್ಟು ಪುಣ್ಯ ಮಾಡೀ ಕಂಬ	೧೮-೩
೧೮೨೫೬	ಗೋಪಾಲಕೃಷ್ಣವಿಠಲ	ಏಳು ಪುರಂದರ ಗುರುವರ ಇನ್ನು	೧೮-೩
೧೮೨೫೭	ಗೋಪಾಲಕೃಷ್ಣವಿಠಲ	ದಾಸರಾಯ ಪುರಂದರದಾಸರಾಯ	೧೮-೩
೧೮೨೫೮	ಗೋಪಾಲವಿಠಲ	ಪುರಂದರರಾಯರ ಪುಣ್ಯನಾಮಸ್ಮರಣೆ ಇನ್ನು	೧೨
೧೮೨೫೯	ಜಗನ್ನಾಥವಿಠಲ	ದಾಸರಾಯ ಪುರಂದರ ದಾಸರಾಯ	೧೪
೧೮೨೬೦	ಪ್ರಸನ್ನವೆಂಕಟ	ತಂದೆ ಪುರಂದರದಾಸರ ಸ್ಮರಿಸುವೆ	೮
೧೮೨೬೧	ಪ್ರಸನ್ನಶ್ರೀನಿವಾಸ	ಶರಣು ಪುರಂದರ ದಾಸರಾಯರೆ ಶರಣು	೨೨
೧೮೨೬೨	ಪ್ರಸನ್ನಶ್ರೀನಿವಾಸ	ಹರಿದಾಸಶ್ರೇಷ್ಠ ಶ್ರೀ ಪುರಂದರ ದಾಸಾರ್ಯರ	೨೨
೧೮೨೬೩	[illegible]	ರಾಯರ ಭಾಗ್ಯವಿದು	೧೭
೧೮೨೬೪	[illegible]	ದಾಸರಾಜಾ ಪುರಂದರ ದಾಸರಾಜಾ	೨೧-೧
೧೮೨೬೫	[illegible] (ಶ್ರೀ ಶ್ರೀ[illegible])	ಕಂಗಳಿಗೆ ಹಬ್ಬವಾಯಿತಯ್ಯ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೨೬೬	ರಂಗವಿಠಲ (ಶ್ರೀ ಶ್ರೀಪಾದರಾಜರು)	ದಾಸರೆಂದರೆ ಪುರಂದರದಾಸರಯ್ಯ	೧
೧೮೨೬೭	ವರದೇಶವಿಠಲ	ದಾಸವರ್ಯರಿಗೊಂದಿಪೆ ದಾಸವರ್ಯರಿಗೆರಗಿ	೨೭
೧೮೨೬೮	ವಿಜಯವಿಠಲ	ಅಡಿಗಳಿಗೊಂದಿಪೆ ಪುರಂದರ ಗುರುವೆ	೯-೨
೧೮೨೬೯	ವಿಜಯವಿಠಲ	ಒಂದಾನೊಂದು ದಿವಸದಲ್ಲಿ ಗುರು ವ್ಯಾಸರಾಯರು	೯-೨
೧೮೨೭೦	ವಿಜಯವಿಠಲ	ಕರುಣಿಸಯ್ಯಾ ಗುರುವರ್ಯ ಪರಮ ಸಹೃದಯಾ	೯-೨
೧೮೨೭೧	ವಿಜಯವಿಠಲ	ಗುರು ಪುರಂದರ ದಾಸರೇ ನಿಮ್ಮ ಚರಣ	೯-೨
೧೮೨೭೨	ವಿಜಯವಿಠಲ	ಗುರುಗಳೆಂದರೆ ಇವರೆ ಗುರುಗಳು ಎನಗೆ ಕಾಣೊ	೧೦-೨
೧೮೨೭೩	ವಿಜಯವಿಠಲ	ಗೋತ್ರ ಪ್ರವರ ಉಚ್ಚಾರಣೆ	೯-೨
೧೮೨೭೪	ವಿಜಯವಿಠಲ	ದಾಸರ ಭಾಗ್ಯವಿದು ಪುರಂದರದಾಸರ	೯-೨
೧೮೨೭೫	ವಿಜಯವಿಠಲ	ದಾಸರ ಮಹಿಮೆಗೆ ಅನಂತ ನಮೋ ನಮೋ	೧೦-೨
೧೮೨೭೬	ವಿಜಯವಿಠಲ	ದಾಸರೆ ಪುರಂದರದಾಸರು ಲೇಸಾಗಿ ಎನಗೆ	೯-೨
೧೮೨೭೭	ವಿಜಯವಿಠಲ	ಪುರಂದರ ಗುರುರಾಯ ಪುರಂದರ	೯-೨
೧೮೨೭೮	ವಿಜಯವಿಠಲ	ಪುರಂದರ ಗುರುರಾಯಾ ಸತ್ಪುಣ್ಯಕಾಯ	೯-೨
೧೮೨೭೯	ವಿಜಯವಿಠಲ	ಬಂದ ದುರಿತ ವಿನಾಶನಾ ಬಂದ ದುರಿತ	೯-೨
೧೮೨೮೦	ವಿಜಯವಿಠಲ	ಬೇಸರದೆ ಭಜಿಸಿರೋ ಪುರಂದರ ದಾಸರಾಯರ	೯-೨
೧೮೨೮೧	ವಿಜಯವಿಠಲ	ವಿಠ್ಠಲನ ಪದವನಜ ತುಂಬಿ	೯-೨
೧೮೨೮೨	ವೆಂಕಟವಿಠಲ	ಶ್ರೀ ಪುರಂದರದಾಸರಾಯ ನಿಮ್ಮ ಶ್ರೀಪಾದಪದ್ಮಕ್ಕೆ	೧೩
೧೮೨೮೩	ವೇಣುಗೋಪಾಲವಿಠಲ	ತಂದೆ ಪುರಂದರದಾಸರ ಮಹಿಮೆಗಳು	೧೩
೧೮೨೮೪	ವೇಣುಗೋಪಾಲವಿಠಲ	ವಂದಿಪೆ ಪುರಂದರದಾಸರ ಪಾದ	೧೩
೧೮೨೮೫	ಶಾಮಸುಂದರವಿಠಲ	ಜೋ ಜೋ ಜೋ ಜೋ ಪುರಂದರರಾಯ	೩೦
೧೮೨೮೬	ಶಾಮಸುಂದರವಿಠಲ	ದಾಸಗುರೋ ದಾಸಗುರೋ	೩೦
೧೮೨೮೭	ಶಾಮಸುಂದರವಿಠಲ	ದಾಸರ ನೋಡಿರೈ ಮನದಭಿಲಾಷೆಯ ಬೇಡಿರೈ	೩೦
೧೮೨೮೮	ಶಾಮಸುಂದರವಿಠಲ	ಪರಿಪಾಲಿಸು ದಯದಿ ನಿರುತ ದಾಸ ಪುರಂದರ	೩೦
೧೮೨೮೯	ಶಾಮಸುಂದರವಿಠಲ	ಪುರಂದರ ಗುರುರಾಯ ಪಿಡಿಯೋ	೩೦
೧೮೨೯೦	ಶಾಮಸುಂದರವಿಠಲ	ಪೋಷಿಸೆನ್ನನು ದಾಸಶ್ರೇಷ್ಠನೆ ವಸುಧಿಕರಪಾಲ	೩೦
೧೮೨೯೧	ಶ್ರೀ-ಶ್ರೀನಿವಾಸ	ವೆಂಕಟೇಶನ ಧ್ಯಾನ ಮಾಡಲಾದಿಯೊಳು	೧೮-೪
೧೮೨೯೨	ಶ್ರೀಕಾಂತ	ಗುರು ಪುರಂದರರಾಯ ದುರಿತ ತಿಮಿರಕೆ	೨೭
೧೮೨೯೩	ಸಿರಿಗೋವಿಂದವಿಠಲ	ಇದೇ ಪೇಳಿ ಪೋದರು ವಿಧುವನೆ	೨೯-೨

ಹರಿದಾಸರು-ಪ್ರಸನ್ನವೆಂಕಟದಾಸರು

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೨೯೪	ರಮಾಪತಿವಿಠಲ	ಸಿರಿವಿರಿಂಚಿ ಭವೇಂದ್ರಾದಿ ಸುರರಿಂದರ್ಚಿತನಾದ	೨೧-೨

ಹರಿದಾಸರು-ಪ್ರಾಣೇಶದಾಸರು

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೨೯೫	ಗುರುಪ್ರಾಣೇಶವಿಠಲ	ತೆರಳಿದರು ಪರಮ ತೋಷದಲಿ ಹರಿಪದಕೆ	೧೭
೧೮೨೯೬	ವರದೇಶವಿಠಲ	ಪ್ರಾಣೇಶದಾಸಾರ್ಯರ ಪದಯುಗ	೨೭
೧೮೨೯೭	ವೆಂಕಟವಿಠಲ	ಪ್ರಾಣೇಶದಾಸಾರ್ಯರ ಭಜಿಪರಿಗೆ	೧೩
೧೮೨೯೮	ಶಾಮಸುಂದರವಿಠಲ	ಪೋಷಿಸೆನ್ನ ಜೀಯ	೩೦
೧೮೨೯೯	ಶ್ರೀಶಪ್ರಾಣೇಶವಿಠಲ	ಪೋಷಿಸೆನ್ನ ಜೀಯಾ ಗುರು ಪ್ರಾಣೇಶದಾಸರಾಯ	೧೭
೧೮೩೦೦	ಶ್ರೀಶಪ್ರಾಣೇಶವಿಠಲ	ವಾಸುದೇವನ ಪುರಕೆ ತೆರಳಿದಾರು	೧೭

ಹರಿದಾಸರು-ಬೇಲೂರು ವೈಕುಂಠದಾಸರು

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೩೦೧	ಅಚ್ಯುತವಿಠಲ	ನಿನಗೆಲ್ಲ ದಾರಿಗಳಳವಡುವುದಯ್ಯ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
		ಹರಿದಾಸರು-ಭೀಮಾಶಂಕರರು	
[illegible]	ಶಂಕರ	ಮರೆಯದಿರು ಮರೆಯದಿರು ಗುರುರಾಯನಾ	೨೦
೧೮೩೦೩	ಶಂಕರ	ಸ್ವಾಮಿ ನೀ ಮಾಡಿದುದುಪಕಾರಾ ಕಿಂತು ಪಾಮರನ	೨೦
		ಹರಿದಾಸರು-ಮಹಿಪತಿರಾಯರು	
೧೮೩೦೪	ಭೂಪತಿವಿಠಲ	ಏನು ಕೌತುಕವೂ ಮಹಿಪತಿರಾಯರದು	೨೧-೧
೧೮೩೦೫	ಭೂಪತಿವಿಠಲ	ಕೃಷ್ಣತಾತ ಮಹಿಪತಿರಾಯರ ಭಜಿಸೋ	೨೧-೧
೧೮೩೦೬	ಭೂಪತಿವಿಠಲ	ಗುರುವರಹಿತನ ಮಾಡು ಗುರುರಾಯನೆ	೨೧-೧
೧೮೩೦೭	ಭೂಪತಿವಿಠಲ	ರಾಯರ ನೋಡಿರೈ ಮಹಿಪತಿರಾಯರ	೨೧-೧
೧೮೩೦೮	ಮಹಿಪತಿಸುತ	ಆರತಿ ಗುರುರಾಯಾ ಸ್ವಾನಂದ ಚಂದ್ರೋದಯಾ	೧೧-೨
೧೮೩೦೯	ಮಹಿಪತಿಸುತ	ಆರತಿ ಬೆಳಗುವೆ ನಾ ಸದ್ಗುರುವಿಗೆ	೧೧-೨
೧೮೩೧೦	ಮಹಿಪತಿಸುತ	ಆರತಿ ಬೆಳಗುವೆನಾ ಮಹಿಪತಿ ಗುರುವಿನಾ	೧೧-೨
೧೮೩೧೧	ಮಹಿಪತಿಸುತ	ಎನ್ನನುದ್ಧರಿಸು ಗುರು ರನ್ನ ಮಹಿಪತಿದೇವ	೧೧-೨
೧೮೩೧೨	ಮಹಿಪತಿಸುತ	ಏನೆಂದು ಬಣ್ಣಿಸಲಿ ಗುರುರಾಯನಾ	೧೧-೨
೧೮೩೧೩	ಮಹಿಪತಿಸುತ	ಓಂ ನಮೋ ಮಹೀಪತಿ ಸದಾನಂದ ಗುರುಮೂರ್ತಿ	೧೧-೨
೧೮೩೧೪	ಮಹಿಪತಿಸುತ	ಕರುಣಿಸಯ್ಯ ದಯವಾರಿಧಿ ಮಹಾರಾಯ	೧೧-೨
೧೮೩೧೫	ಮಹಿಪತಿಸುತ	ಕರುಣಿಸೆನಗ ವರ ಯತಿಯೇ	೧೧-೨
೧೮೩೧೬	ಮಹಿಪತಿಸುತ	ಜಯ ಜಯ ಮಹಿಪತಿ ಆನಂದಮೂರುತಿ ಗುರುರಾಯ	೧೧-೨
೧೮೩೧೭	ಮಹಿಪತಿಸುತ	ನಮ್ಮಯ್ಯನಾ ಎಂದು ಕಾಂಬೆ ನಾನು	೧೧-೨
೧೮೩೧೮	ಮಹಿಪತಿಸುತ	ಬಂದ ದುರಿತಗಳ ಪರಿಹಾರ ಮಾಡಯ್ಯಾ	೧೧-೨
		ಹರಿದಾಸರು-ಮಹಿಪತಿಸುತ	
೧೮೩೧೯	ಭೂಪತಿವಿಠಲ	ಮಹಿಪತಿಸುತ ಕೃಷ್ಣರಾಯ	೨೧-೧
		ಹರಿದಾಸರು-ಮುದ್ದುಮೋಹನದಾಸರು	
೧೮೩೨೦	ಗುರುಗೋವಿಂದವಿಠಲ	ಗುರುವೆ ನಮ್ಮ ತಾಯಿ ತಂದೆ	೩೧-೨
೧೮೩೨೧	ಗುರುಗೋವಿಂದವಿಠಲ	ಮುದದಿ ಪಾಲಿಸೊ ಮುದ್ದುಮೋಹನ	೩೧-೨
೧೮೩೨೨	ಗುರುಗೋವಿಂದವಿಠಲ	ಮುದ್ದು ಮೋಹನರೇಯ	೩೧-೧
೧೮೩೨೩	ಗುರುಗೋವಿಂದವಿಠಲ	ಮುದ್ದುಮೋಹನ ಗುರುಗಳಂಘ್ರಿ	೩೧-೨
೧೮೩೨೪	ಗುರುಗೋವಿಂದವಿಠಲ	ಮುದ್ದುಮೋಹನ ದಾಸರೇ ನಿಮ್ಮ	೩೧-೨
೧೮೩೨೫	ಗುರುಗೋವಿಂದವಿಠಲ	ಮುದ್ದುಮೋಹನದಾಸ ತಿದ್ದಿ	೩೧-೨
೧೮೩೨೬	ಗುರುಗೋವಿಂದವಿಠಲ	ಮುದ್ದುಮೋಹನರಾಯಾ ಅಸ್ಮದ್ಗುರೋರ್ಗುರು	೩೧-೨
೧೮೩೨೭	ಗುರುಗೋವಿಂದವಿಠಲ	ಮುದ್ದುಮೋಹನರಾಯಾ ಸುಜನರ	೩೧-೨
೧೮೩೨೮	ಗೋಪಾಲಕೃಷ್ಣವಿಠಲ	ಮುದ್ದು ಮೋಹನದಾಸರೆ ಎನ್ನನು ಬೇಗ	೧೮-೩
[illegible]	ಗೋಪಾಲಕೃಷ್ಣವಿಠಲ	ವರ್ಣಿಸಲಳವೆ ಕರುಣಾಳು ಗುರುವರ ನಿಮ್ಮ	೧೮-೩
		ಹರಿದಾಸರು-ಮೋದವಿಠಲದಾಸರು	
[illegible]	ವರದೇಶವಿಠಲ	ಮೋದವಿಠಲದಾಸರಾಯ	೨೬
		ಹರಿದಾಸರು-ಮೋಹನದಾಸರು	
[illegible]	ಗುರುಗೋವಿಂದವಿಠಲ	ಇನ್ನಾದರು ಎನ್ನ ಪೊರೆಯೊ	೩೧-೨
[illegible]	ಗುರುಗೋವಿಂದವಿಠಲ	ಒಪ್ಪಿಕೊಳ್ಳಲಿಬೇಕು ಅಪ್ಪ ಮೋಹನ್ನ	೩೧-೨
[illegible]	ಗುರುಗೋವಿಂದವಿಠಲ	ನಂಬಿದೆ ನಿನ ಪಾದ ಅಂಬುಜಾಕ್ಷನ	೩೧-೨

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೩೩೪	ಗುರುಗೋವಿಂದವಿಠಲ	ಪಾಹಿ ಪಾಹಿ ಮೋಹನ್ನರೆ	೩೧-೨
೧೮೩೩೫	ಗುರುಗೋವಿಂದವಿಠಲ	ಮೋಹನಾರ್ಯನೆ ಯೆನ್ನಾ	೩೧-೨
೧೮೩೩೬	ಗುರುಗೋವಿಂದವಿಠಲ	ವಿಜಯಗುರು ಕರಜಾತ	೩೧-೨
೧೮೩೩೭	ಪ್ರಾಣೇಶವಿಠಲ	ಪಾಹಿ ಪಾಹಿ ಗುರು ಮೋಹನರಾಯಾ	೧೨
೧೮೩೩೮	ವಿಜಯವಿಠಲ	ಇವನ ಪಾಲಿಸಿದರೆ ನಿನಗೆ ಪುಣ್ಯ	೯-೨

ಹರಿದಾಸರು-ರಂಗಸ್ವಾಮಿದಾಸರು

೧೮೩೩೯	ದರಿಶಕುಪ್ಪ ವೆಂಕಟದಾಸ	ಗುರುರಂಗಸ್ವಾಮಿ ಕೃಪಾಂಗಾ ಸತ್ಯಪಾಂಗ	೩೦
೧೮೩೪೦	ಭೈರವೇಗೌಡ	ಮುಳುಬಾಗಲು ರಂಗಸ್ವಾಮಿ ಯಮ್ಮ	೩೦
೧೮೩೪೧	ರಾಮಕೃಷ್ಣ	ಗುರುವೆ ಪೂಜಿಪೆ ನಿಮ್ಮಯ ಚರಣಗಳನ್ನು	೩೦
೧೮೩೪೨	ರಾಮಕೃಷ್ಣ	ದಾಸನಾಗಬೇಕು ರಂಗಸ್ವಾಮಿ ಗುರು	೩೦
೧೮೩೪೩	ರಾಮಕೃಷ್ಣ	ಭವಭಯಹಾರ ನಮ್ಮ ಭುವಿರಂಗಸ್ವಾಮಿ	೩೦
೧೮೩೪೪	ವೈಕುಂಠದಾಸ	ಧರಣಿಗಧಿಕವಾದ ಗುರುರಂಗಸ್ವಾಮಿಯೆ	೩೦

ಹರಿದಾಸರು-ವಾಸುದೇವವಿಠಲರು

೧೮೩೪೫	ನಾರಾಯಣ	ಋಣಬಾಧೆಯನು ಬಿಡಿಸೈ ಬೇಗ ಶ್ರೀರಾಮ	೩೦

ಹರಿದಾಸರು-ವಾಸುದೇವಾರ್ಯರು

೧೮೩೪೬	ತಿರುಪತಿವೆಂಕಟ	ಈ ಪರಿಯ ದೈನ್ಯತೆಯ ತಾಳಿ ಪ್ರಳಾಪಿಸುತ್ತಿರೆ	೩೦
೧೮೩೪೭	ತಿರುಪತಿವೆಂಕಟ	ಗುರುಚರಣ ಮಹಿಮೆಯನು ಗಣಿಸಿ	೩೦

ಹರಿದಾಸರು-ವಿಜಯದಾಸರು

೧೮೩೪೮	ಉರಗಾದ್ರಿವಾಸವಿಠಲ	ಭಜಿಸುವೆ ನಿನ್ನನು ವಿಜಯದಾಸಾರ್ಯ	೧೬
೧೮೩೪೯	ಕಮಲಾಪತಿವಿಠಲ	ಗುರು ವಿಜಯರಾಯರ ಪದ ಸರಸಿಜ ಸೇವಿಪ	೧೩
೧೮೩೫೦	ಕಾರ್ಪರನರಹರಿ	ವಿಜಯರಾಯರ ಭಜಿಸೋ ಹೇ ಮನುಜಾ	೨೯-೨
೧೮೩೫೧	ಕೇಶವವಿಠಲ	ವಿಜಯರಾಯರ ಪಾದಕಮಲ	೧೩
೧೮೩೫೨	ಗುರುಗೋವಿಂದವಿಠಲ	ಆಲಿಸೀ ಸಜ್ಜನರೆಲ್ಲ ಆಲಿಸಿ	೩೧-೨
೧೮೩೫೩	ಗುರುಗೋವಿಂದವಿಠಲ	ಉದಿಸೀದಾ ರವಿಯು ತಾನುದಿಸಿದ	೩೧-೨
೧೮೩೫೪	ಗುರುಗೋವಿಂದವಿಠಲ	ಗುರ್ವಂತರ್ಗತ ವಿಜಯದಾಸ ಕಾಯೊ	೩೧-೨
೧೮೩೫೫	ಗುರುಗೋವಿಂದವಿಠಲ	ದಾಸರಿವರ ನೋಡಿರೊ	೩೧-೨
೧೮೩೫೬	ಗುರುಗೋವಿಂದವಿಠಲ	ನಮಿಸುವೆನು ನಮಿಸುವೆನು ವಿಜಯದಾಸರಿಗೆ	೩೧-೨
೧೮೩೫೭	ಗುರುಗೋವಿಂದವಿಠಲ	ವಿಜಯಗುರು ಜಯ ಜಯವು	೩೧-೨
೧೮೩೫೮	ಗುರುಗೋವಿಂದವಿಠಲ	ವಿಜಯದಾಸರ ಭಜಿಸಿರೋ	೩೧-೨
೧೮೩೫೯	ಗುರುಗೋವಿಂದವಿಠಲ	ವಿಜಯರಾಯ ಗುರು ವಿಜಯರಾಯ	೩೧-೨
೧೮೩೬೦	ಗುರುಗೋವಿಂದವಿಠಲ	ವಿಜಯರಾಯರ ಭಜಿಸದವ	೩೧-೨
೧೮೩೬೧	ಗುರುಗೋವಿಂದವಿಠಲ	ವಿಜಯರಾಯರಂಘ್ರಿಕಮಲ ಭಜಿಸಿ	೩೧-೨
೧೮೩೬೨	ಗುರುಗೋವಿಂದವಿಠಲ	ಸಾರಿ ಭಜಿಸಿರೋ ವಿಜಯ ಗುರುಗಳೆಂಬರಾ	೩೧-೨
೧೮೩೬೩	ಗುರುಜಗನ್ನಾಥವಿಠಲ	ಇನ್ನೇನು ಭಯವಿಲ್ಲ ನಿನಗೆ ಘನ್ನ ಗುರುವರ ಪಾದ	[illegible]
೧೮೩೬೪	ಗುರುರಾಮವಿಠಲ	ಗುರುವೇ ಸುರತರುವೇ	೩೪
೧೮೩೬೫	ಗೋಪಾಲಕೃಷ್ಣವಿಠಲ	ವಿಜಯ ಗುರು ತವಪಾದ ರಜವ ಕರುಣಿಸಿ ಎನಗೆ	೧೮-೩
೧೮೩೬೬	ಗೋಪಾಲಕೃಷ್ಣವಿಠಲ	ವಿಜಯಗುರು ನಿನ್ನಡಿಯ ಭಜಿಸುವೆನೋ	೧೮-೩
೧೮೩೬೭	ಗೋಪಾಲವಿಠಲ	ಗುರು ವಿಜಯವಿಠಲ ನಿನ್ನ ಚರಣಯುಗಳಿಗೆ	೧೨
೧೮೩೬೮	ಗೋಪಾಲವಿಠಲ	ಚರಣಕಮಲವನ್ನು ನೆನೆವೆ ನಾ ಗುರುಚರಣವನ್ನು	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೩೬೯	ಗೋಪಾಲವಿಠಲ	ದುರಿತ ವಾರಿವಾಹ ಜಂಝಾನಿಳ ಶರಣು	೧೨
೧೮೩೭೦	ಗೋಪಾಲವಿಠಲ	ಭಜಿಸಿ ಬದುಕು ನಿತ್ಯ ವಿಜಯದಾಸರ ಪಾದ	೧೨
೧೮೩೭೧	ಗೋಪಾಲವಿಠಲ	ವಿಜಯ ಆರಿಂದಲೆನಗೆ ಆಗುವುದೊ	೧೨
೧೮೩೭೨	ಗೋಪಾಲವಿಠಲ	ವಿಜಯರಾಯರ ನೆನೆದು ದಿಗ್ವಿಜಯ ಮಾಡಿರೋ	೧೨
೧೮೩೭೩	ಗೋಪಾಲವಿಠಲ	ಸ್ಮರಿಸುವೆ ನಾ ನಿಮ್ಮ ಚರಣಕಮಲ ಗುರು ವಿಜಯ	೧೨
೧೮೩೭೪	ಜಗನ್ನಾಥವಿಠಲ	ತೆರಳಿದರು ವಿಜಯರಾಯರು ವಿಠಲನ ಪುರದೊಳಗೆ	೧೪
೧೮೩೭೫	ಜಗನ್ನಾಥವಿಠಲ	ರತುನ ದೊರಕಿತಲ್ಲ ಎನಗೆ ದಿವ್ಯ ರತುನ	೧೪
೧೮೩೭೬	ಜಯೇಶವಿಠಲ	ವಿಜಯದಾಸರ ದಿವ್ಯ ವಿಜಯ ನೆನೆವರ	೨೭
೧೮೩೭೭	ಜಯೇಶವಿಠಲ	ವಿಜಯವಿಠಲರಾಯಾನಂಘ್ರಿಯುಗ ಭಜಿಸುವ	೨೭
೧೮೩೭೮	ತಂದೆವರದಗೋಪಾಲವಿಠಲ	ಬಾಲೆಯರ ಪಾಲಿಸೈ ದೀನಜನ	೨೧-೨
೧೮೩೭೯	ಪ್ರಸನ್ನಶ್ರೀನಿವಾಸ	ವಿಜಯದಾಸರೆ ನಿಮ್ಮ ಪಾದವನಜಗಳನ್ನು	೨೨
೧೮೩೮೦	ಪ್ರಸನ್ನಶ್ರೀನಿವಾಸ	ಶರಣು ಶರಣು ಶರಣು ವಿಜಯದಾಸಾರ್ಯರೆ (ದೀ)	೨೨
೧೮೩೮೧	ಭೀಮೇಶಕೃಷ್ಣ	ಸ್ಮರಿಸಿ ಬದುಕಿರೊ ಸರ್ವಾನಂದ ಗುರುಗಳ	೧೯
೧೮೩೮೨	ಮೋಹನವಿಠಲ	ತಂದೆ ವಿಜಯರಾಯ ವ್ಯಾಳಿಗೆ	೧೩
೧೮೩೮೩	ಮೋಹನವಿಠಲ	ದಾಸರ ನೆರೆನಂಬಿರೊ ಚಲುವ	೧೩
೧೮೩೮೪	ಮೋಹನವಿಠಲ	ನಿನ್ನ ನಂಬಿರುವೆ ಪ್ರಸನ್ನನಾಗು ಬ್ಯಾಗ	೧೩
೧೮೩೮೫	ಮೋಹನವಿಠಲ	ನಿನ್ನ ಪಾದವ ನಂಬಿ ಅನ್ಯರಾಶ್ರಯವ್ಯಾಕೆ	೧೩
೧೮೩೮೬	ಮೋಹನವಿಠಲ	ಪರಮ ಹರುಷವಾಯಿತು ವಿಜಯರಾಯ	೧೩
೧೮೩೮೭	ಮೋಹನವಿಠಲ	ವಿಜಯದಾಸ ಧೀರರೆಂಬೊ	೧೩
೧೮೩೮೮	ಮೋಹನವಿಠಲ	ವಿಜಯದಾಸರ ಭಜನೆ ಮಾಡಿರೊ	೧೩
೧೮೩೮೯	ಮೋಹನವಿಠಲ	ವಿಜಯರಾಯರ ಚರಣ ನಿಜವಾಗಿ ನಂಬಲು	೧೩
೧೮೩೯೦	ಮೋಹನವಿಠಲ	ವಿಜಯರಾಯರ ಪಾದ ಭಜಿಸಿದವಗನವರತ	೧೩
೧೮೩೯೧	ಮೋಹನವಿಠಲ	ಸರಿಯುಗಾಣೆನೆಲ್ಲಿ ಜಗದೊಳು ಕರವ	೧೩
೧೮೩೯೨	ವಿಜಯರಾಮಚಂದ್ರವಿಠಲ	ರಮಾನುತ ಪಾದಪಲ್ಲವ	೨೭
೧೮೩೯೩	ವೆಂಕಟವಿಠಲ	ನಂಬಿದೆ ನಾ ನಿನ್ನ ಚರಣಕಮಲವನ್ನು	೧೩
೧೮೩೯೪	ವೇಣುಗೋಪಾಲವಿಠಲ	ಏಸೇಸು ಜನುಮಗಳು ಸೂಸಿ ಬಂದಕೆ ವಿನು (ಸು)	೧೩
೧೮೩೯೫	ವೇಣುಗೋಪಾಲವಿಠಲ	ಕರುಣವ ಮಾಡೊ ಶರಣರ ಪ್ರೇಮಿ	೧೩
೧೮೩೯೬	ವೇಣುಗೋಪಾಲವಿಠಲ	ಕಾಯೊ ಕಾಯೊ ಗುರು ವಿಜಯರಾಯ	೧೩
೧೮೩೯೭	ವೇಣುಗೋಪಾಲವಿಠಲ	ಕಾಯೋ ಕಾಯೋ ಕಾಯೋ ವರವೀಯೊ	೧೩
೧೮೩೯೮	ವೇಣುಗೋಪಾಲವಿಠಲ	ನಿನ್ನ ನಂಬಿದ ನರಗೆ ಅನ್ಯರಾಶ್ರಯವೇಕೊ	೧೩
೧೮೩೯೯	ವೇಣುಗೋಪಾಲವಿಠಲ	ಸ್ಮರಿಸಿದವರಘನಾಶನ ಸ್ಮರಿಸಿದವರಘನಾಶ	೧೩
೧೮೪೦೦	ವ್ಯಾಸವಿಠಲ	ದಯಮಾಡೊ ಪ್ರೀಯಾ ದಾಸರ	೧೩
೧೮೪೦೧	ವ್ಯಾಸವಿಠಲ	ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ	೧೩
೧೮೪೦೨	ಶಾಮಸುಂದರವಿಠಲ	ದಾಸರಾಯ ವಿಜಯದಾಸರಾಯ	೩೦
೧೮೪೦೩	ಶಾಮಸುಂದರವಿಠಲ	ಧ್ಯಾನಿಸೋ ಮಾನವಾ ದೀನೋದ್ಧಾರಿ	೩೦
[illegible]	ಶಾಮಸುಂದರವಿಠಲ	ನಿಷ್ಠೆಯಿಂದಲಿ ಮನ ಮುಟ್ಟಿ ಭಜಿಸೊ (ಸು)	೩೦
[illegible]	ಶಾಮಸುಂದರವಿಠಲ	ವಿಜಯರಾಯರ ಪಾದವ ನೀ ಭಜಿಸಿ	೩೦

ಹರಿದಾಸರು–ವಿಜಯರಾಮಚಂದ್ರವಿಠಲರು

[illegible]	ಗುರುರಾಮವಿಠಲ	ಗುರುರಾಯ ನಿನ್ನ ಸಮರಸ್ಕಾರ ಕಾಣೆ	[illegible]
[illegible]	ಜಯೇಶವಿಠಲ	ಅಪರಾಧ ಎನ್ನದಯ್ಯ ಹೇ ಗುರುವರ್ಯ	೨೭

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
		ಹರಿದಾಸರು–ವೆಂಕಟದಾಸರು	
೧೮೪೦೮	ತಿರುಪತಿವೆಂಕಟ	ಇದಿರುದೋರಿ ಮರೆಯಾದ ಬಗೆಯಿದೇನಯ್ಯಾ	೩೦
೧೮೪೦೯	ತಿರುಪತಿವೆಂಕಟ	ಮಂಗಳ ವೆಂಕಟದಾಸಾರ್ಯ ದಿವ್ಯ	೩೦
೧೮೪೧೦	ತಿರುಪತಿವೆಂಕಟ	ಮರೆಯದ ಭಾವಗೋಚರವಾಯಿತಯ್ಯಾ	೩೦
		ಹರಿದಾಸರು–ವೆಂಕಟದಾಸರು (ಪ್ರಸನ್ನವೆಂಕಟವಿಠಲ)	
೧೮೪೧೧	ವಿಜಯರಾಮಚಂದ್ರವಿಠಲ	ಸ್ಮರಿಸಿ ಸೇವಿಸಿ ವೆಂಕಟರಾಯದಾಸರ	೨೨
		ಹರಿದಾಸರು–ವೇಣುಗೋಪಾಲದಾಸರು	
೧೮೪೧೨	ವ್ಯಾಸವಿಠಲ	ಕರೆದು ಕೈ ಪಿಡಿಯೊ ಎನ್ನ ವೇಣುದಾಸ	೧೩
		ಹರಿದಾಸರು–ವೈಕುಂಠದಾಸರು–ಬೇಲೂರು	
೧೮೪೧೩	ಹಯವದನ (ಶ್ರೀ ವಾದಿರಾಜರು)	ಎಂಜಲೆನ್ನಲಿಬಹುದೆ ಮನುಜರಿದನ ಅಘವನಧ	೨
೧೮೪೧೪	ಹಯವದನ (ಶ್ರೀ ವಾದಿರಾಜರು)	ದಾಸೋತ್ತಮ ನೀನೆ ಶ್ರೀ ವೈಕುಂಠದಾಸ	೨
		ಹರಿದಾಸರು–ಶೇಷದಾಸರು (ಪ್ರಾಣನಾಥವಿಠಲ)	
೧೮೪೧೫	ರಂಗೇಶವಿಠಲ	ತೆರಳಿ ಪೋದರಿಂದು ಪರಮ ಪದವನರಸುತ	೨೭
		ಹರಿದಾಸರು–ಶೇಷದಾಸರು (ಮೊದಲಕಲ್ಲು)	
೧೮೪೧೬	ಇಂದಿರೇಶ	ನೇತ್ರಗಳ ಸಾಫಲ್ಯ ಮಾಳ್ಪ ಸುಗಾತ್ರನ ಕಂಡೆ	೨೧-೨
೧೮೪೧೭	ಕಾರ್ಪರನರಹರಿ	ದಾಸವರ್ಯ ಪೋಷಿಸೆನ್ನನು ಪ್ರಾರ್ಥಿಸುವೆ	೨೯-೨
೧೮೪೧೮	ಶಾಮಸುಂದರವಿಠಲ	ಪೋಷಿಸು ಎನ್ನಯ ದೋಷಗಳೆಣಿಸದೆ	೩೦
		ಹರಿದಾಸರು–ಶ್ರೀ ವರದೇಶವಿಠಲರು	
೧೮೪೧೯	ವರದೇಶವಿಠಲ	ದಾಸರಾಯರ ದಿವ್ಯಚರಣ ಭಜಿಸಿ	೧೭
		ಹರಿದಾಸರು–ಶ್ರೀ ಶ್ರೀವರವಿಠಲದಾಸರು	
೧೮೪೨೦	ಗುರುಗೋವಿಂದವಿಠಲ	ಶ್ರೀ ವರದಾಸಾರ್ಯ ತವಗುಣ ಭಾವದೊಳ್ವರ್ಣಿಸುವಾ	೩೧-೨
		ಹರಿದಾಸರು–ಶ್ರೀಶಪ್ರಾಣೇಶದಾಸರು	
೧೮೪೨೧	ಗುರುಶ್ರೀಶಪ್ರಾಣೇಶವಿಠಲ	ಶ್ರೀಶಪ್ರಾಣೇಶವಿಠಲದಾಸಾರ್ಯನೆ	೧೭
೧೮೪೨೨	ತಿರುಪತಿವಿಠಲ	ದಾಸರಾಯರ ನೋಡಿದ್ಯಾ ಶ್ರೀಶಪ್ರಾಣೇಶ	೧೭
೧೮೪೨೩	ವರದೇಂದ್ರವಿಠಲ	ವಾಸುದೇವನ ಪುರ ಪ್ರವೇಶಿಸಿದರು	೧೭
೧೮೪೨೪	ವಾಮನವಿಠಲ	ಶ್ರೀಶಪ್ರಾಣೇಶರಾಯಾ ದಯದಿ	೧೭
೧೮೪೨೫	ಶ್ರೀನಿವಾಸವಿಠಲ	ಶ್ರೀಶಪ್ರಾಣೇಶ ದಾಸರಾಯರ ಬ್ಯಾಸರದಲೆ ಕೊಂಡಾಡೆಲೋ	೧೭
೧೮೪೨೬	ಶ್ರೀವರದವಿಠಲ	ದೋಷರಾಶಿಯ ಕಳೆದು ಪಾಲಿಸುವದು	೧೭
		ಹರಿದಾಸರು–ಸೀತಾಪತಿವಿಠಲ (ರುಕ್ಮಿಣಿಬಾಯಿ)	
೧೮೪೨೭	ಗೋಪಾಲಕೃಷ್ಣವಿಠಲ	ಮೋದೆಯ ತಾಯಿ ನೀನೀಗ	[illegible]
		ಹಸೆಗೆ ಕರೆವ ಹಾಡು	
೧೮೪೨೮	ಕಮಲನಾಭವಿಠಲ	ಜಯಲಕ್ಷ್ಮಿ ಬಾ ಹಸೆಗೆ	[illegible]
೧೮೪೨೯	ಕೆಳದಿ ರಾಮೇಶ	ಗಿರಿರಾಜಕುಮಾರಿ ದೇವಿ	[illegible]

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೪೩೦	ಕೆಳದಿ ರಾಮೇಶ	ಮಂಜುಳಾ ಪಾಶಾಂಕುಶದ	೨೫
೧೮೪೩೧	ಕೆಳದಿ ರಾಮೇಶ	ಶ್ರೀ ಗಣಪತಿಗೆರಗಿ ಶಾರದೆಯನು	೨೫
೧೮೪೩೨	ಗುರುತುಲಶೀರಾಮ	ಬಾಲಚಂದ್ರನ ರೂಪಾ	೩೫-೧
೧೮೪೩೩	ಗುರುರಾಮವಿಠಲ	ಕರೆವರು ನಿನ್ನ ಹಸೆಗೆ ಪರಮಪುರುಷ ನೀನೆಂದು	೩೪
೧೮೪೩೪	ಗುರುರಾಮವಿಠಲ	ಬಿಜಯಂಗೈವುದು ಹಸೆಗೀಗಾ	೩೪
೧೮೪೩೫	ಗುರುರಾಮವಿಠಲ	ಹಸೆಗೆ ಬಾರಯ್ಯ ಹದಿನಾಲ್ಕು ಲೋಕದೊಡೆಯ	೩೪
೧೮೪೩೬	ಗುರುರಾಮವಿಠಲ	ಹಸೆಗೆ ಬಾರೆ ಬಿಸಜಮಂದಿರೆ	೩೪
೧೮೪೩೭	ಗುರುರಾಮವಿಠಲ	ಹಸೆಗೆ ಬಾರೆ ಶುಭಾಂಗಿವಿಭಾವ	೩೪
೧೮೪೩೮	ಗುರುರಾಮವಿಠಲ	ಹಸೆಗೆ ಬಾರೆ ಸುಂದರಿ ಓ	೩೪
೧೮೪೩೯	ಗುರುರಾಮವಿಠಲ	ಹಸೆಗೆ ಬಾರೈ ರಾಮಾ	೩೪
೧೮೪೪೦	ಗುರುರಾಮವಿಠಲ	ಹಸೆಗೆ ಬಾರೈ ಶ್ರೀರಾಮ ಹನುಮ ಪ್ರೇಮ	೩೪
೧೮೪೪೧	ಗುರುರಾಮವಿಠಲ	ಹಸೆಗೆ ಬಾರೊ ಹರುಷ ಬೀರೊ ಬಿಸಜನಾಭನೇ	೩೪
೧೮೪೪೨	ಗುರುರಾಮವಿಠಲ	ಹಸೆಗೇಳೈ ಶ್ರೀನಿವಾಸ ಮೂರ್ತಿ ನೀ	೩೪
೧೮೪೪೩	ಗೋಪಾಲಕೃಷ್ಣವಿಠಲ	ಏಳು ಪುರಂದರ ಗುರುವರ ಇನ್ನು	೧೮-೩
೧೮೪೪೪	ಗೋವಿಂದ	ಹಸೆಗೆ ಬಾರೊ ಕುಸುಮನಯನ	೨೪
೧೮೪೪೫	ಚಿದಾನಂದ	ನಿರ್ಮಲ ಹೃದಯ ಮಂಟಪದೊಳಗೆ	೨೫
೧೮೪೪೬	ಜಗನ್ನಾಥವಿಠಲ	ಪಂಕಜನಯನ ಪಾವನ್ನ ಸುಖ	೧೪
೧೮೪೪೭	ಜಗನ್ನಾಥವಿಠಲ	ಮಂಗಳವೆನ್ನಿರೆ ಮಾರಮಣಗೆ ಮಂಗಳವೆನ್ನಿರೆ	೧೪
೧೮೪೪೮	ಜಗನ್ನಾಥವಿಠಲ	ಹಸೆಗೇಳೊ . . . ಶಂಕರದೇವ	೧೪
೧೮೪೪೯	ಜಾಜೀಶ	ಬಾರೆ ದೇವಿ ಭಾಗ್ಯವಂತೆ	೩೫-೧
೧೮೪೫೦	ಜಾಜೀಶ	ಬಾಲಗೋಪಾಲ ಹಸೆಗೆ ಲೀಲೆಯಿಂದ	೩೫-೧
೧೮೪೫೧	ತುಪಾಕಿ ವೆಂಕಟರಮಣ	ಶ್ರೀ ರಮಣಿವರ ಹರಿಯೆ ಬಾ	೨೩
೧೮೪೫೨	ತುಪಾಕಿ ವೆಂಕಟರಮಣ	ಶ್ರೀನಿಕೇತನ ಸರ್ವಪತಿಯು ಸಕಲ ಸಜ್ಜನಾನಂದ ಕರುಣಾ	೨೩
೧೮೪೫೩	ತುಪಾಕಿ ವೆಂಕಟರಮಣ	ಶ್ರೀವಲ್ಲಭ ಸರ್ವೇಶ್ವರ ಬಾ ಪಾವನ	೨೩
೧೮೪೫೪	ಧೇನುಪುರೀಶ	ಭೂಮಿ ನಂದಿನಿ ಬಾರೌ ಹಸೆಗೆ	೩೩
೧೮೪೫೫	ಧೇನುಪುರೀಶ	ಮದಗಜಗಾಮಿನಿ ವಿಧುಮುಖಿ ಬಾ ಸೀತೆ	೩೩
೧೮೪೫೬	ಧೇನುಪುರೀಶ	ರಘುನಂದನ ಬಾರೈ ಹಸೆಗೆ ನಿಗಮಾಗಮಾ	೩೩
೧೮೪೫೭	ಧೇನುಪುರೀಶ	ರಘುರಾಮಚಂದ್ರ ಬಾರೈ ಹರೆ ದಿವ್ಯ ರತ್ನಪೀಠಕೆ	೩೩
೧೮೪೫೮	ಧೇನುಪುರೀಶ	ಶ್ಯಾಮಸುಂದರಿ ಭೂಮಿನಂದಿನಿ	೩೩
೧೮೪೫೯	ಧೇನುಪುರೀಶ	ಹಸೆಗೆ ಬಾ ಬಿಸಜಾಕ್ಷಿಯೆ ಕುಸುಮ	೩೩
೧೮೪೬೦	ಪ್ರಸನ್ನವೆಂಕಟ	ಶ್ರೀವೈಕುಂಠಕೆ ಸರಿಯಾದ ದ್ವಾರಕೆಯಲಿ ಶ್ರೀಕೃಷ್ಣ	೪
೧೮೪೬೧	ಪ್ರಾಣೇಶವಿಠಲ	ವಾಸುಕಿಶಯನನೆ ವೆಂಕಟಗಿರಿ	೧೭
೧೮೪೬೨	ಪ್ರಾಣೇಶವಿಠಲ	ವೇದ ಉದ್ಧರಿಸಿದಾ ಮತ್ಸ್ಯಾವತಾರನೆ	೧೭
೧೮೪೬೩	ಪ್ರಾಣೇಶವಿಠಲ	ಶೋಭನ ಶ್ರೀನಾರಾಯಣಗೆ ಇಂದಿರೆಗೆ	೧೭
೧೮೪೬೪	ಪ್ರಾಣೇಶವಿಠಲ	ಶೋಭಾನ ಪಾಂಡುರಂಗಗೆ	೧೭
೧೮೪೬೫	ಭೀಮೇಶಕೃಷ್ಣ	ಬಾರೆ ದ್ರೌಪದಿ ಭಾಳ ಹರುಷದಿಂದ ಸುಂದರಿ	೧೯
೧೮೪೬೬	ಮಾಂಗಿರಿರಂಗ	ಬಾರೈ ನಂದನ ಕಂದನೆ	೩೫-೨
೧೮೪೬೭	ಮೋಹನವಿಠಲ	ಇಂದಿರಾದೇವಿಯ ರಮಣ ಬಾ	೧೩
೧೮೪೬೮	ರಮೆಯರಸ	ದೊರೆಗಳಿಗೆ ಯದುಪತಿ ಗರವು	೭
೧೮೪೬೯	ರಮೆಯರಸ	ಬರುವ ಸಂದಣಿ ಭಾಳೆ ಭಾಳವೆ	೭
೧೮೪೭೦	ರಮೆಯರಸ	ಬಾರೊ ಬಾರೊ ಕೃಷ್ಣ ಬಾರೊ	೬
೧೮೪೭೧	ರಮೆಯರಸ	ಶೋಭಾನವೆನ್ನಿರ ಶ್ರೀದೇವಿ ಅರಸಗೆ	೬
೧೮೪೭೨	ವಿಜಯವಿಠಲ	ರಾಮ ಜಾನಕೀರಮಣ ರಾಜೀವದಳನಯನ	೯-೧

ಅನು. ಸಂ.	ಹರಿದಾಸರ ಅಂಕಿತ	ಕೀರ್ತನೆಯ ಆರಂಭ	ಆಕರ ಸಂಪುಟ
೧೮೪೭೩	ಶಾಮಸುಂದರವಿಠಲ	ಕುಂದಣದ ಹಸೆಗೆ	೩೦
೧೮೪೭೪	ಶಾಮಸುಂದರವಿಠಲ	ತ್ವರಿತದಿ ಬಾರೆ ಸಖಿ	೩೦
೧೮೪೭೫	ಶಾಮಸುಂದರವಿಠಲ	ಹಸೆಗೀಗ ಬಾರೆ ಸಖಿಯೆ	೩೦
೧೮೪೭೬	ಶೇಷಗಿರೀಶ	ಏಳು ಪೀಠಕೆ ನಳಿನಸಂಭವೆ	೧೮-೪
೧೮೪೭೭	ಶೇಷಗಿರೀಶ	ಏಳು ಪೀಠಕೇ ನಳಿನದಳಾಂಬಕೇ	೧೮-೪
೧೮೪೭೮	ಶೇಷಗಿರೀಶ	ಬಾರೆಂದು ಹಸೆಗೆ	೧೮-೪
೧೮೪೭೯	ಶೇಷಗಿರೀಶ	ಬೇಡಿಕೊಂಬೆ ಹಸೆಗೇಳಲಿ	೧೮-೪
೧೮೪೮೦	ಶೇಷಗಿರೀಶ	ರಾಜಿಸುವೀ ಪೀಠಕೀಗ ದಯಮಾಡು	೧೮-೪
೧೮೪೮೧	ಶೇಷವಿಠಲ	ಅಂಗನೆ ರುಕ್ಮಿಣಿ ಮಂಗಳ ಪೀಠಕೆ	೧೫
೧೮೪೮೨	ಶ್ರೀ-ಶ್ರೀನಿವಾಸ	ಬಾರೊ ಹರಿ ಬಾರೊ ದೊರಿ ಬಾ ಬಾ	೧೮-೪
೧೮೪೮೩	ಶ್ರೀ-ಶ್ರೀನಿವಾಸ	ಭಾಮಿನಿ ಬಾರೆಲೆ	೧೮-೪

ಹುಟ್ಟುಹಬ್ಬದ ಪ್ರಾರ್ಥನೆ

೧೮೪೮೪	ತುಪಾಕಿ ವೆಂಕಟರಮಣ	ಕ್ಷಿಪ್ರ ಪ್ರಸಾದಕರ ದೊರೆಯೆ	೨೩
೧೮೪೮೫	ತುಪಾಕಿ ವೆಂಕಟರಮಣ	ದಯದೋರೊ ದೀನಾನುಕಂಪಾ	೨೩
೧೮೪೮೬	ತುಪಾಕಿ ವೆಂಕಟರಮಣ	ಸತ್ಯ ಸಂಕಲ್ಪಾನುಸಾರದಿ ನಡಸುವದುತ್ತಮ	೨೩

ಪ್ರಕರಣ ೭

ಸಮಗ್ರ ಹರಿದಾಸ ಸಾಹಿತ್ಯದ ಸಾರ–ಸಮೀಕ್ಷೆ

(ಸಮೀಕ್ಷಾ ಪ್ರಬಂಧ)

ಹರಿದಾಸ ಸಾಹಿತ್ಯಕ್ಕೆ ಹಲವಾರು ಮುಖಗಳಿವೆ. ಈ ಸಮೀಕ್ಷೆಯಲ್ಲಿ ವಿಷಯಕ್ಕೆ ಮಹತ್ವವನ್ನು ಕೊಡಲಾಗಿದೆ. ಹಾಗೆ ನೋಡಿದರೆ ಅದೇ ಮುಖ್ಯ. ದಾಸರು ವ್ಯಕ್ತಪಡಿಸಿದ ಭಕ್ತಿ–ಭಾವ ಹಾಗೂ ಸಂಗೀತ–ಸಾಧನೆ ಇವುಗಳಿಗಿಂತ ಹರಿದಾಸರು ಯಾವ ಯಾವ ವಿಷಯಗಳನ್ನು ಪ್ರತಿಪಾದಿಸಿದ್ದಾರೆನ್ನುವುದನ್ನು ತಿಳಿದಷ್ಟೂ ಆ ಸಾಹಿತ್ಯದ ಮಹೋನ್ನತಿ ಚೆನ್ನಾಗಿ ಮನದಟ್ಟಾಗುವುದು.

ಕರ್ನಾಟಕ ಸರಕಾರದವರು ೧೯೯೯ ರಲ್ಲಿ ದಾಸಸಾಹಿತ್ಯದ ೫೦ ಸಂಪುಟಗಳನ್ನು ಹೊರತಂದಿರುವರಷ್ಟೆ. ಅದರಲ್ಲಿ ೧೩೫ ಜನ ದಾಸರ ಹದಿನೈದೂವರೆ ಸಾವಿರ ಕೀರ್ತನೆಗಳಿವೆ. ಆದರೆ ಇನ್ನೂ ೨೫ ಜನ ದಾಸವರ್ಯರು ಉಳಿದುಕೊಂಡಿದ್ದಾರೆ. ಅವರ ಕೃತಿಗಳು ಸುಮಾರು ೨೫೦೦ ಆಗಬಹುದು. ಅಂದಾಗ ಒಟ್ಟಿನ ದಾಸಸಾಹಿತ್ಯ ಹದಿನೆಂಟು ಸಾವಿರ ಕೀರ್ತನೆಗಳುಳ್ಳದ್ದು ಎಂದಂತಾಯಿತು.

ಇನ್ನೂ ಒಂದು ಕಾರಣದಿಂದ ಅದು ಅಸಮಗ್ರ, ಎಂದರೆ ೧೯೦೦ನೆಯ ಇಸವಿಗಿಂತ ಅನಂತರ, ಎಂದರೆ ೨೦ನೆಯ ಶತಮಾನದಲ್ಲಿ ಜನಿಸಿ ಕೀರ್ತನೆಗಳನ್ನು ರಚಿಸಿದವರನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಹಾಗೆ ಮಾಡುವುದು ಆಗಿನ ಸಮಿತಿಗೆ ಅನಿವಾರ್ಯವೂ ಆಗಿತ್ತು.

ಭಾರತದ ಬೇರೆ ಭಾಷಾ ಪ್ರದೇಶಗಳಲ್ಲಿ ಭಕ್ತಿಸಾಹಿತ್ಯ ಇದ್ದೇ ಇದೆ. ಉದಾಹರಣೆಗೆ ಮಹಾರಾಷ್ಟ್ರದ ಸಂತ ವಾಙ್ಮಯ. ಆದರೆ ಕನ್ನಡ ದಾಸಸಾಹಿತ್ಯದಷ್ಟು ವಿಸ್ತಾರವೂ ವೈವಿಧ್ಯಮಯವೂ ಆಗಿಲ್ಲ. ಅಲ್ಲದೆ, ಆಧುನಿಕ ಯುಗದಲ್ಲಿ ಹಿಂದಿನ ರೀತಿಯಂತೆ ಮುಂದುವರಿದಿಲ್ಲ. ಈ ಮಾತು ವೀರಶೈವ ವಚನಸಾಹಿತ್ಯಕ್ಕೂ ಅನ್ವಯಿಸುತ್ತದೆ. ಬಸವಣ್ಣನವರ ಕಾಲದಲ್ಲಿ ರಚಿತವಾದ ವಚನಸಾಹಿತ್ಯ ಅದೇ ಕ್ರಮದಲ್ಲಿ ಮುಂದುವರಿಯಲಿಲ್ಲ. ಈಗಿನದು ಆಧುನಿಕ ರೀತಿಯ ವಚನಸಾಹಿತ್ಯ.

ದಾಸಸಾಹಿತ್ಯದ ಆರಂಭ ಎಂದಿನಿಂದ? ಯಾರು ಏನೇ ಹೇಳಲಿ. ಅಧಿಕೃತವಾಗಿ ಅದು ಆರಂಭವಾದದ್ದು ೧೫ನೆಯ ಶತಮಾನದ ಶ್ರೀಪಾದರಾಜರಿಂದಲೇ. ೧೩ನೆಯ ಶತಮಾನದ ಶ್ರೀ ನರಹರಿತೀರ್ಥರ ಹೆಸರಿನಲ್ಲಿ ನಾಲ್ಕು ಹಾಡುಗಳನ್ನು ಹೆಸರಿಸಿ ಅವರೇ ಆರಂಭಕಾರರು ಎಂದು ಹೇಳುವುದುಂಟು. ಅದು ತಪ್ಪು ಎಂದು ಹೇಳುವುದಕ್ಕೆ ಬಲವಾದ ಕಾರಣಗಳಿವೆ.

೧೫ನೆಯ ಶತಮಾನದ ಶ್ರೀಪಾದರಾಯರೇ ಆರಂಭಕಾರರು ಎಂಬುದಾಗಿ 'ನಮಃ ಶ್ರೀಪಾದರಾಯ, ನಮಸ್ತೇ ವ್ಯಾಸಯೋಗಿನಃ ....' ಈ ಶ್ಲೋಕವನ್ನು ಜನ ನಂಬಿಕೊಂಡು ಬಂದಿದ್ದಾಗ, ೧೯೩೨ರಲ್ಲಿ ಪ್ರಕಟವಾದ 'ಕರ್ನಾಟಕ ಭಕ್ತವಿಜಯ'ದಲ್ಲಿ ನರಹರಿತೀರ್ಥರ ಹೆಸರಿನಲ್ಲಿ ಎರಡು ಹಾಡುಗಳು ಕಾಣಿಸಿಕೊಂಡಿವೆ. ೧೯೫೯ರಲ್ಲಿ ಕರ್ನಾಟಕ ಹರಿದಾಸ ಪತ್ರಿಕೆಯಲ್ಲಿ ಅವರ ಹೆಸರಿನಲ್ಲಿ ನಾಲ್ಕು ಹಾಡುಗಳು!

ನರಹರಿತೀರ್ಥರು ಶ್ರೀಪಾದರಾಜರಿಗಿಂತ ನೂರು ವರ್ಷಗಳಷ್ಟು ಹಿಂದಿನವರಾದ್ದರಿಂದ, ದಾಸಸಾಹಿತ್ಯದ ಪ್ರಾಚೀನತೆಯನ್ನು ವೈಭವೀಕರಿಸುವ ದೃಷ್ಟಿಯಿಂದಲೋ ಏನೋ ಆ ಹಾಡುಗಳ ಸ್ವರೂಪ ಎಂಥದೆಂದು ಯೋಚಿಸದೆ ನರಹರಿತೀರ್ಥರೇ ಪ್ರಥಮ ಹರಿದಾಸರೆಂದು ಹೇಳುವುದು ವಾಡಿಕೆಯಾಗಿ ಬಿಟ್ಟಿತು. ಅವರ ಚರಿತ್ರೆಯನ್ನು ಬರೆದ ಒಬ್ಬ [illegible]ರಂತೂ ತಮ್ಮ ಪುಸ್ತಕದ ಮುಖಪುಟದಲ್ಲಿಯೇ ಹಾಗೇ ಸಾರಿದ್ದಾರೆ.

ಆದರೆ ಆ ನಾಲ್ಕು ಕೀರ್ತನೆಗಳನ್ನು ಅಭ್ಯಸಿಸಿ, ನರಹರಿತೀರ್ಥ ಜೀವನದ ಬಗ್ಗೆಯೂ ಆಲೋಚನೆ ಮಾಡಿ ದಾಸಸಾಹಿತ್ಯದ ಈರ್ವರು ಅಧ್ವರ್ಯಗಳಾದ ಕೆ. ಕೃಷ್ಣರಾವ್ ಹಾಗೂ ಜಿ. ವರದರಾಜರಾಯರು ಅವು ನರಹರಿತೀರ್ಥರು ರಚಿಸಿದವುಗಳಲ್ಲೆಂದು ಸ್ಪಷ್ಟವಾಗಿ ಹೇಳಿರುವರು. ಅವುಗಳನ್ನು ವ್ಯಾಸರಾಯರು ಹಾಗೂ ಪುರಂದರದಾಸರ ಕೃತಿಗಳೊಂದಿಗೆ ಹೋಲಿಸಿ ನಾನು ಅದೇ ನಿರ್ಣಯಕ್ಕೆ ಬಂದದ್ದಿದೆ. (ಉದಯವಾಣಿ ೧-೫-೨೦೦೪ರ ಸಂಚಿಕೆ)

ಮೇಲಣ ಒಟ್ಟಿನ ಅಭಿಪ್ರಾಯಗಳನ್ನು ಹೀಗೆ ಸಂಕ್ಷೇಪಿಸಬಹುದು:

ಅ) ಈ ಕೃತಿಗಳ ಕನ್ನಡ ಭಾಷೆ ನುಡಿಗಟ್ಟು ೧೯ನೆಯ ಶತಮಾನದ್ದು (ಉದಾಹರಣೆಗೆ, ಯಾರಿಗಾಗಿ ಧಾವತಿ ಪಡುವೆ, ಅಂಬುಜನಾಭಗೆ ದೂರಾಗಿ).

ಆ) ಎಷ್ಟೋ ಕಡೆಗೆ ಅರ್ಥದ ಅಸ್ಪಷ್ಟತೆ ಹಾಗೂ ಅಪಾರ್ಥದ ಪದ-ವಾಕ್ಯಗಳಿವೆ; ಶಿಥಿಲ ಬಂಧದ ಜೊತೆಗೆ ನೀರಸ ಗದ್ಯ ಎನಿಸುವಂತಿದೆ (ಉದಾಹರಣೆಗೆ - ತನ್ನ ಬೈದರೆ ಜೀವಕ್ಕೆ ಮುನಿವಾ; ಸತಿಯ ಮ್ಯಾಲೆ ಬೈದರೆ ಬೈವಾ; ನಂಟನೆ ನಿನಗೆ ಭಂಟ ನಾನಲ್ಲವೆ)

ಇ) ಶ್ರೀ ಶ್ರೀಪಾದರಾಜರು, ಶ್ರೀ ವ್ಯಾಸರಾಯರು ಹಾಗೂ ಪುರಂದರದಾಸರು ಸ್ವತಂತ್ರ ಪ್ರತಿಭೆ ಉಳ್ಳವರು. ಅವರು ಇನ್ನೊಬ್ಬ ದಾಸರ ವಿಚಾರಗಳನ್ನು ನೇರವಾಗಿ ತೆಗೆದುಕೊಳ್ಳುವವರು ಸರ್ವಥಾ ಅಲ್ಲ. ಆದರೆ ಅವರ ವಿಚಾರಗಳು ನರಹರಿತೀರ್ಥರ ಹೆಸರಿನ ಹಾಡುಗಳಲ್ಲಿ ಬಂದಿವೆ - ಅದೂ ತಪ್ಪುತಪ್ಪಾಗಿ. ಶ್ರೀಪಾದರಾಜರ ಒಂದು ಹಾಡಿನಲ್ಲಿ "ಎಡವಿದ್ದ ಮಾತ್ರದಿ ಹೆಣ್ಣಾದ ಗೌತಮನ ಮಡದಿ ನಿನ್ನವಳೇನೋ" ಎಂಬುದಾಗಿ ನಿಂದಾಸ್ತುತಿರೂಪವಾಗಿ ಅಹಲ್ಯೆಯನ್ನು ಪ್ರಸ್ತಾಪಿಸಿದ್ದಾರೆ. ನರಹರಿತೀರ್ಥರ ಹೆಸರಿನ ಹಾಡಿನಲ್ಲಿ ಇದೇ ವಿಚಾರವು "ಕೆಟ್ಟ ಅಹಲ್ಯೆಯ ದಿಟ್ಟಿ ಪಾಲಿಸದ । ಕೊಟ್ಟಳು ಅವಳೇನು ಬಿಟ್ಟದ್ದು ನಾನೇನು" ಎಂಬುದಾಗಿ ಬಂದಿದೆ. ಇಂಥ ಹಲವಾರು ಕೆಳಮಟ್ಟದ ಹಾಗೂ ಶಿಥಿಲಬಂಧದ ಹಾಡುಗಳಿವೆ.

ಈ) ಪುರಂದರದಾಸರು, ನರಹರಿತೀರ್ಥರನ್ನು ಸ್ತುತಿಸಿದ ತಮ್ಮ ಕೀರ್ತನೆಯಲ್ಲಿ ನರಹರಿತೀರ್ಥರು ಕೀರ್ತನೆಗಳನ್ನು ರಚಿಸಿದ್ದಾರೆಂಬುದನ್ನು ಹೇಳಿಯೇ ಇಲ್ಲ. ಆಮೇಲಿನ ಬೇರೆ ಹರಿದಾಸರೂ ಈ ಅಂಶವನ್ನು ತಂದೇ ಇಲ್ಲ - ೧೯ನೇ ಶತಮಾನದವರೆಗೆ. ಇತ್ತ ಶ್ರೀಪಾದರಾಜರಿಗೆ ವ್ಯಾಸರಾಯರಿಗೆ ಇದ್ದಂತೆ ನರಹರಿತೀರ್ಥರಿಗೆ ಶಿಷ್ಯ ಪರಂಪರೆಯೂ ಇರಲಿಲ್ಲ.

ಉ) ಈ ಹಾಡುಗಳಿಗೆ ಅಂಕಿತವಾಗಿರುವ 'ನರಹರಿ-ರಘುಪತಿ' ಎಂಬ ಜೋಡುನುಡಿಯೂ ಸಮಂಜಸವೆನಿಸುವುದಿಲ್ಲ. ಒಂದು ಹಾಡಿನಲ್ಲಿ ಬರಿಯೆ ನರಹರಿ ಎಂದಿದೆ. ನಿಶ್ಚಿತವಾಗಿ ಅಂಕಿತ ಇಲ್ಲದಿರುವುದರಿಂದ ಅಂಕಿತಪಲ್ಲಟವಾಗಿದೆ ಎಂದೆನಿಸುತ್ತದೆ.

ಊ) ಶ್ರೀ ನರಹರಿತೀರ್ಥರ ಮಾತೃಭಾಷೆ ಕನ್ನಡವಲ್ಲ. ಉಡುಪಿಯಲ್ಲಿ ನೆಲೆ ನಿಂತು ಕನ್ನಡವನ್ನು ರೂಢಿಸಿಕೊಂಡು ಹಾಡುಗಳನ್ನು ರಚಿಸಿದ್ದರು ಎಂದು ಊಹಿಸುವುದಾದರೆ, ಅವರು ಪೀಠವನ್ನು ಸ್ವೀಕರಿಸಿ, ಬದುಕಿದ್ದದ್ದು ಕೆಲವೇ ವರ್ಷ ಮಾತ್ರ.

ಋ) ಕಡೆಯದಾಗಿ ಈ ನಾಲ್ಕು ಹಾಡುಗಳನ್ನು ಪ್ರಕಟಿಸಿದ ಗೊರಾಬಾಳ ಹನುಮಂತರಾಯರೇ ಒಂದು ಹಾಡಿನ ವಿಚಾರದಲ್ಲಿ "ಇದು ನರಹರಿತೀರ್ಥರದೆಂದು ಹೇಳುವುದು ಸಂಶಯಾಸ್ಪದವಾಗಿದೆ" ಎಂದಿದ್ದಾರೆ.

ತಾತ್ಪರ್ಯ - ಈ ಹಾಡುಗಳ ರಚನೆಯು ೧೯ನೆಯ ಶತಮಾನದ್ದಾಗಿದೆ. ೧೪ನೆಯ ಶತಮಾನದ್ದಲ್ಲ. ತಿಳಿಯಬೇಕಾದ ಮಾತೆಂದರೆ ಶ್ರೀಮದಾಚಾರ್ಯರ ನೇರ ಶಿಷ್ಯರೂ ಮಹಾಮಹಿಮರೂ ಆದ ಅವರ ಹೆಸರಿನಲ್ಲಿ ಇಂಥ ಕೆಳಮಟ್ಟದ ಹಾಡುಗಳ ಕರ್ತೃತ್ವನ್ನು ಲೇಪಿಸಿದರೆ ಅವರಿಗೆ ಅವಮಾನ ಮಾಡಿದಂತೆಯೇ ಸೈ.

ಅಂತೂ ೧೫ನೆಯ ಶತಮಾನದಿಂದ ಪರಿಗಣಿಸಿದರೆ ದಾಸಸಾಹಿತ್ಯಕ್ಕೆ ೬೦೦ ವರ್ಷಗಳ ಪರಂಪರೆ ಇದೆ. ಅದರಲ್ಲಿಯೂ ಏರು-ಇಳಿವುಗಳಿವೆ. ೧೬ ಮತ್ತು ೧೮ನೆಯ ಶತಮಾನಗಳು ಅದರ ಉಚ್ಛ್ರಾಯ ಕಾಲಗಳು. ಸರ್ವಶ್ರೀ ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರು, ಪ್ರಸನ್ನವೆಂಕಟದಾಸರು, ಮಹಿಪತಿರಾಯರು, ವಿಜಯದಾಸರು, ಗೋಪಾಲದಾಸರು ಮತ್ತು ಜಗನ್ನಾಥದಾಸರಂಥ ದಾಸಶ್ರೇಷ್ಠರು ಬಾಳಿ-ಬದುಕಿದ್ದ ಕಾಲವದು.

ಇನ್ನು ೧೯ನೆಯ ಶತಮಾನದಲ್ಲಿ ಹರಿದಾಸರ ಸಂಖ್ಯೆ ಅಗಣಿತ. ಮೇಲೆ ಹೆಸರಿಸಿದವರ ಯೋಗ್ಯತೆಯವರು ಅಲ್ಲಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾರೆ.

ಹರಿದಾಸಸಾಹಿತ್ಯದಲ್ಲಿ ತ್ರಿಮತಸ್ಥರೂ ಇದ್ದಾರೆ, ಮೂರು-ನಾಲ್ಕು ಜನ ಗೌಡಸಾರಸ್ವತರೂ ಇದ್ದಾರೆ. ಆದರೂ ೬೦೦೦ರಷ್ಟು ಕೀರ್ತನೆಗಳು ದ್ವೈತಿಗಳಿಂದ ರಚಿತವಾದವುಗಳು. ಅದ್ವೈತಿಗಳಲ್ಲಿ ಚಿದಾನಂದರು, ತಿಮ್ಮಪ್ಪದಾಸರು, ಕವಿಪರಮೇಶ್ವರ ಮುಂತಾದವರು ಹೆಸರಿಸಬೇಕಾದವರು. ಶ್ರೀವೈಷ್ಣವರಲ್ಲಿ ರಂಗದಾಸರು, ಆಸೂರಿ ರಾಮಸ್ವಾಮಿ ಅಯ್ಯಂಗಾರ್ ಮೊದಲಾದವರು ನೆನೆಯುವಂತಹರು. 'ರಾಮದಾಸ' ಮುದ್ರಿಕೆಯ ಓರ್ವ ಖ್ಯಾತನಾಮ ಹರಿದಾಸರು ಆಗಿಹೋದರು. ಅವರು 'ಬಡೇಸಾಬ' ರಾಮದಾಸರು!

ಹರಿದಾಸ ಮಹಿಳೆಯರು ಈ ಸಮೀಕ್ಷೆಯಲ್ಲಿ ಸದ್ಯಕ್ಕೆ ೧೫ ಜನರಿದ್ದಾರೆ. ಮಹಿಳೆಯರಿಗೆ ಭಕ್ತಿ-ಭಾವವೆನ್ನುವುದು ಅತಿ ಸಹಜ. ಇನ್ನೂ ಅದೆಷ್ಟೋ ಮಹಿಳಾ ಕೀರ್ತನೆಗಳು ಇವೆ. ಆದರೆ ಬೆಳಕಿಗೆ ಬಂದಿಲ್ಲವೆನ್ನುವುದು ಸತ್ಯ.

'ಇವರು ಹರಿದಾಸರು' ಎಂದು ಯಾರನ್ನು ಅಧಿಕೃತವಾಗಿ ತಿಳಿಯಬೇಕು? ದೀಕ್ಷೆಯನ್ನು ಹೊಂದಿ ಅಂಕಿತ / ಮುದ್ರಿಕೆ ಇಟ್ಟುಕೊಂಡವರು ಹರಿದಾಸರೇನೋ ಹೌದು. ಆದರೆ ಅವರೆಲ್ಲ ಕೀರ್ತನೆಗಳನ್ನು ರಚಿಸಿದವರಲ್ಲ. ಅಂತೂ ಕೆಲವು ದಾಸ ಪೀಳಿಗೆಗಳೇ ಇವೆ. ವಿಜಯದಾಸರಿಂದ ಇದನ್ನು ಗುರುತಿಸಬಹುದು. ಮೈಸೂರು ಸೀಮೆಯಲ್ಲಿ ಮುದ್ದುಮೋಹನದಾಸರ ಪೀಳಿಗೆ ಇನ್ನೊಂದು ಉದಾಹರಣೆ. ಇಂತಹ ಪೀಳಿಗೆಗಳಿಂದಾಗಿ ೨೦ನೆಯ ಶತಮಾನದಲ್ಲಿಯೂ ದಾಸಸಾಹಿತ್ಯವು ಮುಂದುವರಿದದ್ದನ್ನು ನಾವು ಕಾಣುತ್ತೇವೆ.

ದಾಸಾಧ್ಯಯನ

ಈ ದಾಸಾಧ್ಯಯನವು ಬೆಳೆದು ಬಂದ ಬಗೆಯನ್ನು ಮೊದಲು ನೋಡುವಾ. ಆಶ್ಚರ್ಯದ ಸಂಗತಿ ಎಂದರೆ ಇದನ್ನು ಆರಂಭಿಸಿದವರು ಬಾಸಲ್ ಮಿಶನ್ನಿನ ಮೂವರು ಜರ್ಮನಿಗರು. ಕ್ರಿಶ. ೧೮೪೮ರಷ್ಟು ಹಿಂದೆ ವೈಗ್ಲೆ ಎಂಬವನು ಜರ್ಮನ್ ಪತ್ರಿಕೆ ZDMGಯಲ್ಲಿ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಪ್ರಕಟಿಸಿದನು. ಅದರಲ್ಲಿ ದಾಸಸಾಹಿತ್ಯದ ಬಗ್ಗೆ ಮೆಚ್ಚಿಕೆಯ ಮಾತುಗಳನ್ನು ಹೇಳಿದ್ದಾನೆ ಮತ್ತು ಅವು ಪರ್ಶಿಯನ್ ಗಝಲ್‌ಗಳಂತೆ ಕೇಳುವುದಕ್ಕೆ ಮೋಹಕವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾನೆ. 'ಇಂಥ ಸೊಗಸಾದ ಹಾಡುಗಳ ಒಂದು ಮಾದರಿಯನ್ನು ಕೊಡದೇ ಮುಂದುವರಿಯಲಾರೆ' ಎನ್ನುತ್ತ ಪುರಂದರದಾಸರ 'ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ' ಎಂಬುದನ್ನು ಜರ್ಮನ್ ಭಾಷೆಗೆ ಅನುವಾದಿಸಿ ಕೊಟ್ಟಿದ್ದಾನೆ.

ವೈಗ್ಲೆನ ಸಮಕಾಲೀನನಾದ ಮೊಗ್ಲಿಂಗ್ ಎಂಬವನು ದಾಸವಾಣಿಗೆ ಮನಸೋತು ೪೦೦ಕ್ಕೂ ಮಿಕ್ಕಿದ ಕೀರ್ತನೆಗಳನ್ನು ಸಂಗ್ರಹಿಸಿದ್ದನು. ಅಧರಲ್ಲಿಯ ೧೦೦ ಹಾಡುಗಳನ್ನು ಆಯ್ದು ಕಲ್ಲಚ್ಚಿನಲ್ಲಿ ಮುದ್ರಿಸತೊಡಗಿದಾಗ ಅಕಸ್ಮಾತ್ ಒಂದು ಹಸ್ತಪ್ರತಿ - ಕೀರ್ತನೆಗಳುಳ್ಳದ್ದು ಸಿಕ್ಕಿತಂತೆ. ಅದನ್ನೂ ಸೇರಿಸಿ 'ದಾಸರ ಪದಗಳು' ಎಂಬ ಹೆಸರಿನಿಂದ ಪ್ರಕಟಿಸಿದನು. ೧೮೫೦ರಲ್ಲಿ ಪ್ರಕಟವಾದ ಈ ಗ್ರಂಥವೇ ದಾಸಸಾಹಿತ್ಯದ ಮೊದಲ ಪ್ರಕಟನೆಯಾಗಿದೆ. ಹಾಗೆಸೇರ್ಪಡೆಯಾದ ಆ ಕೀರ್ತನೆಗಳು ಅದುವರೆಗೆ ನಾವು ಹೆಸರನ್ನೇ ಕೇಳಿದ್ದಿರದ 'ವರಾಹತಿಮ್ಮಪ್ಪ' ಎಂಬ ಮುದ್ರಿಕೆಯ ನೆಕ್ಕಾರು ಕೃಷ್ಣದಾಸರವು.

ಮೊಗ್ಲಿಂಗ್ ನಿವೃತ್ತನಾಗಿ ಸ್ವದೇಶಕ್ಕೆ ಹೋದ ಮೇಲೂ ದಾಸ ಸಾಹಿತ್ಯದಲ್ಲಿ ತನ್ನ ಆಸಕ್ತಿಯನ್ನು ಮುಂದುವರಿಸಿದನು. ೨೪ ಕೀರ್ತನೆಗಳನ್ನು ಅನುವಾದಿಸಿ ಟೀಕೆ-ಟಿಪ್ಪಣಿಯೊಡನೆ ಅದೇ ZDMG ಪತ್ರಿಕೆಯಲ್ಲಿ ಪ್ರಕಟಿಸಿದನು (೧೮೬೨).

ಕನ್ನಡ ನಿಘಂಟನ್ನು ಸಿದ್ಧಪಡಿಸಿದ ಕಿಟೆಲ್ ಹೆಸರನ್ನು ಚೆನ್ನಾಗಿ ಬಲ್ಲೆವು. ಅವನು ಮೊಗ್ಲಿಂಗ್ ಸಂಗ್ರಹಿಸಿ ಇಟ್ಟಿದ್ದ ಎಲ್ಲ ಕೀರ್ತನೆಗಳನ್ನು ಅಭ್ಯಾಸ ಮಾಡಿ, ಇಂಡಿಯನ್ ಎಂಟಿಕ್ವೆರಿ ಎಂಬ ಪತ್ರಿಕೆಯಲ್ಲಿ 'Karnataka Vaishnava Dasas' ಎಂಬ ಹೆಸರಿನ ವಿಮರ್ಶಾತ್ಮಕ ಲೇಖನವನ್ನು ಪ್ರಕಟಿಸಿ ನಮ್ಮ ದೇಶದ ಇತರ ಜನರಿಗೆ, ದಾಸಸಾಹಿತ್ಯವನ್ನು ಪರಿಚಯಿಸಿದನು. ಇದೇ ದಾಸ ಸಾಹಿತ್ಯದ ಪ್ರಥಮ ವಿಮರ್ಶನ ಲೇಖನ. ತಮ್ಮ ಕ್ರೈಸ್ತಮತದ ಯಾವುದೇ ಪ್ರಸ್ತಾಪವನ್ನು ತರದೇ ಕೇವಲ ದಾಸ ಸಾಹಿತ್ಯದ ಮಹೋನ್ನತಿಯನ್ನು ಮನಗಂಡಿದ್ದ ಈ ಮೂವರ ಗೈಮೆ ನಿಜವಾಗಿಯೂ ಪ್ರಶಂಸನೀಯವಾದದ್ದು.

ಒಳನಾಡಿನಲ್ಲಿ ದಾಸ ಸಾಹಿತ್ಯವನ್ನು ಮೊತ್ತ ಮೊದಲು ಬೆಳಕಿಗೆ ತಂದವರು ಬೆಳಗಿಸಿದವರು ಪಾವಂಜೆ ಗುರುರಾಯರು (೧೯೧೫-), 'ಕರ್ಣಾಟಕ ಹರಿಭಕ್ತ ವಿಜಯ'ದ ಲೇಖಕರಾದ ಬೇಲೂರು ಕೇಶವದಾಸರು (೧೯೩೨) ಹಾಗೂ ಸುಬೋಧ ರಾಮರಾಯರು. ಈ ಗ್ರಂಥದಲ್ಲಿ ಮೇಲುನೋಟಕ್ಕೆ ಹರಿದಾಸರ ಚರಿತ್ರೆಗಳೇ ಮುಖ್ಯ ಎನಿಸಿದರೂ ದಾಸಸಾಹಿತ್ಯದ ಬಗ್ಗೆ ಜನಸಾಮಾನ್ಯರಲ್ಲಿ ಆಸಕ್ತಿ, ಆದರಾಭಿಮಾನ ಮೂಡಿದ್ದು ಈ ಗ್ರಂಥದಿಂದಲೇ. ಇತ್ತ ಉತ್ತರ ಕರ್ನಾಟಕದಲ್ಲಿ ಬೆಂಗೇರಿ ಹುಚ್ಚರಾಯರು (೧೯೨೮) ಮತ್ತು ಕರಮರಕರ/ಕಲಮದಾನಿಯವರು ಇಂಗ್ಲಿಷ್‌ನಲ್ಲಿ ದಾಸಸಾಹಿತ್ಯವನ್ನು ವಿವೇಚಿಸಿದ್ದು ಒಂದು ವಿಶೇಷ (೧೯೩೯). ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿಸಿದರು. ಇನ್ನು ಸಮಗ್ರ ದಾಸ ಸಾಹಿತ್ಯದ ಚರಿತ್ರೆಯ ದೃಷ್ಟಿಯಿಂದ ಎರಡು ಗ್ರಂಥಗಳು, ರಾ.ಸ್ವಾ. ಪಂಚಮುಖಿ ಹಾಗೂ ಎಚ್.ಕೆ. ವೇದವ್ಯಾಸಾಚಾರ್ಯ ಇವರಿಂದ ರಚಿತವಾದವುಗಳು ೧೯೬೦ರ ದಶಕದಲ್ಲಿ ಹೊರಬಂದವು. ಆದರೆ ಇವು ಅರ್ಧ ಶತಮಾನಕ್ಕೂ ಹಿಂದಿನವು. ಆ ಮುಂದಿನ ಐವತ್ತು ವರ್ಷಗಳಲ್ಲಿ ಅನೇಕ ಹರಿದಾಸರ ಹಾಗೂ ಅವರ ಕೃತಿಗಳ ಶೋಧವಾಗಿವೆ.

ಆದರೆ ದಾಸಸಾಹಿತ್ಯದ ಚರಿತ್ರೆಗಳು ಭಾಗಶಃ ಹೊರಬಂದಿವೆ. ಅವನ್ನು ಕಾಲಮಾನದ ಪ್ರಕಾರವಾಗಲೀ ಪ್ರಾದೇಶಿಕವಾಗಿಯಾಗಲೀ ಗುರುತಿಸಬಹುದು. ಉದಾ.ಗೆ ೧೯ನೆಯ ಶತಮಾನದ ದಾಸಸಾಹಿತ್ಯ ವಿಮರ್ಶೆಯು ಹೊರಬಂದಿದೆ. ಅದರಂತೆ ಪ್ರಾದೇಶಿಕವಾಗಿ ರಾಯಚೂರು ಜಿಲ್ಲೆಯ ಬಗ್ಗೆಯೂ ಪಿಎಚ್.ಡಿ ಮಟ್ಟದಲ್ಲೇ ಅಧ್ಯಯನವಾಗಿದೆ.

ಇತ್ತ ಒಬ್ಬೊಬ್ಬ ಹರಿದಾಸರನ್ನು ಎತ್ತಿಕೊಂಡು ಪೂರ್ಣಸ್ವರೂಪದ ಅಧ್ಯಯನ ಮಾಡಿದವರಿದ್ದಾರೆ. ಅದು ಆರಂಭವಾದದ್ದು ಪ್ರಸನ್ನವೆಂಕಟದಾಸರ ಮೇಲಿನ ಸಂಪ್ರಬಂಧದಿಂದ (೧೯೫೫). ಅದರಂತೆ ವಾದಿರಾಜರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರ ಮೇಲೆಯೂ ಆಳವಾದ ಅಧ್ಯಯನವನ್ನು ಕೈಕೊಂಡವರಿದ್ದಾರೆ. ಗುರುರಾಮವಿಠಲರು ಮತ್ತು ಗುರುಗೋವಿಂದ ದಾಸರ ಬಗ್ಗೆಯೂ ಮೌಲಿಕವಾದ ಅಧ್ಯಯನ ನಡೆದಿದೆ.

ಈ ಬಗೆಯ ಅಧ್ಯಯನದಲ್ಲಿ ಪುರಂದರದಾಸರಿಗೆ ಅಗ್ರಪಟ್ಟ. ಅನ್ನಮಾರ್ಯ, ತುಕಾರಾಮ, ಬಸವಣ್ಣ, ಏಕನಾಥ, ಸೂರದಾಸ ಮೊದಲಾದ ಸಂತ ಶರಣರಿಗೆ ಅವರನ್ನು ಹೋಲಿಸಿ ಹೊಸ ಅಂಶಗಳನ್ನು ಬೆಳಕಿಗೆ ತಂದದ್ದು ಸಂತೋಷದ ವಿಷಯ. ಈ ಬಗೆಯ ತೌಲನಿಕ ಅಧ್ಯಯನ ನಡೆದಷ್ಟೂ ದಾಸಸಾಹಿತ್ಯದ ಮೌಲಿಕತೆ ಬೆಳಕಿಗೆ ಬರಬಲ್ಲದು. ದಾಸಸಾಹಿತ್ಯ ಮತ್ತು ಶರಣ ಸಾಹಿತ್ಯ ಎರಡನ್ನೂ ಹೋಲಿಸಿ ಇಂಗ್ಲಿಷ್‌ನಲ್ಲಿ ರಚಿತವಾದ ಕೃತಿಯನ್ನೂ ಇಲ್ಲಿ ಪ್ರಸ್ತಾಪಿಸಬಹುದು.

ತಾತ್ವಿಕವಾಗಿ ದಾಸ ಸಾಹಿತ್ಯದ ಲಕ್ಷಣಗಳನ್ನು ವಿವೇಚಿಸಿದ ಗ್ರಂಥಗಳದ್ದು ಇನ್ನೊಂದು ವಿಶೇಷ. ಅಂಥ ವಿಷಯಗಳೆಂದರೆ ದಾಸಸಾಹಿತ್ಯದಲ್ಲಿ ಸೃಷ್ಟಿ ಪ್ರಕರಣ, ಭಕ್ತಿಯ ಸ್ವರೂಪ, ದ್ವೈತ ಪ್ರಮೇಯಗಳು ಮತ್ತು ಸೈದ್ಧಾಂತಿಕ ನೆಲೆ – ಇವನ್ನು ಹೆಸರಿಸಬಹುದಾಗಿದೆ.

ಭಾಷಿಕ ದೃಷ್ಟಿಯಿಂದ ಪುರಂದರದಾಸರ ಪದಗಳನ್ನು ವಿಶ್ಲೇಷಿಸಿದ ಈಚಿನ ಗ್ರಂಥವೆಂದರೆ 'ತಂಬೂರಿ ಮೀಟಿದವ'. ಸಾಮಾನ್ಯವಾಗಿ ಮತಪರ ದೃಷ್ಟಿಯಿಂದ ಇಲ್ಲವೇ ಐತಿಹಾಸಿಕ ನಿಲುವಿನಿಂದ ದಾಸ ಸಾಹಿತ್ಯವನ್ನು ಅಭ್ಯಸಿಸಿದ್ದು ಹೆಚ್ಚಾಗಿ ಕಂಡುಬರುತ್ತದೆ. ಆದರೆ ಭಾಷಿಕ ದೃಷ್ಟಿಯಿಂದ ಅದರ ಅಭಿವ್ಯಕ್ತಿಯ ಸ್ವರೂಪವನ್ನು ವಿವೇಚಿಸಿದ ಅಪೂರ್ವ ಗ್ರಂಥ 'ತಂಬೂರಿ ಮೀಟಿದವ'. ತೀರ ಈಚೆಗೆ ಪ್ರಕಟನೆಯಾದ 'ದಾಸಸಾಹಿತ್ಯದ ಶಬ್ದಶಿಲ್ಪ'ವೂ ವಿಶಿಷ್ಟ ರೀತಿಯ ದಾಸಾಧ್ಯಯನವಾಗಿದೆ.

ಇದಿಷ್ಟು ಪ್ರಾಸ್ತಾವಿಕ-ಪರಿಚಯದ ಮಾತಾಯಿತು. ಇನ್ನೀಗ ವಿಷಯಗಳನ್ನು ಪರಿಶೀಲಿಸೋಣ. ಈ ಕೆಳಗೆ ದಾಸವಿಷಯಗಳ ಸ್ಥೂಲಪಟ್ಟಿಕೆಯನ್ನು ಕೊಟ್ಟಿದೆ. ಇದು ವೈಷ್ಣವೀಯ ತಾರತಮ್ಯವನ್ನು ಪೂರ್ಣತಃ ಪಾಲಿಸಿದ್ದಲ್ಲ – ಎಂಬುದು ತಿಳಿದಿರಲಿ.

೧. ಶ್ರೀಹರಿಯ ಸ್ತುತಿ

೨. ಶ್ರೀಹರಿಯ ವಿವಿಧ ಅವತಾರಗಳು

೩. ದೇವತೆಗಳು / ಋಷಿಗಳು

೪. ರುದ್ರದೇವರು

೫. ಸ್ತ್ರೀದೇವತೆಗಳು

೬. ಪೌರಾಣಿಕ ವ್ಯಕ್ತಿ-ವಿಷಯಗಳು

೭. ತೀರ್ಥಕ್ಷೇತ್ರಗಳು

೮. ಆತ್ಮನಿವೇದನೆ

೯. ಗುರುನಮನ (ವಿದ್ಯಾಗುರುಗಳು, ಯತಿಗಳು, ಹಿರಿಯ ಹರಿದಾಸರು)

೧೦. ಮತ-ಧರ್ಮಗಳು

೧೧. ಸಾಮಾಜಿಕ, ಲೌಕಿಕ ವಿಷಯಗಳು

೧೨. ಲೋಕನೀತಿ / ನೀತಿಬೋಧೆ

೧೩. ಮುಂಡಿಗೆಗಳು

೧೪. ಸಾಹಿತ್ಯಿಕ ಮೌಲ್ಯದ ಕೀರ್ತನೆಗಳು

೧೫. ದಾಸಸಾಹಿತ್ಯದಲ್ಲಿ ಆಧುನಿಕತೆ

೧. ಶ್ರೀಹರಿ / ಹರಿಭಕ್ತಿ

ಮೊದಲಿಗೆ ಶ್ರೀಹರಿ. ಆತ ಸರ್ವವ್ಯಾಪಿ; ದಾಸಸಾಹಿತ್ಯದಲ್ಲಿಯೂ ಸರ್ವವ್ಯಾಪಿ! ಅಂದರೆ ಪರಮಾತ್ಮನ ಅಸ್ತಿತ್ವವು ಪ್ರತ್ಯಕ್ಷವಾಗಿ - ಪರೋಕ್ಷವಾಗಿ ಯಾವ ರೀತಿಯಲ್ಲೇ ಆಗಲಿ ಇರದೇ ಇದ್ದ ಕೀರ್ತನೆಗಳೇ ಇಲ್ಲ. ಶ್ರೀಹರಿಯ ನೇರವಾದ ಸ್ತುತಿಯಲ್ಲದೆ ಹರಿದಾಸರು ನಾನಾ ರೀತಿಯಲ್ಲಿ ಅವನನ್ನು ಕಲ್ಪಿಸುತ್ತಾರೆ. ಇಲ್ಲವೇ ಅವನ ಅವತಾರಗಳ ಯಾವುದಾದರೂ ಒಂದು ಅಂಗವನ್ನು ಎತ್ತಿಕೊಂಡು ವರ್ಣಿಸುತ್ತಾರೆ.

ದೇವರನ್ನು ಆನೆಯಾಗಿ ಕಲ್ಪಿಸಿ ಅವನ ಮಹಿಮೆಯನ್ನು ವರ್ಣಿಸಿದುದೊಂದು ವಿಶೇಷ. ಕನಕದಾಸರು ಒಂದಲ್ಲ ಮೂರು ಹಾಡುಗಳಲ್ಲಿ ಈ 'ಆನೆ'ಯನ್ನು ತಂದಿದ್ದಾರೆ. ಇದೊಂದು ಮಾದರಿ :

"ಆನೆ ಬರುತಿದೆ ಎಲ್ಲರೂ ನೋಡಿರಿ
ಒಂದಾನೆಯ ಕೊಂದ ಮದ್ದಾನೆ
ದಶಕಂಠನ ಕೊಂದು ಅನುಜಗೆ ಪಟ್ಟ ಕಟ್ಟಿದ
ದಶರಥಸುತನೆಂಬ ಮದ ಸೊಕ್ಕಿದಾನೆಮರಿಯಾನೆಯೂ ಇದೆ!
ಬಾಲೇಂದು ಮುಖದ ಮರಿಯಾನೆ
ಕದ್ದು ಪಾಲನು ಕುಡಿದ ಆನೆ"

ಹಾಲು, ಬೆಣ್ಣೆಗಳನ್ನು ಕದ್ದು ತಿನ್ನುತ್ತಿದ್ದ ಈ ಮರಿಯಾನೆ ಯಾವುದೆಂದು ಬೇರೆ ಹೇಳಬೇಕಾಗಿಲ್ಲ.

ಶ್ರೀ ವಾದಿರಾಜರು ಶ್ರೀಹರಿಯನ್ನು ಕುದುರೆಯೊಂದಿಗೆ ಸಮೀಕರಿಸಿ ಕೀರ್ತನೆ ರಚಿಸಿದ್ದಾರೆ. ಉಪಮೆಯಾಗಿ ಅಲ್ಲ. ಶ್ರೀಹಯಗ್ರೀವದೇವರು ಅವರ ಉಪಾಸ್ಯದೇವತೆ ತಾನೇ:

"ಕುದುರೆ ಬಂದಿದೆ ಚೆಲುವ ಕುದುರೆ
[illegible]
[illegible] ವರನೆಂದು ಒಲಿದು ಬರುವ ಕುದುರೆ

ಹಲ್ಲಣವಿಲ್ಲದೆ ನಿಲ್ಲದು ಕುದುರೆ
ಒಲ್ಲದು ಕಡಿವಾಣ ಕುದುರೆ
ಬೆಲ್ಲ ಕಡಲೆ ಮೆಲ್ಲುವ ಕುದುರೆ
ಚೆಲುವ ಹಯವದನನೆಂಬೊ ಕುದುರೆ"

ಶ್ರೀಹರಿಯ ವಿವಿಧ ಅಂಗಾಂಗಗಳ ಮೂಲಕ ಅವನನ್ನು ಹರಿದಾಸರು ಸ್ತುತಿಸಿದ್ದಾರೆ. ಕೈ-ಕಾಲುಗಳ ನಖವನ್ನೂ ಸಹ ವರ್ಣಿಸಿದ್ದಾರೆ. ಹಿರಣ್ಯಕಶಿಪುವಿನ ಹೊಟ್ಟೆಯನ್ನು ಸೀಳಿದುದು ನಖದಿಂದಲೇ ಅಲ್ಲವೆ? ವಿಶೇಷತಃ ಅವನ ಪಾದದ್ವಯ ಮಹಿಮೆ. ಬಾಲಕೃಷ್ಣನ ಕಾಲದಿಂದಲೇ ಅಂಥ ಸಂದರ್ಭಗಳು ಬಂದಿವೆ. ಆಗ ಶಕಟ ರಕ್ಕಸನನ್ನು ಒದೆದು ಕೊಂದದ್ದು, ಕಾಳೋರಗನ ಮೇಲೆ ನಿಂತು ಕುಣಿದದ್ದು, ಶಿಲೆಯಾದ ಅಹಲ್ಯೆಯನ್ನು ಕಾಲಿನಿಂದ ತಟ್ಟಿ ಜೀವಕಳೆ ತಂದದ್ದು, ಒಂದೇ ಎರಡೇ ಇಂಥ ಪಾದಸ್ಪರ್ಶ ಪ್ರಸಂಗಗಳು ಪರಿಚಿತವಾದವುಗಳು. ಆದರೆ 'ಮರಣ ತಪ್ಪಿಸಿ ಪಾರ್ಥನಿಗೆ ಕರ್ಣನ ನಾಚಿಸಿದ ಪಾದ' ಅನ್ನುವ ಸಂದರ್ಭ ಪರಿಚಿತವಲ್ಲ. ಪ್ರಸಂಗ ಹೀಗಿದೆ: ಮಹಾಭಾರತದ ಯುದ್ಧದಲ್ಲಿ ಕರ್ಣನು ಅರ್ಜುನನ ಮೇಲೆ ಸರ್ಪಾಸ್ತ್ರವನ್ನು ಬಿಟ್ಟ. ಅದರಿಂದ ಅರ್ಜುನನ ಪ್ರಾಣಕ್ಕೆ ಅಪಾಯ ನಿಶ್ಚಿತ. ಆಗ ಪಾರ್ಥ-ಸಾರಥಿಯು ತನ್ನ ಪಾದದಿಂದ ನೆಲವನ್ನು ಒತ್ತಿದ. ಅದರಿಂದಾಗಿ ರಥವು ತುಸು ಕೆಳಗಿಳಿಯಿತು. ಕರ್ಣನ ಸರ್ಪಾಸ್ತ್ರವು ಅರ್ಜುನನ ಎದೆಗೆ ಗುರಿಯಾಗದೇ ಕಿರೀಟಕ್ಕೆ ತಾಕಿ ಅದನ್ನು ಕೆಳಗೆ ಉರುಳಿಸಿತು. ಕರ್ಣನಿಗೆ 'ತನ್ನ ಗುರಿ ತಪ್ಪಿತಲ್ಲಾ' ಎಂದು ನಾಚಿಕೆಯಾಯಿತಂತೆ.

ಶ್ರೀಹರಿಯನ್ನು ಸ್ತುತಿಸುವಲ್ಲಿ ಈ ಹಿಂದೆ ಅವನು ಯಾರು ಯಾರನ್ನು ಉದ್ಧರಿಸಿದನೋ, ಅವರುಗಳ ಅಂದರೆ ಅಂಬರೀಷ, ಗಜೇಂದ್ರ, ಧ್ರುವ, ಪ್ರಹ್ಲಾದ, ಮೊದಲಾದವರನ್ನು ತಪ್ಪದೇ ಹರಿದಾಸರು ಪ್ರಸ್ತಾಪಿಸಿದ್ದಾರೆ.

ಭಗವಂತನಿಗೆ ಹಲವಾರು ನಾಮವೈವಿಧ್ಯಗಳಿವೆ. ಒಂದೊಂದೂ ವಿಶಿಷ್ಟ ಸಂದರ್ಭದ ಅರ್ಥವುಳ್ಳವುಗಳು : ಅನಂತಪದ್ಮನಾಭ, ಸೂರ್ಯನಾರಾಯಣ, ವರದರಾಜ, ಬಿಂದುಮಾಧವ ಮುಂತಾದವು. ಅವನ್ನು ಬರೀ ವಿಶೇಷಣಗಳಾಗಿ ಬಳಸಿಲ್ಲ. ಅದರಂತೆ ಸಂಧ್ಯಾವಂದನೆ ಮಾಡುವಾಗ ಕೇಶವಾದಿ ಅರ್ಚಾವತಾರದ ನಾಮಗಳು ಬರುತ್ತವೆ. ಅವು ಒಂದೊಂದಕ್ಕೂ ವಿಶೇಷ ಅರ್ಥವನ್ನು ಕೊಟ್ಟು ರಚಿಸಿದ ಕೀರ್ತನೆಗಳಿವೆ. ಹೀಗೆ ಕೇಶವಾದಿ ನಾಮಮಹಿಮೆಯನ್ನು ಹೇಳುವ ಕೀರ್ತನೆಗಳನ್ನು ದಾಸರು ರಚಿಸಿದ್ದಾರೆ. ಆದರೆ ಹರಪನಹಳ್ಳಿ ಭೀಮವ್ವ ಕೇಶವಾದಿ ನಾಮಗಳನ್ನು ಬಳಸಿಕೊಂಡ ರೀತಿಯು ಕೌಟುಂಬಿಕ ಹಿನ್ನೆಲೆಯುಳ್ಳದ್ದಾಗಿದೆ. ಜನಿಸಿದ ಶಿಶುವಿಗೆ ಹೆಸರಿಡುವಾಗ ತೊಟ್ಟಿಲಿನ ಆ ಕಡೆಗೆ ಒಬ್ಬ ಮುತ್ತೈದೆ ಈ ಬದಿಗೆ ಇನ್ನೊಬ್ಬಳು ನಿಂತು ಮಗುವನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಆ ವಿವಿಧ ಹೆಸರುಗಳೇ ಒಂದೊಂದಾಗಿ ಬರುವ ೨೬ ಕೇಶವ, ನಾರಾಯಣಾದಿ ನಾಮಗಳು.

ಒಂದಿಷ್ಟು ಆತ್ಮೀಯವೆನಿಸುವ ರೀತಿಯಲ್ಲಿ ರಚಿಸಿದ ಪದ್ಯಗಳೆಂದರೆ ಉದಯಗೀತೆಗಳು. ಕೆಲವು ಈಗಲೂ ಜನಗಳ ಬಾಯಿಯಲ್ಲಿ ಕೇಳಬರುತ್ತವೆ. ಆದರೆ ಶ್ರೀಹರಿಯ ಶಯನಗೀತೆಗಳು! ಅಂದರೆ ಅವನು ನಿದ್ರಿಸಬೇಕಾದ ಸಮಯವನ್ನು ಕಲ್ಪಕತೆಯಿಂದ ವರ್ಣಿಸಿದವುಗಳು ದಾಸಸಾಹಿತ್ಯದ ಅಪೂರ್ವ ರಚನೆಗಳಾಗಿವೆ. ಒಬ್ಬ ದಾಸರು ನೆರೆದಿದ್ದ ಭಕ್ತರಿಗೆ ಹೇಳುತ್ತಾರೆ - "ನೀವಿನ್ನು ನಿಮ್ಮ ನಿಮ್ಮ ಮನೆಗೆ ಹೋಗಿರಿ. ಸಮಸ್ತ ವಿಶ್ವವನ್ನು ಸಂಭಾಳಿಸುವ ಜವಾಬ್ದಾರಿಯನ್ನು ಹೊತ್ತು, ಭಗವಂತನು ಹತ್ತವತಾರ ತಾಳಿ ನಿಮ್ಮಗಳ ಕೋರಿಕೆಯನ್ನೆಲ್ಲ ಪೂರೈಸಿದ್ದಾನಲ್ಲ!"

"ಎರಗಿದವರಿಗಿಷ್ಟವೀಯುತ ಸರ್ವತ್ರ ಚರಿಸುವವನೀತನ ಶ್ರಮ ಶಮವಾಗಲಿ" ಎಂದು ಒಬ್ಬ ದಾಸರು ಹೇಳುತ್ತಾರೆ. ಇನ್ನೊಬ್ಬ ದಾಸರು ಭಗವಂತನಿಗೇ ಶಯನಿಸಹೇಳುತ್ತಾರೆ! 'ಭಕ್ತಾದಿಗಳೆಲ್ಲ ತಂತಮ್ಮ ಮನೆಗೆ ಹೋಗಿ ಮಲಗಿದ್ದಾರೆ. ನೀನಿನ್ನು ನಿದ್ರೆಗೈಯ್ಯಬಹುದು' - ಎಂದು! ಇದಕ್ಕೆ ಪ್ರತಿಯಾಗಿ ಬಡೇಸಾಬ ರಾಮದಾಸರು - "ನೀನು ಮಲಗಿಬಿಟ್ಟರ ಹೇಗಪ್ಪಾ? ಕಷ್ಟದಲ್ಲಿರುವವರು ಪ್ರತಿಕ್ಷಣವೂ ಇದ್ದಾರೆ. ಅವರನ್ನು ಉದ್ಧರಿಸುವವರು ಯಾರು?" ಎಂದು ಆತಂಕವನ್ನು ವ್ಯಕ್ತಪಡಿಸಿದ್ದಾರೆ. (ಜೋ ಜೋ ಮತ್ತು ಲಾಲಿಪದಗಳೂ ಶಯನಗೀತೆಯ ಸದರಿನಲ್ಲಿ ಬರಬಹುದೇನೋ).

ದೇವರನ್ನು ಮಗುವಾಗಿ ಕಂಡ ವಿದ್ಯಾಪ್ರಸನ್ನತೀರ್ಥರಂತೂ ನಾವೀನ್ಯದಿಂದ ಕೂಡಿದ ಕಲ್ಪಕತೆಯನ್ನು ವ್ಯಕ್ತಪಡಿಸಿದ್ದಾರೆ. ಚಿಕ್ಕಮಗುವನ್ನು ಮಲಗಿಸುವುದಕ್ಕೆ ಚುಕ್ಕು ಬಡಿಯುವುದು ಒಂದು ಕ್ರಮ. ಆಗ ಕತೆಯನ್ನೋ. ಲಾಲಿಯ ಪದವನ್ನೊ

ಹೇಳಬಹುದು. ಆಗಲೂ ಮಗು ಮಲಗುವುದಿಲ್ಲ. ಹೀಗಿರುತ್ತ ಬಾಲಕೃಷ್ಣನನ್ನು ಮಲಗಿಸುವುದು ಎಂದಾದರೂ ಸಾಧ್ಯವೇ? ಶಿಶುವಾಗಿ ಇದ್ದಾಗಿನಿಂದಲೇ ಅನೇಕ ಸಾಹಸಗಳನ್ನು ಗೈದವ. ಆದರೂ ಮಲಗಿಸಹೋಗಿ ಚುಕ್ಕು ಬಡಿದಾಗ "ಮಲಗಪ್ಪ ನನ್ನ ಕೈ ನೋಯುತ್ತಿದೆಯಪ್ಪ" ಎಂಬ ತಾಯ್ತನವನ್ನು ವಿದ್ಯಾಪ್ರಸನ್ನತೀರ್ಥರು ವ್ಯಕ್ತಪಡಿಸಿದ್ದಾರೆ.

೨. ಶ್ರೀಹರಿಯ ವಿವಿಧ ಅವತಾರಗಳು

ಶ್ರೀಹರಿಯ ದಶಾವತಾರಗಳನ್ನು ಎಲ್ಲ ಹರಿದಾಸರು ಒಂದಿಲ್ಲೊಂದು ರೀತಿಯಲ್ಲಿ ತಂದಿದ್ದಾರೆ. ಆಗೆಲ್ಲ ತಮ್ಮ ಕಲ್ಪನೆಯನ್ನು ಸ್ವಚ್ಛಂದವಾಗಿ ಹರಿಬಿಡುವಲ್ಲಿ ಅವರು ಉತ್ಸಾಹಿಗಳು. ಹರಿದಾಸಸಾಹಿತ್ಯದ ಮೌಲ್ಯಮಾಪನಕ್ಕೆ ಇನ್ನೇನೂ ಬೇಡ; ದಶಾವತಾರಗಳ ವೈವಿಧ್ಯಮಯ ವರ್ಣನೆಗಳನ್ನು ನೋಡಿದರೆ ಸಾಕು.

ದಶಾವತಾರದ ಈ ಕೀರ್ತನೆಗಳು ೧೦-೧೫ ನುಡಿಗಳದ್ದಿರಬಹುದು; ಮೂರು ಅಥವಾ ಐದು ನುಡಿಗಳದ್ದೂ ಇರಬಹುದು. ಒಂದೇ ನುಡಿಯದ್ದೂ ಇವೆ. ಇದೊಂದು ಮಾದರಿ :

"ನೀರೊಳಡಗಿದನೆ ಮೋರೆ ಮುಚ್ಚಿದನೆ
ಕೋರೆ ತೋರಿದನೆ ಆ ಘೋರ ರೂಪಾದನೆ
ಬ್ರಹ್ಮಚಾರಿ ಎಂತೆಂದನೆ ಕ್ಷತ್ರಿಯರ ಸವರಿದನೆ
ವಾರಿಧಿಯ ದಾಟಿದನೆ ಬಹುಚಾರನೆನಿಸಿದನೆ
ನಾರೇರ ವ್ರತವಳಿದನೆ ಕುದುರೆ ಏರಿದ ಶ್ರೀಕೃಷ್ಣನೆ"

"ಅನಂತವಿಠಲ" ಮುದ್ರಿಕೆಯುಳ್ಳ ಇಪ್ಪತ್ತೊಂದನೆಯ ಶತಮಾನದ ಒಬ್ಬ ದಾಸರು ಕೇವಲ ಅರ್ಧ ನುಡಿಯಲ್ಲಿಯೇ ದಶಾವತಾರಗಳನ್ನು ರೂಪಿಸಿದ್ದಾರೆ!

"ಚರ-ವಾರಿಚರ ಸೂಕರ ನಾರಸಿಂಹನ
ಕರವ ಚಾಚಿದ ಶಿರವ ತರಿದ ಸೌರಿ ಶೌರಿಯನ
ಬರಿಯ ಮೈಯ ತುರಗವಾಹನ ರೂಪಾ ಅನಂತನ
ಮರುತಾಂತರ್ಗತ ಅನಂತವಿಠಲಾಭಿನ್ನನ"

ಶ್ರೀ ವಾದಿರಾಜರಿಗೆ ದಶಾವತಾರ ವಿಷಯವು ತುಂಬಾ ಮೆಚ್ಚಿನದು. ಒಂದಲ್ಲ ಹತ್ತಾರು ಕೀರ್ತನೆಗಳಲ್ಲಿ ವಿಧವಿಧವಾಗಿ ಈ ವಿಷಯವನ್ನು ಮಂಡಿಸಿದ್ದಾರೆ. ಪುರಂದರದಾಸರ ವರ್ಣನೆಗಳಂತೂ ವಿಶೇಷ ಕಲ್ಪನೆಯಿಂದ ಕೂಡಿದವುಗಳು. ಒಂದು ಹಾಡಿನಲ್ಲಿ, ದೇವರನ್ನು ಒಬ್ಬ ಸಾಲ ಕೊಂಡವನೆಂದು ಪರಿಭಾವಿಸುತ್ತಾರೆ. ಸಾಲಗಾರರು ವೇಷ ಮರೆಸಿ ತಪ್ಪಿಸಿಕೊಳ್ಳುತ್ತಾರಲ್ಲವೆ. ಭಗವಂತನು ಒಮ್ಮೆ ಮತ್ಸ್ಯ, ಇನ್ನೊಮ್ಮೆ ಮೀನ, ಮತ್ತೊಮ್ಮೆ ಗಿಡ್ಡ ಹೀಗೆಲ್ಲ ಅವತಾರ ತಾಳಿದ್ದಾದರೆ ತಪ್ಪಿಸಿಕೊಳ್ಳುವ ಸಾಲಗಾರನಂತಲ್ಲದೆ ಇನ್ನೇನು? ಅದೇ ಭಾವವನ್ನು ವಿಜಯದಾಸರು ಮುಂದುವರಿಸಿ 'ಎಲ್ಲೋ ಎಲ್ಲೋ ಎನ್ನ ಸಾಲ ತೀರಿಸದೆ, ನಿಲ್ಲೊ ನಿಲ್ಲೊ ನಿನ್ನ ಕಂಡ ಮ್ಯಾಲೆ ಬಿಡೆ; ಮೀನು ನಡೆದ ಹಾಗೆ ಹೆಜ್ಜೆ ಇಡ್ತೀಯ' - ಎಂದೆಲ್ಲ ಹೇಳುತ್ತಾರೆ. ಮತ್ಸ್ಯಾವತಾರ ತಾಳಿದ ಈ ದೊಡ್ಡ ಮೀನಿನ ಹೆಜ್ಜೆಯೂ ಹಾಗೇ ತಾನೆ?

ಕಲ್ಪಕತೆ ಅನ್ನೋದು ಈ ವಿಷಯದಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ "ನರಸಿಂಹವಿಠಲ"ರ ಕೀರ್ತನೆಯೊಂದನ್ನು ಉದಾಹರಿಸುವೆ. ರಾತ್ರಿ ಸಮಯ, ಶ್ರೀಕೃಷ್ಣ ಬಂದು ರುಕ್ಮಿಣಿಯ ಮನೆಯ ಬಾಗಿಲು ತಟ್ಟುತ್ತಾನೆ.

ಆಕೆ 'ಕದವ ತೆಗೆಯಲ್ಹ್ಯಾಂಗ ಮಧ್ಯರಾತ್ರಿಯಲಿ, ಚದುರಾ ನಿನ್ನ ಗುರುತು ಪೇಳು ಮೊತ್ತಮೊದಲಿನಲಿ' ಎನ್ನುತ್ತಾಳೆ.

ಶ್ರೀಕೃಷ್ಣ ಹೇಳುತ್ತಾನೆ :

"ನೀರ ಪೊಕ್ಕು ವೇದವನ್ನು ತಂದಿಹೆನೆ (ಮತ್ಸ್ಯಾವತಾರ)
ಭಾರವನ್ನು ಬೆನ್ನಿನಲಿ ಪೊತ್ತಿಹೆನೆ (ಕೂರ್ಮ)
ಕೋರೆಯ ಮ್ಯಾಲಿಳೆಯನಿಟ್ಟಿಹೆನೆ (ವರಾಹ)
ಕೋರೆದಾಡಿಯಿಂದ ದನುಜನಳ್ದಿಹೆನೆ (ನರಸಿಂಹ)"

ಹೀಗೇನೆ ಹತ್ತವತಾರಗಳನ್ನು ಹೇಳಿ "ನಾನು ತುಂಬಾ ದಣಿದಿದ್ದೇನೆ. ದಣಿದವರಿಗೆ ಒಂದಿಷ್ಟು ಪಾನೀಯ ಬೇಕಲ್ಲವೆ. ಅದಕ್ಕಾಗಿ ನಿನ್ನ ಅಧರಪಾನ ಬಯಸಿ ಬಂದಿದ್ದೇನೆ" ಎಂದು ರುಕ್ಮಿಣಿಗೆ ಹೇಳುತ್ತಾನೆ!

ಅಂದಹಾಗೆ ಈ ಹತ್ತು ಅವತಾರಗಳು ಯಾವ ಯಾವ ಸಂವತ್ಸರ, ಮಾಸ, ತಿಥಿಗಳಲ್ಲಿ ಜರುಗಿದುವು ಎಂಬುದನ್ನು ಓರ್ವ ದಾಸರು ವಿವರಿಸಿದ್ದಾರೆ. ಮತ್ಸ್ಯಾವತಾರವು ಕೃತಯುಗದಲ್ಲಿ ಪ್ರಭವ ಸಂವತ್ಸರ, ಮಾಘ ಶುದ್ಧ ಪ್ರತಿಪದೆಯ ದಿವಸ ಆಯಿತಂತೆ. ಹೀಗೆ ಕಲಿಯುಗದಲ್ಲಿ ಅವತರಿಸಿದ ಬೌದ್ಧಾವತಾರಕ್ಕೂ ತಿಥಿಯನ್ನು ಕೊಟ್ಟಿದ್ದಾರೆ. ಆಧಾರ? ಇದು ವೇದವ್ಯಾಸೋಕ್ತಿ ಎಂದು ಹೇಳುತ್ತಾರೆ.

ಬಂಗ್ಲೆ ನಾರಾಯಣ ಕಾಮತ ಎನ್ನುವ ಹರಿದಾಸರು ತರ್ಕಬದ್ಧವಾಗಿ ಹತ್ತು ಅವತಾರಗಳ ಕುಂಡಲಿಯನ್ನೂ ರಚಿಸಿದ್ದಾರೆ. ಆಧಾರ? ಆಯಾ ಅವತಾರಗಳ ಲಕ್ಷಣಗಳನ್ನು ಲಕ್ಷ್ಯಕ್ಕೆ ತಂದುಕೊಂಡು ತಾವೇ ರಚಿಸಿದ್ದಾರೆ. ಉದಾಹರಣೆಗೆ ನರಸಿಂಹ ಅವತಾರದ್ದು ಘೋರ ರೂಪ ಹಾಗೂ ಕ್ರೂರ ಕೃತ್ಯ. ಆ ಲೆಕ್ಕದಲ್ಲಿ ಈ ಅವತಾರವನ್ನು ರಾಹುಗ್ರಹವು ವೃಶ್ಚಿಕ ರಾಶಿಯಲ್ಲಿ ಇದ್ದಾಗ ತಾಳಿದುದಂತೆ. ಕೃಷ್ಣಾವತಾರದ ತಿಥಿಯ ಅವರ ಲೆಕ್ಕಾಚಾರವು ಮೋಜಿನದಾಗಿದೆ. ರವಿಯು ನಾರಿರಾಶಿಯಲ್ಲಿ ೯ನೇ ಸ್ಥಾನದಲ್ಲಿದ್ದರೆ, ಆಗ ಹುಟ್ಟಿದವರಿಗೆ ಪರನಾರಿಯರ ಕೂಡ ಸಂಬಂಧ ಜಾಸ್ತಿ. ಅಂತೆಯೇ ಅದು ಕೃಷ್ಣಾವತಾರದ ದಿನವಂತೆ!

ಶ್ರೀಹರಿಯ ಬೇರೆ ಕೆಲವು ಅಧಿಕೃತ ಅವತಾರಗಳೂ ಇವೆ. ಅವೆಂದರೆ ವೇದವ್ಯಾಸರು, ಹಯಗ್ರೀವ, ಧನ್ವಂತರಿ, ಮಹೀದಾಸ, ಕಪಿಲ ಮತ್ತು ಇನ್ನೂ ಕೆಲವು. ಇವರಲ್ಲಿ ದತ್ತಾತ್ರೇಯನೂ ಇದ್ದಾನೆ. ವೇದವ್ಯಾಸರು ಬೇರೆ ಬೇರೆ ಯುಗದಲ್ಲಿ ಒಂದೊಂದು ಅವತಾರ ತಾಳಿದವರು. ಈಗಿನದು ಬಾದರಾಯಣ ಅವತಾರ. ವಿಶೇಷತಃ ಅವರು ಶ್ರೀ ಮಧ್ವಾಚಾರ್ಯರಿಗೆ ಗುರುಸ್ಥಾನದಲ್ಲಿ ಇದ್ದವರಾದ್ದರಿಂದ ಅನೇಕ ಹರಿದಾಸರು ವೇದವ್ಯಾಸರನ್ನು ವಿಶೇಷ ಆದರದಿಂದ ವರ್ಣಿಸಿದ್ದಾರೆ.

ಧನ್ವಂತರಿಯೂ ಹಲವಾರು ದಾಸರ ಸ್ತುತಿಗೆ ಪಾತ್ರನಾಗಿದ್ದಾನೆ. ಆತ ಬರೀ ದೈಹಿಕರೋಗವನ್ನಲ್ಲ; ಅಂತರಂಗವನ್ನು ಪರಿಶುದ್ಧಗೊಳಿಸುವವನೂ ಆಗಿದ್ದಾನೆ. ಮಹೀದಾಸರ ಪರಿಚಯ ನಮಗೆ ಕಡಿಮೆಯೇ. ಪುರಾಣನಾಮ ಚೂಡಾಮಣಿಯಲ್ಲಿ ಆ ಹೆಸರಿಲ್ಲ! ಆದರೆ ಆತನ ಮೂಲ ಹೆಸರು ಐತರೇಯ ಋಷಿಯೆಂದು. ಐತರೇಯ ಉಪನಿಷತ್ತು ಅವನದೇ. ತಿರುಪತಿಯ ಶ್ರೀವೆಂಕಟೇಶ, ಶ್ರೀರಂಗಮ್‌ನ ಶ್ರೀರಂಗನಾಥ, ಪಂಢರಪುರದ ಶ್ರೀವಿಠಲ – ಇವರುಗಳೂ ಶ್ರೀಹರಿಯ ಅವತಾರಗಳೇ. ಅವರ ಆವಿರ್ಭಾವ ಮತ್ತು ಭಕ್ತೋದ್ಧಾರದ ಕಾರ್ಯಕ್ಕೆ ದಾಸಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನವಿದೆ.

ಆದರೆ ಹರಿದಾಸರು ಎಲ್ಲ ಅವತಾರಗಳಲ್ಲಿ ಕೃಷ್ಣಾವತಾರಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಅದರಲ್ಲಿಯೂ ಉಡುಪಿಯ ಶ್ರೀಕೃಷ್ಣ ಅದರಂತೆಯೇ ಬಾಲಕೃಷ್ಣನನ್ನು ಅನೇಕ ದಾಸರು ಬಾಯ್ತುಂಬ ಬಣ್ಣಿಸಿದ್ದಾರೆ. ಕಂಸನ ಸಂಹಾರಕ್ಕೆಂದು ಮಧುರೆಗೆ ಹೋಗುವವರೆಗೂ ಆತ ಬಾಲಕೃಷ್ಣನೆಂದೇ ಭಾಗವತದಲ್ಲಿ ವರ್ಣಿತನಾಗಿದ್ದಾನಲ್ಲವೆ? ಈ ಬಾಲಕೃಷ್ಣನನ್ನು ದಾಸರುಗಳು, ಒಬ್ಬರಿಗಿಂತ ಒಬ್ಬರು ತಾವೇನು ಕಡಿಮೆಯಲ್ಲ ಎಂಬ ರೀತಿಯಲ್ಲಿ ಬಣ್ಣಿಸಿದ್ದಾರೆ. ಮಗುವಾದ ಕೃಷ್ಣನ ಬಗ್ಗೆ ಏನೆಲ್ಲ ಕಲ್ಪನೆಗಳನ್ನು ಮಾಡಬಹುದು. "ಪ್ರಸನ್ನವೆಂಕಟ"ರಂತೂ ತಮ್ಮ ಮನೆಯ ಮೊಮ್ಮಗನಂತೆ ತಿಳಿದು ಸಂಬೋಧಿಸಿದ್ದಾರೆ:

"ನೀ ಅಳದಿರೂ, ಸುಮ್ಮನಿರಮ್ಮ, ಸುಮ್ಮನಿರು. ಬವ್ವ ಬಂದಾನಮ್ಮ ಕೃಷ್ಣಮ್ಮ"

ಬಾಲಕೃಷ್ಣನ ಬಗ್ಗೆ ಗೋಪಿಯರು ಅವನು ತಮ್ಮ ಮನೆಗೆ ಬಂದು ಹಾಲು-ಬೆಣ್ಣೆ ಕದಿಯುವನೆಂದೂ, ಎಳೆಯರ ಗೋಳು ಹುಯಿದುಕೊಳ್ಳುವನೆಂದೂ ಏನೆಲ್ಲ ಯಶೋದೆಗೆ ದೂರು ಹೇಳುವುದು ಭಾಗವತದಲ್ಲೇ ಬಂದಿದೆ. ದಾಸರು ಆ ವಿಚಾರವನ್ನು ಅತ್ಯಂತ ಸೊಗಸಾಗಿ ಹಿಗ್ಗಿಸಿದ್ದಾರೆ. ಯಶೋದೆಯು ತಾಯಿಯಾಗಿ ಹೇಳುವ ಮಾತುಗಳಿವು :

"ಮಗು ಹಸಿದಿದೆಯೆಂದು ಹಾಲು ಕಾಸಿಕೊಟ್ಟರೆ, ಅಯ್ಯೋ ಸುಡುತ್ತೆ ಎಂದು ಬೆದರುವವ ನಿಮ್ಮ ಮೊಸರು ಗಡಿಗೆಯನ್ನೊಡೆದು ಪೊಸ ಬೆಣ್ಣೆಯನ್ನು ಮೆಲುವನೆಂತೋ? ಮುದ್ದು ಕೊಡು ಎಂದು ಕರೆದರೆ ಅಂಬೆಗಾಲಿಕ್ಕುತ ಬರುವ; ಆದರೆ ಮುದ್ದು ಕೊಡಬೇಕೆನ್ನುವುದನ್ನೂ ಅರಿಯ. ಅಂಥವ ನಿಮ್ಮ ಮಕ್ಕಳ ಬೆನ್ನು ಗುದ್ದಿ ಓಡಿ ಬರುವನೆಂತೊ? ಎತ್ತಿಕೊಂಡು ಉಣಿಸಹೋದರೆ ಉಣಲೂ ಗೊತ್ತಿಲ್ಲದವ. ಇಂಥವ ಕತ್ತಲೆಯಲ್ಲಿ ನಿಮ್ಮನ್ನು ಹಿಡಿದು ಮೋಹಿಸುವನೆ? ಹೆತ್ತ ಮಕ್ಕಳಿಲ್ಲವೆ ನಿಮಗೆ? ಹೋಗಿ ಸುಮ್ಮನೆ" ಎಂಬುದಾಗಿ ಅದೇ ಪ್ರಸನ್ನವೆಂಕಟದಾಸರು ಯಶೋದೆಯಿಂದ ಹೇಳಿಸಿದ್ದಾರೆ

ಹೀಗೆ ಅಗಣಿತ ಸಂಖ್ಯೆಯಲ್ಲಿ ಬಾಲಕೃಷ್ಣನ ವರ್ಣನೆಯು ವೈವಿಧ್ಯಮಯವಾಗಿ ಮೂಡಿಬಂದಿದೆ. ಉಡುಪಿಯ ಯಾತ್ರೆಯನ್ನು ಕೈಗೊಂಡಾಗಲೂ ಬಾಲಕೃಷ್ಣನ ರೂಪವೇ ಹೆಚ್ಚಿನ ದಾಸರ ಲಕ್ಷ್ಯದಲ್ಲಿದ್ದಿತು. ಉಡುಪಿಯ ಆ ಬಾಲಕೃಷ್ಣನನ್ನು ಪ್ರಸ್ಥಾಪಿಸಿ ಶ್ರೀ ಮಧ್ವಾಚಾರ್ಯರು ದ್ವೈತಮತವನ್ನು ಸ್ಥಾಪಿಸಿದರಲ್ಲವೇ?

ಉಡುಪಿ, ತಿರುಪತಿ ಮತ್ತು ೧೭ನೆಯ ಶತಮಾನದಿಂದ ಮಂತ್ರಾಲಯ - ಇವು ಮೂರು ಯಾತ್ರಾಸ್ಥಳಗಳನ್ನು ಸಂದರ್ಶಿಸದ ಹರಿದಾಸರೇ ಇಲ್ಲ; ಆ ಬಗ್ಗೆ ಹಾಡುಗಳನ್ನು ರಚಿಸದೇ ಇಲ್ಲ. ಎರಡು-ಮೂರು ಸಲ ಹೋಗಿ ಬಂದರೆ ಅಷ್ಟು ಸಲವೂ ಕೀರ್ತಿಸಿದ್ದಾರೆ. ಉಡುಪಿಯ ಯಾತ್ರೆಯು ಮಾತ್ರ ಮೇಲೆ ಹೇಳಿದ ಕಾರಣದಿಂದ ಹೆಚ್ಚು ಆತ್ಮೀಯವಾಗಿರಲು ಸಾಧ್ಯ. ಕೆಲವು ದಾಸರುಗಳು ಸಂಸಾರ ಸಮೇತ ಹೋಗಿ ಬಂದಿದ್ದಾರೆ ಎನ್ನುವುದಕ್ಕೆ ಕೀರ್ತನೆಗಳಲ್ಲಿಯೇ ಉಲ್ಲೇಖವಿದೆ.

ಶ್ರೀಪಾದರಾಜರ ಕಾಲದಿಂದಲೇ ನಮಗೆ ಉಡುಪಿಯ ಶ್ರೀಕೃಷ್ಣನ ಮೇಲಿನ ಹಾಡುಗಳು ಕಣ್ಣಿಗೆ ಬೀಳುತ್ತವೆ. ವ್ಯಾಸರಾಯರಂತೂ ಸಿರಿಕೃಷ್ಣ ಎಂದೇ ಅಂಕಿತವನ್ನು ಇಟ್ಟುಕೊಂಡವರು. ಆಗ ಅವರ ಮನಸ್ಸಿನಲ್ಲಿ ಇದ್ದದ್ದು ಉಡುಪಿಯ ಕೃಷ್ಣನೇ. 'ತಾರಮ್ಮಯ್ಯ, ಉಡುಪಿಯ ಬಾಲಕೃಷ್ಣನ ತಂದು ತೋರಮ್ಮಯ್ಯ' ಎಂಬ ಅವರ ಹಾಡು ಚಿರಪರಿಚಿತ.

ಪುರಂದರ-ಕನಕದಾಸರಂತೂ ಹತ್ತಾರು ಬಾರಿ ಉಡುಪಿಯಾತ್ರೆ ಮಾಡಿರಬೇಕು. 'ಕೃಷ್ಣಮೂರ್ತಿ ಕಣ್ಣ ಮುಂದೆ ನಿಂತಿದ್ದಂತಿದೆ' ಎಂಬ ಕೀರ್ತನೆಯಲ್ಲಿ ಪುರಂದರದಾಸರು ಕಂಡದ್ದು ಬರೀ ಮೂರ್ತಿಯನ್ನಲ್ಲ. ಹೇಳುತ್ತಾರೆ -

"ಉಂಗುರು ಉಡಿದಾರ ಉಡಿಘಂಟೆ ನಾ ಕಂಡೆ
ಧಿಮ್ ಧಿಮಿ ಧಿಮಿಕೆಂದು ಕುಣಿವ ಕೃಷ್ಣನ ಕಂಡೆ"

ಎಂದು ಕನಕದಾಸರಂತೂ ಉಡುಪಿಯಲ್ಲಿ ತಮ್ಮ ಹೆಜ್ಜೆಗುರುತನ್ನು ಚಾರಿತ್ರಿಕವಾಗಿ ದಾಖಲಿಸಿದವರು. ಅವರ ಹೆಸರಿನಲ್ಲಿ ಶ್ರೀಕೃಷ್ಣನಿಗೆ ಇಂದಿಗೂ ಗಂಜಿಯೂಟ ಸಲ್ಲುತ್ತದೆ.

ಪ್ರಸನ್ನವೆಂಕಟದಾಸರ ಬಾಲಕೃಷ್ಣನ ಮೇಲಿನ ಕಕ್ಕುಲಾತಿಯನ್ನು ನೋಡಿದ್ದೇವೆ. ಅವರ ಇನ್ನೊಂದು ಹಾಡು 'ಎಂದು ಕಾಂಬೆನೊ ಎನ್ನ ಸಲಹುವ ತಂದೆ ಉಡುಪಿಯ ಜಾಣನ, ಮಂದಹಾಸ ಪ್ರವೀಣನ' ಎಂಬುದು ಇಂದಿಗೂ ಜನಬಳಕೆಯಲ್ಲಿದೆ.

ತೀರಾ ಉತ್ತರದಲ್ಲಿದ್ದ ವಿಜಯದಾಸರು ಘಟ್ಟವನ್ನು ಇಳಿದು ಅದೆಷ್ಟು ಸಲ ಈ ಕೃಷ್ಣನ ಬಳಿಗೆ ಬಂದಿದ್ದಾರೆಯೋ! ಅವನನ್ನು ಕುರಿತ ಅವರ ಅನೇಕ ಹಾಡುಗಳು ಇದಕ್ಕೆ ನಿದರ್ಶನ. ಆತ ಅನ್ನಬ್ರಹ್ಮ ತಾನೇ! ವಿಜಯದಾಸರು ಅಲ್ಲಿಯ ಪ್ರತಿ-ಆಹಾರದಲ್ಲಿ ದೈವೀ ಅಂಶವನ್ನೂ ಕಂಡಿದ್ದಾರೆ.

"ಶಾಕಫಲದಿಂದ ಅರಿಷಡ್ವರ್ಗನಾಶ
ಜದನವ ಉದರದೊಳು ತುಂಬಲಾಕ್ಷಣದಲ್ಲಿ
ಭೇದಾರ್ಥಜ್ಞಾನ ಬಂದೊದಗುವುದು"

ಕೊನೆಗೆ ಹೇಳಿದ ಮಾತಿದು -

ಕೃಷ್ಣ ಸಂದರುಶನವೆ ಮೃಷ್ಟಾನ್ನ ಭೋಜನ!

ವಿಜಯದಾಸರ ಪರಮಶಿಷ್ಯರಾದ ಗೋಪಾಲದಾಸರು ಶ್ರೀಕೃಷ್ಣನನ್ನು ಕುರಿತ ತಮ್ಮ ಕೀರ್ತನೆಯೊಂದರಲ್ಲಿ ಆಡುಮಾತಿನ ಸೊಗಸನ್ನು ತಂದಿದ್ದಾರೆ.

"ಎತ್ತಣ ಶಬ್ದವಿದು ಎನ್ನ ಕರ್ಣಕಿದು ಯವ್ವ
ಎತ್ತಣ ರೂಪವಿದು ಎನ್ನ ನಯನಕಿದು ಯವ್ವ
ಎತ್ತಣ ರಸವಿದು ಎನ್ನ ಜಿಹ್ವೆಗಿದು ಯವ್ವ"

ಉಡುಪಿಯಲ್ಲಿ ಅವರು ಎಲ್ಲೆಲ್ಲಿಯೂ ಕಂಡದ್ದು ಕೃಷ್ಣಮಯ ದೃಶ್ಯವೇ.

ಗೋಪಾಲದಾಸರ ಮಗು ಬಾಲ್ಯದಲ್ಲಿ ತೀರಿಕೊಂಡಿತು. ದಾಸರು ದುಃಖಭರಿತರಾದರು. ಆಗ ಬಾಲಕೃಷ್ಣನೇ ಮಗನಾಗಿ ಅವರ ಕನಸಿನಲ್ಲಿ ಕಾಣಿಸಿಕೊಂಡನಂತೆ. ಅದು ಹೊಳೆಯದೇ ಮಗುವನ್ನು ಏನೆಲ್ಲ ಮುದ್ದು ಮಾಡಿದರಂತೆ.

"ಕೃಷ್ಣಯ್ಯ, ನಿನಗೆ ತಳುಕು ಹಾಕಿ ಕಾಲು ತೊಡರಿಸಿಕೊಂಡು ಎಳೆದೆಳೆದು ನಿನ್ನ ಎಬ್ಬಟ್ಟಿದೆನಲ್ಲೊ, ಭಳಿರೆ ನಿನ್ನ ಮಾಯೆ! ಮಗುವಾಗಿ ಬಂದು ಮಮತೆಯನ್ನು ಪುಟ್ಟಿಸಿ ಎನ್ನ ಕಣ್ಣಿಗೆ ಸಿಗದಂತೆ ಕಣ್ಮರೆಯಾದೆಯಲ್ಲೊ. ನನ್ನ ಮಗನೆಂದು ನೀನು ಪೇಳಿಕೊಂಡ ಬಗೆ ಆವ ಲೀಲೆಯೋ ಕಾಣೆ".

- ಮನ ಕರಗುವ ರೀತಿಯಲ್ಲಿ ವರ್ಣಿಸಿದ್ದಾರಲ್ಲವೆ. ಶ್ರೀಕೃಷ್ಣನ ವಿಷಯವಾಗಿ ಬೇರೆ ದಾಸರುಗಳ ಸಾವಿರಕ್ಕೂ ಮಿಕ್ಕಿದ ಕೀರ್ತನೆಗಳಿವೆ.

ಅಂದಹಾಗೆ ಕೃಷ್ಣನು ಎಲ್ಲಾ ಬಿಟ್ಟು ಉಡುಪಿಗೆ ಏಕೆ ಬಂದು ನೆಲೆಸಿದ? ರಾಮಚಂದ್ರವಿಠಲರ ಈ ವಿಷಯದ ಕಲ್ಪನೆ ಸೊಗಸಾಗಿದೆ.

'ಆ ಗೊಲ್ಲರ ಗ್ರಾಮದಲ್ಲಿ ನೀನಿದ್ದಾಗ ಹುಂಬ ಹುಡುಗರು ನಿನ್ನ ಹೊಲ್ಲೆ ಮಾಡುವರೆಂದು ಬೇಸತ್ತೆಯೊ? ಹತ್ತವತಾರ ನೀ ಮಾಡಿದೆ. ಆದರೆ ಯಾರಿಗಾಗಿ ಮಾಡಿದೆಯೊ ಅವರಾರೂ ಈಗ ನಿನ್ನ ನೆನೀತಾ ಇಲ್ಲ. ಈ ಮಧ್ವರು ಹಾಗಲ್ಲ. ನಿನ್ನ ಪೂಜೆ ನಿತ್ಯವೂ ನಡೆಸಿ ಸಂತೃಪ್ತಗೊಳಿಸುವವರು - ಎಂದು ಬಂದೆಯ?'

ಉಡುಪಿಯ ಕೃಷ್ಣನಿಗೆ ಸಂಬಂಧಿಸಿದ ಐತಿಹಾಸಿಕ ಘಟನೆಯು ಒಂದು ಕೀರ್ತನೆಯಲ್ಲಿದೆ. ಪಲಿಮಾರು ಮಠದ ರಘುವಂಶತೀರ್ಥರ ಪ್ರಕಾರ ಕೃಷ್ಣನ ಮೂರ್ತಿಯೊಂದು ಸಮುದ್ರತೀರದಲ್ಲಿದ್ದುದನ್ನು ಅರಿತ ಶ್ರೀ ಮಧ್ವಾಚಾರ್ಯರು ಅದನ್ನು ತಂದರು - ಎಂದು ನೇರ ಸರಳ ಘಟನೆಯಾಗಿ ಹೇಳಿದ್ದಾರೆ. ಶಾಟಿ ಬೀಸಿ ಹಡಗನ್ನು ದಂಡೆಗೆ ತಂದದ್ದರ ಉಸಾಬರಿ ಇಲ್ಲ.

ಶ್ರೀಪಾದರಾಜರ 'ಭ್ರಮರಗೀತೆ'ಯನ್ನು ಇಲ್ಲಿಯೇ ಕಾಣಿಸಬೇಕು. ಕೃಷ್ಣನು ಮಧುರೆಗೆ ಹೋದಮೇಲೆ ಗೋಪಿಯರ ವಿರಹವು ಪರಾಕಾಷ್ಠತೆಯನ್ನು ಮುಟ್ಟಿದಾಗ ಭ್ರಮರವೊಂದು ಕಾಣಿಸುತ್ತದೆ. "ಭೃಂಗಾ, ಶ್ರೀರಂಗನು ನಿನ್ನನ್ನು ಅಟ್ಟಿದನೆ? ತಾ ಮಧುರೆಲಿ ನಿಂದು. ಇನ್ನೇಕೆ ಅವನಿಗೆ ನಮ್ಮ ಗೊಡವೆ?" ಎಂದು ಹಲುಬುತ್ತಾರೆ. ಅದೊಂದು ಕೀಟವಾಗಿ ಎಣಿಸುವುದೇ ಇಲ್ಲ.

ಶ್ರೀ ವಾದಿರಾಜರು ಗಿಣಿಯನ್ನು ಗೋಪಿಯರ ಮುಂದೆ ತಂದು ನಿಲ್ಲಿಸಿ ಇನ್ನೊಂದು ರೀತಿಯಲ್ಲಿ ಅವರ ವಿರಹಕ್ಕೆ ವಿಶಿಷ್ಟ ಮೆರುಗನ್ನು ಕೊಡುತ್ತಾರೆ. ಆ ಗೋಪಿಯರು ತಮ್ಮ ವಿರಹವನ್ನು ಅದರ ಮುಂದೆ ತೋಡಿಕೊಂಡ ರೀತಿ ವಿಶಿಷ್ಟವಾದುದು. ಅದನ್ನು ರಮಿಸುವ ಒಬ್ಬಳ ಚಾತುರ್ಯವನ್ನು ನೋಡುವುದು.

"ಗಿಣಿಯೆ ನಿನಗೇನು ಬೇಕದನೀವೆ
ಹರಿಯನ್ನು ಕರೆತಾರೆ
ಮೂರು ಬಣ್ಣದ ಕೊರಳ ತಿರಿಯುಳ್ಳ ನೀನು
ಮೂರು ಬಣ್ಣದ ಚಾರುನಯನ ಆತ
ಮಾರನ ಅನುಚರ ನೀನು ಮಾರನ ಜನಕ ಅವನು"

ಶ್ರೀ ವಾದಿರಾಜರು ಮುಂದುವರಿದು -

"ಆದ್ದರಿಂದ ಗಿಣಿಯೆ ನಿನ್ನ ಬಿನ್ನಪವನ್ನು ಆತ ಮೀರ. ಸಿರಿದೇವಿಯರ ಸುತನೆನಿಪ ಕಾಮನಿಗೆ ರಥವಾಗಿ ಮೆರೆವೆ ನೀ ಗಿಣಿಯೆ; ಆದ್ದರಿಂದ ನಿನ್ನ ಮಾತನ್ನು ಪಾಲಿಸುವನು"

ಇನ್ನು ಈ ಗಿಣಿಯು ಅವನನ್ನು ಗುರುತಿಸುವುದು ಹೇಗೆ?

"ಅವನ ಉರದಲ್ಲಿ ಸಿರಿವತ್ಸ ಎಂಬ ಕುರುಹುಂಟು.
ಕರಗಳಲಿ ಶಂಖ-ಚಕ್ರಗಳಿವೆ
ಕೊರಳಲ್ಲಿ ಕೌಸ್ತುಭಮಣಿ ಉಂಟು
ಅವನೇ ನಮ್ಮರಸ ಗಿಣಿಯೇ"

ಅಂದಹಾಗೆ ವಿಶ್ವೇಂದ್ರತೀರ್ಥರು ಶ್ರೀಕೃಷ್ಣ ಮತ್ತು ಸ್ನೇಹಿತ ಸುದಾಮರ ಪ್ರಸಂಗವನ್ನು ಆಧುನಿಕ ಕಾಲದ ರೀತಿಯಲ್ಲಿ ಬಣ್ಣಿಸಿದ್ದಾರೆ. ಸುಧಾಮ ಶ್ರೀಕೃಷ್ಣನಲ್ಲಿಗೆ ಬರುತ್ತಾನೆ. ಸ್ನೇಹಿತರ ಬಹುದಿನದ ನಂತರದ ಭೇಟಿ. ಕೃಷ್ಣ ಅವನನ್ನು ಸ್ವಾಗತಿಸುವುದು ಹೀಗೆ -

"ಬಾರಪ್ಪಾ ಸುದಾಮ. ಎಲ್ಲಾ ಕ್ಷೇಮವೇ? ನನ್ನ ಅತ್ತಿಗೆ (ಎಂದರೆ ಸುದಾಮನ ಹೆಂಡತಿ) ಹೇಗಿದ್ದಾಳೆ? ಇಲ್ಲಿ ನಿನ್ನ ಅತ್ತಿಗೆ ಚೆನ್ನಾಗಿಯೇ ಇದ್ದಾಳೆ (ಎಂದರೆ ರುಕ್ಮಿಣಿ). ಈ ಗೆಳೆಯನಿಗಾಗಿ ಏನು ತಂದಿದ್ದೀ?" ಎಂದೆಲ್ಲ ಲೋಕಾಭಿರಾಮದ ಮಾತನ್ನಾಡುತ್ತಾನೆ. ಸುದಾಮನು ಅವಲಕ್ಕಿಯ ಗಂಟನ್ನು ಕೊಟ್ಟಾಗ ಖುಷಿ ಪಡುತ್ತಾನೆ. ಅವನಿಗೆ ಗೊತ್ತಾಗದ ಹಾಗೆ ಸಕಲೈಶ್ವರ್ಯವನ್ನು ಕೊಡುತ್ತಾನೆ. ಅವನು ತಂದ ಅವಲಕ್ಕಿಯನ್ನು ಮುಕ್ಕಬೇಕು ಎನ್ನುವಾಗ ರುಕ್ಮಿಣಿಯು ಅವನ ಮುಂಗೈ ಹಿಡಿದು 'ಒಂದು ಮುಷ್ಟಿ ಅವಲಕ್ಕಿಗೇ ಏನೆಲ್ಲ ಅವನಿಗೆ ಕೊಟ್ಟಿರುವಿ; ಇದಕ್ಕೂ ಹೆಚ್ಚಿನದನ್ನು ಯಾರಾದರೂ ಕೊಟ್ಟರೆ ಏನಿದೆ ನಿನ್ನಲ್ಲಿ ಕೊಡಲಿಕ್ಕೆ?' ಎಂದು ಕೇಳುತ್ತಾಳೆ!

೩. ದೇವ-ದೇವತೆಗಳು

ಇನ್ನು ವಿವಿಧ ದೇವತೆಗಳನ್ನು ದಾಸರು ಯಾವ ರೀತಿಯಾಗಿ ಕಂಡಿರುವರೆಂಬುದನ್ನು ನೋಡೋಣ. ತಾರತಮ್ಯತ್ವೇನ ಮೊದಲಿಗೆ ಬ್ರಹ್ಮದೇವರು. ಶ್ರೀಹರಿಯ ನಾಭಿಯಿಂದ ಜನಿಸಿ ಮಗ ಎಂದೆನಿಸಿಕೊಂಡವರು. ಆದರೆ ಅದಾರು ವಿಧಿಸಿದರೋ – ಈ ಸೃಷ್ಟಿಕರ್ತನಿಗೆ ಮೂರ್ತಿಪೂಜೆ ಸಲ್ಲದಂತೆ. ಅವನ ಹೆಸರಿನ ದೇವಸ್ಥಾನಗಳು ಇದ್ದರೂ ವಿರಳ. ಮೂವರು ಹರಿದಾಸರು ಮಾತ್ರ ಅವನನ್ನು ಸ್ತುತಿಸಿದ್ದಾರೆ. "ಬೊಮ್ಮನೇ ಎನ್ನಯ ದುಮ್ಮನ ಬಿಡಿಸಿ ಸುಮ್ಮನೆ ನೀಡು". ಹೀಗೆ ಕೇಳಿಕೊಂಡವರು ಗುರುಜಗನ್ನಾಥದಾಸರು. ವಿಶ್ವೇಂದ್ರತೀರ್ಥರ "ಚತುರವದನಗೊಂದಿಸುವೆನು ಮದನನಯ್ಯನ ಜ್ಯೇಷ್ಠ ಕುವರನ" ಎಂದು ತಮ್ಮ ನಮನ ಸಲ್ಲಿಸಿದ್ದಾರೆ. ಮುಂದುವರಿದು "ಸುರರು ಅಸುರರೆಂಬ ಭೇದವಿರದೆ ಸರ್ವರಿಗಿಷ್ಟವನೀವ" ಎಂದು ಹೇಳುತ್ತಾರೆ. ನಿಜವೇ ಅದು. ಹೀಗೆ ಹೇಳುವಲ್ಲಿ ಅವರು ಗೇಲಿ ಮಾಡುತ್ತಿದ್ದಾರೆ ಎಂದೇನೂ ತಿಳಿಯಲಾಗದು.

ದೇವತೆಗಳಲ್ಲಿ ವಾಯುದೇವರು ಮಾಧ್ವ ಹರಿದಾಸರಿಗೆ ಅತಿಮುಖ್ಯರು. ಕಾರಣವೆಂದರೆ ವಾಯುದೇವರ ಮೂರು ಅವತಾರಗಳಾದ ಹನುಮ-ಭೀಮ-ಮಧ್ವರಲ್ಲಿ ಮಧ್ವಾಚಾರ್ಯರಿಂದಲೇ ಅವರಿಗೆ ಪ್ರತ್ಯೇಕ ಅಸ್ತಿತ್ವ ಒದಗಿದುದಲ್ಲವೆ. ಹೀಗಾಗಿ 'ಅವತಾರತ್ರಯ' ಎನ್ನುವುದು ಅನೇಕ ಹರಿದಾಸರಿಗೆ ಆಪ್ಯಾಯಮಾನವಾದದ್ದು. ಹನುಮಂತನಂತೂ ಶ್ರೀರಾಮನ ಭಕ್ತಾಗ್ರಣಿ. ದೇವರಲ್ಲಿ ಭಕ್ತಿ ಎಂದರೆ ಯಾವ ರೀತಿ ಇರಬೇಕು ಎನ್ನುವುದಕ್ಕೆ ಆತ ಬಹು ದೊಡ್ಡ ಮಾದರಿ. ಅಂತೂ ಭಗವಂತನಿಗಿಂತ ಹೆಚ್ಚೇ ಎನ್ನುವಷ್ಟು ಹನುಮಂತದೇವರ ಗುಡಿಗಳು ಕರ್ನಾಟಕದಲ್ಲಿವೆ. ಶ್ರೀ ವ್ಯಾಸರಾಯರೊಬ್ಬರೇ ಬಹುಸಂಖ್ಯೆಯಲ್ಲಿ ಪ್ರಾಣದೇವರ ಗುಡಿಗಳನ್ನು ಕಟ್ಟಿಸಿದರೆನ್ನುವ ಪ್ರತೀತಿ ಇದೆ. ಶ್ರೀ ರಾಘವೇಂದ್ರ ಮೃತ್ತಿಕಾ ವೃಂದಾವನಗಳಿರುವಲ್ಲೆಲ್ಲ ಮೇಲ್ಗಡೆ ಹನುಮಂತನ ಮೂರ್ತಿಯೂ ಸಾಮಾನ್ಯವಾಗಿ ಇರುತ್ತದೆ. ಮೂಲೆ ಮೂಲೆಯಲ್ಲಿರುವ ಈ ಹನುಮಪ್ಪನ ದೇವಸ್ಥಾನಗಳಿಗೆ ದಾಸರುಗಳು ದರ್ಶನವಿತ್ತಿದ್ದಾರೆ. ಮೊದಲಗಟ್ಟಿ ಎಂಬುದು ಧಾರವಾಡ ಜಿಲ್ಲೆಯ ಒಂದು ಚಿಕ್ಕ ಹಳ್ಳಿ. ಅಲ್ಲೊಂದು ಪ್ರಾಣದೇವರ ದೇವಸ್ಥಾನ. ಅದಕ್ಕೆ ಆಸ್ತಿ-ಪಾಸ್ತಿ ಏನೂ ಇಲ್ಲ. ನಿತ್ಯಪೂಜೆಯೂ ಇದ್ದ ಹಾಗೆ ಕಾಣೆ. ಆದರೆ ಜಾಗೃತಸ್ಥಾನ – ಎಂಬ ಪ್ರತೀತಿ ಇದೆ. ಆದ್ದರಿಂದ ಒಬ್ಬರಲ್ಲ, ಐವರು ಹರಿದಾಸರು ಆ ದೇವಸ್ಥಾನವನ್ನು ಸಂದರ್ಶಿಸಿ, ಕೀರ್ತನೆ ರಚಿಸಿದ್ದಾರೆ.

ಈ ಮೂರು ಅವತಾರಗಳಲ್ಲಿ ಹನುಮಂತನನ್ನು ಮೊದಲಿಗಿಟ್ಟುಕೊಂಡು ರಚಿಸಲಾದ ಕೀರ್ತನೆಗಳು ಲೆಕ್ಕವಿಲ್ಲದಷ್ಟು. ಕನಕದಾಸರ 'ಎನ್ನ ಕಂದಾ, ಹಳ್ಳಿಯ ಹನುಮಾ ಚೆನ್ನಾಗಿ ಇಹರೆ ರಾಮ-ಲಕ್ಷ್ಮಣರು?' ಎಂಬ ಆತ್ಮೀಯ ಕೀರ್ತನೆ ಸಾಕಷ್ಟು ಪರಿಚಿತ. ಇದೇ ಧರತಿಯಲ್ಲಿ ಬಂದ ಪ್ರಸನ್ನವೆಂಕಟರ 'ಹನುಮ ನಮ್ಮ ತಾಯಿ-ತಂದೆ, ಭೀಮಾ ನಮ್ಮ ಬಂಧು-ಬಳಗ, ಆನಂದತೀರ್ಥರೆ ನಮ್ಮ ಗತಿಗೋತ್ರ' ಎಂಬ ನಿಲುಮೆಯು ಇತರ ಅವತಾರತ್ರಯ ಕೀರ್ತನೆಗಳಿಗೂ ದಟ್ಟವಾಗಿ ಅನ್ವಯಿಸುವಂತಹುದು.

ಭೀಮಸೇನದೇವರಿಗೂ ಸಾಕಷ್ಟು ಪ್ರಾಶಸ್ತ್ಯ ಸಿಕ್ಕಿದೆ. ವಿಶೇಷತಃ ಅವನು ಮಾಡಿದ ಕೀಚಕವಧೆಯನ್ನು ಕೆಲವು ಹರಿದಾಸರು ಉತ್ಸಾಹದಿಂದ ವರ್ಣಿಸಿದ್ದಾರೆ. ಆ ಪ್ರಸಂಗವೇ ರೋಚಕವಾದದ್ದು. ಕಡಕೋಳ ರಾಜಗೋಪಾಲದಾಸರು ಕೀಚಕವಧೆ ಎಂಬ ನೀಳ್ಗವನವನ್ನೇ ರಚಿಸಿದ್ದಾರೆ. ನಾನು ಸಣ್ಣವನಿದ್ದಾಗ ನನ್ನ ತಂದೆಯವರು ಆ ಹಾಡಿನ 'ಒದ್ದು ತುಳಿದು ಒಂದು ಮುದ್ದಿಯ ಮಾಡೆನಿ ನೋಡು ಬಾರೆ' ಎಂದು ದ್ರೌಪದಿಯನ್ನು ಕರೆದುದನ್ನು ಅಭಿನಯಪೂರ್ವಕ ಹೇಳುತ್ತಿದ್ದುದು ಈಗೂ ನೆನಪಿದೆ. ಭೀಮಸೇನನ ನಿಮಿತ್ತದಿಂದ ದ್ರೌಪದಿಯನ್ನೂ ಪ್ರತ್ಯೇಕವಾಗಿ ವರ್ಣಿಸಿದ ಕೀರ್ತನೆಗಳಿವೆ.

ಮೂರನೆಯ ಅವತಾರವಾದ ಶ್ರೀ ಮಧ್ವಾಚಾರ್ಯರ ಮೇಲಿನ ಕೀರ್ತನೆಗಳ ಬಗ್ಗೆ ಹೆಚ್ಚು ಹೇಳುವುದೇ ಬೇಡ. ಅವತಾರತ್ರಯದ ಕುರಿತ ಹಾಡುಗಳಲ್ಲಿಯಂತೂ ಬಂದೇ ಬರುತ್ತಾರೆ. ಮಾತ್ರವಲ್ಲ ಪ್ರತ್ಯೇಕವಾಗಿಯೂ ಅವರನ್ನು

ಆತ್ಮೀಯ ರೀತಿಯ ಗೌರವದಿಂದ ಕಂಡು ಹೊಗಳಿದ ಹರಿದಾಸರೂ ಇದ್ದಾರೆ. ಒಂದು ಕೀರ್ತನೆಯಲ್ಲಿ ಅವರ 'ಸರ್ವಮೂಲಗ್ರಂಥ' ಎಂದು ಬಳಕೆಯಲ್ಲಿರುವ ಅವರ ಮೂವತ್ತೇಳು ಗ್ರಂಥಗಳನ್ನು ಹೆಸರಿಸಲಾಗಿದೆ.

೪. ರುದ್ರದೇವರು

ರುದ್ರದೇವರ ಬಗ್ಗೆ ವಿಶೇಷವಾಗಿ ಹೇಳಲಿಕ್ಕಿದೆ. ಮುಕ್ಕಾಲು ವಾಸಿ ಹರಿದಾಸರು ಅವನನ್ನು ಮನಸಾರೆ ಹೊಗಳಿದ್ದಾರೆ ಎಂಬುದನ್ನು ಒತ್ತಿ ಹೇಳಬೇಕು. ಆತ ಮನೋನಿಯಾಮಕ. ಭಕ್ತರಿಗೆಲ್ಲ ಪರಮಗುರು ಸ್ಥಾನದಲ್ಲಿರುವವ. ಮುಖ್ಯವಾಗಿ, ಶ್ರೀಹರಿಯ ಕೃಪೆ ಬೇಕಾದರೆ ಅವನ ಮೂಲಕವೇ ಆಗಬೇಕು.

ಶಿವನನ್ನು ಆತ್ಮೀಯ ರೀತಿಯಲ್ಲಿ ನೆನೆದವರಲ್ಲಿ ವಾದಿರಾಜರೂ ಒಬ್ಬರು. "ಧವಳ ಗಂಗೆಯ ಗಂಗಾಧರ ಮಹಲಿಂಗ ಮಾಧವನ ತೋರಿಸಯ್ಯ" ಎಂಬ ಅವರ ಹಾಡು ವಿಶೇಷವಾಗಿ ಜನಪ್ರಿಯವಾದದ್ದು. ಮತ್ತೊಂದು ಹಾಡಿನಲ್ಲಿ -

"ಚೆನ್ನ ಪ್ರಸನ್ನ ಶ್ರೀಹಯವದನನ್ನ
ಅನುದಿನ ನೆನೆವಂತೆ ಮಾಡೋ ನೀ ಎನ್ನ
ಅನ್ಯರನರಿಯೆನೋ ಗುರುವೆಂಬೆ ನಿನ್ನ
ಇನ್ನಾದರು ಹರಿಯ ತೋರೋ ಮುಕ್ಕಣ್ಣ" ಎಂಬುದಾಗಿ ಅವನ ಪಾತ್ರವನ್ನು ನಿದರ್ಶಿಸಿದ್ದಾರೆ.

ರುದ್ರದೇವರ ಪರಿವಾರದಲ್ಲಿ ಪಾರ್ವತಿ, ಗಣೇಶ ಹಾಗೂ ಷಣ್ಮುಖರು ಬರುತ್ತಾರೆ. ಗಣೇಶನ ಬಗ್ಗೆಯಂತೂ ಪ್ರತಿಯೊಬ್ಬ ದಾಸರು ಮತ್ತು ದಾಸಯತಿಗಳು ಒಂದೆರಡಾದರೂ ಹಾಡನ್ನು ತಪ್ಪದೇ ರಚಿಸಿದ್ದಾರೆ. ಒಬ್ಬ ದಾಸರು 'ಹೊಸ ಮನೆ ಒಕ್ಕಲಿಗೂ ನೀ ಬೇಕು' ಎಂಬಂತಹ ಲೌಕಿಕ ವಿಚಾರವನ್ನು ತಂದಿದ್ದಾರೆ. ಪಾವಂಜೆ ಲಕ್ಷ್ಮೀನಾರಣಪ್ಪ ಒಂದಲ್ಲ ಹತ್ತಾರು ಗಣೇಶ ಸ್ತವನ ರಚಿಸಿದ್ದಾರೆ. ಯಾಕೆ ಗೊತ್ತೆ? ವೃತ್ತಿಯಲ್ಲಿ ಕೀರ್ತನಕಾರರಾದ ಅವರು ಪ್ರತಿಸಲವೂ ಹೊಸದಾಗಿಯೇ ಗಣೇಶನ ಸ್ತೋತ್ರವನ್ನು ರಚಿಸಿ ಕೀರ್ತನೆಯನ್ನು ಆರಂಭಿಸುತ್ತಿದ್ದರೆಂದು ಕಾಣುತ್ತದೆ. ದಾಸರುಗಳು ಎಷ್ಟೆಂದರೂ ಆಶುಕವಿಗಳು. ಹಿಂದೆ ರಚಿಸಿದ್ದನ್ನೇ ಪುನರುಚ್ಚರಿಸುವ ಜಾಯಮಾನ ಅವರದಲ್ಲ.

ಹುಯಿಲಗೋಳ ನಾರಾಯಣರಾಯರು ಹೆಸರಾಂತ ಲೇಖಕರೂ ಹೌದು. ಹರಿದಾಸರೂ ಹೌದು. ಅರ್ಥಾತ್ ಸಾಹಿತ್ಯಿಕ ಮೌಲ್ಯದ ಕೀರ್ತನೆಗಳನ್ನು ರಚಿಸಿದ್ದಾರೆ. ಗಣೇಶನ ಕಣ್ಣುಗಳು ಕಿರಿದಾದವುಗಳು. ಕಿವಿ ಮಾತ್ರ ಅಗಲ. ಇದು ಏನನ್ನು ತೋರಿಸುತ್ತದೆ?

"ಸೂಕ್ಷ್ಮದಲಿ ಪರಿಕಿಸಲು ಸಣ್ಣ ಕಣ್ಣುಳವಗೆ
ಕಾಂಕ್ಷೆಗಳ ಕೇಳಲಿಕೆ ಮರದಗಲ ಕಿವಿಯವಗೆ"

ಇತ್ತ ದಕ್ಷಿಣ ಕನ್ನಡ ಜಿಲ್ಲೆಯ ಹರಿದಾಸರು ಷಣ್ಮುಖನನ್ನೂ ತಮ್ಮಲ್ಲಿಯ ಸುಬ್ರಹ್ಮಣ್ಯನನ್ನೂ ಏಕೀಕರಿಸಿ ವರ್ಣಿಸಿದ್ದಾರೆ. ಜೊತೆಗೆ ಇನ್ನೊಬ್ಬ ವಿಶಿಷ್ಟ ದೇವತೆ ದುರ್ಗಾದೇವಿ. ಮೂಲತಃ ಶಕ್ತಿದೇವತೆಯಾಗಿ ವರ್ಣಿತಳಾಗಿದ್ದಾಳೆ. ಇತ್ತ ಪಾರ್ವತಿಯ ಬಗ್ಗೆ ದಾಸರಿಗೆ ಒಂದು ಬಗೆಯ ಸ್ನಿಗ್ಧ ಭಾವನೆ. ಕೆಲವರು ವ್ಯಾಜನಿಂದಾಸ್ತುತಿಯ ರೀತಿಯಲ್ಲಿ ಅವಳ ಸ್ತುತಿಗೈದಿದ್ದಾರೆ. ಉದಾಹರಣೆಗೆ 'ಅಗಜೆ, ನಿನ್ನೊಗೆತನಕೆ ಜಗ ನಗುವುದೆ' (ಶ್ರೀದವಿಠಲರು), 'ಮೋಸಪೋದೆಯಲ್ಲೆ ಭಾಸುರಾಂಗಿ ನೀನು' (ರಂಗೇಶವಿಠಲ) - ಹೀಗೆ ಆರಂಭಿಸಿದರೂ ಶಿವನ ಕೈಹಿಡಿದ ಅವಳ ಭಾಗ್ಯವನ್ನು ಎತ್ತಿತೋರಿಸಿದ್ದಾರೆ.

೫. ಸ್ತ್ರೀದೇವತೆಗಳು

ಹರಿದಾಸರು ವರ್ಣಿಸಿದ ಸ್ತ್ರೀದೇವತಾ ಸಮೂಹದಲ್ಲಿ ಮಹಾಲಕ್ಷ್ಮಿಗೆ ಸ್ವಾಭಾವಿಕವಾಗಿಯೇ ಅಗ್ರಸ್ಥಾನ. ಸಮುದ್ರರಾಜನ ಕುವರಿಯಾಗಿ ಶ್ರೀಹರಿಯನ್ನು ಪತಿಯಾಗಿ ಹೊಂದಿದವಳು. ಮಾಧ್ವರಿಗೆ ಪರಮಪೂಜ್ಯಳು. ಹರಿದಾಸರು ವಿಶೇಷವಾಗಿ ಕಲ್ಪಿಸಿಕೊಂಡದ್ದು ಕೊಲ್ಹಾಪುರದ ಮಹಾಲಕ್ಷ್ಮಿಯನ್ನು. ಇಂದಿರೇಶ ಮುದ್ರಿಕೆಯ ಪಾಂಡುರಂಗಿ ಹುಚ್ಚಾಚಾರ್ಯರು ಲಕ್ಷ್ಮಿಯನ್ನು ದೀರ್ಘಕಾಲ ಉಪಾಸಿಸಿದವರು. ಅವರು ರಚಿಸಿದ 'ಲಕ್ಷ್ಮೀಲೀಲಾಮೃತ'ವೂ, ಪುರಂದರದಾಸರ 'ಭಾಗ್ಯದ ಲಕ್ಷ್ಮೀ ಬಾರಮ್ಮ' ಹಾಗೂ 'ಏನು ಧನ್ಯಳೋ ಲಕುಮಿ' ಎಂಬೆರಡು ಕೀರ್ತನೆಗಳೂ ವಿಶೇಷ ಜನಪ್ರಿಯವಾಗಿವೆ.

ಇವಕ್ಕೂ ಮಿಗಿಲಾಗಿ ಜನಪ್ರಿಯವಾದ ಹಾಡು ಶ್ರೀ ವಾದಿರಾಜರ 'ಲಕ್ಷ್ಮೀಶೋಭಾನ'. ಮಹಿಳೆಯರಲ್ಲಿ ಅದರ ಪ್ರಸರಣ ದಿನದಿನಕ್ಕೆ ಹೆಚ್ಚುತ್ತಿದೆ. ಇದರಷ್ಟೇ ದೀರ್ಘವಾದ 'ಲಕ್ಷ್ಮೀಕಲ್ಯಾಣ' ಎಂಬುದನ್ನು ಉಡುಪಿಯ ನೆಕ್ಕಾರು

ಕೃಷ್ಣದಾಸರು ರಚಿಸಿದ್ದಾರೆ. ೧೮ನೆಯ ಶತಮಾನದ ಈ ದಾಸರು, ಶ್ರೀ ವಾದಿರಾಜರ ಕೃತಿಯನ್ನು ನೋಡಿದಂತಿಲ್ಲ. ಹೀಗಾಗಿ ಇವರ ನಿರೂಪಣೆಯ ದೃಷ್ಟಿ ಬೇರೆಯೇ ಇದೆ. ಕಾವ್ಯರಚನೆಯ ದೃಷ್ಟಿಯಿಂದ ಮೇಲ್ಮಟ್ಟದ್ದಾಗಿದೆ. ತಾತ್ವಿಕ ಹಿನ್ನೆಲೆ ಇಟ್ಟುಕೊಂಡು ಈ ಕವನದ ಕುರಿತು ಉಪನ್ಯಾಸಗಳು ಜರುಗುತ್ತಿವೆ. ಆದರೆ ಯಾವುದೇ ಲಕ್ಷ್ಮೀಸ್ತುತಿಯುಳ್ಳ ಹಾಡನ್ನು ತೆಗೆದುಕೊಂಡರೂ, ಪರೋಕ್ಷವಾಗಿ ಶ್ರೀಹರಿಯ ಸ್ತುತಿಯೇ ಮೇಲ್ವಾಯ್ದು ಬಂದಿದ್ದರೆ ಅದು ಕ್ರಮಪ್ರಾಪ್ತವಾದದ್ದೇ.

ಮಹಾಲಕ್ಷ್ಮಿಯ ಅನಂತರ ದಾಸರ ಹಾಡುಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡವರೆಂದರೆ ದುರ್ಗಾದೇವತೆ ಹಾಗೂ ಪಾರ್ವತಿ. ದುರ್ಗಾದೇವಿಯು ಮಹಾಲಕ್ಷ್ಮಿಯ ಒಂದು ರೂಪವೇ ಎಂದೂ, ಅವಳನ್ನು ಚಾಮುಂಡೇಶ್ವರಿ, ಚಂದ್ರಲಾದೇವಿ, ಬಗಳಾಂಬಾದೇವಿ, ಮೂಕಾಂಬಿಕ ಈ ಮೊದಲಾದ ರೂಪಗಳಲ್ಲಿಯೂ ದಾಸರು ಸ್ತುತಿಸಿದ್ದಾರೆ. ಸ್ತುತಿಪರವಾದ ಬೇರೆ ಸ್ತ್ರೀದೇವತೆಗಳಲ್ಲಿ ಸರಸ್ವತಿ, ಶಾರದಾದೇವಿ, ಗಾಯತ್ರಿ ಹಾಗೂ ತುಳಸೀದೇವಿ - ಇವರೂ ಸಮಾವೇಶಗೊಂಡಿದ್ದಾರೆ. ತುಳಸಿಯ ಮೇಲಿನ ಹಾಡುಗಳು ಭಕ್ತಿಪ್ರದವಾಗಿವೆ.

೬. ಪೌರಾಣಿಕ ವ್ಯಕ್ತಿ - ವಿಷಯಗಳು

ಸ್ತುತಿರೂಪವಲ್ಲದೆ ಕಥನಾತ್ಮಕವಾಗಿಯೂ ಕವನಿಸುವಲ್ಲಿ ಅನೇಕ ಹರಿದಾಸರು ಸವ್ಯಸಾಚಿಗಳು. ವಿಷಯ ಮಾತ್ರ ಪೌರಾಣಿಕವಾದದ್ದು. ಈ ಕಥಾನಕಗಳನ್ನು ರಾಮಾಯಣ, ಭಾರತ, ಭಾಗವತ, ಮತ್ತಿತರ ಪ್ರಾಚೀನ ಗ್ರಂಥಗಳಿಂದ ಆಯ್ದುಕೊಂಡವುಗಳಾಗಿವೆ. ಭಗವಂತನ ಭಕ್ತರಾದ ಅಜಾಮಿಳ, ಧ್ರುವ ಮುಂತಾದವರನ್ನಲ್ಲದೆ, ಗಜೇಂದ್ರಮೋಕ್ಷ, ನರಕಾಸುರ ಸಂಹಾರ, ನಳಚರಿತ್ರೆ, ಮೋಹಿನೀ ಪ್ರಸಂಗ, ಶಕುಂತಲೋಪಾಖ್ಯಾನ, ದಕ್ಷಯಜ್ಞ, ಶ್ರೀಕೃಷ್ಣಪಾರಿಜಾತ, ರತಿಕಲ್ಯಾಣ, ಸುಭದ್ರಾಕಲ್ಯಾಣ, ಇವುಗಳೂ ಕವನಿಸಲ್ಪಟ್ಟಿವೆ. ಸ್ತ್ರೀಯರು ಸುಶ್ರಾವ್ಯವಾಗಿ ಹಾಡಲು ಬರುವಂತಿವೆ. ಭೃಗುಮುನಿಯ ಕಾರಣದಿಂದಾದ ತ್ರಿಮೂರ್ತಿಗಳ ಸತ್ವಪರೀಕ್ಷೆಯನ್ನು ಕುರಿತೂ ಒಂದು ಸೊಗಸಾದ ಕೀರ್ತನೆಯಿದೆ. ಆಶ್ಚರ್ಯದ ಸಂಗತಿಯೆಂದರೆ, ಈಚೆಗೆ ಮಾತ್ರ ಪ್ರಚಾರದಲ್ಲಿರುವ ಶ್ರೀಸತ್ಯನಾರಾಯಣನ ಕಥೆಯನ್ನೂ ಕಾಣಬಹುದು. ನಾರದ ಕೊರವಂಜಿಯಂತೂ ಸರಿಯೇ. ಬ್ರಹ್ಮ ಕೊರವಂಜಿ ಎಂಬ ಕಥಾನಕವೂ ಇದೆ. ಈ ಬಗೆಯ ಹಾಡುಗಳಲ್ಲಿ ಹೆಚ್ಚಿನವು ಭೀಮೇಶಕೃಷ್ಣ ಮುದ್ರಿಕೆಯ ಹರಪನಹಳ್ಳಿ ಭೀಮವ್ವ ಅವರಿಂದ ರಚಿತವಾದವುಗಳು; ಈ ಬಗೆಯ ಸಂಪ್ರದಾಯದ ಹಾಡುಗಳು ವಿಶೇಷವಾಗಿ ಬಳಕೆಯಲ್ಲಿವೆ.

ಸಂವಾದರೂಪದಲ್ಲಿಯೂ ಪೌರಾಣಿಕ ಕಥನಗಳು ಕಾಣಿಸಿಕೊಂಡಿವೆ. ರಂಭಾ-ಊರ್ವಶಿ ಸಂವಾದ, ರುಕ್ಮಿಣೀ-ಸುಭದ್ರೆಯರ ನಡುವಿನ ಸಂವಾದ ಇತ್ಯಾದಿ. ದಾಸಸಾಹಿತ್ಯದ ವೈವಿಧ್ಯಕ್ಕೆ ಇದೂ ಒಂದು ದೃಷ್ಟಾಂತವೆನ್ನಬಹುದು.

೭. ತೀರ್ಥಕ್ಷೇತ್ರ ದರ್ಶನ

ಹರಿದಾಸರ ಇನ್ನೊಂದು ಒಲವಿನ ವಿಷಯವೆಂದರೆ ತೀರ್ಥಕ್ಷೇತ್ರಗಳನ್ನು ಅರಸಿಕೊಂಡು ಹೋಗುವುದು ಮತ್ತು ಅಲ್ಲಿಯ ದೇವರು, ಗುರುಗಳನ್ನು ಕಂಡ ಮೇಲೆ ಆಶುಕೀರ್ತನೆಯನ್ನು ರಚಿಸುವುದು. ತೀರ್ಥಕ್ಷೇತ್ರಗಳಿಗೆ ಹಲವಾರು ಬಾರಿ ಸಂದರ್ಶಿಸಿದ್ದಾದರೆ, ಪ್ರತಿಸಲವೂ ಹೊಸದಾಗಿಯೇ ಕೀರ್ತನ ರಚಿಸಿದವರಿದ್ದಾರೆ. ನಮಗೆ ತಿಳಿದು ಬಂದ ಮಟ್ಟಿಗೆ ಮುನ್ನೂರಕ್ಕೂ ಮೇಲ್ಪಟ್ಟು ಇಂಥ ಕ್ಷೇತ್ರಸ್ಥಳಗಳ ವರ್ಣನೆ ಇದೆ. ಇದರಿಂದ ಹಿಂದಿನ ಕಾಲದ ದಾಸರುಗಳು ಪರ್ಯಟನಪ್ರಿಯರಾಗಿದ್ದರೆಂದೇ ಹೇಳಬೇಕು. ಮತ್ತೆ ಮತ್ತೆ ಹೋಗುತ್ತಿದ್ದ ಸ್ಥಳಗಳೆಂದರೆ ತಿರುಪತಿ, ಉಡುಪಿ ಹಾಗೂ ಮಂತ್ರಾಲಯ ಎಂಬುದನ್ನು ಈ ಹಿಂದೆ ಹೇಳಿದೆ. ಕ್ಷೇತ್ರಗಳಲ್ಲದೆ ಅಲ್ಲಲ್ಲಿಯ ನದ-ನದಿಗಳನ್ನೂ ಸ್ತುತಿಸಿದ್ದಾರೆ. ಕೆಲವು ಕ್ಷೇತ್ರಗಳ ಹೆಸರನ್ನೇ ನಾವು ಕೇಳಿರಲಿಕ್ಕಿಲ್ಲ. ಗೂಗಲ್ಲು, ಕುರಿಕಹಳ್ಳಿ, ದಾಗಿನಕಟ್ಟೆ, ಬಸಲದೊಡ್ಡೆ ಮುಂತಾದವುಗಳು. ಇವು ಹೆಚ್ಚಾಗಿ ಹಳೆಯ ಹೈದರಾಬಾದ ಕರ್ನಾಟಕದಲ್ಲಿ ಇವೆ. ದಕ್ಷಿಣ ಕನ್ನಡ ಜಿಲ್ಲೆಯ ಕುಕ್ರಾಡಿ ಸುಬ್ರಹ್ಮಣ್ಯ, ಓರಿಯಡ್ಕದ ವೀರಭದ್ರ, ಶರವೂದ ಗಣೇಶ - ಇವೂ ಹೊರಗಿನವರಿಗೆ ತುಸು ಅಪರಿಚಿತವಾದವುಗಳೇ.

ಯತಿಗಳಾದವರೂ ದಿಗ್ವಿಜಯ ಹೊರಟಾಗ ದೇವರು, ಗುರು ವೃಂದಾವನಗಳಿರುವ ಸ್ಥಾನಗಳನ್ನು ಸಂದರ್ಶಿಸಿದ್ದಾರೆ. ಅವರಲ್ಲಿ ಶ್ರೀ ವಾದಿರಾಜರು ಮುಖ್ಯರು. 'ತೀರ್ಥಪ್ರಬಂಧ'ವೆಂಬ ಗ್ರಂಥವನ್ನೇ ಬರೆದಿದ್ದಾರಲ್ಲವೆ (ಸಂಸ್ಕೃತದಲ್ಲಿ). ಒಮ್ಮೆ ಅವರು ಉತ್ತರ ಕನ್ನಡ ಜಿಲ್ಲೆಯ ಮಂಜುಗುಣಿ ಎಂಬ ಹಳ್ಳಿಗೆ ಹೋದರು - ಅಲ್ಲಿ ವೆಂಕಟೇಶ್ವರ ದೇವಸ್ಥಾನ ಇತ್ತೆಂದು ಈ ವಿಶಿಷ್ಟ ಮೂರ್ತಿಯಾದ ವೆಂಕಪ್ಪನ ಕೈಯಲ್ಲಿ ಬಿಲ್ಲು-ಬಾಣಗಳು, ಕಾಲಲ್ಲಿ ಪಾದುಕೆಗಳು ಹಾಗೇ ಇವೆ. [illegible] ಗಳ ಬೇಟೆಯಾಡಿ ದಣಿದು, ಕಾಲಲ್ಲಿಯ ಪಾದುಕೆಗಳನ್ನು ಕಳಚದೇ ಇಲ್ಲಿ ನಿಂತಿದ್ದಾನೆ ಎಂದು [illegible]

ಶ್ರೀ ರಾಘವೇಂದ್ರ ಸ್ತುತಿಪರ ಹಾಡುಗಳಂತೂ ನಾಲ್ಕು ನೂರನ್ನು ಮಿಕ್ಕಿದ್ದು, ಕೆಲವು ಸಂಗ್ರಹಗಳು ಹೊರಬಂದಿವೆ. ಸರಕಾರದ 'ಸಮಗ್ರ'ದ ಹಲವಾರು ಸಂಪುಟಗಳಲ್ಲಿ ಚೆದರಿಹೋಗಿವೆ. ಮೇಲೆ ಹೇಳಿದ ಕಾರಣದಿಂದ ಒಬ್ಬೊಬ್ಬ ದಾಸರು ಗುರುರಾಯರ ಮೇಲೆ ಒಂದಕ್ಕಿಂತ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಅವರಲ್ಲಿ ಶ್ರೀವೈಷ್ಣವರಾದ ಆಸೂರಿ ರಾಮಸ್ವಾಮಿ ಅಯ್ಯಂಗಾರರು ಹದಿನಾರಕ್ಕಿಂತಲೂ ಹೆಚ್ಚು ಹಾಡುಗಳನ್ನು ರಚಿಸಿದ್ದು ಅಚ್ಚರಿಗೊಳಿಸುವಂತಿದೆ. ಶ್ರೀ ರಾಘವೇಂದ್ರ ಯತಿಗಳು ತ್ರಿಮತಸ್ಥರಿಗೂ ಪ್ರಿಯರಾಗಿದ್ದರು.

ಯಾವುದೇ ಭಜನಾ ಕಾರ್ಯಕ್ರಮವಿರಲಿ, ರಾಯರ ಮೇಲಿನ ಕೆಲವು ಹಾಡುಗಳನ್ನು ಹೇಳದೆ ಕಾರ್ಯಕ್ರಮ ಪೂರ್ಣವಾಗುವುದೇ ಇಲ್ಲ. 'ತುಂಗಾತೀರದಿ ನಿಂತ ಸುಯತಿವರನ್ಯಾರೆ ಪೇಳಮ್ಮಯ್ಯ' ಎಂಬ ವ್ಯಾಸವಿಠಲರ ಕೀರ್ತನೆಯಂತೂ ಸರ್ವಶ್ರುತ. ಅದರಂತೆಯೇ, ಕೊನೆಕೊನೆಗೆ ಹೇಳಲಾಗುವ 'ತೂಗಿರೆ ರಾಯರ, ತೂಗಿರೆ ಯತಿಕುಲತಿಲಕರ' ಎಂಬ ಹಾಡು. ಮೋಜಿನ ಸಂಗತಿಯೆಂದರೆ ಅದರ ಅಂಕಿತವಾಗಿ ಬರುವ 'ಗುರುಜಗನ್ನಾಥವಿಠಲ' ಎಂಬುದರಿಂದಾಗಿ ಅದು ಶ್ರೀ ಜಗನ್ನಾಥದಾಸರದೆಂದು ಇನ್ನಷ್ಟು ಸಂಭ್ರಮದಿಂದ ಹೇಳುವುದುಂಟು. ಆದರೆ ಅದು ಶ್ರೀ ಗುರುಜಗನ್ನಾಥವಿಠಲರೆಂದೇ ಮುದ್ರಿಕೆಯನ್ನಿಟ್ಟುಕೊಂಡ ಕೋಸಗಿ ಸ್ವಾಮಿರಾಯಾಚಾರ್ಯರದು.

೮. ಆತ್ಮನಿವೇದನೆ

ದಾಸಸಾಹಿತ್ಯದಲ್ಲಿ ಆತ್ಮನಿವೇದನೆ ಎನ್ನುವುದು ಅತಿ ಮುಖ್ಯವಾದ ಪ್ರಮೇಯ. ಶ್ರೀಹರಿಯ ಸ್ತುತಿಯ ಅನಂತರ ಇದುವೆ ಹೆಚ್ಚಿನ ಪ್ರಮಾಣದಲ್ಲಿ ಇದೆ. (ಸು. ೨೦೦೦ ಕೀರ್ತನೆಗಳು) ಒಂದರ್ಥದಲ್ಲಿ ಆತ್ಮನಿವೇದನೆಯನ್ನು ಸ್ವೀಕರಿಸುವವ ಪರಮಾತ್ಮನೇ ಅಲ್ಲವೇ. ಅದೊಂದು ಸ್ವನಿಷ್ಠಪರವಾದ ಭಾವಗೀತೆ ಇದ್ದ ಹಾಗೆ. ಭಗವದ್ಭಕ್ತಿಯೇ ಅದಕ್ಕೆ ಪ್ರೇರಣೆ.

ಹರಿದಾಸರ ಆತ್ಮನಿವೇದನೆಯ ಮೊದಲ ಹೆಜ್ಜೆ – ಆತ್ಮನಿಂದನೆ ಮತ್ತು ತಪ್ಪೊಪ್ಪಿಗೆ. ಅಲ್ಲಿಂದ ಸಂಸಾರದಲ್ಲಿ ಅತಿಯಾಗಿ ಮೋಹಗೊಂಡು ಪರಮಾತ್ಮನನ್ನು ಮರೆತದ್ದರ ಬಗ್ಗೆ ಪಶ್ಚಾತ್ತಾಪ. ಎರಡನೆಯ ಹೆಜ್ಜೆ ಎಂದರೆ ಶರಣಾಗತಿ; 'ಎಲ್ಲವೂ ನಿನ್ನದೆ, ಇಟ್ಹಾಂಗ ಇರುವೆ' ಎನ್ನುವ ಸರ್ವಸಮರ್ಪಣ ಭಾವ.

ಮಗುವೊಂದು ಹುಟ್ಟಿದರೆ ತಾಯಿ-ತಂದೆ ತುಂಬಾ ಸಂಭ್ರಮಿಸುತ್ತಾರೆ. ಆದರೆ ಒಬ್ಬ ಹರಿದಾಸರಿಗೆ ಜನನವೆನ್ನುವುದು ಹೇಯಕಾರ್ಯ.

"ತಾನು ತನ್ನದೆಂಬ ಹೀನ ಭಾವನೆಯಿಂದ
ನಾನಾ ಯೋನಿಗಳಲ್ಲಿ ಚರಿಸಿ
ಮಾನವ ಜನ್ಮವೆತ್ತಲು ಮುಂದಾದುದೇನೆಂಬೆ ಗರ್ಭದೊಳುದಿಸಿ
ಮೂರರ ಮೇಲೆ ಮತ್ತಾರು ಮಾಸಗಳಿಂತು
ಭಾರಿ ಬವಣೆಗೊಂಡು ಕಡೆಗೆ ಭೋರನೆ ಭೂಮಿಗೆ
ತೂರಿ ಬಂದೆನು ಮಲಧಾರೆಯಾ ಕೂಡಿ".

ಮುಂದೆ ದೊಡ್ಡವರಾದ ಮೇಲೆ ಅದೆಷ್ಟು ಪರಾಧೀನತೆ!

"ನಾಲ್ಕು ಕಾಲುಗಳಿಂದ ನಾಯಿಯ ಪರಿಯಾಗಿ
ಸರ್ವತ್ರ ತಿರುಗಿ ಸಾಕುವ ಜನರೆಡಬಲ ಕಾಲತುದಿಯಿಂದ
ದೂಕಿದರಲ್ಲಿಯೆ ಸುಳಿದೆ, ವಾಕುಗಳೆಂಬ ಕೂರಂಬನು
ಸಹಿಸಿ ಪರಾಕೆಂದು ಪರರ ಸೇವಿಸಿದೆ
ಅನಂತ ಅಪರಾಧ ಎನ್ನಲ್ಲಿ ಉಂಟೋ ದೇವಾ
ಅನ್ಯರೊಬ್ಬರ ಕಾಣೆ ಮನ್ನಿಸುವವರನ್ನು
ಅನ್ನದಾಸೆಗೆ ಪರಮನೆಯ ಬಾಗಿಲ ಕಾಯ್ದೆ
ಆವ ಪರಿಯಲಿ ನಿನ್ನನೊಲಿಸುವೆ ದೇವಾ
ಎನ್ನೊಳಗೆ ಒಂದಾದರೂ ಗುಣವಿಲ್ಲ"

ಇಂಥ ಹೀನಾಯವಾದ ಬಾಳು ನಮ್ಮದಾಗಬಾರದು ಎಂದು ಇನ್ನೊಬ್ಬ ದಾಸರು ಕಳಕಳಿಯಿಂದ ಕೇಳುತ್ತಾರೆ

ಸಂಸಾರ-ಕುಟುಂಬದ ವಿಷಯದಲ್ಲಿ ಹರಿದಾಸರ ನಿಲುಮೆಯನ್ನು ತಪ್ಪು ತಿಳಿಯುವುದಕ್ಕೆ ಅವಕಾಶವಿದೆ. ಈ ಹೇಯ ಸಂಸಾರದಲ್ಲಿ ಬಿದ್ದು ಕೆಟ್ಟೆ - ಎನ್ನುವುದು ಇಂಥ ಕೀರ್ತನೆಗಳಿಂದ ಅನಿಸೀತು. ಆದರೆ ಸಾಮಾನ್ಯ ಸಂಸಾರ ಜೀವನ ತನ್ನಷ್ಟಕ್ಕೆ ಕೆಟ್ಟದಲ್ಲ. ಆದರೆ ಅದರಲ್ಲಿ ತೀರಾ ಮುಳುಗಿ ಬಿಟ್ಟು ಭಂಡನಂತೆ ಬಾಳುವೆ ನಡೆಸುತ್ತ ಭಗವಂತನ ಕೃಪೆಯನ್ನು ಮರೆಯಬಾರದು ಎಂದು ಎಚ್ಚರಿಸುತ್ತಾರೆ.

ಹರಿದಾಸರು ಸಂಸಾರಿಗರಾಗಿ ಮನೆ ಕಟ್ಟಿಸಿದ್ದುಂಟು. ಆದರೆ ತುಪಾಕಿ ವೆಂಕಟರಮಣಾಚಾರ್ಯರು ಈಗಿನವರಂತೆ ಮನೆ ಕಟ್ಟಿಸಿದರು. ಆದರೆ ಅದನ್ನು ದೇವರಿಗೇ ಬಿಟ್ಟುಕೊಟ್ಟ ರೀತಿ ಮನೋಜ್ಞವಾಗಿದೆ :

"ಪುರುಷಾರ್ಥದಾಯಿ ಶ್ರೀವರ ನೀ ನಿಲಯದಿ
ಸ್ಥಿರವಾಗು ಕರುಣಾನಿಧೇ ಆವ ಕಾಲಕು
ಸಿರಿದೇವಿಯರಸ ನೀನೇ ಕಾವಲಾಗಿರುವಿ
ನಿನ್ನ ಕಟಾಕ್ಷ ಸಂಪೂರ್ಣವಾಗಿರಲನ್ಯರ ಭಯವಿಲ್ಲವು"

ಅಂತೂ 'ಜನನಿ ಜನಕ ಗೃಹ ವನಿತೆ ಒಡವೆ ಭೂಮಿ ಧನ ವಸ್ತ್ರ ಧಾನ್ಯಗಳು, ನಾನಾವಿಧ ಸಂಪದವು ತನುಮನಗಳೊಡಗೂಡಿ ಮನ್ಮಥಜನಕ ನಿನಗೊಪ್ಪಿಸಿ ನಿರಂತರ ನೆನೆವೆ'.

ಸಂಸಾರ ಸಂದರ್ಭದಲ್ಲಿಯ ಅನೇಕ ದಾಸರ ತಪ್ಪೊಪ್ಪಿಗೆ ಪ್ರಾಮಾಣಿಕತೆಯಿಂದ ಕೂಡಿದೆ. ಪಾವಂಜೆ ಲಕ್ಷ್ಮೀನಾರಾಯಣರು ಹೇಳುತ್ತಾರೆ:

"ಮಾಧವ ನಿನ್ನಯ ಮಹಿಮೆಯ ತಿಳಿಯದಪ-
ರಾಧವ ಮಾಡಿದೆ ದಾರಿದ್ರ್ಯದ
ಬಾಧೆಯಿಂದ ತವ ಪಾದ ದರುಶನದ
ಹಾದಿಯ ಕಾಣದಾದೆ ನಾ ದ್ರೋಹಿಯಾದೆ"

ಮುಂದುವರಿದು -

"ಹಿಂದಾದುದನರಿಯೆ ಇದರಲಿ
ಮುಂದಾಗುವದ ತಿಳಿಯೆ
ಹಿಂದು ಮುಂದಿಲ್ಲದೆ
ಬಂಧನದೊಳು ಸಿಲುಕಿ ಬಲು ನೊಂದೆನಯ್ಯ"

ಆದ್ದರಿಂದ 'ಇಟ್ಹಾಂಗೆ ಇರುವೆನೋ ಹರಿಯೇ' ಎಂದು ಮನಸಾ ತಿಳಿಯಬೇಕಾಗಿ ಶ್ರೀ ಶ್ರೀಪಾದರಾಜರು ಹೇಳಿದ್ದಾರೆ. ಬೇರೊಂದು ಕೀರ್ತನೆಯಲ್ಲಿ -

ಈ ಆತ್ಮನಿಂದನೆಯಲ್ಲಿ ಭಗವಂತನನ್ನೂ ಒಂದಿಷ್ಟು ನಿಂದಿಸುವುದುಂಟು! ಅವನ ಕೃಪಾಕಟಾಕ್ಷ ಒದಗದಿದ್ದಾಗ -

"ಇದನಾದರೂ ಕೊಡದಿದ್ದರೆ ನಿನ್ನ ಪದಕಮಲವ ನಂಬಿ ಭಜಿಸುವುದೆಂತೊ"

ಶ್ರೀ ವಾದಿರಾಜರು ಸಂಸಾರಿಗರಿಗೆ ಜ್ಞಾನ, ಭಕ್ತಿ, ವೈರಾಗ್ಯ, ಇವು ಸಾಧಿಸಿಯೇ ಇವೆ - ಎನ್ನುತ್ತಾರೆ! ಆದರೆ ವ್ಯಂಗ್ಯವಾಗಿ :

ಜ್ಞಾನ?	ಸಂಸಾರದಲ್ಲಿ ಜ್ಞಾನ
ಭಕ್ತಿ?	ಸತಿ-ಸುತರಲ್ಲಿ ಭಕ್ತಿ
ವೈರಾಗ್ಯ?	ಕಂಸಾರಿ ಪೂಜೆಯಲಿ ವೈರಾಗ್ಯ

ಮುಂದುವರಿದು -

"ವಿಷಯಸುಖದಲಿ ಧ್ಯಾನ
ಲೌಕಿಕದಲಿ ಮನನ
ಹಸನಾಗಿ ಎಣಿಸುವ ಹಣವೆ ಜಪವು
ಹೆಂಡತಿಯ ಕೊಂಡೆಮಾತುಗಳೆ ಉಪದೇಶ
ಚಂಡ ಕೋಪವೆನ್ನುವುದೆ ಅಗ್ನಿಹೋತ್ರ"

ಆಯ್ತಲ್ಲ! ಕೊನೆಯಲ್ಲಿ ಹೇಳುತ್ತಾರೆ - "ಈ ಪರಿಯಿಂದ ಸುಖಸಂಪತ್ತು ಕೂಡಿಹಾಕಿ, ಹಯವದನಾ, ನಿನ್ನನ್ನು ಮರೆತೇಬಿಟ್ಟೆ!"

ಈ ರೀತಿಯಾಗಿ ನಿಂದನೆ ಮತ್ತು ತಪ್ಪೊಪ್ಪಿಗೆಯಾದ ಮೇಲೆ ಹರಿದಾಸರಿಗೆ ಶ್ರೀಹರಿಯಲ್ಲಿ ಶರಣಾಗುವುದೇ ಮುಂದಿನ ಹೆಜ್ಜೆ. ಈ ಶರಣಾಗತಿಯಲ್ಲಿ ಭಗವಂತನ ಸರ್ವ ಸಾಮರ್ಥ್ಯವನ್ನು ವಿಧವಿಧವಾಗಿ ನೆನಪಿಸಿಕೊಳ್ಳುತ್ತಾರೆ. ಹಾಗೆ ಶರಣು ಬಂದಷ್ಟೂ ಅವನಲ್ಲಿ ಸಲಿಗೆ ಹೆಚ್ಚುತ್ತದೆ. ಒಬ್ಬ ದಾಸರು ಹೇಳುತ್ತಾರೆ :

"ಇಲ್ಲಿ ಬಾರೋ ಹರಿ । ತಾತ್ಸಾರ ತರವಲ್ಲ ನಿನಗೀ ಪರಿ"

ಮತ್ತೊಬ್ಬ ದಾಸರು ಅವನನ್ನು ಹೆದರಿಸುತ್ತಾರೆ, ಸಲಿಗೆಯಿಂದ -

"ಅಚ್ಯುತಾನಂತ ಎಚ್ಚರಾಗಿರು
'ನಂಬಿದವರ ನೋಡನು' ಎಂಬ ತುಚ್ಛನುಡಿಯನು ಪಡೆಯದಿರು"

ಈ ಶರಣಾಗತಿಯ ಉನ್ನತ ಮೆಟ್ಟಿಲು ಎಂದರೆ ಸಮರ್ಪಣ ಭಾವ. 'ಇಟ್ಹಾಂಗೆ ಇರುವೆನೋ ಹರಿಯೇ' ಎಂಬ ಶ್ರೀಪಾದರಾಜರ ಅರ್ಪಣಭಾವ ಹೀಗೆ ಮುಂದುವರಿದಿದೆ :

"ಗ್ರಾಸ ವಾಸಗಳಿಗೆ ಇಲ್ಲವೆಂದು ಬೇಸರಿಸಿ ಬೇಡಬಂದಿಲ್ಲ
ಸತಿಸುತರುಗಳ ಸಹಿತನಾಗಿ ಸಾ ಹಿತದಿಂದ ಇರಬೇಕೆಂಬೊದಿಲ್ಲ
ಸಾಲವಾಯಿತೆಂದು ಸಂಬಳ ಎನಗೆ ಸಾಲದೆಂದು ಬೇಡಬಂದುದಿಲ್ಲ
ಒಡವೆಗಳಿಲ್ಲ ಒಡ್ಯಾಣಗಳಿಲ್ಲೆಂದು ಬಡವನೆಂದು ಬೇಡಬಂದಿಲ್ಲ
ಒಡೆಯ ನಿನ್ನಡಿಗಳಿಗೆರಗುವದಕೆ ಮನ ಬಿಡದಿಹದೊಂದನು ಕೊಡು ಸಾಕೆಂದೆ"

ಶ್ರೀ ಜಗನ್ನಾಥದಾಸರ ಶರಣಾಗತಿ ಒಂದಿಷ್ಟು ವಾಸ್ತವರೂಪವನ್ನು ತಾಳಿದೆ:

"ಏಳುವಾಗಲಿ, ಭಾರ ತಾಳುವಾಗಲಿ, ಎಡಹಿ ಬೀಳುವಾಗಲಿ
ಕಾಲ ಕಾಲಗಳಲ್ಲಿ ಕಾಲನಾಮಕ, ನಿನ್ನ ಲೀಲೆಗಳ ಮರೆಯದೆ ನಾಲಗೆ ಬರುವಂತೆ
ನಿಲ್ಲುವಾಗ, ಕುಳಿತು ಮೈದೊಳೆವಾಗ, ಅನ್ನಗಳ ಮೆಲುವಾಗ, ವಿದ್ಯೆಗಳ
ಕಲಿವಾಗ, ಮಲಗಿ ಸುಖದಿಂದ ನಲಿವಾಗ, ಭಕ್ತವತ್ಸಲ ನಿನ್ನ
ಮಹಿಮೆಗಳ ತಿಳಿವಂತೆ ಮಾಡಯ್ಯ"

ಈ ಶರಣಾಗತಿಯನ್ನು ಸಮಾರೋಪದಂತೆ ಮಹಿಪತಿರಾಯರು ಹೇಳುವುದು ಹೀಗೆ :

"ಆಡಿಸಿದರೆ ಆಡುವೆ, ನೋಡಿಸಿದರೆ ನೋಡುವೆ, ಮಾಡಿಸಿದರೆ
ಮಾಡುವೆ ಪ್ರೇರಿಸಿದ್ಹಾಂಗ. ನುಡಿಸಿದರೆ ನುಡಿವೆ ಚೇತರಿಸಿದ್ಹಾಂಗ,
ಅಳಿಸಿದರೆ ಅಳುವೆ ಅನುವು ಆದ್ಹಾಂಗ"

ಇದೊಂದು ಸುಖ-ದುಃಖಗಳನ್ನು ಸಮನಾಗಿ ಕಾಣುವ ಸ್ಥಿತಪ್ರಜ್ಞತೆ ಎನ್ನೋಣವೆ? ರಾಮದಾಸರೂ ಇಂಥದೇ ಸ್ಥಿತಪ್ರಜ್ಞತಾಭಾವವನ್ನು ವ್ಯಕ್ತಪಡಿಸಿದ್ದಾರೆ :

"ನಾನಾ ಚಿಂತನೆ ಎನಗಿಲ್ಲ ಹರಿ!
ಉಪವಾಸ ಬಿದ್ದರೆ ಅಡ್ಡಿಯಿಲ್ಲ; ಅಪರೂಪದ ಊಟಾದರೆ ಹಿಗ್ಗಿಲ್ಲ
ಕಪಟದಿ ಬೈದರೆ ಅಹಿತಿಲ್ಲ; ಜನ ಎನಗೆ ನಿಪುಣನೆಂದರು ಅಹಿತಿಲ್ಲ
ಪರಮ ಬಡತನವಿರೆ ಪರ್ಯವಿಲ್ಲ ಬಲು ಸಿರಿಸಂಪದವಿರೆ ಹರುಷಿಲ್ಲ
ಮರಣ ಬಂದರೇನು ಕೆಡುಕಿಲ್ಲ ಚಿರಕಾಲವಿರಲು ಏನು ಸುಖವಿಲ್ಲ
ಸುಪಥದಿ ನಡೆಸೆನ್ನ ಸಫಲನೆನಿಸಿ"

ಈ ಆತ್ಮನಿವೇದನೆಯ ಕೀರ್ತನೆಗಳ ವೈವಿಧ್ಯವು ವಿಸ್ಮಯಕಾರಿಯಾಗಿದೆ. ತಮ್ಮ ಮನದ ಭಾವನೆಗಳನ್ನು ನಾನಾ ರೀತಿಯಲ್ಲಿ ಹೇಳಿದ್ದನ್ನು ನೋಡಿದಾಗ ದಾಸರ ಹೃದಯ ಸಂಪನ್ನತೆ ವೇದ್ಯವಾಗುತ್ತದೆ.

ನನಗೆ ಆಶ್ಚರ್ಯವಾಗಿ ಕಂಡದ್ದೆಂದರೆ ಯತಿವರ್ಯರಾದ ದಾಸರು ತಮಗೆ ಸಂಸಾರದ ಮೋಹ ಇದ್ದವರ ಹಾಗೆ ಭಂಡ ಬಾಳನ್ನು ನಡೆಸಿ ತಪ್ಪುಮಾಡಿ ಒಪ್ಪಿಕೊಳ್ಳುವ ರೀತಿಯಲ್ಲಿ ಕೀರ್ತನೆಗಳನ್ನು ರಚಿಸಿದ್ದಾರಲ್ಲ?

ಸಾಗರಕಟ್ಟೆ ಪ್ರದ್ಯುಮ್ನತೀರ್ಥರು ತಮ್ಮ ಯತ್ಯಾಶ್ರಮದ ಬಗೆಯನ್ನೇ ಹೀಗಳೆದಿದ್ದಾರೆ :

"-ಎಲ್ಲರಂತೆ ಅರುಣೋದಯದಲೆದ್ದು ಪರರ ವಂಚನೆಗಾಗಿ
ಹರಿವೊ ಜಲದಲಿ ಮುಳುಗಿ ಬೆರಳೆಣಿಸಿ ಅರಿಯದೇ
ಅರಿಷಟ್ಕರಿಂದ ಪರರೊಡವೆಯನು ಬಯಸುವೆನು
-ಅಂಗಡಿಯ ತೆರದಿ ನಾ ಹಿಂಡುಗೊಂಬೆಗಳ್ಹೂಡಿ
ಅಂಗ ಚಲಿಸದೆ ಮೂಗು ಹಿಂಡುತಲೆ ಕುಳಿತು......"

ಇದೇ ಬಗೆಯ ಆತ್ಮನಿಂದನೆಯನ್ನು ಶ್ರೀಪಾದರಾಜರೂ ತಮ್ಮನ್ನು 'ಸುಮ್ಮನೆ, ವೈಷ್ಣವನೆಂಬಿರಿ ಪರಬೊಮ್ಮ ಸುಜ್ಞಾನವನರಿಯದ (ಈ) ಮನುಜನ' ಎಂಬ ಕೀರ್ತನೆಯಲ್ಲಿ ವ್ಯಕ್ತಪಡಿಸಿದ್ದಾರೆ :

"ಊರ ಮಾತುಗಳಾಡಿ ದಣಿದೆನಲ್ಲದೆ
ನಾರಾಯಣ ಕೃಷ್ಣ ಶರಣೆಂದೆನೆ
ನಾರಿಯ ನುಡಿ ಕೇಳಿ ಮರುಳಾದೆನಲ್ಲದೆ
ಗುರುಹಿರಿಯರ ಮಾತ ಮನ್ನಿಸಿದೆನೇನಯ್ಯ"

ಶ್ರೀ ವಾದಿರಾಜರು 'ಏನು ಬಂದ್ಯೋ ಜೀವವೆ ಶರೀರದೊಳು ವ್ಯರ್ಥವಾಗಿ' ಎಂಬ ಕೀರ್ತನೆಯಲ್ಲಿ ತಾವು ದಾನ-ಧರ್ಮ ಮಾಡಲಿಲ್ಲವೆಂದೂ, ಯತಿಯಾಗಿ ತೀರ್ಥಯಾತ್ರೆ ಮಾಡಲಿಲ್ಲವೆಂದೂ ಶ್ರುತಿ-ಶಾಸ್ತ್ರ- ಪುರಾಣಗಳನ್ನು ಕಿವಿಗೊಟ್ಟು ಕೇಳಲಿಲ್ಲವೆಂದೂ ಮರುಗಿದ್ದಾರೆ. ಯಾರಾದರೂ ನಂಬಬಹುದೆ ಇಂಥ ಮಾತುಗಳನ್ನು? ಈ ಸಂದರ್ಭದಲ್ಲಿ ಶ್ರೀ ವಿಜಯೀಂದ್ರಯತಿಗಳ 'ದುರಿತಾಪಹಾರಸ್ತೋತ್ರ'ವನ್ನು ಹಾಗೂ 'ಪಾಪವಿಮೋಚನ ಸ್ತೋತ್ರ'ವನ್ನು ನೆನೆಯಬೇಕು. ಮೇಲೆ ವ್ಯಕ್ತಪಡಿಸಲಾದ 'ಸ್ವಾಹಂಕಾರ ಖಂಡನೆ'ಯ ವಿವರಣೆ ಅಲ್ಲಿದೆ. ತಮ್ಮನ್ನು ಕೆಳಗಿಳಿಸಿ ಹೇಳುವುದರ ಮೂಲಕ, ಆ ರೀತಿ ಬಾಳುವ ಸಾಮಾನ್ಯ ಜನರಿಗೆ ಉಪದೇಶ ಮಾಡುವುದು ಅವರ ಉದ್ದೇಶವಾಗಿರುತ್ತದೆಯಲ್ಲದೆ ವಾಸ್ತವದೃಷ್ಟಿಯಿಂದ ನಾವು ಅವರ ಈ ಮಾತುಗಳನ್ನು ಗಣಿಸಲಾಗದು.

೯. ಗುರುನಮನ

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಪುರಂದರದಾಸರ ಒಸಗೆಯನ್ನು ಎಲ್ಲ ಹರಿದಾಸರೂ ಆತ್ಮಸಾಕ್ಷಾತ್ಕಾರ ಮಾಡಿಕೊಂಡು ಆ ಪ್ರಕಾರ ಗುರುಕೃಪೆಯನ್ನು ಕೋರಿದವರು. ಯಾರೊಬ್ಬ ಗುರುವಿನ ನಿರ್ದಿಷ್ಟ ಹೆಸರು ಹೇಳದೆ ಗುರುಮಹಿಮೆಯನ್ನು ಹೇಳಿದ ವಿವಿಧ ಹಾಡುಗಳು ಮುನ್ನೂರರಷ್ಟಿವೆ. 'ಗುರುವೆನ್ನ ತಾಯಿ ಸದ್ಗುರುವೆನ್ನ ತಂದೆ' ಎಂದು ಗುರುವಿಮಲಾನಂದರು ತಿಳಿದಿದ್ದರೆ, 'ನಂಬಿ ಗುರುರಾಯನಂಘ್ರಿಯಾ ಸಲಹುತಾನೆ' ಎಂಬುದು ಮಹಿಪತಿಸುತರ ನಿಶ್ಚಿತ ಅಭಿಮತ. ವಿಜಯರಾಮಚಂದ್ರವಿಠಲರು 'ಗುರುಭಕ್ತಿ ಮಾಡು ಮನವೆ' ಎಂಬ ಸುಳಾದಿಯನ್ನೇ ರಚಿಸಿದ್ದಾರೆ. ಗುರುವಿನ ಅಸ್ತಿತ್ವವನ್ನು ಹೀಗೆ ಮನಸಾ ಅಭಿವ್ಯಕ್ತಿಗೊಳಿಸಿದವರಲ್ಲಿ ಮಹಿಪತಿರಾಯರು ಮತ್ತು ಚಿದಾನಂದರು ಮುಖ್ಯರು.

ಗುರುಮಹಿಮೆಯನ್ನು ಗಮನಿಸಿದಾಗ ಸಜ್ಜನರ ಸಂಗ, ಸತ್ಸಂಗವನ್ನು ತಂತಾನೆ ನೆನೆಯುವಂತಾಗುತ್ತದೆ. ಈ ಸತ್ಸಂಗವನ್ನು ಬಯಸಿದವರು ಅನೇಕ ಹರಿದಾಸರು. 'ಸಜ್ಜನರ ಸಂಗ ನೀಡೋ ಸರ್ವಪಾಲಕನೆ' ಎಂದು ಭೀಮೇಶಕೃಷ್ಣ ಕೇಳಿಕೊಂಡಿದ್ದಾರೆ. 'ಸಜ್ಜನರ ಸಂತಾಪ ಕುಲಕೆ ಮೃತ್ಯುವು ಕಂಡ್ಯ ಮನವೆ' ಎಂದು ಕೃಷ್ಣವಿಠಲದಾಸರು ಎಚ್ಚರಿಸಿಕೊಂಡಿದ್ದಾರೆ. 'ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ' ಎಂಬ ಕನಕದಾಸರ ಹಾಡಂತೂ ಸಾಕಷ್ಟು ಜನಪ್ರಿಯವಾಗಿದೆ.

ಮಾಧ್ವಯತಿಗಳು ಹರಿದಾಸರಿಗೆ ಪರಮಪೂಜ್ಯ ಗುರುಗಳು; ಅವರಿಗೆ ನಮನ ಸಲ್ಲಿಸಲೆಂದೇ ಅವರ ವೃಂದಾವನಗಳಿರುವ ಜಾಗಕ್ಕೆ ಹೋಗಿ ಬಂದಿದ್ದಾರೆ. ಅದರಿಂದ ನೂರರ ಹತ್ತಿರದ ಸಂಖ್ಯೆಯ ಪೀಠಸ್ಥಸ್ವಾಮಿಗಳ ಬಗ್ಗೆ ಕೀರ್ತನೆಗಳು ದೊರೆಯುತ್ತವೆ. ಹೆಚ್ಚಿನ ಕೀರ್ತನೆಗಳು ಮಂತ್ರಾಲಯದ ಶ್ರೀ ರಾಘವೇಂದ್ರರನ್ನು ಕುರಿತು

ಇರುವುದು ತಿಳಿದ ವಿಷಯ. ಆಮೇಲಿನ ಕೀರ್ತಿತ ಯತಿಗಳೆಂದರೆ ಶ್ರೀ ಶ್ರೀಪಾದರಾಜರು, ಶ್ರೀ ಜಯತೀರ್ಥರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು ಮತ್ತು ಶ್ರೀ ವರದೇಂದ್ರರು.

ತಮಗೆ ವಿದ್ಯೆ ಕಲಿಸಿದ ಗುರುಗಳ ಬಗ್ಗೆಯೂ ಕೆಲವು ಹರಿದಾಸರು ಕೀರ್ತನರೂಪದಲ್ಲಿ ಅವರನ್ನು ನೆನೆದಿದ್ದಾರೆ. ಅಂಥ ಆಚಾರ್ಯರಲ್ಲಿ ಐಕೂರು ನರಸಿಂಹಾಚಾರ್ಯರು ಒಬ್ಬರು. ಸುಪ್ರಸಿದ್ಧ ಶ್ಯಾಮಸುಂದರವಿಠಲರಿಗೆ ವಿದ್ಯೆ ಕಲಿಸಿದವರು. ಬಿಡಿ ಸನ್ಯಾಸಿಯಾಗಿ ವಿಷ್ಣುತೀರ್ಥರೆಂದು ಹೆಸರು ಪಡೆದಿದ್ದ ಮಾದನೂರಿನ ಅರಣ್ಯಕಾಚಾರ್ಯರಂತೂ ಪ್ರಕಾಂಡ ಪಂಡಿತರಾಗಿದ್ದರು. ಅವರನ್ನು ಸ್ತುತಿಸಿದ ಪದ್ಯಗಳು ಸಾಕಷ್ಟಿದ್ದು ಭಕ್ತಿಭಾವದಿಂದ ಕೂಡಿವೆ.

ಖ್ಯಾತಿವೆತ್ತ ಹರಿದಾಸರನ್ನೇ ಸ್ತುತಿಸಿದ ಕೀರ್ತನೆಗಳು ದೊಡ್ಡ ಪ್ರಮಾಣದಲ್ಲಿ ದೊರೆಯುತ್ತವೆ. ಈ ಪ್ರಕಲ್ಪವನ್ನು ಆರಂಭಿಸಿದವರು ವ್ಯಾಸರಾಯರು. ಮಾತ್ರವಲ್ಲ, ತಮ್ಮ ಶಿಷ್ಯನನ್ನೇ 'ದಾಸರೆಂದರೆ ಪುರಂದರದಾಸರಯ್ಯ' ಎಂದು ಬಣ್ಣಿಸಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವರ್ಣಿತರಾದವರೆಂದರೆ ಪುರಂದರದಾಸರು, ವಿಜಯದಾಸರು, ಅವರ ಶಿಷ್ಯರಾದ ಗೋಪಾಲದಾಸರು ಮತ್ತು ಜಗನ್ನಾಥದಾಸರು. ತುಲಸೀರಾಮದಾಸರು ಹಾಗೂ ಈಚಿನವರಾದ ತಂದೆ ಮುದ್ದುಮೋಹನದಾಸರು. ಇವರು ದಾಸದೀಕ್ಷೆಯನ್ನು ಕೊಟ್ಟು ಶಿಷ್ಯರನ್ನಾಗಿ ಮಾಡಿಕೊಂಡ ಪರಿವಾರವೂ ದೊಡ್ಡದು. ಈ ಹಿರಿಯ ಹರಿದಾಸರುಗಳ ನಿರ್ಯಾಣದ ಪ್ರಸಂಗವನ್ನು ನೆನೆದು (ತೆರಳಿದರೋ.....) ಕೆಲವು ಕೀರ್ತನೆಗಳು ರಚಿತವಾಗಿವೆ. ಅದರಿಂದ ಅವರ ಪುಣ್ಯತಿಥಿಯ ದಿನವನ್ನು ಖಚಿತಗೊಳಿಸಬಹುದು.

ಹುಯಿಲಗೋಳ ನಾರಾಯಣರಾಯರು 'ಗದುಗಿನ ವೀರನಾರಾಯಣ' ಮುದ್ರಿಕೆಯಲ್ಲಿ ಪುರಂದರದಾಸರನ್ನು ಕುರಿತು ವರ್ಣಿಸಿದ ಕೀರ್ತನೆ ವ್ಯಾಜನಿಂದಾಸ್ತುತಿಯಿಂದ ಸೊಗಸಾಗಿ ಮೂಡಿಬಂದಿದೆ :

"-ಜಿಪುಣರ್ರೈ ನೀವೆಂದು ಹೇಳಿದುದು ಸುಳ್ಳಲ್ಲ
-ಘನತರದ ವೈರಾಗ್ಯ ತಳೆದು ದ್ವಿಜರಿಗೆಲ್ಲ
ಧನಕನಕ ಸಂಪತ್ತು ದಾನ ಮಾಡಿದಿರಲ್ಲ.
ವನಜನಾಭನ ಸ್ತುತಿಗೆ ಶಬ್ದಸಂಪತ್ತೆಲ್ಲ
ಒಸೆದು ನೀವೇ ಬಳಸಿ ನನಗೇನು ಕೊಡಲಿಲ್ಲ
-ಖಂಜೂತನದ ಕಥೆಯನು ಹೇಳಲಾಸಲ್ಲ
ಕಂಜನಾಭನ ಮಹಿಮೆ ಬಣ್ಣಿಸುವ ನೆವದಲ್ಲಿ
ರಂಜನೆಯ ಶಬ್ದಗಳ ಸವಿದುಂಡೆಯಲ್ಲಿ
ಎಂಜಲವ ಉಳಿದೆನಗೆ ಕಿಂಚಿತ್ತು ಬಿಡಲಿಲ್ಲ!"

ಶ್ರೀ ಪುರಂದರದಾಸರ ಕಾವ್ಯರಚನಾ ಮಹಿಮೆಯನ್ನು ಎಷ್ಟೊಂದು ರಸವತ್ತಾಗಿ ವರ್ಣಿಸಿದ್ದಾರೆ! ಕನಕದಾಸರ ಬಗೆಗೂ ಇಂಥದೇ ಉಕ್ತಿ ಚಾತುರ್ಯವಿದೆ :

"-ಕನಕಾ ನಿನ್ನ ಕೆಣಕಿ ನಾನು ತಿಣಕಲಾರೆನೊ
-ಅಡಿಗಡಿಗೊಗೆದ ಮುಂಡಿಗೆಯನು ಒಡಿಯಲಾರೆನೊ
ಒಡಿಯಲು ದುಡುಕಿ ದುಡುಕಿ ದಣಿವ ತಡಕೋಲಾರೆನೊ"

೧೦. ಮತಧರ್ಮಗಳು

ಇನ್ನೀಗ ವಿವಿಧ ಮತ-ಪಂಥಗಳು, ಶೇ.೮೫ರಷ್ಟು ಹಾಡುಗಳು ದ್ವೈತಮತದ ಪರವಾಗಿಯೇ ಇವೆ. ಉಳಿದ ಮತದವರು ರಚಿಸಿದ್ದರಲ್ಲಿ ಶ್ರೀರಾಮ, ಶ್ರೀಕೃಷ್ಣ, ಮಹಾಲಕ್ಷ್ಮಿ ಇವರೂ ಸ್ತುತಿಸಲ್ಪಟ್ಟಿದ್ದಾರೆ. ಕ್ಷೇತ್ರಸ್ಥರಾಗಿರುವ ದುರ್ಗಾ, ಬಗಳಾಂಬಾ, ಚಂದ್ರಲಾ, ಮೂಕಾಂಬಿಕೆ ಇವರ ಕುರಿತ ಸೊಗಸಾದ ವರ್ಣನೆಗಳನ್ನೂ ಕಾಣಬಹುದು. ಮಾಧ್ವ ಹರಿದಾಸರು, ಅದ್ವೈತದ ತತ್ವಗಳನ್ನು ಟೀಕಿಸುವುದು ೧೮ನೆಯ ಶತಮಾನದವರೆಗೆ ನಡೆದುಕೊಂಡು ಬಂದಿತ್ತು - ಒಮ್ಮೊಮ್ಮೆ ಕಟುವಾಗಿ. ಇತ್ತೀಚೆಗೆ ಕಂಡುಬಂದಿಲ್ಲ.

'ದ್ವೈತ-ಅದ್ವೈತವೆಂದು ಹೊಡೆದಾಡದಿರೊ ಪ್ರಾಣಿ' ಎಂದು ಮಹಿಪತಿರಾಯರು ಸ್ಪಷ್ಟಪಡಿಸುತ್ತಾರೆ. 'ಸ್ವಾತ್ಮರನ್ನು ನಿಂದಿಸುವ ಕೆಟ್ಟ ಧೂರ್ತರು' - ಮುಂತಾಗಿ ಗುರುರಾಮವಿಠಲರು ನಿಂದನಗೈದಿದ್ದಾರೆ. ವರಾಹತಿಮ್ಮಪ್ಪರು 'ಗಂಧ

ಹಚ್ಚಿರಿ' ಎಂದು ಸ್ಮಾರ್ತರಿಗೂ 'ವಿಭೂತಿ ಹಚ್ಚಿರಿ' ಎಂದು ವೈಷ್ಣವರಿಗೂ ಉಪದೇಶಿಸುತ್ತಾರೆ. (ಹೀಗೆ ಹೇಳುವುದರ ಹಿನ್ನೆಲೆ ಬೇರೆಯೇ ಇತ್ತು). ಹಾಗೆ ಹೇಳುವುದು ಅಲಂಕಾರಿಕವಾಗಿ ಮಾತ್ರ, ಆದರೆ ಮುಂದಿನ ನುಡಿಗಳಲ್ಲಿ ಮಾಧ್ವಮತಕ್ಕೆ ಅನ್ವಯಿಸುವ ಮಾತುಗಳನ್ನೇ ಹೇಳಿದ್ದಾರೆ.

ಈ ವಿಷಯದಲ್ಲಿ ಶ್ರೀ ವಾದಿರಾಜರ ಕ್ರಮವು ವಿಶಿಷ್ಟವಾದದ್ದು. ಶಿವನನ್ನು ಹಲವಾರು ಕೀರ್ತನೆಗಳಲ್ಲಿ ಮನಸಾರೆ ಹೊಗಳಿದ್ದಾರೆ. ಹಾಗಿದ್ದರೂ ಶ್ರೀಹರಿಯೇ ಸರ್ವೋತ್ತಮನು ಎಂದು ಖಚಿತ ರೀತಿಯಲ್ಲಿ ವಿಷಯಮಂಡನೆ ಮಾಡಿದ್ದಾರೆ. ಒಂದು ಕೀರ್ತನೆಯಲ್ಲಿ ಹರಿ-ಹರ ಇವರ ತುಲನೆಯನ್ನು ಉಕ್ತಿಚಾತುರ್ಯದಿಂದ ಕೊಟ್ಟಿದ್ದಾರೆ. ಅಲ್ಲಿಯ ಕಲ್ಪಕತೆ ಮನಂಬುಗುವಂತಿದೆ.

"ಒಂದು ಮೂರುತಿಯಲ್ಲಿ ಹರಿ ಹರ ದೇವರಿಬ್ಬರು
ಬಂದು ನೆಲೆಗೊಂಡುದನ ಕಂಡೆನದ್ಭುತವ

-ಭಾವಜನ ಪಿತನೊಬ್ಬ ಅವನ ಕೊಂದವನೊಬ್ಬ
ಹಾವ ತುಳಿದವನೊಬ್ಬ ಧರಿಸಿದವನೊಬ್ಬ
ಗೋವ ಕಾಯಿದನೊಬ್ಬ ಅದನೇರಿದವನೊಬ್ಬ
ಭಾವಿಸಲು ವಿಪರೀತಚರಿತರಂತಿರ್ದು.

-ದಾನವರ ರಿಪುವೊಬ್ಬ ವರವೀವನೊಬ್ಬ
ಏನನೆಂಬೆನೊ ಜಗವ ಕಾವುತಿಹನೊಬ್ಬ ನಿ-
ಧಾನಿಸಲು ಸಂಹರಿಸಿ ಕೊಲ್ಲುತಿಪ್ಪನೊಬ್ಬ

-ಯಾಗಪಾಲಕನೊಬ್ಬ ಯಾಗಭಂಜನನೊಬ್ಬ
ಈಗ ನಲ್ಲಳಿಗರ್ಧದೇಹವನಿತ್ತ ಶಿವನಂತೆ
ಭೋಗದೊಳು ಹೊಂದಿಹ ಹಯವದನ ಬಲ್ಲ"

೧೧. ಸಾಮಾಜಿಕ / ಲೌಕಿಕ ವಿಷಯಗಳು

ಹರಿದಾಸರು ತಿರುಗಾಟದವರಾದರೂ ಲೌಕಿಕ ಜೀವನವನ್ನು ಪೂರ್ಣತಃ ನಡೆಸಿದವರು. ಆ ಕಾರಣದಿಂದ ಸಾಮಾಜಿಕ ಪ್ರಜ್ಞೆಯುಳ್ಳವರಿದ್ದರು. ಭಗವದ್ಭಕ್ತಿಯಿಂದಾಗಿ ಐಹಿಕ ವಿರಕ್ತಿಯ ಮಾತುಗಳನ್ನು ಮೇಲಿಂದ ಮೇಲೆ ಹೇಳುತ್ತಿದ್ದರಾದ್ದರಿಂದ ಅವರು ಸಮಾಜದ ಹಿತಚಿಂತಕರಾಗಿರಲಿಲ್ಲವೆಂದು ಅನೇಕರು ತಿಳಿಯುತ್ತಾರೆ. ಅದು ತಪ್ಪು. ಕುಟುಂಬ ವಿಚಾರದಲ್ಲಿ ಮಕ್ಕಳು ಹುಟ್ಟಿದಾಗ, ತಂದೆ-ತಾಯಿಗಳು ತೀರಿಕೊಂಡಾಗ, ಹೊಸ ಮನೆ ಕಟ್ಟಿಸಿದಾಗ, ಆರ್ಥಿಕ ಅಡಚಣೆಗೆ ಒಳಗಾದಾಗ, ಅಪಮಾನವಾದಾಗ ಸಹಜ ಸ್ಫೂರ್ತಿಯಿಂದ ಅದನ್ನು ಹೇಳಿಕೊಂಡಿದ್ದಾರೆ. ಆದರೆ ತಕ್ಷಣ ಭಗವಂತನ ಕೃಪೆಯನ್ನು ಕೋರಿದ್ದಾರೆ. ಹಾಗೆ ಹೇಳುವಲ್ಲಿ ಯಾವುದೇ ಕೃತ್ರಿಮತೆ ಇರದೇ ಅಪ್ಪಟ ಪ್ರಾಮಾಣಿಕತನ ಒಡೆದು ತೋರುತ್ತದೆ.

ಪಾವಂಜೆ ಲಕ್ಷ್ಮೀನಾರಾಯಣರು ಪ್ರಸಿದ್ಧ ಕೀರ್ತನಕಾರರು, ಬಡವರಾದ ಇವರು ತಾನು ರಾಮ, ಕೃಷ್ಣ ಎಂದು ದೇವರ ಹೆಸರಿನಲ್ಲಿ ವ್ಯಾಪಾರ-ಸಾಪಾರ ಮಾಡಿ, ದೇವರ ಮಹಿಮೆಯನ್ನು ಅರ್ಥ ಮಾಡಿಕೊಳ್ಳದೇ ಹೋದೆ ಎಂದಿದ್ದಾರೆ. ಅವರು ಹೇಳಿದ ತಮ್ಮ ಸ್ಥಿತಿಗತಿಯೊಂದರ ಪ್ರಸಂಗ ಮೋಜಿನದಾಗಿದೆ -

'ತ್ರಾಣವಿರುವಾಗ ದೇವರಿಗೆ ಕಾಣಿಕೆ ತೆಗೆದಿಟ್ಟೆ. ಮೇಣ್ ಅದರಿಂದಲೇ ತೆಗೆದು ಪ್ರಾಣಕ್ಕೆ ಆಹುತಿಕೊಟ್ಟೆ, ದೇವರ ಹೆಸರಿನಲ್ಲಿ ಪ್ರತಿ ಶನಿವಾರ ಒಪ್ಪೊತ್ತು ಊಟ ಮಾಡ್ತಿದ್ದೆ. ಜ್ವರ ಬಂದು, ಊಟ ಶುರುವು ಮಾಡಿದೆ. ಜ್ವರ ನಿಂತ ಮೇಲೂ ಊಟವನ್ನು ಮುಂದುವರಿಸಿದೆ. ಹೀಗೆ ಹಣ ನನ್ನ ಗುಣವನ್ನು ನುಂಗಿತೆಂಬುದು ಪಾದಕ್ಕೆ ಗೊತ್ತು. ಆದ್ದರಿಂದ ದೇವರೇ, ನನಗೆ ದೃಢಭಕ್ತಿಯನ್ನು ಕೊಡು.'

'ಅಡಿಗೀಯ ಮನಿಯಾಗ ಮಡದೀಯು ಸುಳಿವಿಲ್ಲ' ಎಂಬೊಂದು ಜಾನಪದ ಹಾಡಿದೆ. ತುಪಾಕಿ ವೆಂಕಟರಮಣರಿಗೆ ಬೇರೆಯೇ ಅನುಭವವಾದದ್ದು. ಅಡಿಗೆಯ ಮನೆಯಲ್ಲಿ ಮಡದಿ ಇದ್ದಾಳೆ. ಅಡುಗೆ ಮಾಡುತ್ತಿದ್ದಾಳೆ. ಇವರು ಅಲ್ಲೇ ಪ್ರವೇಶ ಬಯಸಿದ್ದಾರೆ. ಆಗಿನ ಇವರ ಮನಸ್ಥಿತಿ?

"ಮಡಿಯೆಂದು ಪೂಜೆಗೆ ಕುಳಿತಿರಲು
ಮಡದಿ ಹತ್ತಿರ ಬರಲು ಅವಳ ಒಡವೆಯ
ನೋಡುತ ಅಡಿಗೆಯ ಪಣ್ಯೆಯ
ನುಡಿಯಲ್ಲದೆ ಜಪದ ಗೊಡವೆಯೆ ಇರದು."

ಅಡಿಗೆ ಮುಗಿಯಿತೆಂದರೆ –

"ಪಾಕ ಪೂರಣವಾಗೆ ಈಗ ಸಾಕೆಂಬೆ ಹರಿಪೂಜೆ"

ಇನ್ನು ಊಟ ಮಾಡುವಾಗ?

"ಶಾಕಾದಿಗಳು ವಿವೇಕವಾಗದಿರೆ ಭೀಕರಿಸುತ ಅವಿವೇಕನಾಗುವೆ"

ಎಷ್ಟೊಂದು ವಾಸ್ತವ ಚಿತ್ರಣ! ಅನೇಕ ಬ್ರಾಹ್ಮಣರ ಮನೆಯಲ್ಲಿ ಕಂಡುಬರುವಂತಹ ದೃಶ್ಯ. ಇದು ಸಹಜವಾದರೂ ದಾಸರು ತಮ್ಮ ತಪ್ಪನ್ನು ಒಪ್ಪಿಕೊಂಡು ಪರಮಾತ್ಮನ ಸ್ಮರಣೆಗೆ ಅಣಿಯಾಗುತ್ತಾರೆ.

ಇತ್ತ ಸಾಮಾಜಿಕ ಅಸಮಾನತೆ ಹರಿದಾಸರ ಕೀರ್ತನೆಗಳಲ್ಲಿ ಹೇಗೆ ಬಂದಿದೆ ಎಂಬುದು ಗಮನಿಸುವಂತಿದೆ. ನಮ್ಮ ದಾಸರು ಈ ಅಸಮಾನತೆಯನ್ನು ಒಟ್ಟಿನಲ್ಲಿ ಮಾನ್ಯ ಮಾಡಿಲ್ಲ. ಅಲ್ಲದೆ ತಮ್ಮ ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ. ಶ್ರೀ ಮೋಹನದಾಸರಿಗೆ "ಹೊಲೆಯರಿಲ್ಲದ ಊರೊಳು ಇರಬಾರದು. ಎಷ್ಟೆಂದರೂ ಆ ದಲಿತರಿಗೂ ಸ್ವಾಮಿ ಮೋಹನವಿಠಲನೇ" – ಎಂಬುದು ಅಭಿಮತ.

ಇನ್ನೊಬ್ಬರ ಹಾಡಿನಲ್ಲಿ ಈ ಮಾತು ಬರುತ್ತದೆ :

"ಭಗವಂತನಲ್ಲಿ ಭಕುತಿಯುಳ್ಳ ಮಾದಿಗನೇ ಉತ್ತಮ
ನಗಧರನ ನೆನೆಯದಿಪ್ಪ ವಿಪ್ರ ಮಾದಿಗನಿಗಿಂತ ಕನಿಷ್ಠ"

ಈ ಜಾತಿ, ಕುಲ ವಿಚಾರಗಳನ್ನು ಪುರಂದರದಾಸರೂ ಕನಕದಾಸರೂ ವಿಶಿಷ್ಟ ರೀತಿಯಲ್ಲಿ ಖಂಡಿಸಿದ್ದಾರೆಂಬುದು ತಿಳಿದ ವಿಷಯ.

ನಮ್ಮ ನಿತ್ಯದ ಜೀವನವನ್ನು ಅಸ್ತವ್ಯಸ್ತಗೊಳಿಸುವ ವಿಪತ್ತುಗಳು ಬಂದೊದಗುತ್ತವೆ. ಉದಾಹರಣೆಗೆ ಬರಗಾಲ. ದಾಸರು ತಂಬೂರಿ ಮೀಟುತ್ತ ಹಾಡು ಹೇಳುವವರು ಮಾತ್ರವೇ ಆಗಿದ್ದರೆ, ಊರು ಸುಟ್ಟರೂ ಹನುಮಪ್ಪ ಹೊರಗೇ ಎಂಬ ಮಾತಿಗೆ ಉದಾಹರಣೆಯಾಗುತ್ತಿದ್ದರು ಅಥವಾ ಊರು ಬೆಂಕಿಯಿಂದ ಬೇಯುತ್ತಿದ್ದಾಗ ನೀರೋ ಪಿಟೀಲು ಬಾರಿಸ್ತಾನೇ ಇದ್ದ – ಎಂಬುದನ್ನೂ ನೆನಪಿಗೆ ತರುವಂತಾಗುತ್ತಿದ್ದಿತು. ಹಾಗಿಲ್ಲ ಬರಗಾಲ ಸ್ಥಿತಿಯನ್ನು ಹಲವಾರು ದಾಸರು ಪ್ರಸ್ತಾಪಿಸಿದ್ದಾರೆ. ಅದರ ಕೊನೆಯಲ್ಲಿ ದೇವರಲ್ಲಿ ಮೊರೆಯಿಡುತ್ತಾರೆ.

ಬರಗಾಲವು ಜನರ ಸರ್ವಸ್ವವನ್ನು ನೆರೆ ನುಂಗಿತೆಂದು ಒಬ್ಬ ದಾಸರು ಹೇಳುವಲ್ಲಿ – 'ಚಿನ್ನ ಚಿಗುರು ಕಂಚು ತಾಮ್ರ ನುಂಗಿತು ಬಡವರನ್ನು, ಬಲ್ಲಿದರನ್ನು ಸಹ ಬಿಡದಪ್ಪಿ ನುಂಗಿತು' ಎನ್ನುತ್ತಾರೆ. 'ಏನು ಮಾಡಲಿ ವೆಂಕಟೇಶ' ಎಂದು ನೆಕ್ಕಾರು ಕೃಷ್ಣದಾಸರು (ವರಾಹತಿಮ್ಮಪ್ಪ) ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. 'ತಲ್ಲಣಿಸುವುದು ಹರಿಯೇ ಮಳೆಯಿಲ್ಲದೀ ಭವನ' (ರಾಮದಾಸ), 'ನಿರ್ದಯನಾಗಬೇಡವೋ ಭಗವಂತಾ' (ಜಾಜೀಶ), 'ಮಳೆಯ ದಯಮಾಡೋ ರಂಗಯ್ಯ' (ಹೆಳವನಕಟ್ಟೆ ಗಿರಿಯಮ್ಮ) – ಇತ್ಯಾದಿ.

ಅಂದಹಾಗೆ ಭೂಕಂಪ? ಹೊಸಗನ್ನಡದಲ್ಲಿಯಾಗಲೀ, ಹಳೆಗನ್ನಡ ಕಾವ್ಯಗಳಲ್ಲಿ ಎಲ್ಲಿಯೂ ಭೂಕಂಪದ ಅನುಕಂಪ ಕಾಣಿಸಿಕೊಂಡಿಲ್ಲ. ಅದೇನೂ ಮೇಲಿಂದ ಮೇಲೆ ಜರುಗುವಂಥದಲ್ಲ – ಎಂದರೂ, ಭಯಾನಕವಾದ ಭೂಕಂಪ ಘಟಿಸಿದಾಗ ಅದರ ಪ್ರಸ್ತಾಪವಾದರೂ ಇರಬೇಕಿತ್ತಲ್ಲವೆ. ಅದನ್ನು ಮೊದಲಿಗೆ ಪ್ರಸ್ತಾಪಿಸಿದವರು ಕನಕದಾಸರು –

"ಏಕೆ ನಡುಗಿದೆ ತಾಯೆ ನಡುರಾತ್ರಿಯೊಳ್
ಕಳ್ಳತನವು ಕಲಿತು ಸುಳ್ಳುಮಾತುಗಳಾಡಿ
ಒಡಲ ಪರೆ ನಾತ ತಾಳಿಕೊಳ್ಳದೆ
ಇಂಥ ಮನುಜರ ಹೊರಲಾರೆ ನಾನೆಂದು ನಡುಗಿದೆಯ?"

– ಎಂದು ಕೇಳುತ್ತಾರೆ.

೧೯೨೪ರಲ್ಲಿ ಒಮ್ಮೆ ಭೂಕಂಪ ಘಟಿಸಿತು. ಅದರ ದಾಖಲೆ ದಾಸರ ಲಕ್ಷ್ಮೀನಾರಾಯಣ ಅವರ ಹಾಡಿನಲ್ಲಿದೆ. ವಿಶೇಷವೆಂದರೆ ತಾತ್ವಿಕವಾಗಿ ಅವರು ಅದರ ವಿವೇಚನೆ ಮಾಡಿದ್ದು ಹೀಗೆ :

ಭಗವಂತನ ಕಲ್ಪದಲ್ಲಿ ಸಾಮೂಹಿಕ ಸುಖವೂ ಇರುತ್ತದೆ. ಸಾಮೂಹಿಕ ದುಃಖವೂ ಇರುತ್ತದೆ. ಮಳೆಗಾಲ ಚೆನ್ನಾಗಿ ನಡೆದು ಸುಭಿಕ್ಷ ಇದ್ದಾಗ ಅದರ ಫಲವನ್ನು ಕೆಟ್ಟವರೂ ದುಷ್ಟರೂ ಸುಖಿಸುತ್ತಾರೆ. ಹಾಗೆಯೇ ಭೂಕಂಪದಂತಹ ಘಟನೆ ನಡೆದಾಗ ಸಾಮೂಹಿಕವಾಗಿ ಹಾನಿಯಾಗುತ್ತದೆ; ಹೌದು. ಆದರೂ ಕೆಲಜನರು, ಆ ವೇಳೆಗೆ ಪರ ಊರಿಗೆ ಹೋದಾಗಲೂ, ಇತ್ತ ಪರ ಊರುಗಳಿಂದ ಆ ಸಮಯಕ್ಕೆ ಭೂಕಂಪದ ಊರಿಗೆ ಬರುವುದನ್ನು ಮುಂದೂಡಿದ್ದಾಗಲೂ ಪಾರಾಗುತ್ತಾರಲ್ಲವೆ? ಈ ತರ್ಕವನ್ನು ಒಪ್ಪದಿರಬಹುದು.

ಆದರೆ ದಾಸರು ಸೂಕ್ಷ್ಮ ವಿಚಾರಲಹರಿಯನ್ನು ಹೀಗೂ ಹರಿಬಿಟ್ಟಿರುವುದು ಗಣನೀಯ :

"ಭಿನ್ನ ಜೀವರು ಭಿನ್ನ ಕರ್ಮಗತಿ ಉಳ್ಳವರು
ಭಿನ್ನ ಫಲ ಯೋಗ್ಯರು ಆದಕಾರಣದಿ
ಕ್ಷೋಣಿ ಕಂಪನದಲ್ಲಿ ಮರಣ ಕೆಲವರಿಗೆ ಅಂಗ
ಹೀನತೆ ಕೆಲವರಿಗೆ ರಕ್ಷಣೆಯೂ ಕೆಲವರಿಗೆ"

ತಾತ್ಪರ್ಯ, ತಮ್ಮ ಸುತ್ತಲಿನ ಆಗು-ಹೋಗುಗಳಿಗೆ ಹರಿದಾಸರುಗಳು ಸ್ಪಂದಿಸುವಲ್ಲಿ ಪ್ರಾಮಾಣಿಕತೆಯನ್ನು ಹೊಂದಿದ್ದರು.

೧೨. ಲೋಕನೀತಿ / ನೀತಿಬೋಧೆ

ಇದೇ ಮಾತು ದಾಸರ ಲೋಕನೀತಿ ಮತ್ತು ನೀತಿಬೋಧೆಗೂ ಅನ್ವಯಿಸುತ್ತದೆ. ಮನುಷ್ಯ ಧನಮೋಹ, ಪರಸ್ತ್ರೀ ಮೋಹ, ಸಿಟ್ಟು, ಸುಳ್ಳು, ಮೋಸ - ಇವನ್ನು ತ್ಯಜಿಸಬೇಕು ಎಂಬಂಥ ಬೋಧೆಯನ್ನು ಇತರರೂ ಮಾಡಬಹುದು. ಹರಿದಾಸರು ಅವ್ಯಾಹತವಾಗಿ ಮಾಡಿದ್ದಾರೆ. ತಾವು ಅದರಂತೆ ನಡೆದುಕೊಂಡೇ ಜನಕ್ಕೆ ಉಪದೇಶಿಸಿದ್ದಾರೆ ಎನ್ನುವುದನ್ನು ಗಮನಿಸಬೇಕು. ಜೊತೆಗೆ ಅವರ ಈ ಬೋಧೆಯಲ್ಲಿ ಮಾರ್ಮಿಕತೆಯೂ ಇದೆ. ಮಾದರಿಗಾಗಿ ಈ ಕೆಲವು -

- ಅತಿಥಿ ಬಂದು ಅನ್ನವ ಬೇಡಲು ಗತಿ ನಮಗಿಲ್ಲ ಎಂದು ಕೂಗದಿರಿ.
- ಅಪಮಾನವಾದರೆ ಒಳಿತು - ಅಪರೂಪದಿ ಹರಿನಾಮ ಜಪಿಸುವ ಮನುಜನಿಗೆ.
- ಅರಿಯದ ಅಧಮನ ಸಂಗ ಕರಗಿದ್ದ ಹಿತ್ತಾಳೆ.
- ಆರ್ತರರಿಯದ್ಹಾಂಗೆ ಇರಬೇಕು ಮರ್ತ್ಯದೊಳಗೆ.

ಶ್ರೀ ವಿದ್ಯಾಪ್ರಸನ್ನತೀರ್ಥರು ಮಾಡಿದ ನೀತಿಬೋಧೆಯಲ್ಲಿ ನೇರವಾದ ಮಾರ್ಮಿಕತೆ ಮೈವೆತ್ತಿದೆ :

- ಸುಲಿದ ಬಾಳೆಯ ಹಣ್ಣು ಸುಟ್ಟು ತಿನ್ನಬೇಡಿರೋ.
- ಹಳೆಯ ಜನರ ಅನುಭವ ಹಳಿಯಬೇಡಿರೋ.
- ಪರರ ಗೋಪ್ಯ ತಿಳಿದರೆ ಬಹಿರಂಗ ಬೇಡವೋ.
- ಗೆದ್ದರಾ ಎತ್ತು ಅದರ ಬಾಲ ಹಿಡಿಯಬೇಡಿರೊ.
- ಮಕ್ಕಳೆದುರಿನಲ್ಲಿ ಗ್ರಾಮ್ಯ ವಚನ ಬೇಡವೋ.
- ಬಳಿಕ ಮಾತನಾಡುವವನು ಗೆಳೆಯನಲ್ಲ.
- ಕುಳಿತು ತಿನ್ನುವವ ಸಾಹುಕಾರನಲ್ಲ.

ಇವು ಒಂದೊಂದೂ ಅನುಭವಜನ್ಯವಾದ ಚಾಟೂಕ್ತಿಗಳಾಗಿವೆ. ಇಂಗ್ಲೀಷಿನ practical philosophy ಸದರಿನಲ್ಲಿ ಉದಾಹರಣವಾಗಿವೆ.

ಈಗಿನ ನಾರಿಯರಿಗೆ ಅನ್ವಯಿಸುವಂತಹ ಉಪದೇಶವನ್ನೂ ವಿದ್ಯಾಪ್ರಸನ್ನತೀರ್ಥರು ಮಾಡಿದ್ದಾರೆ. ಈ ಹಿಂದಿನ [illegible] ನಮ್ಮ ಸಮಾಜದ ನಡವಳಿಕೆಯಾಗಿದ್ದ ಸ್ತ್ರೀ ವಿಧೇಯತೆಯನ್ನು ಒತ್ತಿ ಹೇಳಿದ್ದರೆ, ಈ ಯತಿಗಳು [illegible] -

- ನಾರಿಯರಲಿ ಮಾದರಿಯೆನಿಸಿರಮ್ಮ.
- ಪ್ರಬಲ ಸ್ಥಾನ ನಿಮಗಿಹುದು ಸಮಾಜದಲ್ಲಿ.
- ಸೇರಿದ ಪತಿಮಂದಿರವನುದ್ಧರಿಸಿರಮ್ಮ – ಎನ್ನುತ್ತಾರೆ.

೧೩. ಮುಂಡಿಗೆಗಳು

ಮುಂಡಿಗೆಗಳೆಂದೊಡನೆ ಕನಕದಾಸರ ಹೆಸರೇ ಎದ್ದು ಕಾಣುವಂತಿದೆ. ಅವರ ಗುರುಗಳಾದ ವ್ಯಾಸರಾಯರಿಂದಲೇ ಇದರ ಪರಂಪರೆಯ ಆರಂಭ. ಪುರಂದರ ದಾಸರಂತೂ ಸರಿಯೇ, ಈಚಿನ 'ಶ್ಯಾಮಸುಂದರವಿಠಲ'ರವರೆಗೂ ಮುಂಡಿಗೆಗಳ ವ್ಯಾಪ್ತಿ ವಿಸ್ತಾರವಾದದ್ದು.

ಮುಂಡಿಗೆಯೆಂದರೆ ದ್ವ್ಯರ್ಥವುಳ್ಳದ್ದು. ಆದರೆ ಮೇಲೆ ಕಾಣಿಸಿದ ಅರ್ಥ ತೇಲುಮೇಲಿನದು; ಲೌಕಿಕ ಸ್ವರೂಪದ್ದು. ಅಲ್ಲದೆ ಹೀಗೂ ಉಂಟೆ ಎಂದು ಅಚ್ಚರಿಗೊಳಿಸಬಹುದು. ಮುಂಡಿಗೆಯ ರೀತಿಯನ್ನು ತಿಳಿಯಲು ಇದೊಂದು ಸುಲಭ ರಚನೆ –

"ಶಿವಗಾಗಿ ಶಿವ ಬಂದ ಶಿವ ಕುಡಿದ
ಶಿವ ಕಡಿದ ಶಿವ ಸತ್ತ ಶಿವನ ಅರ್ಧಾಂಗಿ
ಶಿವ ಶಿವ" ಎಂದಳು.

ಇಲ್ಲಿ ಬಂದಿರುವ ಶಿವ – ರುದ್ರದೇವರೇನಲ್ಲ! ಸಂಸ್ಕೃತದಲ್ಲಿ 'ಶಿವ' ಶಬ್ದಕ್ಕಿರುವ ವಿವಿಧ ಅರ್ಥಗಳನ್ನು ಇಲ್ಲಿ ತಂದು ಮೋಜಿಗಾಗಿ ಹೀಗೆ ಜೋಡಿಸಲಾಗಿದೆ. 'ಶಿವ' ಶಬ್ದಕ್ಕೆ ನೀರು, ನರಿ, ಸರ್ಪ – ಎಂಬ ಅರ್ಥಗಳಿವೆ. ಪದ್ಯದ ಒಟ್ಟಿನ ಅರ್ಥವೆಂದರೆ ನರಿಯು ನೀರಿಗಾಗಿ ಬಂತು. ನೀರನ್ನೇನೋ ಕುಡಿಯಿತು. ಆದರೆ ಸರ್ಪ ಬಂದು ಕಚ್ಚಿತು. ನರಿಯು ಸತ್ತಿತು. ಆ ನರಿಯ ಹೆಂಡತಿ ದುಃಖಿಸುತ್ತ 'ಶಿವ ಶಿವಾ' ಎಂದಳು!

ಆದರೆ ಹರಿದಾಸರ ಮುಂಡಿಗೆಗಳಲ್ಲಿ ಪೌರಾಣಿಕ ಸಂದರ್ಭಗಳ ಜೊತೆಗೆ ತತ್ತ್ವ ವಿಚಾರಗಳೇ ಇರುತ್ತವೆ ಮತ್ತು ಸಂಖ್ಯೆಗಳ ಮೂಲಕವೂ ಗೂಡಾರ್ಥವನ್ನು ಹೇಳುವ ಮುಂಡಿಗೆಗಳೇ ಹೆಚ್ಚಾಗಿ ಇವೆ. ಕನಕದಾಸರ ಈ ಮುಂಡಿಗೆಯನ್ನು ನೋಡಿರಿ.

"– ಮೂವರೇರಿದ ಬಂಡಿ ಹೊರೆ ನೆರೆಯದು
– ಆಡಿ ಪೊತ್ತವನೊಬ್ಬ ನೋಡಿ ತಿರುಗಿದನೊಬ್ಬ
ಓಡಾಡಿದನು ಒಬ್ಬ ಈ ಮೂವರಲ್ಲಿ
ಆಡಿದಗೆ ಕಿವಿಯಿಲ್ಲ ನೋಡಿದನ ಮಗ ಪಾಪಿ
ಓಡಾಡಿದವನೊಬ್ಬ ಓದನಯ್ಯ"

ಇಲ್ಲಿ ಬಂಡಿ ಎಂದರೆ ಮನುಷ್ಯ ದೇಹ. ಅದನ್ನು ಏರಿದವರು ಶ್ರೀಹರಿ, ಮುಖ್ಯಪ್ರಾಣ ಹಾಗೂ ಜೀವ – ಎಂದು ಬಗೆದು ಅರ್ಥವಿಸುವುದು.

ಈ ಉಕ್ತಿಗೆ ಇನ್ನೂ ಒಂದು ಅರ್ಥವಿದೆ. ಈ ಬ್ರಹ್ಮಾಂಡವೇ ಒಂದು ಬಂಡಿ. ಇದನ್ನು ಹೊತ್ತ ಮೂವರು – ಆದಿಶೇಷ, ವಾಯು ಮತ್ತು ಕೂರ್ಮ. ಆದರೆ ಬಂಡಿಯ ಭಾರ ಎಷ್ಟೆಂದು ತಿಳಿದವ ಒಬ್ಬನೇ. ಅವನು ದೇವಕೀನಂದನ – ಪರಮಾತ್ಮ.

ಮುಂಡಿಗೆಗಳ ಒಳ ಅರ್ಥವನ್ನು ತಿಳಿದವರು ಕೆಲವರೇ ಇದ್ದಾರೆ. ಸುಮಾರು ಐವತ್ತು ವರ್ಷಗಳ ಹಿಂದೆ ಮುಂಬಯಿಯ ಶೆಣೈ ಎನ್ನುವವರು ಕನಕದಾಸರ ಅನೇಕ ಮುಂಡಿಗೆಗಳ ಅರ್ಥವನ್ನು ವಿವರಿಸಿ ಗ್ರಂಥ ಬರೆದಿದ್ದರು. ಈಚೆಗೆ ಪಂಡಿತ ಚತುರ್ವೇದಿ ವೇದವ್ಯಾಸಾಚಾರ್ಯರು ವಿವಿಧ ದಾಸರುಗಳ ಮುಂಡಿಗೆಗಳನ್ನಾಯ್ದು ಗ್ರಂಥವನ್ನು ಪ್ರಕಟಿಸಿದ್ದಾರೆ.

೧೪. ಸಾಹಿತ್ಯಿಕ ಮೌಲ್ಯಗಳು

ದಾಸಸಾಹಿತ್ಯವು ಹೆಚ್ಚಾಗಿ ಧಾರ್ಮಿಕವಾದದ್ದೇನೋ ಹೌದು. ಆದರೆ ಅನೇಕ ಸಾಹಿತ್ಯಿಕ ಮೌಲ್ಯಗಳನ್ನು ಅವುಗಳಲ್ಲಿ ಕಾಣಬಹುದು. ಕಲ್ಪಕತೆ, ಚತುರೋಕ್ತಿಗಳು ದಾಸಸಾಹಿತ್ಯದಲ್ಲಿ ಎಲ್ಲೆಲ್ಲಿಯೂ ಕಂಡುಬರುತ್ತವೆ. ಕಾವ್ಯಶಾಸ್ತ್ರದಲ್ಲಿ ಪ್ರಸಿದ್ಧ ಅಲಂಕಾರವಾಗಿರುವ ವ್ಯಾಜ ನಿಂದಾಸ್ತುತಿಯು ಇನ್ನೊಂದು ಸಾಹಿತ್ಯಿಕ ಮೌಲ್ಯವಾಗಿದೆ.

ಈ ವ್ಯಾಜರೂಪದ ನಿಂದಾಸ್ತುತಿಗೆ ಉದಾಹರಣೆಗಳನ್ನು (ಉದಾಹರಣೆಗೆ ಪುರಂದರದಾಸರನ್ನು ಜಿಪುಣಾಗ್ರೇಸರೆಂದು ಕರೆದದ್ದು) ಈ ಮುಂಚೆ ಕೊಟ್ಟಿದ್ದೇವೆ. ಪುರಂದರದಾಸರದೇ ಆದ 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂಬ ಕೀರ್ತನೆ ಚಿರಪರಿಚಿತವಾದದ್ದು.

ಚತುರೋಕ್ತಿಗೆ ಲೆಕ್ಕವಿಲ್ಲದಷ್ಟು ಉದಾಹರಣೆಗಳು ದೊರೆಯುತ್ತವೆ. ಇದೊಂದು ಮಾದರಿ -

"ದಾನಧರ್ಮಂಗಳನು ಬಿಡುವನೆ ಧರ್ಮಾತ್ಮ
ದೀನ ಸಜ್ಜನರ ಕೆಡಿಸುವನೆ ಸತ್ಪುರುಷ
ಗುರುಹಿರಿಯರನು ಬೈವವನೆ ಶಿಷ್ಯ" ಇತ್ಯಾದಿ

ಮೇಲುನೋಟಕ್ಕೆ ಇದು ಆಭಾಸವಾಗಿ ಕಾಣಿಸುತ್ತದಲ್ಲವೆ? ಆದರೆ ಪ್ರತಿ-ಹೇಳಿಕೆಯ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಕೊಟ್ಟು ನೋಡಿರಿ. (ದಾನಧರ್ಮಂಗಳನು ಬಿಡುವನೆ ಧರ್ಮಾತ್ಮ?) ಆಗ ಅರ್ಥವೇ ಬದಲಾಗುತ್ತದೆ!

ಉಕ್ತಿ ಚಾತುರ್ಯ! ಅದಕ್ಕೆ ಬೇರೊಂದು ಸೊಗಸಾದ ಉದಾಹರಣೆ ಕೊಡಬಹುದು. ಆಸೂರಿ ರಾಮಸ್ವಾಮಿಯವರು ರಚಿಸಿದ ಹಾಡಿದು.

"ಹೊನ್ನು ಭೂಲೋಕಕ್ಕೆ ಹೂವು ಪರಲೋಕಕ್ಕೆ
ಹೊನ್ನುಳ್ಳವರಿಗೆ ಹೂ ಹೊನ್ನು ಇಲ್ಲ
ಹೊನ್ನಿಲ್ಲದಾತನಿಗೆ ಹೂವೊಂದು ದೊರಕಿದರೆ
ಅನ್ನ ಪಾನ ನಿದ್ದೆ ದೊರೆತ ಭಾಗ್ಯ ಅವನದಾಗುತ್ತೆ
ಹೊನ್ನು ಕೇಳನು ನಮ್ಮ ಮಾಂಗಿರಿ ಪುರವಾಸ
ಹೊನ್ನಿಂಗೆ ಬದಲು ಭಕ್ತಿಯ ಹೂವು ಕೇಳ್ವುದು
ಹೊನ್ನ ದಾನವ ಮಾಡಿ ಹೂವ ಹರಿಗರ್ಪಿಸಿರಿ"

ವಿಜಯದಾಸರ ಕೀರ್ತನಸಂಗ್ರಹದಲ್ಲಿ ಇದೊಂದು ಕೀರ್ತನೆ ಹೀಗೆ ಆರಂಭವಾಗುತ್ತದೆ -

"ಎಲ್ಲೊ ಎಲ್ಲೊ ಎನ್ನ ಸಾಲ ತೀರಿಸದೆ
ನಿಲ್ಲೊ ನಿಲ್ಲೊ ನಿನ್ನ ಕಂಡ ಮ್ಯಾಲೆ ಬಿಡೆ"

ಅರೆ! ಇದೇನು ದೇವರು ಇವರಿಗೆ ಹೇಗೆ ಸಾಲಗಾರನಾಗುತ್ತಾನೆ? ಎಂದು ಯೋಚಿಸುವಂತಾಯಿತು. ಮುಂದಿನ ಸಾಲು - 'ಮೀನು ನಡೆದ ಹೆಜ್ಜೆಗಳು ಕಾಣದಂತೆ ಪೋಗಿ' ಎಂಬುದರಿಂದ ಗೊತ್ತಾಯಿತು, ದಾಸರು ದಶಾವತಾರವನ್ನು ವರ್ಣಿಸುತ್ತಿದ್ದಾರೆ ಎಂದು. ಸಾಲಗಾರರು ಹೇಗೋ ಅದೇ ರೀತಿ ದೇವರು ಮೀನು, ಕೂರ್ಮ, ವರಾಹ, ವಾಮನ ಹೀಗೆ ವಿವಿಧ ವೇಷ ಧರಿಸಿದ್ದಾನೆಂಬ ಉಕ್ತಿಚಾತುರ್ಯ ಇದಲ್ಲವೆ? ಪುರಂದರದಾಸರು ಮತ್ತು ಇನ್ನು ಕೆಲವರು ದೇವರೊಡನೆ ಇಂಥದೇ 'ಲೇವಾದೇವಿಯ' ಪ್ರಸ್ತಾಪ ಮಾಡಿದ್ದಾರೆ.

ಗೊತ್ತಿದ್ದ ಪೌರಾಣಿಕ ಪ್ರಸಂಗಗಳನ್ನೇ ಕಲ್ಪಕತೆಯನ್ನು ಸೇರಿಸಿ ಹೇಳಿದ ಕೀರ್ತನೆ ಇಲ್ಲಿದೆ, ಇದೂ ವಿಜಯದಾಸರದೇ.

"ಒಬ್ಬ ಸತಿ ಪತಿಗಾಗಿ ಮುನಿಯ ಶಾಪ ಧರಿಸಿ
ಲಬ್ಧ ಬಾಂಧವನ ನಿಲಿಸಿದಳು ನೋಡಾ
ಒಬ್ಬ ಸತಿ ಪತಿಗಾಗಿ ಧರ್ಮನ ಸಭೆಯ ಸೇರಿ
ನಿಬ್ಬರದಿ ಪ್ರಾಣವನು ಪಡೆದಳು ನೋಡಾ
ಒಬ್ಬ ಸತಿ ಪತಿಗಾಗಿ ಚಿತ್ರಗುಪ್ತರಾಡಿದಾ
ಶಬ್ದ ಲಾಲಿಸಿ ಐದೆತನ ಪಡೆದಳು ನೋಡಾ"

ಪಾತಿವ್ರತ್ಯದ ಪ್ರಭಾವವನ್ನು ಈ ರೀತಿ ತೋರಿಸಿದ್ದಾರಲ್ಲವೆ?

ದಾಸರು ನಾನಾ ಬಗೆಯ ಛಂದಸ್ಸಿನ ಪ್ರಕಾರಗಳನ್ನು ಬಳಸಿದ್ದಾರೆ. ಅಷ್ಟಕಗಳು, ದಂಡಕಗಳು ನಮಗೆ ಗೊತ್ತು. ನವಕ ಎನ್ನುವ ಪ್ರಕಾರವನ್ನು ಕೇಳಿದ್ದೀರಾ? ಒಬ್ಬ ದಾಸರು ಅದನ್ನೂ ಬಳಸಿದ್ದಾರೆ. ಪ್ರಾಸ, ಅನುಪ್ರಾಸಗಳು ಪ್ರತಿ ಕೀರ್ತನೆಗಳಲ್ಲಿ ಓತಪ್ರೋತವಾಗಿದೆ. ಉಪಮೆ ರೂಪಕಾಲಂಕಾರಗಳಂತೂ ಬಹು ಸಂಖ್ಯೆಯಲ್ಲಿವೆ. ಉದಾಹರಣೆಗೆ -

ಬದುಕಿನ ಬಂಡಿಯಲ್ಲಿ ಜನ ಯಾತ್ರೆ ಹೊರಟಿದ್ದಾರೆ. ಆಗ ವೆಚ್ಚಕ್ಕಾಗಿ ಹಣ ಬೇಕಲ್ಲವೇ? ಹೃದಯವೆಂಬ ಚೀಲದೊಳಗೆ ಹರಿಯ ನಾಮ ಹೊನ್ನವಾಗಿ, ತುದಿನಾಲಗೆಯಿಂದ ಅದನ್ನು ಹೊರತೆಗೆದು ವೆಚ್ಚ ಮಾಡಬೇಕಂತೆ. ರೂಪಕಾಲಂಕಾರಕ್ಕೆ ಇಂಥದೇ ಮಾದರಿಗಳಿವೆ. ಓರ್ವ ದಾಸರು ಭಕ್ತಿಯನ್ನು ಸ್ತ್ರೀಗೆ ಹೋಲಿಸಿದ್ದಾರೆ. ಇನ್ನೊಬ್ಬರು 'ದೃಷ್ಟಾದೃಷ್ಟ ಸಂವಾದವಿರುವ ಕೀರ್ತನೆಯಲ್ಲಿ ಪ್ರತಿಮಾ ವಿಧಾನವನ್ನು ತಂದಿದ್ದಾರೆ.

ವ್ಯಾಜನಿಂದಾಸ್ತುತಿಯಂತೂ ಕೀರ್ತನ ರಚನೆಯ ಮೈಗುಣವೇ ಆಗಿದೆ. ಶ್ರೀ ಶ್ರೀಪಾದರಾಜರಿಂದ ಹಿಡಿದು ಈಚಿನ ಹುಯಿಲಗೋಳ ನಾರಾಯಣರಾಯರ ವರೆಗೂ ಪ್ರಮುಖ ದಾಸರು ಅದನ್ನು ತಮ್ಮ ಕೀರ್ತನೆಗಳಲ್ಲಿ ತಂದಿದ್ದಾರೆ.

ದಾಸಸಾಹಿತ್ಯದಲ್ಲಿ ಆಧುನಿಕತೆ

ಈಚಿನ ಕಾಲದ ಹರಿದಾಸರು ಹಿಂದಿನವರಂತೆ ತಂಬೂರಿ - ತಾಳ ಹಿಡಿದುಕೊಂಡು ಊರೂರುಗಳಿಗೆ ಹೋಗಿ ಕೀರ್ತನಕಾರ್ಯ ಮಾಡುವವರಲ್ಲ. ಬದಲಿಗೆ ಕೈಯಲ್ಲಿ ಪೆನ್ನು ಹಿಡಿದು, ಸರಕಾರೀ ನೌಕರರೋ ಶಿಕ್ಷಕರೋ ಆಗಿದ್ದವರೇ ಬಹುವಾಗಿ ಕಾಣಿಸುತ್ತಾರೆ. ಆಧುನಿಕ ವಿಚಾರಗಳನ್ನು ಕೀರ್ತನೆಗಳಲ್ಲಿ ತಂದ ಒಬ್ಬರು ಮಾತ್ರ ಪೀಠಸ್ಥ ಯತಿಗಳು. ಅವರೇ ಈ ಹಿಂದೆ ಹೇಳಿದ ವ್ಯಾಸರಾಯ ಮಠದ ಶ್ರೀ ವಿದ್ಯಾಪ್ರಸನ್ನತೀರ್ಥರು. ಶ್ರೀವೈಷ್ಣವ ಪಂಥದ ಚನ್ನಪಟ್ಟಣದ ಅಹೋಬಲದಾಸರು ಮತ್ತು ದೇವದುರ್ಗದ ಬಡೇಸಾಬ ರಾಮದಾಸರೂ ಈಚಿನವರೇ. ಇನ್ನೊಬ್ಬ ಪ್ರಸಿದ್ಧ ಹರಿದಾಸರಾದ ಗುರುರಾಮವಿಠ್ಠಲರ ಮೂಲ ಹೆಸರು ಬಾಗೇಪಲ್ಲಿ ಸುಬ್ರಹ್ಮಣ್ಯದಾಸರು. ನಂಜನಗೂಡಿನ ತಿರುಮಲಾಂಬಾ, ಗದುಗಿನ ಹುಯಿಲಗೋಳ ನಾರಾಯಣರಾಯರು ಹಾಗೂ ಅರಕೆರೆ ಸಂಜೀವರಾವ - ಇವರು ವೃತ್ತಿಯಲ್ಲಿ ಸಾಹಿತ್ಯಕಾರರು. ಇತ್ತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಇಳಿಗಾಲದಲ್ಲಿ ದಾಸರಾದವರು ಕಾಖಂಡಕಿಯ ರಾಮಾಚಾರ್ಯ ಗಲಗಲಿಯವರು. ೨೦ನೆಯ ಶತಮಾನದಲ್ಲಿ ಆಗಿಹೋದ ಇವರಲ್ಲದೆ, ಈಚೆಗೆ ನಮ್ಮ ಮಧ್ಯದಲ್ಲಿದ್ದುಕೊಂಡು ದಾಸಸಾಹಿತ್ಯದ ಆಳವಾದ ಅಭ್ಯಾಸಮಾಡಿ ಗ್ರಂಥಗಳನ್ನು ರಚಿಸಿರುವ ಡಾ. ಟಿ.ಎನ್. ನಾಗರತ್ನ ಅವರೂ ಕೀರ್ತನೆಗಳನ್ನು ರಚಿಸಿದ್ದಾರೆ. (ಮುದ್ರಿಕೆ 'ಸಿರಿಗಂಗಾಜನಕ') ದೇಶ - ಕಾಲದ ಪರಿಸ್ಥಿತಿ ಇವರುಗಳಲ್ಲಿ ಚಿತ್ರಿತವಾಗಿರುವುದು ಸಹಜವೇ ಆಗಿದೆ. ೨೦/೨೧ ನೆಯ ಶತಮಾನದಲ್ಲಿ ಅನಂತವಿಠಲ, ರಾಮಕೃಷ್ಣ ಮುಂತಾದ ದಾಸರು ನಮ್ಮ ಜೊತೆಗಿದ್ದಾರೆ. ಇವರುಗಳು ಹಿಂದಿನವರಂತೆ ಸಾಂಪ್ರದಾಯಿಕವಾಗಿ ಭಗವದ್ಭಕ್ತಿಯನ್ನು ವ್ಯಕ್ತಪಡಿಸುತ್ತ ಇದ್ದಾರಲ್ಲದೆ ಆಧುನಿಕತೆಯನ್ನು ಅವರ ಕೃತಿಗಳಲ್ಲಿ ಕಾಣೆವು.

ಇವರಿಗಿಂತ ತುಸು ಪೂರ್ವದಲ್ಲಿ ಎಂದರೆ ೧೮/೧೯ನೆಯ ಶತಮಾನದಲ್ಲಿ ಬಾಳಿದ ಕವಿ ಪರಮದೇವ ತನ್ನ ಕಾಲದ ಜನಜೀವನವನ್ನು ಚಿತ್ರಿಸಿದ್ದಾನೆ. ಟೀಪೂ ಸುಲ್ತಾನನ ಕಾಲದಲ್ಲಿ ಮರಾಠರ ಪರಶುರಾಮ ಭಾವು ಲೂಟಿ, ಕೊಲೆಗಳಲ್ಲಿ ಹೇಗೆ ಕೊಳ್ಳೆ ಹೊಡೆದನೆಂಬುದನ್ನು ಚಿತ್ರಿಸಿದ್ದುದು ಆಧುನಿಕ ರೀತಿಯದಾಗಿದೆ; ವಾಸ್ತವತೆಯಿಂದ ಕೂಡಿದೆ:

"ಶಿವ ಶಿವ! ಎಂಥ ಕಾಲ ಬಂದಿತೊ
ತುಪ್ಪ ಪಣಕೆ ಸೇರು ಉಪ್ಪೆಂಟು ಸಿದ್ದೆಯ
ಮುಪ್ಪಾಗಕೊಂದೆ ಕೊಳಗ ಬತ್ತ
ಕೊಳಲಾಪರೆ ಫಣವೊಂದೆ ಕಟ್ಟಿಲ್ಲ"

ಕೊನೆಯಲ್ಲಿ ಅವರು ಹೇಳೋದು 'ದುರ್ಜನರಿಗೀ ಕಾಲ ಶುಭದ ಕಾಲ. ಸಾಧು ಸಜ್ಜನರಿಗೆ ಅನ್ನಕಿಲ್ಲದ ಸಾವ ಕಾಲ'. ಇಂದಿಗೂ ಇಂಥ ಅನಿಸಿಕೆಯನ್ನು ವ್ಯಕ್ತಪಡಿಸುತ್ತೇವಲ್ಲವೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಕನ್ನಡದ ಬಗ್ಗೆ ಜನತೆಯಲ್ಲಿ ಅಭಿಮಾನ ಜಾಗೃತವಾಗತೊಡಗಿದ್ದ ಕಾಲ. ತಿರುಮಲಾಂಬಾ ಅವರು ಈ ನಾಡು-ನುಡಿಯನ್ನು ಸೊಗಸಾಗಿ ವರ್ಣಿಸಿದ್ದಾರೆ. ಅದು ಕೋಲಾಟದ ಪದವಾದರೂ, 'ಕನ್ನಡ ತಾಯಿಯ ಕನ್ನೆಯರ್ ನಾವು ಉನ್ನತಿ ಎಳಸುವೆವು' ಎಂದು ಹೇಳುತ್ತಾರೆ. ಮತ್ತೊಂದು ಹಾಡಿನಲ್ಲಿ 'ಕೈಪಿಡಿದೆನ್ನನು ಕಾಪಿಡು ನಲವಿಂ ಕನ್ನಡ ನುಡಿವೆಣ್ಣೆ' ಎಂದು ಕೇಳಿಕೊಂಡಿದ್ದಾರೆ.

ಇತ್ತ ಭಾರತ ಸ್ವಾತಂತ್ರ್ಯದ ಚಳುವಳಿಯನ್ನು ಇಬ್ಬರು - ಮೂವರು ಕಿಂಚಿತ್ ಪ್ರಸ್ತಾಪಿಸಿದ್ದಾರೆ. ತಿರುಮಲಾಂಬಾ ಅವರೇ, ಇನ್ನೊಂದು ಕೋಲಾಟದಲ್ಲಿ 'ಗಿರಿಸುತೆ ನೀ ಬಾ, ಸರಸತಿ ನೀ ಬಾ, ಶರಧಿ ತನೂಭವೆ ನೀ ಬಾ' ಎಂದು ಆಹ್ವಾನಿಸುತ್ತಾರೆ. ಕಾರಣ ಗೊತ್ತೆ? ಅವರು ಹೋಗಿ ತಂತಮ್ಮ ಪತಿಯರಾದ ತ್ರಿಮೂರ್ತಿಗಳಿಗೆ, ಸ್ವಾತಂತ್ರ್ಯ ಚಳುವಳಿಯವರಿಗೆ ಯಶಸ್ಸು ಕೊಡಲಿ ಎಂದು ಕೇಳಿಕೊಳ್ಳಬೇಕಂತೆ!

"ಭಾರತ ಜನನಿಯ ಭಾಗ್ಯೋದಯಮಂ ತೋರಿರೆ ಶಕ್ತಿತ್ರಯರೇ
ಭಾರತ ವೀರರಿಗಾರೋಗ್ಯೈಶ್ವರ್ಯಂಗಳ ಕರುಣಿಸಿರೇ
ರಾಷ್ಟ್ರಪ್ರಮುಖರ ಕಷ್ಟಂಗಳ ನಾವೆಷ್ಟೊಂದೊರೆದಪವೇ"

ಶ್ಯಾಮಸುಂದರವಿಠಲರು ತಮ್ಮದೊಂದು ಕೀರ್ತನೆಯಲ್ಲಿ ಗಾಂಧೀಜಿ ಹತ್ಯೆಯನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲಿ ಗಾಂಧೀಜಿಯವರೇ ನಮಗೆಲ್ಲ ಸಮಾಧಾನ ಹೇಳುವ ಮಾತಿದೆ:

"ಓ ಎನ್ನ ಬಂಧುಗಳೇ! ನಾನಿಂದು ಜಗದಿಂದ
ಮಾಯವಾಗಿಹೆನೆಂದು ಮನದೊಳಗೆ ಮರುಗದಿರಿ
ನ್ಯಾಯದಲಿ ನಿಷ್ಠೆಯಲಿ ಸತ್ಯದಲಿ ಶಾಂತಿಯಲಿ ಉತ್ತಮೋತ್ತಮವಾದ
ಅಹಿಂಸಾ ತತ್ವದಲಿ ಹರಿ ಪೇಳ್ದ ಗೀತೆ ಹರಿಜನರ ಮಧ್ಯದಲಿ
ಬಡಜನರ ದುಃಖದಲಿ . . . . ಹಿಂದು ಮುಸ್ಲಿಮರೊಂದಾಗಿ ನಡೆವಲ್ಲಿ
ಕುಂದದೆ ನಾನಿಪ್ಪೆ".

ಗಾಂಧೀಜಿಯವರು ಯಾವ ಯಾವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಇಟ್ಟುಕೊಂಡಿದ್ದರೋ ಅವನ್ನಿಲ್ಲಿ ಸೊಗಸಾಗಿ ರೂಪಿಸಿದ್ದಾರಲ್ಲವೆ.

'ಸೀತಾಪರಿತ್ಯಾಗ'ವು ಶ್ರೀರಾಮನು ಮಾಡಿದ ಒಂದು ಮಹಾತಪ್ಪು ಎಂದು ಯಾವ ಹಳಗನ್ನಡ ಕವಿಯಾಗಲಿ, ಹಿಂದಿನ ಹರಿದಾಸರಾಗಲೀ ಹೇಳಲಿಲ್ಲ. ಮಹಿಳಾ ಜಾಗೃತಿ ಅಥವಾ ಸುಧಾರಣಾ ವಿಚಾರದ ಆರಂಭದ ಕಾಲದಲ್ಲಿದ್ದ ತಿರುಮಲಾಂಬಾ ಅವರು ಶ್ರೀರಾಮನನ್ನು ತುಸು ಬೈದಿದ್ದಾರೆ

"ಜನವಾರ್ತೆಯನೆ ಕೇಳಿ ವನಿತೆಯೊಳು ಖತಿ ತಾಳಿ
ಮಡಿವಳನ ನುಡಿಗಾಗಿ ಕಡುಮೂರ್ಖ ತಾನಾಗಿ
ಅಡವಿಗಟ್ಟುವರೇನೆ ಮಡದಿಯನ್ನು
ಧರ್ಮಪತ್ನಿಯುಮಂತು ಪೂರ್ಣಗರ್ಭವನಾಂತ
ಅರ್ಧಾಂಗಿಯನ್ನುಳಿದ ನಿರ್ದಯಾತ್ಮ"

ಇದೇ ದಾಸಮಹಿಳೆ ಕನ್ನಡ ನಾಡುನುಡಿಗಳಿಗೆ ಅಭಿಮಾನ ಪುರಸ್ಸರವಾದ ಮಾತುಗಳನ್ನು ಕೋಲಾಟದ ಮೂಲಕ ಆಡಿದ್ದಾರೆ. ಆದೇ ಕೋಲಾಟದ ನಿಮಿತ್ತ ಮಾಡಿಕೊಂಡು ಪಾರ್ವತಿ, ಸರಸ್ವತಿ ಹಾಗೂ ಮಹಾಲಕ್ಷ್ಮಿಯರನ್ನು ಆಹ್ವಾನಿಸುತ್ತಾರೆ

'ಡಬಲ್ ಗ್ರ್ಯಾಜುಯೇಟ್' ಆಗಿದ್ದರೂ ಲೌಕಿಕ ಜೀವನ ಹುರುಳಿಲ್ಲದ್ದೆಂದು ಬಗೆದು ಯತ್ಯಾಶ್ರಮ ಸ್ವೀಕರಿಸಿದ ಶ್ರೀ ವಿದ್ಯಾಪ್ರಸನ್ನತೀರ್ಥರು ಆಧುನಿಕ ವಿಚಾರಗಳನ್ನು ನೇರವಾಗಿಯೂ ಪರೋಕ್ಷವಾಗಿಯೂ ತಂದಿದ್ದಾರೆ. ಶ್ರೀ ವಾದಿರಾಜರ 'ರುಕ್ಮಿಣೀಶ ವಿಜಯ' ಕಾವ್ಯದ ಮೇಲ್ಮೆಯನ್ನು ಪ್ರಸ್ತಾಪಿಸುವಲ್ಲಿ ಶೇಕ್ಸ್‌ಪಿಯರ್, ಮಿಲ್ಟನ್ನರ ಕಾವ್ಯಗಳು ಅದರ ಮುಂದೆ ಕಡಿಮೆ ಮಟ್ಟದವು ಎಂದು ಹೇಳುತ್ತಾರೆ.

'ಸಿರಿಗಂಗಾಜನಕ' ಎಂಬ ಮುದ್ರಿಕೆಯ ವಿದ್ವಾಂಸ ಮಹಿಳೆ (ಡಾ. ಟಿ.ಎನ್. ನಾಗರತ್ನ) ತನ್ನೊಂದು ಕೀರ್ತನೆಯಲ್ಲಿ ದೇವರಿಗೆ ಶುದ್ಧವಾದ ಪಂಚಾಮೃತ ಅಭಿಷೇಕ ಮಾಡುವುದು ಎಷ್ಟೊಂದು ಕಷ್ಟದ್ದು ಎಂದು ಹೇಳುತ್ತಾರೆ.

"ಏನು ನೀಡಲಿ ನಿನಗೆ ನೈವೇದ್ಯ ಹರಿಯೆ
ಗಾನಲೋಲೆ ಎಲ್ಲ ಕಲಬೆರಕೆ ಸರಕು
ಪಾನಮಾಡಲು ಕೂಡ ಕ್ಲೋರಿನ್ ನೀರು
ತೆಂಗು ಎಳೆಮೊಸರು ಎಳನೀರು ಒಗರು
ಕಂಗು ಕಕ್ಕಟ್ಟೆ ಮುದಡು ಮುದಡು
ರಂಗ ನಿನ್ನ ಪ್ರೀತಿಯ ಬಾಳೆಹಣ್ಣು
ರಂಗು ಕಳೆದುಳಿದ ಕರಕರಿ ಕಿಲುಬು
ತುಪ್ಪವು ಬರಿ ಬಿಳಿಯ ನಂದಿನೀ ಮಾಲು
ಹೆಪ್ಪು ಹಾಕಲು ಬರಿ ನೀರು (ಮೊಸರು), ಜೇನು
ತುಪ್ಪವು ಬೆಲ್ಲದ ತಿಳಿಪಾಕ ಸಕ್ಕರೆಯು"

ಹಾಗೆಂದು ಇಂಥ ಪರಿಸ್ಥಿತಿಗೆ ದೇವರನ್ನೇನು ಹೊಣೆಯಾಗಿಸುವುದಿಲ್ಲ. 'ದೇವರೆ, ನನಗೆ ಇಷ್ಟು ನೀನು ಕೊಟ್ಟದ್ದು ಸಾಕು. ಮೇಲೆನ್ನ ಕರೆದುಕೊ' ಎಂದು ಕೇಳಿಕೊಂಡಿದ್ದಾರೆ.

ಈಗಿನ ಶಿಕ್ಷಣಸಂಸ್ಥೆಗಳ ಅವ್ಯವಸ್ಥೆ ಹಾಗೂ ಲಾಭಬಡಕತನವನ್ನು ಕುರಿತು ವಿದ್ಯಾದೇವತೆ ಸರಸ್ವತಿಗೆ ಅವರು ವಿವರಿಸುವ ರೀತಿ ಆಧುನಿಕವಾದುದು :

"ಕೊಚ್ಚೆ ಮೆತ್ತಿದೆ ನಿನ್ನ । ಅಚ್ಚ ಬಿಳಿ ಸೀರೆಗೆ ಎಲೆ ಸರಸ್ವತಿಯೆ
ಸ್ವಚ್ಛಮಾಡು ಅದನು ಬಿಚ್ಚಿ । ಬಚ್ಚಲು ಕಲ್ಲಿಗೆ ಬಡಿದು
ನೀರಿನಲಿ ಜಾಲಾಡು । ವಿದ್ಯಾಸಂಸ್ಥೆಗಳು ಕಮಟುಗಟ್ಟಿದರಿವೆಗಳು
ಶುದ್ಧವಾಗವು ಅವು ಸುಲಭದಲ್ಲಿ
ಸದ್ದುಗದ್ದಲವಿಲ್ಲದೆ ಸೋಪು ಸೋಡಾ ತಂದು
ಗುದ್ದಿ ಗುದ್ದಿ ಒಗೆ. ಕಲೆಯು ಕಳೆದೀತು.
- ತೃಪ್ತರವರು ಪದವೀಧರರು ಲಕ್ಷ್ಮಿ ಒಲಿಯೆ ನಿ-
ರ್ಲಿಪ್ತರು ವಿದ್ಯೆ ವಿದ್ವತ್ತುಗಳಿಗೆ ಸರ್ವ-
ವ್ಯಾಪ್ತರು ಸಂಕಿರಣ ಸಭೆ ಸಮಾರಂಭಗಳಿಗೆ
ತಪ್ತರು ಪರರ ಏಳಿಗೆ ಉನ್ನತಿಗಳಿಗೆ
ಅಧಿಕಾರಿಗಳ ಕಿವಿ ಕಚ್ಚಬಲ್ಲರು ಅವರು ಪ-
ದಾಧಿಕಾರಿಗಳು ಎಲ್ಲ ಸಂಘ-ಸಂಸ್ಥೆಗಳಿಗೆ"

ಹೀಗೆ ಆಧುನಿಕ ಜೀವನವನ್ನು ಚಿತ್ರಿಸುತ್ತಲೇ, ದೇವರಲ್ಲಿ ತಮ್ಮ ಭಕ್ತಿಭಾವವನ್ನು ಅಚ್ಚಳಿಯದೇ ಉಳಿಸಿಕೊಂಡಿದ್ದಾರೆ.

ಸಮಾರೋಪ

ಇದುವರೆಗೆ ವಿಷಯದ ದೃಷ್ಟಿಯಿಂದ ಹರಿದಾಸಸಾಹಿತ್ಯದ ಕುರಿತು ಹೇಳಿದ್ದರ ಸಮಾರೋಪವನ್ನು ಹೀಗೆ ಮಾಡಬಹುದು :

ಒಂದನೆಯದು, ದಾಸಸಾಹಿತ್ಯಕ್ಕೆ ಭಕ್ತಿಭಾವವೇ ಮುಖ್ಯ ಪ್ರೇರಣೆ. ಅದರ ವಾಹಕಗಳೆಂದರೆ ಸಂಗೀತ ಮತ್ತು ಸಾಹಿತ್ಯ. ದಾಸರುಗಳು ತಮ್ಮ ಕೀರ್ತನೆಗಳಲ್ಲಿ ಪ್ರತಿಪಾದಿಸಿದ ವಿಧ ವಿಧ ವಿಷಯಗಳತ್ತ ಗಮನ ಸೆಳೆಯುವ ಪ್ರಯತ್ನ ಇಲ್ಲಿದೆ.

ಎರಡನೆಯದಾಗಿ ಇಂಥ ವಿಷಯಗಳ ವ್ಯಾಪ್ತಿ ಮತ್ತು ವಿಸ್ತಾರ. ಎಂಟುನೂರಕ್ಕೂ ಮೇಲ್ಪಟ್ಟು ನಿರ್ದಿಷ್ಟವಾದ ವಿಷಯಗಳು ಈಗ ಬೆಳಕಿಗೆ ಬಂದಿವೆ.

ಮೂರನೆಯದು ಹರಿದಾಸರ ಅಪ್ಪಟ ಪ್ರಾಮಾಣಿಕತೆ. ತಮಗನಿಸಿದ್ದನ್ನು ಹೇಳಿಬಿಡುವುದು. ಈ ಪ್ರಾಮಾಣಿಕತೆಯಿಂದಾಗಿ ದೇವರನ್ನೂ ತರಾಟೆಗೆ ತೆಗೆದುಕೊಳ್ಳುತ್ತಾರೆ - ಅವನ ಕೃಪೆಯಾಗಬೇಕು ಎಂಬ ಕಾರಣದಿಂದ. ಒಬ್ಬ ದಾಸರು ಹೇಳ್ತಾರೆ:

"ರೆಕ್ಕೆ ಮುರಿದ ಪಕ್ಕಿ ಬಾಯಿ ಬಿಟ್ಟಂತೆ
ಗಗನಕ್ಕೆ ಮೊಗವೆತ್ತಿ ಕೂಗುತಿಪ್ಪೆ
ಅಕ್ಕರೆ ನಿನಗಿನ್ನು ಬಾರದೇನೆಲೊ"

ದೇವರನ್ನು ಒಂಟಿ ಹೆಸರಿನಿಂದ ಕರೆಯುವಷ್ಟು ಸರಳತೆ!

ಮತ್ತೊಬ್ಬರು ಹೇಳುವುದು ಹೀಗೆ :

"ದೂರದಲ್ಲಿದ್ದೀಯೇನೋ ಮೊರೆಯಿಟ್ಟು ಬೇಡಿದೆ
ಆರು ನೀನೆಂದು ಕೇಳದಿಪ್ಪುದು ಸರಿಯೇ?
ಧಾರಿಣಿಯೊಳಿದ್ದವರಲ್ಲಿ ನಾನೊಬ್ಬನೆ ಭಾರವೇನೋ"

ಹೊಸಗನ್ನಡ ಕವನ ರಚನೆಯಲ್ಲಿಯೂ ಇಷ್ಟರ ಮಟ್ಟಿಗಿನ ಬಿಚ್ಚುಮನದ ಸ್ವನಿಷ್ಠೆ ಅಪರೂಪವಾದದ್ದು.

ದಾಸಸಾಹಿತ್ಯದ ಮತ್ತೊಂದು ವೈಶಿಷ್ಟ್ಯವೆಂದರೆ ಹರಿದಾಸರೆಲ್ಲ ಪ್ರಸಿದ್ಧಿ ವಿಮುಖರು. ಹಿಂದಿನವರಂತೂ ಸರಿಯೇ ಈಗಿನವರೂ ಕೂಡ. ಅನಂತವಿಠಲ ಎಂಬುವರು ಎಲ್ಲಿಯೂ ತಮ್ಮ ಹೆಸರು ಬರಕೂಡದೆಂದು ಹೇಳುತ್ತಾರೆ. ತಾವು ಸ್ವಾಂತಸ್ಸುಖಾಯ ಕೀರ್ತನೆಯನ್ನು ರಚಿಸುತ್ತಾರಲ್ಲದೆ ಪ್ರಸಿದ್ಧಿಗಾಗಿ ಅಲ್ಲ ಎಂಬುದನ್ನು ಅಕ್ಷರಶಃ ಪಾಲಿಸುತ್ತಿದ್ದಾರೆ.

ಕೊನೆಯದಾಗಿ ಹೇಳಬೇಕಾದದ್ದೆಂದರೆ ದಾಸಸಾಹಿತ್ಯದಲ್ಲಿ ಸಾಹಿತ್ಯಿಕ ಮೌಲ್ಯಗಳು ಹೇರಳವಾಗಿವೆ. ಮೇಲೆ ಕೆಲವನ್ನು ತೋರಿಸಿದ್ದಾಗಿದೆ. ಸುಳಾದಿ ಕವನ ಪ್ರಕಾರವಂತೂ ಹರಿದಾಸರ ಸ್ವತಂತ್ರ ಕಾಣಿಕೆಯೆಂದೇ ಬಗೆಯಬೇಕು. ಅದರಂತೆ ಛಂದಸ್ಸಿನ ಹತ್ತಾರು ಪ್ರಕಾರಗಳನ್ನು ಬಳಕೆಗೆ ತಂದಿದ್ದಾರೆ. ದ್ವಿತೀಯ ಪ್ರಾಸವನ್ನು ತಪ್ಪದೇ ಪಾಲಿಸುತ್ತಿದ್ದಾರೆ – ಹೊಸಗನ್ನಡ ಕವಿಗಳು ಅದನ್ನು ಬಿಟ್ಟುಕೊಟ್ಟಿದ್ದರೂ. ಇನ್ನು ಕಲ್ಪಕತೆ, ಚತುರೋಕ್ತಿ, ಉಪಮೆ, ವ್ಯಾಜನಿಂದಾಸ್ತುತಿ ಮೊದಲಾದ ಅಲಂಕಾರಗಳು ಅಗಣಿತವಾಗಿ ಬಂದಿವೆ. ತಾತ್ಪರ್ಯ ದಾಸರ ರಚನೆಗಳನ್ನು ಧಾರ್ಮಿಕ ಎಂದು ಸಾರಾಸಗಟಾಗಿ ಹೇಳುವುದು ತಪ್ಪಾಗುತ್ತದೆ. ಅವರ ಕೀರ್ತನೆಗಳು ಕನ್ನಡ ಕಾವ್ಯ ಸಾಹಿತ್ಯದ ಅವಿಭಾಜ್ಯ ಅಂಗವಾಗಿವೆ.

❑❑❑

ಅನುಬಂಧಗಳು

ಸಮಗ್ರ ಕೀರ್ತನ ಪಲ್ಲವಿಗಳ ಅಕಾರಾದಿ ಸೂಚಿ

ಅನು. ಸಂ	ಕೀರ್ತನೆಯ ಆರಂಭ
೮೦೪೩	ಅಂಗಜನ್ನೈಯನು ಗೋಕುಲ ಪೋಗುವ
೮೬೩೪	ಅಂಗಜ ತನರ್ಧಾಂಗಿ ನೀ ವಿಳು
೩೫೮೪	ಅಂಗಡಿ ಗೋವಿಂದನ್ನಣ
೮೬೦೮	ಅಂಗನಾಕುಲ ಶಿರೋಮಣಿ ಶ್ರೀಮಾ
೧೨೦೦೭	ಅಂಗನೆ ನಮ್ಮ ರಂಗನೆ ಮುನಿದ
೯೩೩೪	ಅಂಗನೆ ನಿನ್ನ ಮುಖದಿರುವಿಂತು
೮೨೮೯	ಅಂಗನೆ ನೋಡುವ ಬಾರೆ
೧೮೪೮೧	ಅಂಗನೆ ರುಕ್ಮಿಣಿ ಮಂಗಳ ೀಶಕೆ
೭೬೮೪	ಅಂಗನೆಯರೆಲ್ಲ ನೆರೆದು ಚಪ್ಪಳೆಯಿಕ್ಕುತ
೮೭೧೯	ಅಂಗನೇರು ಕೂಡಿ ಸ್ವರ ಸಂಗೀತ
೭೧೮೬	ಅಂಗವ ಶಿಂಗರಿಸೊ ಶ್ರೀರಾಮಗೆ
೪೭೦೯	ಅಂಗವೇ ಶ್ರೀಮಹಾಂಗಿರೀಶ ಲಿಂಗ
೭೯೨೪	ಅಂಗಳದೊಳಗಾಡ ಬಾರಯ್ಯ
೭೬೪೬	ಅಂಗಳದೊಳಗಾಡೋ ರಂಗ
೧೦೫೬೪	ಅಂಗಾರವನೆ ನೀಡುಯನ್ನಂತರಂಗದ
೮೧೦೩	ಅಂಗಿ ಕೊತ್ತೇನೆ ಗೋ ತಿಂಗಲ
೧೫೦೪೮	ಅಂಗಿ ರಾವುತನನ್ನು ನೋಡಿರೊ ನಿತ್ಯ ಮಂಗಳಮಹಿಮೆ
೩೯೪೭	ಅಂಗುಟ ಮಾತುರವೆಂಬ ಮೂರುತಿ (ಸು)
೩೦೯೫	ಅಂಗುಟದಲ್ಲಿ ಹೆಣ್ಣು ಪೆತ್ತವರುಂಟೇ (ಉ)
೧೭೮೦೫	ಅಂಜನಾ ಸುಕುಮಾರನೆ ಭವದಂಜಕೆ
೧೭೮೩೨	ಅಂಜನಾಸಂಜಾತ ಮುಖ್ಯಪ್ರಾಣನೇ
೧	ಅಂಜನಾಸುತ ಪರದವಿಠಲ ಪೊರೆ
೩೦೮೬	ಅಂಜನಿಯ ಉದರದಿಂ ಪುಟ್ಟುತಾ
೬೦೩	ಅಂಜನೆಸುತ ನಮೊ ಸ್ವಾಮಿ
೧೧೩೩೦	ಅಂಜಬೇಡ ಬೇಡವಲೆ ಜೀವ
೧೨೨೭೩	ಅಂಜಬ್ಯಾಡ ಅಂಜಬ್ಯಾಡೆಲೋ
೮೯೦೧	ಅಂಜಬ್ಯಾಡ ಬ್ಯಾಡಲೆ ಜಾಣ
೭೫೧೫	ಅಂಜಬ್ಯಾಡಂಜಬ್ಯಾಡವೋ
೧೭೧೬೨	ಅಂಜರು ಹರಿಭಟರು ದುರಿತಾರಿ
೧೧೩೩೧	ಅಂಜಲೇತಕೆ ಮನವೆ ಅನುಗಾಲವು
೧೭೭೬೭	ಅಂಜಲ್ಯಾತಕೋ ಅಖಿಳಭವದುರಿತನೆ
೬೨೦	ಅಂಜಾನೆ ತನಯ ಧನಂಜಯನಗ್ರಜ
೫೭೭	ಅಂಜಿಕಿನ್ನಾತಕಯ್ಯ ಸಜ್ಜನರಿಗೆ
೫೪೬೧	ಅಂಜಿಕೆ ಬರುತಾದವ್ವ ನಿನ್ನನು ನೋಡಲಂಜಿಕೆ
೧೧೨೭೮	ಅಂಜಿಕೆಯಾಗುತಿದೆ ಇದ ನೋಡಿ
೪೨೯೪	ಅಂಜಿಕ್ಯಾಕೆನಗಂಜಿಕೆ
೬೨೧	ಅಂಜಿಕ್ಯಾತಕೆ ಮನವೇ ಅಂಜಿಕ್ಯಾತಕೇ
೪೮೩೭	ಅಂಜಿಪ ಕ್ರೋಧವ ಬಿಡಿಸೋ ಗುಲಗಂಜಿ ಮಾಧವಾ
೬೪೬೧	ಅಂಜಿಬಿಡಲಿ ಬ್ಯಾಡೋ ಮುಂದಕೆ ಮುಂದೆ
೩೬೦೩	ಅಂಜಿಸುವುದೇನೋ ಪರಂಜಳವಾಗಿರದೇ
೩೫೮೮	ಅಂಜಿಸುವುದ್ಯಾಕಮ್ಮ ಕಂಜೋದ್ಭವ
೯೬೧೫	ಅಂಜಿಸೋದ್ಯಾತಕಯ್ಯಾ ಬ್ರಹ್ಮಣ್ಯ ಗುರು
೧೨೦೬೧	ಅಂಜುಬುದು ಸಲ್ಲ ಶ್ರೀಕಂಜನಾಭನ ಪಾದ (ಸು)
೧೩೪೯೬	ಅಂಜುವೆ ನಾನೀ ಪಿಂಗದ ಮೊಗದವ (ಸು)
೧೬೭೨	ಅಂಜುವೆನದಕೆ ಕೃಷ್ಣ ಅಭಯವ ಕೋರಿದಕೆ
೪೨೦	ಅಂಜುವೆನು ನಿನಗಂಜನೆಯ ತನಯ
೨೦೬೨	ಅಂಜುವೆವು ನಿನ್ನ ಕಪಟನಾಟಕತನಕೆ
೩೫೪೩	ಅಂಜೋರೆ ಹೀಂಗೆ ಅಂಜೋರೆ
೧೬೫೧೬	ಅಂಜ್ಯಾಕೆ ಎಲೆ ಮನುಜ ಭಯವಿಲ್ಲ ನಿನಗೆ
೧೯೯೫	ಅಂಟ ಅಂಟದ ಹಾಗೆ ಇರಬೇಕು
೧೪೮೨	ಅಂತಕನ ದೂತರಿಗೆ ಕೃಪೆಯಿಲ್ಲವದರಿಂದ
೬೧೪೨	ಅಂತರಂಗದ ಕದವು ತೆರೆಯಿತಿಂದು
೧೬೯೫೭	ಅಂತರಂಗದ ರೋಗ ಚಿಂತೆ ಪರಿಹರಿಸು
೧೨೫೦೩	ಅಂತರಂಗದ ರೋಗ ಯಾವುದು
೫೦೭೪	ಅಂತರಂಗದ ಸುಖ ಹೇಳುವುದಲ್ಲಾ
೧೬೦೧೫	ಅಂತರಂಗದಲಿ ಹರಿಯ ಕಾಣದವ ಹುಟ್ಟುಕುರುಡ
೨೭೦೬	ಅಂತರಂಗದಲ್ಲಿ ಮಾಯಾ ಚಿಂತನೆ ಮಾಡುವ
೧೬೦೧೬	ಅಂತರಂಗದಿ ಬ್ರಹ್ಮಾನಂದವಾಗಿ ನೀನಿರಲು (ಸು)
೧೫೧೧೦	ಅಂತರಂಗದಿ ರಕ್ಷಿಸೊ ನಿಂತು ಭಜಿಪೆನು
೯೯೧೭	ಅಂತರಂಗದಿ ಹರುಷವಾಂತೆವ್ವೆ ಗುರುವೆ
೪೩೪೧	ಅಂತರಂಗದೊಳು ಪೊಳೆವವನು ಶ್ರೀಕಾಂತನೋ
೨	ಅಂತರಾತ್ಮಕ ವಿಠಲ ಪೊರೆಯಬೇಕಿವಳಾ
೬೩೨೯	ಅಂತರಾತ್ಮನ ಧ್ಯಾನವನ್ನು ಅಂತರಂಗದಿ ಮಾಡೋ
೭೯೫೫	ಅಂಥವನಲ್ಲಾ ಕಾಣಿರೇ ಸಂತತ ತೃಪ್ತಾ
೪೭೧೯	ಅಂಥಾ ಕರುಣನೇ ನಮ್ಮ ರಂಗ ಅನಂತ
೯೯೫೯	ಅಂದಣೇರಿದ ವರದೇಂದ್ರ ಮುನಿಪರ
೮೧೨೦	ಅಂದರೇನೊ ಆ ನಾರಿಯರು
೩೪೯೨	ಅಂದವ ಜರೆವರಾರು ರಂಗ ನಿನ್ನ ಅಂದವ
೬೯೬೨	ಅಂದವಿಲ್ಲದ ಅಶಕ್ತನಿಗೆ ಒಂದೇ ಅರಿವೆಯಿಂದ (ಉ)
೨೭೬೨	ಅಂದಾರಮ್ಮಾ ಆ ನಾರಿಯರು ನನ್ನಂದಾರಮ್ಮಾ
೧೪೮೩	ಅಂದಿಂದ ನಾ ನಿನ್ನ ನೆರೆ ನಂಬಿದನೊ ಕೃಷ್ಣ
೭೦೪	ಅಂದಿಗೆ ಪೊಂಗೆಜ್ಜೆ ಬಿರುದಿನ ಕಾಲ್ಬಂಡೆ
೧೨೨೭೪	ಅಂದು ಇಂದು ಎಂದೆಂದಿಗೂ ಗೋವಿಂದನೆ ಗತಿ
೬೮೯೮	ಅಂದು ನಿನ್ನ ದರುಶನಕ್ಕೆ ಆರ್ತ ಉಳ್ಳವನಾಗಿ
೧೪೮೪	ಅಂದು ಬಾಹೋದು ನಮಗಿಂದೇ ಬರಲಿ (ಉ)
೬೮೯೯	ಅಂದು ಮಹಾಪ್ರಳಯ ರಾತ್ರಿ ಸಂಪೂರ್ಣೆಯ
೪೫೦೬	ಅಂದು ಮಾನಿಸನಾದೆಲೋ ಹಾ ಹಾ ಕ್ಷೇತ್ರದಲ್ಲಿ
೧೧೨೧	ಅಂದು ಮಾನ್ಯರನ್ನ ಆವಾವ ಬಗೆ (ಸು)
೧೧೨೨	ಅಂದು ಶರತಲ್ಪದಲ್ಲಿ ಮಲಗಿಸಿದದರಿಂದ (ಸು)
೩೬೮೫	ಅಂದು ಶ್ರುತಿರಾಶಿಯನು ತಂದು ಕೊಟ್ಟವರಾರು
೧೫೫೧೮	ಅಂದುಂಟಂದಿಲ್ಲೇ ಮಾಧವ ನಿನ್ನ
೧೫೧೪೮	ಅಂದೆ ನಿರ್ಣಯಿಸಿದರು ಕಾಣೋ ವೆಂಕಟ
೨೦೬೩	ಅಂದೆ ಹರಿ ಮೆರೆದರು ನಿನ್ನಲ್ಲಿಗೆ ಕರತಂದು
೧೫೭೨೩	ಅಂದೇನಿಂದೆನುತಾ ಒಂದು ಮನದಿ
೧೫೪೧೫	ಅಂದೇನಿಂದೇನಯ್ಯ ಶ್ರೀ ಅರವಿಂದನಾಭನ
೫೮೫೭	ಅಂಧ ತಮಸೆ ಪ್ರಾ ನಿಶ್ಚಯಾ
೫೬೦೨	ಅಂಧಂತಮಸು ಇನ್ನಾರಿಗೆ
೧೦೨೭	ಅಂಧನೋ ನಾ ಬಲು ಅಂಧನೋ
೭೩೬೦	ಅಂಬ ಅಂಬಿಕೆ ಅಂಬುಜದಳಾಯತಾಕ್ಷಿ (ಉ)
೭೪೭೮	ಅಂಬ ಕಟಾಕ್ಷಿಸೆ ಅಂಬ
೧೭೫೯೯	ಅಂಬ ಬ್ರಹ್ಮಾಣಿ ನಿನ್ನ ನಂಬಿದೆನು ವಾಣಿ
೩೦೯೬	ಅಂಬರದಳವು ರವಿಶಶಿಗಲ್ಲದೆ (ಉ)
೬೨೫೧	ಅಂಬರದಾಳವನು ಇನಶಶಿಗಳಲ್ಲದೆ (ಉ)
೭೩೦೧	ಅಂಬಾ ಅಚಲಸುತೆ ಅನಲಾಕ್ಷಸತಿ ನಿನ್ನ
೪೧೩೬	ಅಂಬಾ ತ್ರಿಪುರ ಸುಂದರೀ ಅದ್ವೈತಮತಕಾರಿಗೆ
೭೩೩೦	ಅಂಬಾ ನಿಖಿಳಲೋಕ ಜನನಿ ಜಗದಂಬಾ
೭೨೬೦	ಅಂಬಾ ನಿನ್ನಯ ಪಾದ
೭೩೦೯	ಅಂಬಾ ನೀ ಹೂವ ಪಾಲಿಸೆ
೭೩೨೪	ಅಂಬಾ ಮನೋನಾಯಕ ಶಂಭೋ
೪೧೩೭	ಅಂಬಾ ಮೂಕಾಂಬಾ ಪಾಹಿ ಭಕ್ತಾವಲಂಬಾ
೧೭೫೬೫	ಅಂಬಾ ಮೈದೋರು ಶಾರದಾಂಬಾ
೧೭೬೦೦	ಅಂಬಾ ಸರಸ್ವತಿದೇವಿ ಜಗದಂಬಾ
೪೯೪೩	ಅಂಬಾತನಯ ಹೇರಂಬ ಪೂರ್ಣಕರುಣಾಂಬುಧೇ (ತ.ಸು)
೨೯೬೫	ಅಂಬಾಬಾಯೇ ನಂಬಿದ ಜನನೀ ಬಾ
೧೦೪೩೯	ಅಂಬಾರಮಣ ಶಂಭೋ ಪಾಲಯ ಬಿಂಬ
೧೦೪೪೦	ಅಂಬಾರಮಣ ಶಿವನೇ ಪಾಲಯ
೪೫೩೧	ಅಂಬಿಕಸುತನೆ ಷಡಾನನನೆ
೪೯೪೪	ಅಂಬಿಕಾತನಯ ಭೂತಂಬರಾಧಿಪ
೬೨೫೭	ಅಂಬಿಕಾಪತಿ ಉಮಾಪತಿಯೆಂದು (ಸು)
೧೦೭೬೩	ಅಂಬಿಕಾಪತಿ ಶಂಭು ರಕ್ಷಿಸೆನ್ನ

ಸಮಗ್ರ ಕೀರ್ತನ ಪಲ್ಲವಿಗಳ ಅಕಾರಾದಿ ಸೂಚಿ

ಅನು. ಸಂ	ಕೀರ್ತನೆಯ ಆರಂಭ	ಅನು. ಸಂ	ಕೀರ್ತನೆಯ ಆರಂಭ	ಅನು. ಸಂ	ಕೀರ್ತನೆಯ ಆರಂಭ
[illegible]	ಅಂಬಿಗ ನಾ ನಿನ್ನ ನಂಬಿದೆ ಜಗದಂಬಾರಮಣ	೪೮೬	ಅಖಿಳ ಬೊಮ್ಮಾಂಡಾನಾಯಕ ಸಕಲ ಜೀವೋತ್ತಮ	೧೩೫೦	ಅಚ್ಯುತಾನಂದ ಗೋವಿಂದ ಎಚ್ಚರಾಗಿರು
[illegible]	ಅಂಬುಜ ಭವನಯ್ಯ ಕಂಬು ಚಕ್ರಪಾಣಿ	೩೬೮೮	ಅಗಜೆ ನಿನ್ನೊಗತನಕೆ ಜಗ ನಗುವುದೆ	೯೦೨೭	ಅಜಭವಾದಿ ವಂದ್ಯಚರಣೇ
[illegible]	ಅಂಬುಜದಳಾಕ್ಷಗೆ ಮಂಗಳ ಸಕಲ ಜೀವ ರಕ್ಷಗೆ	೭೮೫	ಅಗಜೆ ನಿನ್ನೊಗೆತನದ ಸೊಗಸನೇನೆಂಬೆ	೧೩೬೬೬	ಅಜಸುರಸನ್ನುತ ಸುಜನ ನಂದಿತ ಹರೇ
[illegible]	ಅಂಬುಜಮುಖಿಯರು ಕಂಬುಕಂಠೆಯರು	೧೫೧೧೧	ಅಗಣಿತಗುಣ ನಾ ಮುಗುವೆ ಕರಾ	೪೯೧೪	ಅಜ್ಞಾನ ಪರಿಹರಿಸು ಅಂಬರಾಧೀಶ
೬೦೪	ಅಂಬುಜಾಕ್ಷನ ಬಂಟ ನೆನೆವರಿಗೆ ನಂಟ	೧೬೫೧೭	ಅಗಣಿತಾಣಿತ ಮಹಿಮ ಜಗದೊಳು ನಿಮ್ಮ ಬಗೆ	೬೨೧೮	ಅಜ್ಞಾನ ಹೋಮದ ಅಗ್ನಿಹೋತ್ರಿಯು ತಾನು
೨೬೪೦	ಅಂಬುಜಾಕ್ಷನೆ ಪಾಲಿಸೋ ಅಂಬುಜಾಕ್ಷನೆ	೨೩೭೪	ಅಗಲದಿರೆಲೋ ನೀನೆನ್ನ ಬಿಟ್ಟು ಅಗಲದಿರೆಲೋ	೬೨೧೯	ಅಜ್ಞಾನಿ ಜೀವನಿಗೆ ಅಭಿಮಾನ ಬಹಳ
[illegible]	ಅಂಬುಜಾಕ್ಷಿ ಸ್ತಂಭದಿಹನ್ಯಾರೇ	೧೪೫೯೦	ಅಗಲದಿರೋ ಮನ ಮಂದಿರದಿಂದಲೆನ್ನ	೭೪೭೯	ಅಜ್ಞಾನಿ ನೀನೀಗ ಕೇಳು ಸುಜ್ಞಾನಿಗಳನು
೨೩೪೦	ಅಂಬುಜೇಕ್ಷಣ ನಂಬಿದೇ ನಿನ್ನ	೫೪೦೬	ಅಗಲಿ ಜೀವಿಸಬಹುದೆ ಕರುಣೆಯನಗಲಿ	೧೦೮೪೦	ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
[illegible]	ಅಂಬುಧಿ ತೊಟ್ಟಲಾಗಿ ಆಲದೆಲೆಯಾಗಿ (ಸು)	೨೬೬೩	ಅಗಲಿ ನಾ ಸೈರಿಸಲಾರೆ ಪನ್ನಗರಾಜಶಯನನ	೨೩೫೩	ಅಟ್ಟ ಮೇಲೆ ಒಲೆಯು ಉರಿಯುವಂತೆ (ಉ)
[illegible]	ಅಂಬುಧಿಶಯನ ೀತಾಂಬರಧರ ಕಮಲಾಂಬಕ	೧೪೮೭	ಅಗಲಿ ಸೈರಿಸಲಾರದೀ ಮನ	೧೦೮೪೧	ಅಟ್ಟು ಇಕ್ಕದವರ ಮನೆಯ
[illegible]	ಅಂಬೆ ಶಿರಿ ವಿಹಾರಾ ಜಗದಂಬೆ ಶಿರಿ ವಿಹಾರಾ	೭೬೪೦	ಅಗಲಿ ಸೈರಿಸಲಾರೆವೊ ವೇಣುಗೋಪಾಲ	೧೭೮೨೦	ಅಡಗಿದೇತಕೊ ರಜತ ಕವಚದೊಳಗೆ
[illegible]	ಅಂಬೆ ಶ್ರೀ ಅಂಬೆ ಜಗದಂಬೆ ಶರಣೆಂಬೆ	೯೧೭	ಅಗಲಿರಲಾರೆನೊ ಹರಿಯೆ ನಿನ್ನನು	೨೩೦೬	ಅಡಗುವುದು ಘನ ಅಡಗುವುದು ತೋರದಡಗದು
[illegible]	ಅಂಬೆಗಾಲಿಕ್ಕುತಲಿ ಬಂದ ಗೋವಿಂದ	೧೯೧೪	ಅಗಲಿಸದಿರು ಎನ್ನನು ನಿನ್ನ	೯೫೦೬	ಅಡವಿ ಆಚಾರ್ಯರ ಅಡಿಯ ಪೊಂದಿದ
[illegible]	ಅಂಬೋನಿಧಿ ಹೃದಂಬರ ವಾಸಿನಿ	೪೧೩೩	ಅಗಸುತೆ ನಾಗಭೂಷಣ ್ರೀತೆ	೪೧೨೩	ಅಡವಿನಿಲಯ ನಿನ್ನಡಿಗೆರಗುವ
[illegible]	ಅಂಬೋರುಹೇಕ್ಷಣೆ ಅಂಬಾಲಿಕೆಯ	೫೨೭೮	ಅಗಾಧ ಗುರುರಾಯನ ಕರುಣೆ	೨೦೬೪	ಅಡಿಗಡಿಗೆ ನಾ ನಿನ್ನ ಅಡಿಗಳನೆ ನಂಬಿದೆ (ಉ)
[illegible]	ಅಕಟಕಟ ಜನಿಸಿ ಭಾರಕನಾದೆ ಭೂಮಿಗೆ (ಸು)	೪೯೯೪	ಅಗ್ರಪೂಜಾ ವಿಘ್ನರಾಜ ಅಗ್ನಿಜಾಗ್ರಜ	೪೦೦೬	ಅಡಿಗಡಿಗೆ ಭಕ್ತರನ ನೋಡುವ ರಾಜ
೩೬೬೧	ಅಕಟಕಟ ಬಹಳ ಬಡತನವಡಸಿದುದೆ ನಿನಗೆ	೮೯೪೯	ಅಗ್ರಪೂಜೆ ಮಾಡಿದಾ ಧರ್ಮಜ ತಾನು	೯೫೧೮	ಅಡಿಗಳ ಭಜಿಸುವ ಮನುಜರ ಬಿಡನೈ
[illegible]	ಅಕಟಕಟ ಸಂಸಾರವನು ನೆಚ್ಚಿ ಕೆಡಬ್ಯಾಡ	೧೩೪೭	ಅಘಟಿತ ಘಟನಾ ಅದ್ಭುತ ಕಥನಾ	೧೮೨೬೮	ಅಡಿಗಳಿಗೊಂದಿಪೆ ಪುರಂದರ ಗುರುವೆ
[illegible]	ಅಕಳಂಕಚರಿತಾ ನಿಷ್ಕಳಂಕಾಭರಣ	೧೩೪೮	ಅಘಟಿತ ಘಟನಾತ್ಮ ಶಕ್ತಿಯ ನಂಬಿದ	೨೬೬೪	ಅಡಿಗಾಧಾರವಿಲ್ಲ ಹಿಡಿವುದಕೆ ಕೊಂಬಿಲ್ಲ (ಉ)
[illegible]	ಅಕಿಂಚನಗೆ ಅನರ್ಘ್ಯವಾದಂತೆ (ಸು)	೮೬೯	ಅಚಿಂತ್ಯಾದ್ಭುತ ಮಹಿಮ ಈ ಸಚರಾಚರದೊಳು	೩೧೨೨	ಅಡಿಗೆಯನು ಮಾಡಬೇಕಣ್ಣ
[illegible]	ಅಕೊ ಹಾಗಿಹನೆ ಇಕೊ ಹೀಗಿಹನೆ	೧೬೪೮೪	ಅಚ್ಚರಿಯೊಳಚ್ಚರಿಯು ಅಚ್ಯುತನ ನಾಮವಿದು	೧೭೭೮೬	ಅಣೆಯಾರೊ ನಿನಗೆ ಈ ತ್ರಿಭುವನದೊಳಗೆ
೭೩೧೫	ಅಕ್ಕ ಕೇಳೆ ನಿನ್ನ ತಪಸಿಯರೊಳಗೊಬ್ಬ	೧೬೫೧೮	ಅಚ್ಯುತ ಅಮರಾರ್ಚಿತಾ ಮುನಿವಂದಿತಾ	೯೨೯	ಅಣು ಮಹತ್ತಾದ ದೇವ ಅಣುವಿಂಗೆ ಅಣುವು
೧೧೧೩೩	ಅಕ್ಕ ಕೇಳೆ ಪಾಪ ಮಾಡಿ ಲೆಕ್ಕವಿನ್ನದೆ	೪೦೦೦	ಅಚ್ಯುತ ಸುಳಿದ ಎನ್ನ ಕಣ್ಣ ಮುಂದೆ (ಸು)	೫೮೦೪	ಅಣುಕದಿಂದಾಗಲಿ ಡಂಭದಿಂದಾಗಲಿ (ಉ)
[illegible]	ಅಕ್ಕ ಕೊಳಲನೂದುವ ಸುಂದರನ್ಯಾರೆ ಅಕ್ಕ	೫೮೦೩	ಅಚ್ಯುತನ ಭಕುತರಿಗೆ ಮನಮೆಚ್ಚದವನು ಪಾ (ಉ)	೧೪೬೫೨	ಅಣುಗ ನಿನಗೆ ನಾನು ಅಗಣಿತ
೭೬೮೬	ಅಕ್ಕ ನಂದಗೋಪನ ಅರಮನೆಯೊಳಗೊಬ್ಬ	೪೬೭೬	ಅಚ್ಯುತಪ್ರೇಕ್ಷ ಕರಾರ್ಚಿತ ರಾಮ	೬೯೦೦	ಅಣುದ್ವಯ ಪರಮಾಣು ಇಂಥಾದೆ ತ್ರಯವಾಗೆ
೧೮೧೦೬	ಅಕ್ಕ ನೋಡೆ ನಾನಾ ನಿನ್ನ ದಯದಿಂದ	೧೬೧೯೮	ಅಚ್ಯುತಾನಂತ ಕೃಷ್ಣ ಗೋವಿಂದ ಮಾಧವ	೧೨೦೬೨	ಅಣುಮಹತ್ತು ಅತುಮರೊಳು ನೆನೆಸಿ
[illegible]	ಅಕ್ಕಟಕ್ಕಟೆಂನ ಗಂಡ ವೈಷ್ಣವನಾದ ಕಾರಣ	೧೨೦೧೩	ಅಚ್ಯುತಾನಂತ ಗೋವಿಂದ ಅಕ್ಷರೋತ್ತಮ	೩೯೬೧	ಅಣುಮೂರುತಿ ಪರಮಾಣು ಮೂರುತಿ ಇದೇ
[illegible]	ಅಕ್ಕರವುಳ್ಳ ನಮ್ಮಕ್ಕ ರುಕ್ಮಿಣಿ ಕೇಳೆ	೧೬೭೦೩	ಅಚ್ಯುತಾನಂತ ಗೋವಿಂದ ಗುರು ಸಚ್ಚಿದಾನಂದ	೫೮೦೫	ಅಣುರೇಣು ತೃಣದಲ್ಲಿ ಪರಿಪೂರ್ಣನಾಗಿರುವ (ಉ)
[illegible]	ಅಕ್ಕಾ ಎನ್ನಯ ಸ್ಥಿತಿ ಕೇಳೆ (ಸು)	೧೬೯೦೪	ಅಚ್ಯುತಾನಂತ ಗೋವಿಂದ ಮುಕುಂದ (ಸು)	[illegible]	ಅಣುವಾಗಬಲ್ಲ ಮಹತ್ತಾಗಬಲ್ಲ (ಸು)
[illegible]	ಅಕ್ಕಾ ಚಿಕ್ಕಮಕ್ಕಳ ನಡುವೆ ನಕ್ಕು ನಲಿವ ಬಾ	೩೮೧೮	ಅಚ್ಯುತಾನಂತ ಗೋವಿಂದ ಹರಿ	೫೮೦೬	ಅಣುವಿಗೆ ಅಣುವಾಗಿ ಘನಕೆ ಘನವಾಗಿ (ಉ)
[illegible]	ಅಕ್ಕಾ ನೋಡೆ ಚಿಕ್ಕ ಕೃಷ್ಣನೂ	೩೮೧೪	ಅಚ್ಯುತಾನಂತ ಗೋವಿಂದಾಯ	೨೦೬೫	ಅಣುವೆಂದು ನಿನ್ನನು ಘನವಾಗಿ ಪೋಷಿಸುವರೆ
[illegible]	ಅಕ್ಕೋ ರಂಗ ನೋಡೆ ಇಕ್ಕೋ ಕೃಷ್ಣ ನೋಡೆ	೪೪೩೮	ಅಚ್ಯುತಾನಂತ ಮುಕುಂದ ಭಾರ್ಗವಿರಮಣ	೮೧೦೪	ಅಣ್ಣನ ತೋರಿಸೆ ಎನಗೆ ತನ್ನ ಮನೆಯಲ್ಲಿ
೩	ಅಕ್ರೂರ ವರದವಿಠಲ	೧೫೧೫೦	ಅಚ್ಯುತಾನಂತಗೋವಿಂದ ಹರಿ	೧೪೪೮	ಅತಿ ಮೀರಿತು ಶ್ರೀಹರಿ ಹರಿ ಅನ್ಯಾಯ (ಸು)
[illegible]	ಅಕ್ಷಯ ನೀನಾಮೃತಂ ಕುಕ್ಷಿಯೊಳಗೆ	೧೯೯೮೮	ಅಚ್ಯುತಾನಂತನ ಅಚ್ಛಿನ್ನ ಭಕ್ತರ (ಉ)	[illegible]	ಅತಿ ಶೋಭಿಸುತಿದೆ ಶ್ರೀಪತಿವಾಹನ
[illegible]	ಅಕ್ಷಯಾತ್ಮ ಹರಿ ಜೈ ಜೈ ರಂಗ	೪೫೦೭	ಅಚ್ಯುತಾನಂತನ ಕಂಡೆ		
[illegible]	[illegible]	೧೩೪೯	ಅಚ್ಯುತಾನಂತನೆ ನಿನ್ನ ನೆಚ್ಚಿಕೊಂಡಿಹೆನು		
[illegible]	[illegible]	೪	ಅಚ್ಯುತಾನಂತವಿಠಲ ಸಲಹಬೇಕವನಾ		

ಸಮಗ್ರ ಕೀರ್ತನ ಪಲ್ಲವಿಗಳ ಅಕಾರಾದಿ ಸೂಚಿ

ಅನು. ಸಂ	ಕೀರ್ತನೆಯ ಆರಂಭ	ಅನು. ಸಂ	ಕೀರ್ತನೆಯ ಆರಂಭ	ಅನು. ಸಂ	ಕೀರ್ತನೆಯ ಆರಂಭ
೧೧೨೩	ಅತಿ ಹಿತ ಮಾಡುವಂಥ ಆಪ್ತನಾದವನಾಗಿ (ಸು)	೭	ಅನಂತಗುಣಪೂರ್ಣ ವಿಠಲ ಪೊರೆ ಇವನಾ	೧೯೭೭	ಅನುಭವವಿಲ್ಲದೇ ಅರಪಿದಡಾಹುದೇ
೧೧೦೦	ಅತಿಭಯ ಪುಟ್ಟುವುದಡವಿಯ ನೋಡಲ್	೫೬೭೭	ಅನಂತನ್ನ ನೋಡಿ ಅಗಣಿತ ಗುಣಗಣನ (ಸು)	೧೮೨೨	ಅನುಭವಿಸುವುದೆನ್ನದೇ (ಜೀವ) ನೀನಿತ್ತುದು
೧೦೦೫೭	ಅತಿಮಧುರವದನ ಪಂಕೇಜ ದ್ವಿಜರಾಜ ಶ್ರೀಪತಿ	೮	ಅನಂತಪದ್ಮನಾಭ ವಿಠ್ಠಲನೆ ನೀನಿವನ	೪೧೫೪	ಅನುಮಾನವೇತಕೆ ಅನುಗುಣವಾಗಿಯೇ
೮೭೭೬	ಅತ್ತಿಗೆ ಭೋಜನ ಮಾಡೆ ಸಾವಕಾಶದಿ ನೀನೂ	೯	ಅನಂತಶಯನ ವಿಠಲಾ ಕಾಪಾಡೊ	೬೧೨೭	ಅನೇಕ ಶಕುತಿಯುಳ್ಳವನೆಂದು (ಸು)
೮೭೭೭	ಅತ್ತಿಗೇ ನಿನ್ನ ಹಾಡಿಗೆ ನಾ ಪ್ರತ್ಯುತ್ತರ ಕೊಡುತಿಹೆನೆ	೨೦೨೮	ಅನಂತಾನಂತ ಪಾಪ	೧೧೩೩೬	ಅನ್ನ ಪಾನಾದಿಗಳೀಯೊ ಅಭ್ಯಾಗತ ಬ್ರಾಹ್ಮಣ (ಉ)
೧೬೪೦೧	ಅತ್ತೆಯಣುಗನು ಮತ್ತೆ ಸತ್ಯಾತ್ಮನಿವನೆನುತೆ	೩೯೨೮	ಅನಂತಾನಂತಶಯನಾ ಅಂಬುಜದಳನಯನ	೧೧೭೪	ಅನ್ನಂತ ಅಪರಾಧ ಎನ್ನಲ್ಲಿ ಉಂಟೊ ದೇವ (ಸು)
೬೧೪೪	ಅತ್ಯಣು ಜೀವವಿದೆ ಅನಾದಿಯಿಂದ	೩೬೭೩	ಅನಘಸಂಪದನೆಂದು ಮನದೊಳಗೆ	೨೬೨೩	ಅನ್ನಂತ ಕಾಲದಲಿ ನಿನ್ನ ನಾನರಿಯದೆ (ಸು)
೮೪೩೦	ಅತ್ಯದ್ಭುತ ಹುಡುಗ ಭೀಮಪ್ಪ	೫೭೭೩	ಅನಘಾನೆಂದೊಮ್ಮೆ ನೆನೆದು ಮಾನವ (ಉ)	೬೧೪೭	ಅನ್ನದಾನ ಪ್ರಧಾನ ನಿಧಾನಿಸಿ ನೋಡಲು (ಸು)
೧೦೯೯೬	ಅತ್ಯಾಸೆಪಡಬೇಡ ಅಸ್ಥಿರ ಸಂಸಾರ ಮತ್ತನಾಗದಿರೆಲವೊ	೧೨೦೬೪	ಅನಲದೇವನು ದಾಹಕನಹುದೊ ಎಂದಿಗೂ (ಉ)	೪೧೦೧	ಅನ್ನದಾನ ಮಾಡದಗೋಸುಗ ಶ್ವೇತರಾಯ
೫೭೯೬	ಅದಕೋ ಕೈವಲ್ಯಂ ಅದಕೋ ಕೈವಲ್ಯಂ	೧೨೫೨೯	ಅನವರತ ಜಿಹ್ವದಿ ಆದಿನಾರಾಯಣನಾ ಕೃಷ್ಣ ಎನಬಾರದೆ	೧೪೪೫೩	ಅನ್ನದಾನದ ಸುಖ ನಿನಗಲ್ಲದೆ ಬೇರೆ
೭೪೮೦	ಅದಕೋ ಬ್ರಹ್ಮಾಸ್ತ್ರ ನೋಡು	೨೭೦೭	ಅನಾಥ ನನ್ನಿಂದ ಆಗುವುದು ಏನು	೧೯೨೫	ಅನ್ನದಾನವನ್ನೆ ಮಾಡು
೨೮೬	ಅದಕೋ ವೈರಾಗ್ಯ ಅದಕೋ ವೈರಾಗ್ಯ	೧೬೨೦೪	ಅನಾಥ ಬಂಧು ದೀನದಯಾಳು ಅನಾದಿದೈವ	೨೬೬೫	ಅನ್ನದಾಸೆಗೆ ಪರರ ಮನೆಯ ಬಾಗಿಲ ಕಾಯ್ದು (ಉ)
೨೮೭	ಅದು ನಿರಾಲಂಬ ಅದು ನಿರಾಲಂಬ	೬೩೬೧	ಅನಾಥ ರಕ್ಷಕ ಆಪದ್ಬಾಂಧವ	೭೩೬೮	ಅನ್ನಪೂರ್ಣೇಶ್ವರಿ ನಿನ್ನ ಪಾದಕೆ ಶರಣು
೧೩೧೫೬	ಅದೋ ಬರುವ ರಂಗ ಅದೋ ಬರುವ	೧೩೫೧	ಅನಾಥಬಂಧೋ ಆದಿಪುರುಷ	೮೨೨೦	ಅನ್ನವನುಣಿಸಿದರತಿ ಹರುಷದಿಂದ
